
ಮಂಗಳೂರು
ಗುರುವಾರ, 2 ಏಪ್ರಿಲ್ 2026
ಸಂಪುಟ 48, ಸಂಚಿಕೆ 14, ಪುಟಗಳು 12+8
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ ₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಹುಣ್ಣಿಮೆ, ನಕ್ಷತ್ರ: ಹಸ್ತ

ದಿನದ ಮಾತು

ಎಲ್ಲಾ ಬೆಳಕುಗಳಿಗಿಂತ ಸತ್ಯದ ಬೆಳಕೇ ನಿಜವಾದ ಬೆಳಕು
▲ಸ್ವಾಮಿ ಶಿವಾನಂದ

ಖಾಂಡವ ದಹನ ಪ್ರಸಂಗ

ಆ-ಲೋಚನ
• ರಾಧಾಕೃಷ್ಣ ಕಲ್ಚಾರ್
• ಪುಟ ೬

ಕಿರುಸುದ್ದಿ

ವಾಣಿಜ್ಯ ಎಲ್ಪಿಜಿ ದರ 195.50 ರೂ. ಏರಿಕೆ

• **ಹೊಸದಿಲ್ಲಿ:** ಮಧ್ಯಪ್ರಾಚ್ಯ ಯುದ್ಧದಿಂದ ಜಾಗತಿಕ ತೈಲ ಬೆಲೆ ಏರಿಕೆ ಹಿನ್ನೆಲೆ ವಾಣಿಜ್ಯ ಎಲ್‌ಪಿಜಿ ದರ ಬುಧವಾರ ರೂ. 195.50ರಷ್ಟು ಏರಿಕೆಯಾಗಿದೆ. ಆದರೆ ಗೃಹಬಳಕೆ ಎಲ್‌ಪಿಜಿ ದರದಲ್ಲಿ ಯಾವುದೇ ಬದಲಾವಣೆಯಾಗಿಲ್ಲ. ಬೆಂಗಳೂರಿನಲ್ಲಿ ವಾಣಿಜ್ಯ ಎಲ್‌ಪಿಜಿ ಬೆಲೆ ರೂ. 2,153.50 ತಲುಪಿದ್ದು, ಗೃಹಬಳಕೆ ಸಿಲಿಂಡರ್ ಬೆಲೆ 915.50 ರೂ.ಗಳಾಗಿದೆ. ದಿಲ್ಲಿಯಲ್ಲಿ 19 ಕೆಜಿ. ವಾಣಿಜ್ಯ ಸಿಲಿಂಡರ್ ಬೆಲೆ ಎರಡು ಸಾವಿರ ದಾಟಿದೆ.

• ಪುಟ ೨

ದೇಸಿ ಮಾಲ್ವಾನ್‌ನಿಂದ ನೌಕಾಪಡೆ ಸ್ವಾವಲಂಬಿ

• **ಹೊಸದಿಲ್ಲಿ:** ಎರಡನೇ ಜಲಾಂತರ್ಗಾಮಿ ನಿರೋಧಕ ಯುದ್ಧನೌಕೆ ಐಎನ್‌ಎಸ್ ಮಾಲ್ವಾನ್ ಅನ್ನು ಭಾರತೀಯ ನೌಕಾಪಡೆ ಬುಧವಾರ ಸ್ವೀಕರಿಸಿದೆ. ನೌಕಾಪಡೆಗೆ ಮಾಲ್ವಾನ್ ಯುದ್ಧನೌಕೆಯ ಸೇರ್ಪಡೆಯಿಂದ ಕರಾವಳಿ ರಕ್ಷಣಾ ಸಾಮರ್ಥ್ಯ ಬಲವರ್ಧನೆಯಾಗಿದ್ದು, ರಕ್ಷಣಾ ಉತ್ಪಾದನೆ ಕ್ಷೇತ್ರದಲ್ಲಿ ಆತ್ಮನಿರ್ಭರ ಭಾರತ ನಿರ್ಮಾಣದ ದಿಶೆಯಲ್ಲಿ ಕೇಂದ್ರ ಸರ್ಕಾರ ಮಹತ್ವದ ಹೆಜ್ಜೆಯನ್ನಿರಿಸಿದೆ.

• ಪುಟ ೨

ಪಂಜಾಬ್ ಬಿಜೆಪಿ ಕಚೇರಿ ಆವರಣದಲ್ಲಿ ಸ್ಫೋಟ

• ಪುಟ ೨

ರಷ್ಯಾ ಮಿಲಿಟರಿ ಸಾರಿಗೆ ವಿಮಾನ ಪತನ: 29 ಸಾವು

• ಪುಟ೨

ಎಐ ಕಲಿಕೆಗೆ ಉತ್ತೇಜನ ಗಣಿತಕ್ಕೆ ಹೊಸ ಪಠ್ಯಕ್ರಮ

• ಪುಟ ೨

ಕೈಗೆ ದೊಡ್ಡ ಅಂತರದ ಗೆಲುವು: ಸಿಎಂ

• ಪುಟ ೫

ಆಸ್ಪತ್ರೆಗಳಲ್ಲಿ ಪೋಡಿಯಾಟ್ರಿಕ್ ವಿಭಾಗ ಆರಂಭ: ಸಚಿವ

• ಪುಟ ೫

ಕ್ಯಾನ್ಸರ್‌ಪೀಡಿತರಿಗೆ ಮನೆ ಆರೈಕೆ: ಸಚಿವ ದಿನೇಶ್

• ಪುಟ ೪

ಹಾರ್ಮುಜ್ ವಶಕ್ಕೆ ನ್ಯಾಟೋ ರಾಷ್ಟ್ರಗಳ ನಕಾರ ಹಿನ್ನೆಲೆ

ನ್ಯಾಟೋಗೆ ಟಾಟಾ?

• **ವಾಷಿಂಗ್ಟನ್:** ಹಾರ್ಮುಜ್ ತೆರೆಯಲು ಯುದ್ಧನೌಕೆಗಳನ್ನು ಕಳುಹಿಸುವಂತೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಾಡಿದ್ದ ಮನವಿಯನ್ನು ನ್ಯಾಟೋ ರಾಷ್ಟ್ರಗಳು ತಿರಸ್ಕರಿಸಿದ ಹಿನ್ನೆಲೆ ನ್ಯಾಟೋ ಸೇನಾ ಮೈತ್ರಿಯಿಂದ ಅಮೆರಿಕ ಹೊರಬರುವ ಸಾಧ್ಯತೆಯಿದೆ. ಇರಾನ್ ಯುದ್ಧವು ಅಮೆರಿಕ ಮತ್ತು ನ್ಯಾಟೋ ನಡುವಿನ ಸಂಬಂಧ ಹಳಸುವುದಕ್ಕೆ ಕಾರಣವಾಗಿದೆ.



ಸೋವಿಯತ್ (ರಷ್ಯಾ) ದಾಳಿ ಭೀತಿಯಿಂದ ಪ್ರತಿದಾಳಿ ಉದ್ದೇಶದಿಂದ ಐರೋಪ್ಯ ರಾಷ್ಟ್ರಗಳು, ಅಮೆರಿಕ ಮತ್ತು ಕೆನಡಾ ಜತೆಗೂಡಿ ನ್ಯಾಟೋ ಸೇನಾ ಮೈತ್ರಿಕೂಟವನ್ನು 1949ರಲ್ಲಿ ಸ್ಥಾಪಿಸಿದ್ದವು. ಅಲ್ಲಿಂದ ಇಲ್ಲಿಯವರೆಗೆ ನ್ಯಾಟೋ ಪಾಶ್ಚಿಮಾತ್ಯ ರಾಷ್ಟ್ರಗಳ ಭದ್ರತೆಯ ಕಣ್ಗಾವಲು ಜವಾಬ್ದಾರಿ ವಹಿಸಿಕೊಂಡು ಬಂದಿದೆ.

ಉಕ್ರೇನ್ ಮತ್ತು ರಷ್ಯಾ ನಡುವಿನ ಯುದ್ಧ ನಿಲ್ಲಿಸಲು ಟ್ರಂಪ್ ಮಾಡುತ್ತಿರುವ ಪ್ರಯತ್ನಗಳನ್ನು ನ್ಯಾಟೋ ವೀಕ್ಷಿಸುತ್ತಿದೆ. ಆದರೆ ಇತ್ತೀಚಿಗಿನ ಬೆಳವಣಿಗೆಯು ಟ್ರಂಪ್ ರಷ್ಯಾಗೆ ಲಾಭದಾಯಕ ಒಪ್ಪಂದ ಬೆಂಬಲಿಸುವ ಭೀತಿ ಯುರೋಪಿನ ಹಿರಿಯ ಅಧಿಕಾರಿಗಳನ್ನು ಕಾಡುತ್ತಿದೆ. ನ್ಯಾಟೋ ವಿಚಾರದಲ್ಲಿ ಅಧ್ಯಕ್ಷ ಟ್ರಂಪ್ ನಿರ್ಧಾರ ತೆಗೆದುಕೊಳ್ಳಲಿದ್ದಾರೆ. ಆದರೆ ನಮ್ಮ ಜತೆ ನಿಲ್ಲಲು ಒಪ್ಪದ ರಾಷ್ಟ್ರಗಳೊಂದಿಗೆ ದೊಡ್ಡಮಟ್ಟಿನ ಮೈತ್ರಿ ಇರುವುದಿಲ್ಲ ಎಂದು ಅಮೆರಿಕ ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ ಹೇಳಿದ್ದಾರೆ.

ಅಮೆರಿಕ ಹೊರಬರುತ್ತಾ?: ನ್ಯಾಟೋ ಮೈತ್ರಿಯಿಂದ ಹೊರಬರುವುದನ್ನು ಅಮೆರಿಕ ಪರಿಗಣಿಸುತ್ತಿದೆಯೇ ಎಂಬ ಪ್ರಶ್ನೆಗೆ ಬುಧವಾರ ಪ್ರತಿಕ್ರಿಯಿಸಿದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಖಂಡಿತ ಪರಿಗಣಿಸುತ್ತೇವೆ ಎಂದಿದ್ದಾರೆ. ನ್ಯಾಟೋ ಜತೆ ಜುಗುಪ್ಸೆ ಮೂಡಿರುವ ಕುರಿತು ನಾನು ಅದರೊಂದಿಗೆ ಚರ್ಚಿಸಲಿದ್ದೇನೆ. ಆದರಲ್ಲಿ ಯಾವುದೇ ಪ್ರಶ್ನೆಯಿಲ್ಲ. ನೀವು ನನ್ನ ಜಾಗದಲ್ಲಿದ್ದರೆ ಏನು ಮಾಡುತ್ತಿದ್ದಿರಿ ಎಂದು ಟ್ರಂಪ್ ಮರುಪ್ರಶ್ನೆ ಹಾಕಿದ್ದಾರೆ.

ಟ್ರಂಪ್‌ಗೆ ನ್ಯಾಟೋ ಬೇಸರ: ನ್ಯಾಟೋ ಸೇನಾ ಮೈತ್ರಿಯ ಆರ್ಟಿಕಲ್ 5ರ ಪ್ರಕಾರ, ಒಂದು ನ್ಯಾಟೋ ಸದಸ್ಯ ರಾಷ್ಟ್ರದ ಮೇಲಿನ ಶಸ್ತ್ರಾಸ್ತ್ರ ದಾಳಿ ಎಲ್ಲಾ ಸದಸ್ಯ ರಾಷ್ಟ್ರಗಳ ಮೇಲಿನ ದಾಳಿ ಇದ್ದಂತೆ. ➡ಪುಟ ೪





ಅಂತಾರಾಷ್ಟ್ರೀಯ ಸಮ್ಮೇಳನ

ಹಾರ್ಮುಜ್ ಜಲಸಂಧಿಯನ್ನು ಮರುತೆರೆಯುವ ಮಾರ್ಗಗಳ ಕುರಿತು ಇಂಗ್ಲೆಂಡ್ ಅಂತಾರಾಷ್ಟ್ರೀಯ ರಾಜತಾಂತ್ರಿಕ ಸಮ್ಮೇಳನವನ್ನು ಆಯೋಜಿಸುತ್ತದೆ ಎಂದು ಪ್ರಧಾನಿ ಕೈರ್ ಸ್ಟಾರ್ಮರ್ ತಿಳಿಸಿದ್ದಾರೆ. ಪ್ರಮುಖ ತೈಲ ಸಾಗಣೆ ಮಾರ್ಗವಾದ ಈ ಜಲ ಸಂಧಿಯಲ್ಲಿ ಸಮುದ್ರ ಭದ್ರತೆಯನ್ನು ಮರು ಸ್ಥಾಪಿಸಲು ಒಟ್ಟಾಗಿ ಕೆಲಸ ಮಾಡುವುದಾಗಿ 35 ದೇಶಗಳು ಘೋಷಣೆಗೆ ಸಹಿ ಹಾಕಿವೆ ಎಂದು ಅವರು ಹೇಳಿದರು. ಈ ಸಭೆಯಲ್ಲಿ ನಾವು ನ್ಯಾವಿಗೇಶನ್ ಸ್ವಾತಂತ್ರ್ಯವನ್ನು ಮರುಸ್ಥಾಪಿಸಲು, ಸಿಲುಕಿರುವ ಹಡಗುಗಳು ಮತ್ತು ಸಮುದ್ರಯಾತ್ರಿಗಳ ಸುರಕ್ಷತೆಯನ್ನು ಖಚಿತಪಡಿಸಲು ಹಾಗೂ ಅಗತ್ಯ ವಸ್ತುಗಳ ಸಾಗಣೆಯನ್ನು ಪುನರಾರಂಭಿಸಲು ಕೈಗೊಳ್ಳಬಹುದಾದ ಎಲ್ಲಾ ರಾಜತಾಂತ್ರಿಕ ಮತ್ತು ರಾಜಕೀಯ ಕ್ರಮಗಳನ್ನು ಪರಿಶೀಲಿಸುತ್ತೇವೆ ಎಂದು ಸ್ಟಾರ್ಮರ್ ಹೇಳಿದ್ದಾರೆ. ಈ ಸಭೆ ಬಳಿಕ ಯುದ್ಧ ಕೊನೆಗೊಂಡ ನಂತರ ಈ ಜಲಸಂಧಿಯನ್ನು ಸುರಕ್ಷಿತ ಮತ್ತು ಪ್ರವೇಶಯೋಗ್ಯವಾಗಿಸಲು ನಾವು ನಮ್ಮ ಸೈನಿಕ ಯೋಜಕರನ್ನೂ ಸೇರಿಸಿ ಅಗತ್ಯ ಕ್ರಮಗಳನ್ನು ರೂಪಿಸುತ್ತೇವೆ ಎಂದು ಅವರು ಹೇಳಿದರು. ಬ್ರಿಟನ್ ಪ್ರಧಾನಮಂತ್ರಿ ಈ ಯುದ್ಧದ ಪರಿಣಾಮಗಳು 'ಒಂದು ಪೀಳಿಗೆಯವರೆಗೆ ನಮ್ಮನ್ನು ನಿರ್ಧರಿಸಬಹುದು' ಎಂದು ಹೇಳಿ, ಅದು 1970ರ ದಶಕದ ಇಂಧನ ಬೆಲೆ ಏರಿಕೆಗೆ ಸಮಾನವಾಗಿರಬಹುದು ಎಂದು ಎಚ್ಚರಿಸಿದರು.

ಎರಡು ವಾರದಲ್ಲಿ ಯುದ್ಧ ಅಂತ್ಯ?

• **ವಾಷಿಂಗ್ಟನ್:** ಹಾರ್ಮುಜ್ ಜಲಸಂಧಿಯನ್ನು ಸಂಪೂರ್ಣ ತೆರೆಯಲು ಇರಾನ್ ಜತೆ ಯಾವುದೇ ಒಪ್ಪಂದವಾಗದಿದ್ದರೂ ಮುಂದಿನ 2 ವಾರಗಳೊಳಗೆ ಯುದ್ಧ ನಿಲ್ಲಬಹುದೆಂಬ ಸುಳಿವನ್ನು ಟ್ರಂಪ್ ನೀಡಿದ್ದಾರೆ. 2 ವಾರಗಳೊಳಗೆ ಯುದ್ಧ ನಂತರೆ, ತೈಲ ಪೂರೈಕೆ ಯಥಾಸ್ಥಿತಿಗೆ ಮರಳಲು 6 ವಾರ ಬೇಕಾಗುತ್ತದೆ ಎಂದು ವಿಶ್ಲೇಷಕರು ವಿಶ್ಲೇಷಿಸಿದ್ದಾರೆ. • ವಿವರ ಪುಟ ೨

ನೆರೆಹೊರೆಯವರಿಗೆ ಭಾರತದ ಆಸರೆ

• **ಹೊಸದಿಲ್ಲಿ:** ಇರಾನ್ ಯುದ್ಧ ಮತ್ತು ಹಾರ್ಮುಜ್ ಜಲಸಂಧಿ ಮುಚ್ಚಲ್ಪಟ್ಟ ಪರಿಣಾಮ ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲಿ ಇಂಧನ ಭದ್ರತೆ ಕುಸಿದಿದೆ. ಈ ಹಿನ್ನೆಲೆ ಯಲ್ಲಿ ಬಾಂಗ್ಲಾದೇಶ, ಮಾಲ್ಡೀವ್ಸ್, ಶ್ರೀಲಂಕಾ ರಾಷ್ಟ್ರಗಳು ತುರ್ತು ಇಂಧನ ಪೂರೈಕೆಗಾಗಿ ಭಾರತದ ಮೊರೆ ಹೋಗಿವೆ. ತೀವ್ರ ಇಂಧನ ಕೊರತೆ ನೀಗಿಸಲು ಈ ದೇಶಗಳು ಈಗ ಭಾರತದ ಸಹಾಯ ಕೋರುತ್ತಿವೆ. ಭಾರತ ತನ್ನ 'ನೆರೆಹೊರೆಗೆ ಮೊದಲ ಆದ್ಯತೆ' ನೀತಿಯನ್ನು ಮುಂದುವರಿಸಿದ್ದು, ಭೂತಾನ್ ಮತ್ತು ನೇಪಾಳಕ್ಕೆ ಅಡೆತಡೆಯಿಲ್ಲದೆ ಇಂಧನ ಪೂರೈಕೆ ಮಾಡುತ್ತಿದೆ. ಇತರ ದೇಶಗಳ ವಿನಂತಿಗಳನ್ನು ಅಗತ್ಯಕ್ಕೆ ಅನುಗುಣವಾಗಿ ಪರಿಶೀಲಿಸಲಾಗುತ್ತಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದಾರೆ. • ವಿವರ ಪುಟ ೨

ಡಾ. ಶಿವಕುಮಾರ ಶ್ರೀ ಜಯಂತಿ ಉದ್ಘಾಟಿಸಿದ ರಾಷ್ಟ್ರಪತಿ | ಮಠದ ಶೈಕ್ಷಣಿಕ ಕ್ರಾಂತಿಗೆ ಪ್ರಶಂಸೆ

ವ್ಯಕ್ತಿತ್ವ ನಿರ್ಮಾಣಕ್ಕೆ ಶಿಕ್ಷಣವೇ ಬುನಾದಿ



• **ತುಮಕೂರು:** ಶಿಕ್ಷಣ ವ್ಯಕ್ತಿತ್ವ ವಿಕಸನ ಮತ್ತು ವ್ಯಕ್ತಿತ್ವ ನಿರ್ಮಾಣದ ಅಡಿಪಾಯವಾಗಿದೆ ಹಾಗೂ ಶಿಕ್ಷಣವು ಸ್ವಾವಲಂಬನೆಗೆ ದಾರಿ ಮಾಡಿಕೊಡಲಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ತುಮಕೂರಿನ ಸಿದ್ಧಗಂಗಾ ಮಠದಲ್ಲಿ ಬುಧವಾರ ಆಯೋಜಿಸಿದ್ದ ಲಿಂಗೈಕ್ಯ ಡಾ. ಶ್ರೀ ಶಿವಕುಮಾರ ಸ್ವಾಮೀಜಿ ಅವರ 119ನೇ ಜನ್ಮ ದಿನಾಚರಣೆ ಹಾಗೂ ಗುರುವಂದನೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಣ ಅಥವಾ ವಿದ್ಯೆ ವ್ಯಕ್ತಿತ್ವ ವಿಕಸನ ಮತ್ತು ವ್ಯಕ್ತಿತ್ವ ನಿರ್ಮಾಣದ ಅಡಿಪಾಯವಾಗಿದ್ದು, ಹಿಂದುಳಿದ ಸಮುದಾಯದ ವಿದ್ಯಾರ್ಥಿಗಳಿಗೆ ಹಾಗೂ ಗ್ರಾಮೀಣ ಪ್ರದೇಶದ ಜನರಿಗೆ ಶಿಕ್ಷಣ ಒದಗಿಸುವ ಮೂಲಕ ಸಮಾಜಕ್ಕೆ ಶ್ರೀ ಸಿದ್ಧಗಂಗಾ ಮಠವು ಅತ್ಯಂತ ಅಮೂಲ್ಯ ಕೊಡುಗೆ ನೀಡುತ್ತಿರುವುದು ಅತ್ಯಂತ ಪ್ರಶಂಸನೀಯ ಎಂದು ಅವರು ಅಭಿಪ್ರಾಯಿಸಿದರು. ಶ್ರೀ ಮಠವು ಬಸವಣ್ಣನವರ ಆದರ್ಶಗಳನ್ನು ಅನುಸರಿಸುವ ಮೂಲಕ ತಾರತಮ್ಯದ ಸಾಮಾಜಿಕ ವ್ಯವಸ್ಥೆ ಮತ್ತು ಸಾರ್ವತ್ರಿಕ ಭಾಗವಹಿಸುವಿಕೆಯ ಆಧಾರದ ಮೇಲೆ ಕಾರ್ಯನಿರ್ವಹಿಸುವ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯ ಕೈಗನ್ನಡಿಯಾಗಿದೆ ಎಂದರು. ಶ್ರೀಗಳು ಬಡವರು ಹಾಗೂ ದುರ್ಬಲರ ಸೇವೆಗೆ ತಮ್ಮ ಇಡೀ ಆಯುಷ್ಯವನ್ನು ಮುಡಿಪಾಗಿಟ್ಟಿದ್ದರು. ➡ಪುಟ ೪

ಕರ್ನಾಟಕ ರಾಷ್ಟ್ರ ನಿರ್ಮಾಣದ ಪ್ರಮುಖ ಕೇಂದ್ರ

ಕಠಿಣ ಪರಿಶ್ರಮ, ಸಾರ್ವಜನಿಕ ಸೇವೆ ಮತ್ತು ರಾಷ್ಟ್ರೀಯ ಸೇವೆ ಪರಸ್ಪರ ಸಂಬಂಧ ಹೊಂದಿವೆ. ಸಾರ್ವಜನಿಕ ಸೇವೆ ಮತ್ತು ರಾಷ್ಟ್ರೀಯ ಸೇವೆಗೆ ಆಧ್ಯಾತ್ಮಿಕತೆಯು ಬಲವಾದ ಅಡಿಪಾಯ ಒದಗಿಸುತ್ತದೆ. ಈ ನಿಟ್ಟಿನಲ್ಲಿ ಕರ್ನಾಟಕವು ಸಾರ್ವಜನಿಕ ಸೇವೆ, ರಾಷ್ಟ್ರೀಯ ಸೇವೆ, ಆಧ್ಯಾತ್ಮಿಕತೆ ಹಾಗೂ ಆಧುನಿಕ ಪ್ರಗತಿಯ ಕೆಲವು ಪ್ರಭಾವಶಾಲಿ ಉದಾಹರಣೆಗಳನ್ನು ನೀಡುತ್ತದೆ. ಇದಕ್ಕಾಗಿ ಕರ್ನಾಟಕದ ಶ್ರಮಶೀಲ ಮತ್ತು ಪ್ರತಿಭಾನ್ವಿತ ನಿವಾಸಿಗಳು ಅಭಿನಂದನೆಗೆ ಅರ್ಹರು. ಕರ್ನಾಟಕದ ಜನರು ನಿರಂತರವಾಗಿ ರಾಷ್ಟ್ರ ನಿರ್ಮಾಣಕ್ಕೆ ಕೊಡುಗೆ ನೀಡಿದ್ದಾರೆ. ಕರ್ನಾಟಕವು ರಾಷ್ಟ್ರ ನಿರ್ಮಾಣದ ಪ್ರಮುಖ ಕೇಂದ್ರವಾಗಬಹುದು ಎಂಬುದು ನನ್ನ ನಂಬಿಕೆ ಎಂದರು.

ಶಾಲಾ ಮಕ್ಕಳ ಸ್ಕ್ರೀನ್ ಸಮಯ ಕಡಿತಕ್ಕೆ ಕ್ರಮ: ಸಚಿವ ದಿನೇಶ್

ಅಪ್ರಾಪ್ತರ ಡಿಜಿಟಲ್ ಕರಡು ಸಿದ್ಧ

• **ಬೆಂಗಳೂರು:** ಡಿಜಿಟಲ್ ಮಾಧ್ಯಮಗಳಿಂದ ಮಕ್ಕಳಲ್ಲಿ ಮಾನಸಿಕ ಸಮಸ್ಯೆಗಳಂತಹ ಸಾಕಷ್ಟು ದುಷ್ಪರಿಣಾಮ ಬೀರುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ವಿದ್ಯಾರ್ಥಿಗಳಲ್ಲಿ ಜವಾಬ್ದಾರಿಯುತ ಡಿಜಿಟಲ್ ಬಳಕೆ ಕುರಿತು ಕರಡು ನೀತಿ ಸಿದ್ಧಪಡಿಸಿದೆ ಎಂದು ಆರೋಗ್ಯ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.



ಆರೋಗ್ಯಸೌಧದಲ್ಲಿ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಸಚಿವರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಪ್ರಾಥಮಿಕ ಶಿಕ್ಷಣ ಇಲಾಖೆ, ಕರ್ನಾಟಕ ರಾಜ್ಯ ಮಾನಸಿಕ ಆರೋಗ್ಯ ಪ್ರಾಧಿಕಾರ ಹಾಗೂ ನಿಮ್ಹಾನ್ಸ್ ಸಹಯೋಗದಲ್ಲಿ ವಿದ್ಯಾರ್ಥಿಗಳಿಗೆ ಸುರಕ್ಷಿತ, ಸಮತೋಲಿತ ಮತ್ತು ಮಾನಸಿಕವಾಗಿ ಆರೋಗ್ಯಕರ ಡಿಜಿಟಲ್ ವಾತಾವರಣ ಸೃಷ್ಟಿಸಲು ಈ ಕರಡು ವಿನ್ಯಾಸಗೊಳಿಸಲಾಗಿದೆ ಎಂದು ಹೇಳಿದರು. ➡ಪುಟ ೪

ಅಭಿಪ್ರಾಯ ಆಹ್ವಾನ

ಈ ಕರಡನ್ನು ಆರೋಗ್ಯ ಇಲಾಖೆಯ ಜಾಲತಾಣ https://hfwcom.karnataka.gov.in/en ನಲ್ಲಿ ಪ್ರಕಟಿಸಲಾಗಿದ್ದು, ಸಾರ್ವಜನಿಕರಿಂದ ಅಭಿಪ್ರಾಯ ಆಹ್ವಾನಿಸಲಾಗಿದೆ. ಆಸಕ್ತರು (ಪೋಷಕರು, ಶಿಕ್ಷಕರು, ವಿದ್ಯಾರ್ಥಿಗಳು ಇತರರ) ತಮ್ಮ ಅಭಿಪ್ರಾಯ ಹಾಗೂ ಸಲಹೆಗಳನ್ನು 15 ದಿನಗಳೊಳಗೆ ಇ-ಮೇಲ್ dd6mh-kar@gmail.com ಮತ್ತು ddehospital-hfws@karnataka.gov.in ಗೆ ರವಾನಿಸಬಹುದು ಎಂದರು.

ಪ್ರಧಾನಿ ನೇತೃತ್ವದಲ್ಲಿ ನಡೆದ ಭದ್ರತಾ ಮಂಡಳಿ ಸಭೆಯಲ್ಲಿ ಚರ್ಚೆ

ಅನಿಲ, ತೈಲ ಪೂರೈಕೆಗೆ ಅಗತ್ಯ ಕ್ರಮ

• **ಹೊಸದಿಲ್ಲಿ:** ಪ್ರಧಾನಿ ನರೇಂದ್ರ ಮೋದಿ ನಿವಾಸದಲ್ಲಿ ಬುಧವಾರ ನಡೆದ ಭದ್ರತೆಯ ಸಂಪುಟ ಸಮಿತಿಯ (ಸಿಸಿಎಸ್) ತುರ್ತು ಸಭೆಯಲ್ಲಿ, ಇರಾನ್ ಯುದ್ಧದಿಂದ ತೈಲ, ಅನಿಲ ಪೂರೈಕೆಯಲ್ಲಿನ ವ್ಯತ್ಯಯ, ಜಾಗತಿಕ ಆರ್ಥಿಕ ಅಪಾಯಗಳು ಮತ್ತು ರಾಷ್ಟ್ರೀಯ ಭದ್ರತೆ ಕುರಿತು ಮೋದಿ ಸಚಿವರೊಂದಿಗೆ ಚರ್ಚೆ ನಡೆಸಿದರು. ಅನಿಲ, ತೈಲ ನಿರಂತರ ಪೂರೈಕೆ ನಿಟ್ಟಿನಲ್ಲಿ ಕೈಗೊಳ್ಳಲಾದ ಕ್ರಮಗಳ ಬಗ್ಗೆ ಸಭೆಯಲ್ಲಿ ಚರ್ಚೆ ನಡೆದಿದೆ.

ಪ್ರಧಾನಿ ಮೋದಿ ನೇತೃತ್ವದಲ್ಲಿ ರಾತ್ರಿ 7ಕ್ಕೆ ಆರಂಭವಾದ ಮಹತ್ವದ ಸಿಸಿಎಸ್ ಸಭೆಯಲ್ಲಿ, ತಡೆರಹಿತ ಎಲ್‌ಪಿಜಿ ಪೂರೈಕೆ, ರಸಗೊಬ್ಬರ ಪೂರೈಕೆ ಮತ್ತು ನೈಸರ್ಗಿಕ ಅನಿಲ (ಪಿಎನ್‌ಜಿ) ಬಳಕೆ ಉತ್ತೇಜಿಸುವುದು ಸೇರಿದಂತೆ ಮುಂದಿನ ಕಾರ್ಯ ಯೋಜನೆಗಳ ಕುರಿತು ಚರ್ಚಿಸಲಾಯಿತು. ಸುಮಾರು 2 ಗಂಟೆ 45 ನಿಮಿಷ ನಡೆದ ಸಭೆಯಲ್ಲಿ ಸಚಿವರೊಂದಿಗೆ ಮೋದಿ ಮಹತ್ವದ ಚರ್ಚೆ ನಡೆಸಿದ್ದಾರೆ.



ಸಭೆಯಲ್ಲಿ ಕೇಂದ್ರ ಸರ್ಕಾರದ ಮುಂದಿನ ಆರ್ಥಿಕ ಮತ್ತು ಕಾರ್ಯತಾಂತ್ರಿಕ ನಿರ್ಧಾರಗಳ ಕುರಿತು ಚರ್ಚಿಸಲಾಗಿದೆ. ಕೇರಳ ಭೇಟಿಯಲ್ಲಿರುವ ರಕ್ಷಣಾ ಸಚಿವ ರಾಜನಾಥ್ ಗೈರು ಹಾಜರಿನಲ್ಲಿ ನಡೆದ ಸಭೆಯಲ್ಲಿ ಗೃಹ ಸಚಿವ ಅಮಿತ್ ಶಾ, ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್, ವಿದೇಶಾಂಗ ಸಚಿವ ಎಸ್.ಜೈಶಂಕರ್ ಮತ್ತು ಇನ್ನಿತರ ಸಚಿವರು ಉಪಸ್ಥಿತರಿದ್ದರು. ➡ಪುಟ ೪

ಒರಾಕಲ್‌ನ 12000 ಉದ್ಯೋಗಿಗಳ ವಜಾ

ಮುಂದಿನ ದಿನಗಳಲ್ಲಿ ಮತ್ತೆ ಉದ್ಯೋಗ ಕಡಿತ
ಎಐ ತಂತ್ರಜ್ಞಾನಕ್ಕೆ ಒತ್ತು

• **ಹೊಸದಿಲ್ಲಿ:** ಅಮೆರಿಕ ಮೂಲಕ ಒರಾಕಲ್ ಕಾರ್ಪೊರೇಷನ್ ಭಾರತದಲ್ಲಿ ಸುಮಾರು 12 ಸಾವಿರ ಉದ್ಯೋಗಿಗಳನ್ನು ವಜಾಗೊಳಿಸಿದೆ. ಕೃತಕ ಬುದ್ಧಿಮತ್ತೆ (ಎಐ) ಮೂಲಸೌಕರ್ಯಕ್ಕೆ ಹೆಚ್ಚಿನ ಆದ್ಯತೆ ನೀಡುವ ನಿಟ್ಟಿನಲ್ಲಿ ಕಂಪನಿ ತನ್ನ ಒಟ್ಟು ಸ್ಥಳೀಯ ಸಿಬ್ಬಂದಿಯಲ್ಲಿ ಸುಮಾರು ಅರ್ಧದಷ್ಟು ಮಂದಿಯನ್ನು ವಜಾಗೊಳಿಸಿದೆ.

ಭಾರತದಲ್ಲಿನ ಈ ಉದ್ಯೋಗ ಕಡಿತ ಜಾಗತಿಕ ಮಟ್ಟದ ಮರುಸಂಘಟನೆಯ ಭಾಗವಾಗಿದ್ದು, ವಿಶ್ವಾದ್ಯಂತ ಸುಮಾರು 30 ಸಾವಿರ ಉದ್ಯೋಗಿಗಳ ಮೇಲೆ ಇದು ಪರಿಣಾಮ ಬೀರಲಿದೆ. ಹಿರಿಯ ಇಂಜಿನಿಯರ್‌ಗಳು, ವಿನ್ಯಾಸಗಾರರು, ಜಾರಿ ಹಂತದ ನಾಯಕರು, ಪ್ರೋಗ್ರಾಂ ಮ್ಯಾನೇಜರ್‌ಗಳು ಮತ್ತು ತಾಂತ್ರಿಕ ತಜ್ಞರು ಕೆಲಸ ಕಳೆದುಕೊಂಡಿದ್ದಾರೆ. ➡ಪುಟ ೪

ನುಸುಳುಕೋರರ ರಕ್ಷಕ ಕಾಂಗ್ರೆಸ್: ಮೋದಿ



• **ಗೋಗಮುಖ್ (ಅಸ್ಸಾಂ):** ಅಸ್ಸಾಂನಲ್ಲಿ ಒಂದು ವೇಳೆ ಅಧಿಕಾರಕ್ಕೆ ಬಂದರೆ ಕಾಂಗ್ರೆಸ್ ಅಕ್ರಮ ನುಸುಳುಕೋರರನ್ನು ರಕ್ಷಿಸುವುದಕ್ಕಾಗಿ ಕಾನೂನು ತರಲೂ ಹೇಸದು ಎಂದು ಎಚ್ಚರಿಸಿರುವ ಪ್ರಧಾನಿ ನರೇಂದ್ರ ಮೋದಿಯವರು, ಬಿಜೆಪಿ ಅಕ್ರಮ ನುಸುಳುಕೋರರಿಗೆ ಎಂದೂ ಅವಕಾಶ ನೀಡದು. ಜನಾಶೀರ್ವಾದದ ಮೂಲಕ ಬಿಜೆಪಿ ಈ ಬಾರಿ ಹ್ಯಾಟ್ರಿಕ್ ವಿಜಯ ಸಾಧಿಸಲಿದೆ ಎಂದು ಘೋಷಿಸಿದ್ದಾರೆ.

ಧೇಮಾಜಿ ಜಿಲ್ಲೆಯಲ್ಲಿನ ಗೋಗಮುಖ್‌ನಲ್ಲಿ ನಡೆದ ಚುನಾವಣಾ ರ‍್ಯಾಲಿಯೊಂದರಲ್ಲಿ ಮಾತನಾಡಿದ ಅವರು, ದೇಶದ ಬಹುಸಂಖ್ಯಾತರನ್ನು ಅಲ್ಪಸಂಖ್ಯಾತರನ್ನಾಗಿಸಿ ಅಲ್ಪಸಂಖ್ಯಾತರನ್ನು ಬಹುಸಂಖ್ಯಾತರನ್ನಾಗಿಸುವ ಮೂಲಕ ಅಕ್ರಮ ನುಸುಳುಕೋರರನ್ನು ಕಾಯಂ ಆಗಿ ವೋಟ್‌ಬ್ಯಾಂಕ್ ಆಗಿ ಬಳಸಿಕೊಳ್ಳುವುದು ಕಾಂಗ್ರೆಸ್‌ನ ತಂತ್ರವಾಗಿದೆ ಎಂದು ತರಾಟೆಗೆತ್ತಿಕೊಂಡರು. ➡ಪುಟ ೪

ಕತಾರ್ ಟ್ಯಾಂಕರ್, ಕುವೈತ್ ವಿಮಾನ ನಿಲ್ದಾಣ ಮೇಲೆ ದಾಳಿ

ದುಬೈ: ಇರಾನ್ ಪಡೆಗಳು ಬುಧವಾರ ಮುಂಜಾನೆ ಕತಾರ್ ಸಮುದ್ರ ತೀರದಲ್ಲಿ ಟ್ಯಾಂಕರ್ ಮೇಲೆ ಬಾಂಬ್ ದಾಳಿ ನಡೆಸಿದ್ದು, ಅತ್ತ ಕುವೈತ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲೆಯೂ ಡ್ರೋನ್ ದಾಳಿ ಮಾಡಿವೆ. ಈ ಬೆಳವಣಿಗೆಯಿಂದಾಗಿ ಕೊಲ್ಲಿ ರಾಷ್ಟ್ರಗಳಲ್ಲಿ ಯುದ್ಧದ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿದೆ. ಕತಾರ್ ಕರಾವಳಿಯಲ್ಲಿ ನಡೆದ ದಾಳಿಯಲ್ಲಿ ಹಡಗಿನ ಸಿಬ್ಬಂದಿಗೆ ಯಾವುದೇ ಅಪಾಯವಾಗಿಲ್ಲ ಎಂದು ತಿಳಿದುಬಂದಿದೆ.

ಆದರೆ, ಕುವೈತ್ ವಿಮಾನ ನಿಲ್ದಾಣದ ಇಂಧನ ಟ್ಯಾಂಕ್ ಮೇಲೆ ಡ್ರೋನ್ ಬಿದ್ದ ಪರಿಣಾಮ ಭಾರೀ ಬೆಂಕಿ ಕಾಣಿಸಿಕೊಂಡಿದೆ. ಬಹ್ರೈನ್ ದೇಶದ ವ್ಯಾಪಾರ ಕೇಂದ್ರವೊಂದರ ಮೇಲೆಯೂ ಕ್ಷಿಪಣಿ ದಾಳಿಯಾಗಿದ್ದು, ಅತ್ತ ಸೌದಿ ಅರೇಬಿಯಾ ತನ್ನತ್ತ ನುಗ್ಗಿ ಬಂದ ಎರಡು ಡ್ರೋನ್‌ಗಳನ್ನು ಹೊಡೆದುರುಳಿಸಿದೆ. ಇತ್ತ ಇಸ್ರೇಲ್ ಪಡೆಗಳು ಲೆಬನಾನ್ ರಾಜಧಾನಿ ಬೈರುತ್ ಮೇಲೆ ನಡೆಸಿದ ವೈಮಾನಿಕ ದಾಳಿಯಲ್ಲಿ ಐವರು ಮೃತಪಟ್ಟಿದ್ದು, 21 ಜನರು ಗಾಯಗೊಂಡಿದ್ದಾರೆ. ಇರಾನ್ ರಾಜಧಾನಿ ಟೆಹ್ರಾನ್‌ನಲ್ಲಿರುವ ತೋಫಿಗ್ ದಾರು ಕಾರ್ಖಾನೆಯ ಮೇಲೆ ದಾಳಿ ನಡೆದಿದ್ದು, ಅಲ್ಲಿ ರಾಸಾಯನಿಕ ಅಸ್ತ್ರ ತಯಾರಿಸಲಾಗುತ್ತಿತ್ತು ಎಂದು ಇಸ್ರೇಲ್ ಆರೋಪಿಸಿದೆ. ಆದರೆ ಇರಾನ್ ಮಾತ್ರ ಅದು ಕೇವಲ ಔಷಧಿ ತಯಾರಿಕಾ ಘಟಕ ಎಂದು ವಾದಿಸುತ್ತಿದೆ.



ರಾಜತಾಂತ್ರಿಕ ಬಿಕ್ಕಟ್ಟು: ಕದನ ವಿರಾಮದ ಕುರಿತು ಅಮೆರಿಕದ ಪ್ರತಿನಿಧಿ ಸ್ಟೀವ್ ವಿಟ್ಕೋಫ್ ನೇರ ಸಂಪರ್ಕದಲ್ಲಿದ್ದಾರೆ ಎಂದು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಗ್ಚಿ ಒಪ್ಪಿಕೊಂಡಿದ್ದಾರೆ. ಆದರೆ, ಯಾವುದೇ ಮಾತುಕತೆ ಇನ್ನೂ ನಡೆದಿಲ್ಲ ಮತ್ತು ನಮಗೆ ಅಮೆರಿಕದ ಮೇಲೆ ನಂಬಿಕೆಯೇ ಇಲ್ಲ ಎಂದು ಅವರು ಕಿಡಿಕಾರಿದ್ದಾರೆ.



ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಈ ಯುದ್ಧ ಎರಡು ವಾರಗಳಲ್ಲಿ ಮುಗಿಯಬಹುದು ಎಂದು ಹೇಳುತ್ತಿದ್ದರೂ, ಮತ್ತೊಂದೆಡೆ ಸಾವಿರಾರು ಸೈನಿಕರನ್ನು ಈ ಪ್ರದೇಶಕ್ಕೆ ಕಳುಹಿಸುತ್ತಿದ್ದಾರೆ. ಅಮೆರಿಕವು ಶಾಂತಿಗಾಗಿ 15 ಅಂಶಗಳ ಯೋಜನೆಯನ್ನು ಮುಂದಿಟ್ಟಿದ್ದರೆ, ಇರಾನ್ ತನ್ನದೇ ಆದ 5 ಅಂಶಗಳ ಬೇಡಿಕೆಯನ್ನು ಇಟ್ಟಿದೆ.

ಆರ್ಥಿಕ ಹೊಡೆತ: ಹಾರ್ಮುಜ್ ಜಲಸಂಧಿಯಲ್ಲಿ ಇರಾನ್ ಹಡಗುಗಳ ಸಂಚಾರವನ್ನು ತಡೆಹಿಡಿದಿರುವುದರಿಂದ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಭಾರೀ ಏರಿಕೆಯಾಗಿದೆ. ಪ್ರಸ್ತುತ ಒಂದು ಬ್ಯಾರೆಲ್ ತೈಲದ ಬೆಲೆ 104 ಡಾಲರ್ ದಾಟಿದ್ದು, ಇದು 2022ರ ನಂತರದ ಗರಿಷ್ಠ ಬೆಲೆಯಾಗಿದೆ. ಪ್ರಪಂಚದ ಶೇ.20ರಷ್ಟು ತೈಲ ಇದೇ ಮಾರ್ಗವಾಗಿ ಸಾಗುವುದರಿಂದ ಜಾಗತಿಕವಾಗಿ ಬೆಲೆ ಏರಿಕೆಯ ಭೀತಿ ಎದುರಾಗಿದೆ. ಈ ಜಲಮಾರ್ಗವನ್ನು ರಕ್ಷಿಸುವ ಜವಾಬ್ದಾರಿ ಅದನ್ನು ಬಳಸುವ ಫ್ರಾನ್ ನಂತಹ ದೇಶಗಳ ಮೇಲಿದೆ, ಎಂದು ಟ್ರಂಪ್ ಹೇಳಿದ್ದಾರೆ.

ಸಾವುನೋವುಗಳ ವಿವರ: ಈ ಭೀಕರ ಸಂಘರ್ಷದಲ್ಲಿ ಈವರೆಗೆ 3,000ಕ್ಕೂ ಹೆಚ್ಚು ಜನರು ಪ್ರಾಣ ಕಳೆದುಕೊಂಡಿದ್ದಾರೆ. ಇರಾನ್‌ನಲ್ಲಿ 1,900, ಲೆಬನಾನ್‌ನಲ್ಲಿ 1,200 ಮತ್ತು ಇಸ್ರೇಲ್‌ನಲ್ಲಿ 19 ಜನರು ಮೃತಪಟ್ಟಿದ್ದಾರೆ ಎಂದು ವರದಿಗಳು ತಿಳಿಸಿವೆ. ಯುದ್ಧದಲ್ಲಿ 13 ಅಮೆರಿಕನ್ ಸೈನಿಕರು ಮೃತಪಟ್ಟಿದ್ದು, 348 ಮಂದಿ ಗಾಯಗೊಂಡಿದ್ದಾರೆ. ಲೆಬನಾನ್ ಮೇಲೆ ಇಸ್ರೇಲ್ ದಾಳಿ ಆರಂಭಿಸಿದ ನಂತರ ಅಲ್ಲಿ ಸುಮಾರು 10 ಲಕ್ಷಕ್ಕೂ ಹೆಚ್ಚು ಜನರು ಸೂರು ಕಳೆದುಕೊಂಡು ಬೀದಿಗೆ ಬಿದ್ದಿದ್ದಾರೆ. ಗಲ್ಫ್ ರಾಷ್ಟ್ರಗಳು ಮತ್ತು ವೆಸ್ಟ್ ಬ್ಯಾಂಕ್ ಭಾಗದಲ್ಲಿಯೂ ಸಾವುನೋವುಗಳು ಸಂಭವಿಸುತ್ತಲೇ ಇವೆ. ಈ ಎಲ್ಲಾ ಬೆಳವಣಿಗೆಗಳು ಜಗತ್ತನ್ನು ಆತಂಕಕ್ಕೆ ತಳ್ಳಿವೆ.

ಬಾಂಗ್ಲಾದೇಶ, ಶ್ರೀಲಂಕಾಕ್ಕೆ ಇಂಧನ ಸರಬರಾಜು

ವಿದ್ಯುತ್ ವ್ಯತ್ಯಯ ಮತ್ತು ಕೈಗಾರಿಕಾ ಬಿಕ್ಕಟ್ಟನ್ನು ಎದುರಿಸುತ್ತಿರುವ ಬಾಂಗ್ಲಾದೇಶಕ್ಕೆ ಮಾರ್ಚ್ 10 ರಂದು 'ಭಾರತ-ಬಾಂಗ್ಲಾದೇಶ ಸ್ನೇಹ ಪೈಪ್‌ಲೈನ್' ಮೂಲಕ 5,000 ಟನ್ ಡೀಸೆಲ್ ಕಳುಹಿಸಲಾಗಿದೆ. ತಾರಿಕ್ ರೆಹಮಾನ್ ನೇತೃತ್ವದ ಸರ್ಕಾರ ಹೆಚ್ಚಿನ ನೆರವಿಗೆ ವಿನಂತಿಸಿದ್ದು, ಹೆಚ್ಚುವರಿಯಾಗಿ 17,000 ಟನ್ ಇಂಧನವನ್ನು ಶೀಘ್ರದಲ್ಲೇ ರವಾನಿಸಲಾಗುವುದು. ಇತ್ತ ಇಂಧನ ಬೆಲೆಯಲ್ಲಿ ಶೇ. 33 ರಷ್ಟು ಏರಿಕೆ ಕಂಡಿರುವ ಶ್ರೀಲಂಕಾಕ್ಕೆ, ವಿನಂತಿಯ ಮೇರೆಗೆ ಮಾರ್ಚ್ 28 ರಂದು 20,000 ಮೆಟ್ರಿಕ್ ಟನ್ ಡೀಸೆಲ್ ಮತ್ತು 18,000 ಮೆಟ್ರಿಕ್ ಟನ್ ಪೆಟ್ರೋಲ್ ರವಾನಿಸಲಾಗಿದೆ.

ನಿಲುವು ಬದಲಿಸಿದ ಮಾಲ್ಡೀವ್ಸ್

ಮಾಲ್ಡೀವ್ಸ್ ಅಧ್ಯಕ್ಷ ಮೊಹಮ್ಮದ್ ಮುಯಿಝು ಸರ್ಕಾರ ಪೆಟ್ರೋಲ್ ಮತ್ತು ವಿಮಾನ ಇಂಧನಕ್ಕಾಗಿ (ಎಟಿಎಫ್) ಭಾರತಕ್ಕೆ ಮನವಿ ಮಾಡಿದೆ. 2024ರಲ್ಲಿ 'ಇಂಡಿಯಾ ಔಟ್' ಅಭಿಯಾನದ ಮೂಲಕ ವಿರೋಧ ವ್ಯಕ್ತಪಡಿಸಿದ್ದ ಮಾಲ್ಡೀವ್ಸ್, ಈಗ ತನ್ನ ನಿಲುವು ಬದಲಿಸಿಕೊಂಡಿದೆ. ಈ ಮನವಿಯನ್ನು ಭಾರತ ಸದ್ಯ ಪರಿಶೀಲಿಸುತ್ತಿದೆ.

- ತೈಲ ಪೂರೈಕೆ ಯಥಾಸ್ಥಿತಿಗೆ ಮರಳಲು ಆರು ವಾರಗಳಾದರೂ ಬೇಕು
- ಹಾನಿಗೊಳಗಾದ ತೈಲ ಮೂಲಸೌಕರ್ಯ ರಿಪೇರಿಗೆ 2 ವಾರ ಅಗತ್ಯ
- ಯುದ್ಧ ನಿಲ್ಲದಿದ್ದರೆ ತೈಲ ಪೂರೈಕೆಯಲ್ಲಿ ಅನಿಶ್ಚಿತತೆ ಏರಿಕೆ

2 ವಾರದಲ್ಲಿ ಯುದ್ಧ ನಿಂತರೆ?



ವಾಷಿಂಗ್ಟನ್: ಹಾರ್ಮುಜ್ ಜಲಸಂಧಿಯನ್ನು ಸಂಪೂರ್ಣ ತೆರೆಯಲು ಇರಾನ್ ಜತೆ ಯಾವುದೇ ಒಪ್ಪಂದವಾಗದಿದ್ದರೂ ಮುಂದಿನ ಎರಡು ವಾರಗಳೊಳಗೆ ಯುದ್ಧ ನಿಲ್ಲಬಹುದೆಂಬ ಸುಳಿವನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೀಡಿದ್ದಾರೆ. ಟ್ರಂಪ್ ಸೂಚನೆ ನೀಡಿದಂತೆ ಎರಡು ವಾರಗಳೊಳಗೆ ಯುದ್ಧ ನಿಂತರೆ, ತೈಲ ಪೂರೈಕೆ ಯಥಾಸ್ಥಿತಿಗೆ ಮರಳಲು ಆರು ವಾರಗಳ ಸಮಯ ಬೇಕಾಗುತ್ತದೆ ಎಂದು ವಾಣಿಜ್ಯ ವಿಶ್ಲೇಷಕರು ಲೆಕ್ಕಾಚಾರ ಹಾಕಿದ್ದಾರೆ.

ಸದ್ಯ ಹಾರ್ಮುಜ್ ಜಲಸಂಧಿಯನ್ನು ಸಂಪೂರ್ಣ ತೆರೆಸಬೇಕೆಂಬ ಆಸಕ್ತಿ ಅಮೆರಿಕ ಅಧ್ಯಕ್ಷ ಟ್ರಂಪ್ ಅವರಿಗಿಲ್ಲ. ಜಲಸಂಧಿ ವಶಪಡಿಸಲು ಯುದ್ಧ ನೌಕೆಗಳನ್ನು ಕಳುಹಿಸಬೇಕೆಂದು ಟ್ರಂಪ್ ತಮ್ಮ ಮಿತ್ರ ರಾಷ್ಟ್ರಗಳಿಗೆ ಕರೆ ನೀಡಿದ್ದರು. ಆದರೆ ಟ್ರಂಪ್ ಮನವಿಯನ್ನು ನ್ಯಾಟೋ ಮತ್ತದರ ಮಿತ್ರ ರಾಷ್ಟ್ರಗಳು ತಿರಸ್ಕರಿಸಿದ್ದವು. ಇದರಿಂದ ಟ್ರಂಪ್ ಮುಖಭಂಗ ಅನುಭವಿಸಿದ್ದು, ಹೇಡಿಗಳು ತೈಲಕ್ಕಾಗಿ ಅಪಾಯ ಎದುರಿಸಲು ಸಿದ್ಧವಿಲ್ಲ. ಹಾಗೇನಾದರೂ ಅವುಗಳಿಗೆ ತೈಲ ಬೇಕಿದ್ದರೆ, ನೇರ ಹಾರ್ಮುಜ್ ಜಲಸಂಧಿಗೆ ತೆರಳಿ ಅಲ್ಲಿಂದಲೇ ಆಮದು ಮಾಡಿಕೊಳ್ಳಲಿ ಅಥವಾ ಅಮೆರಿಕದಿಂದ ಖರೀದಿಸಲಿ ಎಂದಿದ್ದರು.

ಗಣಿಗಳ ತೆರವು ಅಪಾಯಕಾರಿ ಕೆಲಸ: ಪ್ರಮುಖ ತೈಲ ಸಾಗಣೆ ಮಾರ್ಗಗಳಲ್ಲಿ ಇರಾನ್ ನಿಯೋಜಿಸಿದ ಗಣಿಗಳನ್ನು ತೆರವುಗೊಳಿಸುವುದು ಅಪಾಯಕಾರಿ ಮತ್ತು ಸಮಯ ತೆಗೆದುಕೊಳ್ಳುವ ಪ್ರಕ್ರಿಯೆ. ಮಾರ್ಚ್ ತಿಂಗಳಲ್ಲಿ 33 ಕಿ.ಮೀ. ಅಗಲದ ತೈಲ ಸಾಗಣೆ ಮಾರ್ಗಗಳಲ್ಲಿ ತಲಾ 3.2ರಿಂದ 3.7 ಕಿ.ಮೀ. ಅಗಲದ ಮಹಮ್-3 ಮತ್ತು ಮಹಮ್-7 ತೈಲ ಗಣಿಗಾರಿಕೆಯ ಹಡಗುಗಳನ್ನು ಇರಾನ್ ನಿಯೋಜಿಸಿತ್ತು.

ಚಾರ್ಟರ್ ದರ, ಸಾಗಣೆ ವೆಚ್ಚದ ಸವಾಲು: ಗಲ್ಫ್ ತೈಲ ರಫ್ತು ಕೇಂದ್ರಗಳಿಂದ ಸಂಸ್ಕರಣಾ ಘಟಕಗಳಿಗೆ ತೈಲ ಸಾಗಿಸುವ ಬೃಹತ್ ಹಡಗುಗಳ (ವೆರಿ ಲಾರ್ಜ್ ಕ್ರೂಡ್ ಕ್ಯಾರಿಯರ್ಸ್-ವಿಎಲ್‌ಸಿಸಿ) ಚಾರ್ಟರ್ ದರ ಹೆಚ್ಚಾಗಿದ್ದರಿಂದ ಸಾಗಣೆ ವೆಚ್ಚ ಹೆಚ್ಚಾಗಲಿದೆ. ಇತ್ತೀಚೆಗೆ ಮಾರ್ಚ್‌ನಲ್ಲಿ ಭಾರತದ ತೈಲ ಹಡಗು ದಿನಕ್ಕೆ 7,70,000 ಡಾಲರ್ ಹಣ ಪಾವತಿಸಿತ್ತೆಂದು ವರದಿಯಾಗಿದೆ. ಚಾರ್ಟರ್ ದರವು ಸಾಗಣೆ ವೆಚ್ಚದ ಒಂದು ಭಾಗವಾಗಿದೆಯಷ್ಟೇ. ಇದಲ್ಲದೆ ತೈಲ, ಬಂದರು ವೆಚ್ಚ, ಕಾಲುವೆ ವೆಚ್ಚ ಹೀಗೆ ಹಲವು ವೆಚ್ಚಗಳಿವೆ.

ಯುದ್ಧ ನಿಲ್ಲದಿದ್ದರೆ?: ಯುದ್ಧ ನಿಲ್ಲದಿದ್ದರೆ, ಎಲ್ಲವೂ ಯಥಾಸ್ಥಿತಿಗೆ ಬರಲು ಇನ್ನೂ ಹಲವು ತಿಂಗಳು ಬೇಕಾಗುವ ಸಾಧ್ಯತೆಯಿದೆ.

ತೈಲ ಸಾಗಣೆ ವಿರುದ್ಧ ಹೌತಿ ಬೆದರಿಕೆ: ಯೆಮನ್ ಮೂಲದ ಹೌತಿ ಬಂಡುಕೋರರು ಇಸ್ರೇಲ್ ನೆಲೆಗಳ ಮೇಲೆ ಕ್ಷಿಪಣಿ ದಾಳಿ ನಡೆಸಿವೆ. ಬಾಬ್ ಅಲ್-ಮಂದಾಬ್ ಮತ್ತು ಹಾರ್ಮುಜ್ ಜಲಸಂಧಿಯ ಪಶ್ಚಿಮ ಭಾಗದಲ್ಲಿ ತೈಲ ಸಾಗಣೆ ಮಾಡದಂತೆ ಹೌತಿ ಬೆದರಿಕೆ ಹಾಕಿದ್ದು, ಅಂತಾರಾಷ್ಟ್ರೀಯ ತೈಲ ರಫ್ತಿನ ಮೇಲೆ ಒತ್ತಡ ಬೀಳಲಿದೆ. ಇದು ಸಣ್ಣ ಜಲಸಂಧಿಯಾಗಿದ್ದರೂ ಬಹಳ ಮುಖ್ಯವಾದ ಜಲಸಂಧಿಯಾಗಿದೆ.

ವ್ಯತ್ಯಯಕ್ಕೆ ಕಾರಣವೇನು?: ಫೆ.28ರಂದು ತೈಲ ರಫ್ತು ರಾಷ್ಟ್ರವಾದ ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ಜಂಟಿ ದಾಳಿ ನಡೆಸಿದ್ದವು. ಗಲ್ಫ್ ತೈಲ ಮೂಲಸೌಕರ್ಯಗಳ ಮೇಲೆ ಇರಾನ್ ದಾಳಿ ನಡೆಸಿದ್ದು ಜಾಗತಿಕ ತೈಲ ಮತ್ತು ಅನಿಲ ಬೆಲೆ ಏರಿಕೆಗೆ ಕಾರಣವಾಗಿದೆ.

ಯುದ್ಧ ನಿಂತರೆ? ಸಹಜಸ್ಥಿತಿಗೆ ಯಾವಾಗ?

ಒಂದು ವೇಳೆ ಟ್ರಂಪ್ ನೀಡಿದ ಸುಳಿವಿನಂತೆ ಎರಡು ವಾರಗಳೊಳಗೆ ಯುದ್ಧ ನಿಂತರೆ, ಯುದ್ಧದಲ್ಲಿ ಅಮೆರಿಕ, ಇಸ್ರೇಲ್ ಮತ್ತು ಇರಾನ್ ದಾಳಿಗೆ ಹಾನಿಗೊಳಗಾದ ಇಂಧನ ಮೂಲಸೌಕರ್ಯಗಳ ರಿಪೇರಿ ಮಾಡುವುದು ಅಥವಾ ಮರುನಿರ್ಮಾಣ ಇನ್ನೂ ಎರಡು ವಾರಗಳ ಸಮಯ ತೆಗೆದುಕೊಳ್ಳುವ ಸಾಧ್ಯತೆಯಿದೆ ಎಂದು ಮ್ಯಾಕ್ವಾರಿ ಗ್ರೂಪ್ ತಂತ್ರಜ್ಞ ವಿಕಾಸ್ ದ್ವಿವೇದಿ ಹೇಳಿದ್ದಾರೆ.

ನೆರೆಹೊರೆಯವರಿಗೆ ಭಾರತದ ಆಸರೆ

ಹೊಸದಿಲ್ಲಿ: ಇರಾನ್ ಯುದ್ಧ ಮತ್ತು ಹಾರ್ಮುಜ್ ಜಲಸಂಧಿ ಮುಚ್ಚಲ್ಪಟ್ಟ ಪರಿಣಾಮ ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲಿ ಇಂಧನ ಭದ್ರತೆ ಕುಸಿದಿದೆ. ಈ ಹಿನ್ನೆಲೆಯಲ್ಲಿ ಬಾಂಗ್ಲಾದೇಶ, ಮಾಲ್ಡೀವ್ಸ್ ಮತ್ತು ಶ್ರೀಲಂಕಾ ರಾಷ್ಟ್ರಗಳು ತುರ್ತು ಇಂಧನ ಪೂರೈಕೆಗಾಗಿ ಭಾರತದ ಮೊರೆ ಹೋಗಿವೆ.

ಕಾರ್ಯತಂತ್ರದ ಬದಲಾವಣೆ: ತೀವ್ರ ಇಂಧನ ಕೊರತೆ ನೀಗಿಸಲು ಈ ದೇಶಗಳು ಈಗ ಭಾರತದ ಸಹಾಯ ಕೋರುತ್ತಿವೆ. ಭಾರತ ತನ್ನ 'ನೆರೆಹೊರೆಗೆ ಮೊದಲ ಆದ್ಯತೆ' ನೀತಿಯನ್ನು ಮುಂದುವರಿಸಿದ್ದು, ಭೂತಾನ್ ಮತ್ತು ನೇಪಾಳಕ್ಕೆ ಅಡೆತಡೆಯಿಲ್ಲದೆ ಇಂಧನ ಪೂರೈಕೆ ಮಾಡುತ್ತಿದೆ. ಇತರ ದೇಶಗಳ ವಿನಂತಿಗಳನ್ನು ಅಗತ್ಯಕ್ಕೆ ಅನುಗುಣವಾಗಿ ಪರಿಶೀಲಿಸಲಾಗುತ್ತಿದೆ, ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದಾರೆ. ಭಾರತ ಪ್ರಸ್ತುತ ಸುಮಾರು ಎರಡು ತಿಂಗಳ ಕಾಲಕ್ಕಾಗುವಷ್ಟು ಇಂಧನ ಸಂಗ್ರಹ ಹೊಂದಿದೆ.

ಯುದ್ಧ:ಮುಂದಿನ ದಿನಗಳು ಕಠಿಣ ಜನತೆಗೆ ಆಸ್ಟ್ರೇಲಿಯಾ ಪಿಎಂ ಎಚ್ಚರಿಕೆ

ಸಿಡ್ನಿ: ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದ ತೀವ್ರತೆಯ ಹಿನ್ನೆಲೆಯಲ್ಲಿ ಆಸ್ಟ್ರೇಲಿಯಾದ ಪ್ರಧಾನಿ ಅಂಟೋನಿಯಾ ಅಲ್ಬಾನೀಸ್ ಅವರು ತಮ್ಮ ದೇಶದ ಜನತೆಯನ್ನು ಎಚ್ಚರಿಸಿದ್ದು, ಮುಂಬರುವ ದಿನಗಳು ಸುಲಭದ್ದಾಗಿರದೆ ಕಠಿಣವಾಗಿರಲಿದೆ . ಇದರಿಂದ ಉಂಟಾಗಲಿರುವ ಒತ್ತಡಗಳನ್ನು ತೊಡೆದುಹಾಕುವ ಬಗ್ಗೆ ಯಾವುದೇ ಸರಕಾರಕ್ಕೂ ಭರವಸೆ ನೀಡಲು ಸಾಧ್ಯವಿಲ್ಲ ಎಂದಿದ್ದಾರೆ. ಅಮೆರಿಕ-ಇಸ್ರೇಲ್ ಮತ್ತು ಇರಾನ್ ನಡುವಣ ಯುದ್ಧ ಜಗತ್ತಿನ ಎಲ್ಲ ದೇಶಗಳನ್ನೂ ಬಾಧಿಸುತ್ತಿದೆ. ಪೆಟ್ರೋಲ್, ಡೀಸೆಲ್ , ಎಲ್‌ಪಿಜಿ ಬೆಲೆಗಳು ತೀವ್ರ ಏರಿಕೆ ಕಾಣುತ್ತಿರುವಂತೆಯೇ ಜನರ ಬದುಕು, ಆರ್ಥಿಕತೆಗೆ ತೀವ್ರ ಏಟು ಬೀಳಲಾರಂಭಿಸಿದೆ. ಈ ಹಿನ್ನೆಲೆಯಲ್ಲಿ ಅವರು ಮುಂಬರುವ ತಿಂಗಳುಗಳಲ್ಲಿ ಕಠಿಣ ದಿನಗಳನ್ನು ಎದುರಿಸಲು ಸಿದ್ಧವಾಗಿರಬೇಕಾಗಿದೆ ಎಂದು ಟಿವಿ ಜಾಲಗಳ ಮೂಲಕ ದೇಶದ ಜನತೆಯನ್ನು ಉದ್ದೇಶಿಸಿ ಎಚ್ಚರಿಕೆ ನೀಡಿದ್ದಾರೆ. ಮುಂಬರುವ ತಿಂಗಳುಗಳು ಸುಲಭದ್ದಾಗಿರದು.ನಾನು ಈ ಬಗ್ಗೆ ಸ್ಪಷ್ಟವಾಗಿ ಹೇಳಲು ಬಯಸುವೆ. ಈ ಯುದ್ಧದಿಂದ ಉಂಟಾಗಲಿರುವ ಒತ್ತಡಗಳನ್ನು ತೊಡೆದುಹಾಕುವ ಬಗ್ಗೆ ಯಾವುದೇ ಸರಕಾರಕ್ಕೂ ಭರವಸೆ ನೀಡಲು ಸಾಧ್ಯವಿಲ್ಲ . ಈ ಯುದ್ಧದಲ್ಲಿ ಆಸ್ಟ್ರೇಲಿಯಾ ಸಕ್ರಿಯವಾಗಿಯೇನೂ ಪಾಲ್ಗೊಂಡಿಲ್ಲ. ಆದರೂ ಎಲ್ಲ ಆಸ್ಟ್ರೇಲಿಯನ್ನರೂ ಇದರಿಂದ ಹೆಚ್ಚಿನ ಬೆಲೆಗಳನ್ನು ತೆರಬೇಕಾಗಿಬಂದಿದೆ ಎಂದು ಅವರು ಹೇಳಿದರು.

ಆತಂಕದ ಖರೀದಿ, ಪೂರೈಕೆ ಅಡಚಣೆಯಿಂದ ಇಂಧನ ಬಿಕ್ಕಟ್ಟು

ರೈತರು, ವಾಹನ ಹೊಂದಿರುವವರು, ಸಣ್ಣ ವ್ಯಾಪಾರಿಗಳು, ಕುಟುಂಬಗಳು ಅತ್ಯಂತ ಕಠಿಣ ಪರಿಸ್ಥಿತಿಯನ್ನು ಎದುರಿಸುವಂತಾಗಿದೆ.ವಾಸ್ತವ ಎಂದರೆ ಈ ಯುದ್ಧದಿಂದ ಆಗಿರುವ ಆರ್ಥಿಕ ಆಘಾತಗಳು ತಿಂಗಳುಗಳ ಕಾಲ ನಮ್ಮನ್ನು ಬಾಧಿಸಲಿವೆ .ಆಸ್ಟ್ರೇಲಿಯಾಕ್ಕೆ ಇಂಧನ ಹೊತ್ತ ನೌಕೆಗಳು ಬರುತ್ತಲೇ ಇವೆ. ಆದಾಗ್ಯೂ ಆತಂಕದ ಖರೀದಿಗಳು ಮತ್ತು ವಿತರಣಾ ಅಡಚಣೆಗಳಿಂದಾಗಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಪೆಟ್ರೋಲ್ ಮತ್ತು ತೈಲ ಉತ್ಪನ್ನಗಳ ಕೊರತೆ ಉಂಟಾಗಿದೆ ಎಂದು ಅವರು ವಿವರಿಸಿದರು. ಆಸ್ಟ್ರೇಲಿಯನ್ನರು ರೈಲುಗಳು, ಬಸ್ಸು ಅಥವಾ ಟ್ರಾಮ್(ವಿದ್ಯುತ್ ವಾಹನ)ಗಳ ಮೂಲಕ ಕೆಲಸದ ಸ್ಥಳಗಳಿಗೆ ಹೋದಲ್ಲಿ ಬಿಕ್ಕಟ್ಟನ್ನು ತಗ್ಗಿಸಲು ನೆರವಾಗಬಹುದು.ಇದರಿಂದ ದಾದಿಯರು, ಪಾಳಿಯ ಕೆಲಸಗಾರರು , ವ್ಯಾಪಾರಸ್ಥರು ಮತ್ತು ಗಣಿ ಕೆಲಸಗಾರರಿಗೆ ಅಗತ್ಯವಿರುವ ಇಂಧನಗಳನ್ನು ಉಳಿಸಲು ಸಾಧ್ಯವಾಗುತ್ತದೆ ಎಂದು ಅವರು ಜನತೆಗೆ ಕರೆ ನೀಡಿದರು.

ಕಿರುಸುದ್ದಿ

ಶ್ರೀನಗರದಲ್ಲಿ ಉಗ್ರನ ವಧೆ

ಶ್ರೀನಗರ: ಜಮ್ಮು-ಕಾಶ್ಮೀರದ ಗಾಂದರ್ಬಲ್ ಜಿಲ್ಲೆಯಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ಸ್ಥಳೀಯ ಭಯೋತ್ಪಾದಕನನ್ನು ಹೊಡೆದುರುಳಿಸಲಾಗಿದೆ. ಭಯೋತ್ಪಾದಕನ ಅನುಮಾನಾಸ್ಪದ ಚಲನವಲನಗಳ ಬಗ್ಗೆ ಖಚಿತ ಮಾಹಿತಿ ನಂತರ ಭದ್ರತಾ ಪಡೆಗಳು ಮಂಗಳವಾರ ರಾತ್ರಿ ಗಾಂಡೆಬಾಲ್‌ನ ಅರಹಾಮಾ ಪ್ರದೇಶದಲ್ಲಿ ಶೋಧ ಕಾರ್ಯಾಚರಣೆಯನ್ನು ಪ್ರಾರಂಭಿಸಿದ್ದವು. ವಧೆಯಾದ ಉಗ್ರನನ್ನು ಗಾಂದರ್ಬಲ್ ಜಿಲ್ಲೆಯ ಲಾರ್ ಪ್ರದೇಶದ ನಿವಾಸಿ ರಶೀದ್ ಅಹ್ಮದ್ ಮೊಘಲ್ ಎಂದು ಗುರುತಿಸಲಾಗಿದೆ. ಪ್ರದೇಶದಲ್ಲಿ ಇನ್ನೂ ಹಲವು ಉಗ್ರರು ಅಡಗಿರುವ ಶಂಕೆಗಳು ವ್ಯಕ್ತವಾಗಿದ್ದು, ಕಾರ್ಯಾಚರಣೆ ಮುಂದುವರಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಷ್ಯಾ ಮಿಲಿಟರಿ ಸಾರಿಗೆ ವಿಮಾನ ಪತನ: 29 ಸಾವು

ಮಾಸ್ಕೋ: ಕ್ರೈಮಿಯಾದಲ್ಲಿ ರಷ್ಯಾದ ಮಿಲಿಟರಿ ಸಾರಿಗೆ ವಿಮಾನವು ಬಂಡೆಗೆ ಅಪ್ಪಳಿಸಿ 29 ಮಂದಿ ಮೃತಪಟ್ಟಿದ್ದಾರೆ. ಸಂಪರ್ಕ ಕಳೆದುಕೊಂಡಿದ್ದ ಆನ್-26 ವಿಮಾನವು ಕಪ್ಪು ಸಮುದ್ರ ಬಳಿಯ ದ್ವೀಪದಲ್ಲಿ ಪತನಗೊಂಡಿದೆ. ರಕ್ಷಣಾ ಸಚಿವಾಲಯವು 23 ಪ್ರಯಾಣಿಕರು ಮತ್ತು ಆರು ಸಿಬ್ಬಂದಿ ಮೃತಪಟ್ಟಿದ್ದಾರೆ ಎಂದು ದೃಢಪಡಿಸಿದೆ. ತಾಂತ್ರಿಕ ಸಮಸ್ಯೆಗಳು ಅಪಘಾತಕ್ಕೆ ಕಾರಣವಾಗಿರಬಹುದು ಎಂದು ಪ್ರಾಥಮಿಕ ವರದಿಯಿಂದ ತಿಳಿದುಬಂದದೆ ಎಂದು ಆರ್‌ಐಎ ಸುದ್ದಿ ಸಂಸ್ಥೆ ವರದಿ ಮಾಡಿದೆ. ಈ ಪ್ರದೇಶದಲ್ಲಿ ಹೆಚ್ಚಿದ ಉದ್ವಿಗ್ನತೆಯ ನಡುವೆ ಇದು ಸಂಭವಿಸಿದೆ. ಅಪಘಾತದ ಕಾರಣವನ್ನು ತನಿಖೆ ಮಾಡಲು ಮಿಲಿಟರಿ ಆಯೋಗವನ್ನು ಕಳುಹಿಸಲಾಗಿದೆ.



ಪಂಜಾಬ್ ಬಿಜೆಪಿ ಕಚೇರಿ ಆವರಣದಲ್ಲಿ ಸ್ಫೋಟ

ಚಂಡೀಗಢ: ಪಂಜಾಬ್ ಬಿಜೆಪಿ ಕಚೇರಿ ಆವರಣದಲ್ಲಿ ಭಾರೀ ಸ್ಫೋಟದ ಶಬ್ದ ಕೇಳಿಬಂದಿದ್ದು, ಆತಂಕದ ವಾತಾವರಣವನ್ನು ಸೃಷ್ಟಿಸಿದೆ. ಬುಧವಾರ ಸಂಜೆ 5 ಗಂಟೆ ಸುಮಾರಿಗೆ ಭಾರೀ ಸ್ಫೋಟದ ಶಬ್ದ ಕೇಳಿಬಂದಿದೆ ಎಂದು ರಾಜ್ಯ ಬಿಜೆಪಿ ನಾಯಕ ವಿನೀತ್ ಜೋಶಿ ಅವರು ತಿಳಿಸಿದ್ದಾರೆ. ವ್ಯಕ್ತಿಯೊಬ್ಬ ಗ್ರೆನೇಡ್ ಅನ್ನು ಎಸೆಯುತ್ತಿರುವ ವಿಡಿಯೋ ಸಿಸಿಟಿವಿಯಲ್ಲಿ ಸೆರೆಯಾಗಿದೆ. ಚಂಡೀಗಢದ ಪೊಲೀಸರು ಘಟನೆಯ ಬಗ್ಗೆ ತನಿಖೆ ನಡೆಸುತ್ತಿದ್ದಾರೆ. ಕೈಯಲ್ಲಿ ಹೆಲ್ಮೆಟ್ ಹಿಡಿದಿರುವ ವ್ಯಕ್ತಿಯೊಬ್ಬ ಗ್ರೆನೇಡ್ ತೆಗೆದು ಎಸೆಯುತ್ತಿರುವುದನ್ನು ಇನ್ನೊಬ್ಬ ವ್ಯಕ್ತಿ ರೆಕಾರ್ಡ್ ಮಾಡಿದ್ದಾನೆ.

ಎಐ ಕಲಿಕೆಗೆ ಉತ್ತೇಜನ: ಗಣಿತಕ್ಕೆ ಹೊಸ ಪಠ್ಯಕ್ರಮ

ಹೊಸದಿಲ್ಲಿ: ಭಾರತದ ತರಗತಿ ಕೊಠಡಿಗಳನ್ನು ಆಧುನೀಕರಿಸುವ ಕ್ರಮದ ಭಾಗವಾಗಿ ಶಿಕ್ಷಣ ಸಚಿವಾಲಯ ಬುಧವಾರ 3 ರಿಂದ 8 ನೇ ತರಗತಿಗಳಿಗೆ ಗಣಿತದ ಹೊಸ ಎಐ ಪಠ್ಯಕ್ರಮವನ್ನು ಪ್ರಾರಂಭಿಸಿದೆ. ಕೃತಕ ಬುದ್ಧಿಮತ್ತೆ (ಎಐ) ಮತ್ತು ಕಂಪ್ಯೂಟೇಶನಲ್ ಚಿಂತನೆ ಮೇಲೆ ಕೇಂದ್ರೀಕರಿಸಿದ ಈ ಪಠ್ಯಕ್ರಮದ ಉದ್ದೇಶ ಮನ ಕಲಿಕೆಯನ್ನು(ರೋಟ್ ಕಲಿಕೆ) ವಿಮರ್ಶಾತ್ಮಕ ಚಿಂತನೆಯೊಂದಿಗೆ ಬದಲಾಯಿಸುವುದಾಗಿದೆ ಎಂದು ಶಿಕ್ಷಣ ಸಚಿವಾಲಯ ಹೇಳಿದೆ. ಈ ಯೋಜನೆಯು ಭಾರತದ ತರಗತಿಗಳಲ್ಲಿ ಸುಧಾರಿತ ತಂತ್ರಜ್ಞಾನಗಳನ್ನು ಸಂಯೋಜಿಸಲು ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಶನ್ (ಸಿಬಿಎಸ್‌ಇ)ಯ ಕಾರ್ಯತಂತ್ರದ ಬದಲಾವಣೆಯನ್ನು ಪ್ರತಿನಿಧಿಸುತ್ತದೆ. ಸಚಿವಾಲಯದ ಪ್ರಕಾರ, 3 ರಿಂದ 8 ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೆ ಕಡ್ಡಾಯವಾದ ಈ ಕಾರ್ಯಕ್ರಮವನ್ನು ಮುಂದಿನ ವರ್ಷ 9 ಮತ್ತು 10 ನೇ ತರಗತಿಗಳಿಗೆ ವಿಸ್ತರಿಸಲಾಗುವುದು. ಇದು ಕಲಿಯುವವರನ್ನು ಸಾಂಪ್ರದಾಯಿಕ ಮನ ಕಲಿಕೆಯಿದ ವಿಮರ್ಶಾತ್ಮಕ ಮತ್ತು ವಿನ್ಯಾಸ ಚಿಂತನೆಯ ಉನ್ನತ ಮಟ್ಟದ ಅರಿವಿನ ಬೇಡಿಕೆಗಳಿಗೆ ಪರಿವರ್ತಿಸುವ ಗುರಿಯನ್ನು ಹೊಂದಿದೆ. ನಾವು ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಕೈಪಿಡಿಗಳನ್ನು ಸಿದ್ಧಪಡಿಸಿದ್ದೇವೆ, ಇದರಲ್ಲಿ ಕಂಪ್ಯೂಟೇಶನಲ್ ಚಿಂತನೆಯನ್ನು ಅಸ್ತಿತ್ವದಲ್ಲಿರುವ ಎನ್‌ಸಿಇಆರ್‌ಟಿ ಗಣಿತ ಮತ್ತು ಟಿಡಬ್ಲ್ಯುಎಯು (ದಿ ವರ್ಲ್ಡ್ ಅರೌಂಡ್ ಅಸ್) ಪುಸ್ತಕಗಳ ಅಧ್ಯಾಯಗಳೊಂದಿಗೆ ಸಂಯೋಜಿಸಲಾಗಿದೆ ಎಂದು ಸಿಬಿಎಸ್‌ಇ ಹೇಳಿದೆ.

ದೇವರ ಸ್ವಂತ ನಾಡಲ್ಲಿ ದೇವರೇ ಸುರಕ್ಷಿತವಾಗಿಲ್ಲ!

ತಿರುವನಂತಪುರಂ: ದೇವರ ಸ್ವಂತ ನಾಡು ಎಂದು ಕರೆಯಲ್ಪಡುವ ರಾಜ್ಯದಲ್ಲಿ ದೇವರು ಸುರಕ್ಷಿತವಾಗಿಲ್ಲ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಆರೋಪಿಸಿದ್ದಾರೆ. ಆಡಳಿತಾರೂಢ ಎಲ್‌ಡಿಎಫ್ ಸಣ್ಣ ಚಿನ್ನದ ತುಂಡಿಗೋಸ್ಕರ ಭಗವಾನ್ ಅಯ್ಯಪ್ಪನಿಗೆ ದ್ರೋಹ ಬಗೆದಿದೆ ಎಂದು ಶಬರಿಮಲೆ ಚಿನ್ನ ಕಳವು ಪ್ರಕರಣವನ್ನು ಉದ್ದೇಶಿಸಿ ಹೇಳಿದ್ದಾರೆ. ಬಿಜೆಪಿ ನೇತೃತ್ವದ ಎಡಿಎಯ ಚುನಾವಣಾ ಪ್ರಚಾರದ ಭಾಗವಾಗಿ ಪರವೂರ್ ವಿಧಾನಸಭಾ ಕ್ಷೇತ್ರದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಸಿಂಗ್, ಜುಡಾಸ್ ಕೆಲವು ಬೆಳ್ಳಿ ತುಂಡುಗಳಿಗಾಗಿ ಯೇಸು ಕ್ರಿಸ್ತನಿಗೆ ದ್ರೋಹ ಮಾಡಿದಂತೆಯೇ, ಎಲ್‌ಡಿಎಫ್ ಕೆಲವು ಚಿನ್ನದ ತುಂಡುಗಳಿಗಾಗಿ ಭಗವಾನ್ ಅಯ್ಯಪ್ಪನಿಗೆ ದ್ರೋಹ ಬಗೆದಿದೆ ಎಂದು ಹೇಳಿದರು. ಇದು ದೇವರ ದುರವಸ್ಥೆಯಾಗಿದ್ದರೆ, ಸಾಮಾನ್ಯ ಜನರ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿದೆ ಎಂದು ಒಂದುಬಾರಿ ಯೋಚಿಸಿ ಎಂದು ಹೇಳಿದ್ದಾರೆ. ಕೇರಳದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಅಧಿಕಾರಕ್ಕೆ ಬಂದ ಕೂಡಲೇ ದೇವಾಲಯದಿಂದ ಚಿನ್ನವನ್ನು ದುರುಪಯೋಗಪಡಿಸಿಕೊಂಡ ಆರೋಪದ ಬಗ್ಗೆ ಕಾಲಮಿತಿಯೊಳಗೆ ಸಿಬಿಐ ತನಿಖೆ ನಡೆಸಲಾಗುವುದು ಎಂದು ಭರವಸೆ ನೀಡಿದರು. ಶಬರಿಮಲೆ ದೇವಾಲಯದ ಚಿನ್ನದ ರಕ್ಷಣೆಯಲ್ಲಿ ಹೇಗೆ ಲೋಪವಾಗಿದೆ ಎಂಬುದನ್ನು ಕೇರಳ ಸರ್ಕಾರ ವಿವರಿಸಬೇಕು ಎಂದು ಅವರು ಒತ್ತಾಯಿಸಿದರು. ಇದು ಭಕ್ತರ ಧಾರ್ಮಿಕ ನಂಬಿಕೆಗಳಿಗೆ ಮಾಡಿದ ದ್ರೋಹವಾಗಿದೆ ಎಂದು ಹೇಳಿದರು. ಕೆಲವು ಸಿಪಿಐ (ಎಂ) ನಾಯಕರು ದೇವಾಲಯದಿಂದ ಚಿನ್ನವನ್ನು ಕದ್ದಿದ್ದರೆ, ಕೆಲವು ಕಾಂಗ್ರೆಸ್ ನಾಯಕರು ಅದನ್ನು ಮಾರಾಟ ಮಾಡಲು ಸಹಾಯ ಮಾಡಿದ್ದಾರೆ ಎಂದು ಸಿಂಗ್ ಆರೋಪಿಸಿದ್ದಾರೆ.

ಎಟಿಎಫ್ ದರ ಏರಿಕೆ ಮಿತಿ ಹೇರಿದ ಸರ್ಕಾರ

ಹೊಸದಿಲ್ಲಿ: ಜಾಗತಿಕ ಇಂಧನ ಮಾರುಕಟ್ಟೆಯಲ್ಲಿನ ಏರಿಳಿತದ ನಡುವೆಯೂ ದೇಶೀಯ ವಿಮಾನಯಾನ ಸಂಸ್ಥೆಗಳಿಗೆ ವಿಮಾನ ಇಂಧನ (ಎಟಿಎಫ್) ದರ ಏರಿಕೆ ಶೇ.25ಕ್ಕೆ ಸರ್ಕಾರ ಸೀಮಿತಗೊಳಿಸಿದೆ.

ದರ ಮಿತಿ ಮತ್ತು ಮಾರುಕಟ್ಟೆ ಮಧ್ಯಸ್ಥಿಕೆ: ಹಾರ್ಮುಜ್ ಜಲಸಂಧಿ ಮುಚ್ಚಲ್ಪಟ್ಟ ಕಾರಣ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇಂಧನ ದರ ಶೇ.100ಕ್ಕಿಂತ ಹೆಚ್ಚು ಏರಿಕೆಯಾಗುವ ಸಾಧ್ಯತೆ ಇತ್ತು. ಆದರೂ, ನಾಗರಿಕ ವಿಮಾನಯಾನ ಸಚಿವಾಲಯದ ಸಹಯೋಗದೊಂದಿಗೆ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ, ಈ ಏರಿಕೆಯನ್ನು ಕೇವಲ ಶೇ. 25ಕ್ಕೆ (ಪ್ರತಿ ಲೀಟರ್‌ಗೆ 15 ರೂ.) ಮಿತಿಗೊಳಿಸಲು ನಿರ್ಧರಿಸಿದೆ. ಈ ಮೂಲಕ ದೇಶೀಯ ಪ್ರಯಾಣಿಕರ ಮೇಲಿನ ಹೊರೆ ತಗ್ಗಿಸಲಾಗಿದೆ. ಆದರೆ, ಅಂತಾರಾಷ್ಟ್ರೀಯ ವಿಮಾನಯಾನ ಸಂಸ್ಥೆಗಳಿಗೆ ಈ ವಿನಾಯಿತಿ ಅನ್ವಯಿಸುವುದಿಲ್ಲ. ಅವು ಪೂರ್ಣ ಪ್ರಮಾಣದ ಮಾರುಕಟ್ಟೆ ದರವನ್ನೇ ಪಾವತಿಸಬೇಕಾಗುತ್ತದೆ.



ಪ್ರಮುಖ ನಗರಗಳಲ್ಲಿನ ಪರಿಷ್ಕೃತ ದರ: ಏಪ್ರಿಲ್ 1 ರಿಂದ ಜಾರಿಗೆ ಬರುವಂತೆ ಪ್ರಮುಖ ನಗರಗಳಲ್ಲಿ ಎಟಿಎಫ್ ದರಗಳು ಏರಿಕೆಯಾಗಿವೆ. ದೆಹಲಿಯಲ್ಲಿ ಒಂದು ಕಿಲೋ ಲೀಟರ್ ಇಂಧನ ದರ 96,638.14 ರೂ.ಗಳಿಂದ 1,04,927 ರೂ.ಗಳಿಗೆ ಏರಿಕೆಯಾಗಿದೆ. ಮುಂಬೈನಲ್ಲಿ ಈ ದರ 98,247 ರೂ.ಗಳಾಗಿದ್ದರೆ, ಕೋಲ್ಕತ್ತಾ ಮತ್ತು ಚೆನ್ನೈನಲ್ಲಿ ಕ್ರಮವಾಗಿ 1,09,450 ರೂ. ಮತ್ತು 1,09,873 ರೂ.ಗಳಿಗೆ ತಲುಪಿದೆ. ಭಾರತದಲ್ಲಿ 2001 ರಿಂದ ವಿಮಾನ ಇಂಧನ ಬೆಲೆಗಳನ್ನು ಮುಕ್ತಗೊಳಿಸಲಾಗಿದ್ದು, ಪ್ರತಿ ತಿಂಗಳು ಬೆಲೆ ಪರಿಷ್ಕರಣೆ ಮಾಡಲಾಗುತ್ತದೆ.

ಅಮರಾವತಿ ಆಂಧ್ರದ ಏಕೈಕ ರಾಜಧಾನಿ

ಹೊಸದಿಲ್ಲಿ: ಆಂಧ್ರಪ್ರದೇಶದ ಅಮರಾವತಿಯನ್ನು ರಾಜ್ಯದ ಏಕೈಕ ಮತ್ತು ಶಾಶ್ವತ ರಾಜಧಾನಿಯೆಂದು ಅಧಿಕೃತವಾಗಿ ಗುರುತಿಸುವ ಆಂಧ್ರಪ್ರದೇಶ ಮರುಸಂಘಟನೆ (ತಿದ್ದುಪಡಿ) ಮಸೂದೆಯನ್ನು ಲೋಕಸಭೆ ಬುಧವಾರ ಅಂಗೀಕರಿಸಿದೆ. ಧ್ವನಿ ಮತದ ಮೂಲಕ ಅಂಗೀಕರಿಸಲ್ಪಟ್ಟ ಈ ಮಸೂದೆ, 2024ರ ಜೂನ್ 2ರಿಂದ ಜಾರಿಗೆ ಬರುವಂತೆ ಅಮರಾವತಿಯನ್ನು ಕಾಯಂ ರಾಜಧಾನಿಯನ್ನಾಗಿ ಸ್ಥಾಪಿಸುತ್ತದೆ. ಈ ಶಾಸನ ಭವಿಷ್ಯದಲ್ಲಿ ರಾಜಧಾನಿ ಬದಲಾವಣೆಯ ಯಾವುದೇ ಪ್ರಯತ್ನಗಳನ್ನು ತಡೆಯುತ್ತದೆ ಎಂದು ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರೈ ಸ್ಪಷ್ಟಪಡಿಸಿದರು. ಎನ್‌ಡಿಎ ಮತ್ತು ಕಾಂಗ್ರೆಸ್ ಮಸೂದೆಯನ್ನು ಬೆಂಬಲಿಸಿದರೆ, ವೈಎಸ್‌ಆರ್ ಕಾಂಗ್ರೆಸ್ ಪಕ್ಷವು ವಿರೋಧ ವ್ಯಕ್ತಪಡಿಸಿ ಸಭಾತ್ಯಾಗ ಮಾಡಿತು. ಹಿಂದಿನ ವೈಎಸ್‌ಆರ್‌ಸಿಪಿ ಸರ್ಕಾರ ರೂಪಿಸಿದ್ದ ಆಡಳಿತಾತ್ಮಕ, ಶಾಸಕಾಂಗ ಮತ್ತು ನ್ಯಾಯಾಂಗ ಎಂಬ ಮೂರು ಪ್ರತ್ಯೇಕ ರಾಜಧಾನಿಗಳ ಯೋಜನೆಯನ್ನು ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರು 2024ರಲ್ಲಿ ರದ್ದುಗೊಳಿಸಿದ್ದರು. ಈ ನಿರ್ಧಾರ ಸಾಕಷ್ಟು ವಾದ-ವಿವಾದಗಳಿಗೆ ಕಾರಣವಾಗಿತ್ತು.

ಎರಡನೇ ಜಲಾಂತರ್ಗಾಮಿ ನಿರೋಧಕ ಯುದ್ಧನೌಕೆ ಹಸ್ತಾಂತರ

ದೇಸಿ ಮಾಲ್ವಾನ್‌ನಿಂದ ನೌಕಾಪಡೆ ಸ್ವಾವಲಂಬಿ

ಹೊಸದಿಲ್ಲಿ: ಎರಡನೇ ಜಲಾಂತರ್ಗಾಮಿ ನಿರೋಧಕ ಯುದ್ಧನೌಕೆ ಐಎನ್‌ಎಸ್ ಮಾಲ್ವಾನ್ ಅನ್ನು ಭಾರತೀಯ ನೌಕಾಪಡೆ ಬುಧವಾರ ಸ್ವೀಕರಿಸಿದೆ. ನೌಕಾಪಡೆಗೆ ಮಾಲ್ವಾನ್ ಯುದ್ಧನೌಕೆಯ ಸೇರ್ಪಡೆಯಿಂದ ಕರಾವಳಿ ರಕ್ಷಣಾ ಸಾಮರ್ಥ್ಯ ಬಲವರ್ಧನೆಯಾಗಿದ್ದು, ರಕ್ಷಣಾ ಉತ್ಪಾದನೆ ಕ್ಷೇತ್ರದಲ್ಲಿ ಆತ್ಮನಿರ್ಭರ ಭಾರತ ನಿರ್ಮಾಣದ ದಿಶೆಯಲ್ಲಿ ಕೇಂದ್ರ ಸರ್ಕಾರ ಮಹತ್ವದ ಹೆಜ್ಜೆಯನ್ನಿರಿಸಿದೆ.

ಮೇಕ್ ಇನ್ ಇಂಡಿಯಾ ಯೋಜನೆ ಅನ್ವಯ ಕೇರಳದ ಕೊಚ್ಚಿನ್ ಶಿಪ್‌ಯಾರ್ಡ್ ಲಿಮಿಟೆಡ್‌ನಲ್ಲಿ ಜಲಾಂತರ್ಗಾಮಿ (ಸಬ್‌ಮೆರೀನ್) ನಿರೋಧಕ ಐಎನ್‌ಎಸ್ ಮಾಲ್ವಾನ್ ಯುದ್ಧನೌಕೆಯನ್ನು ನಿರ್ಮಾಣ ಮಾಡಲಾಗಿದೆ. ಅಗತ್ಯ ನೌಕಾ ವಿಶೇಷತೆಗಳೊಂದಿಗೆ ಶೇ.80ರಷ್ಟು ದೇಶೀಯ ಉಪಕರಣಗಳನ್ನು ಬಳಸಿ ಮಾಲ್ವಾನ್ ಅನ್ನು ಭಾರತದಲ್ಲೇ ವಿನ್ಯಾಸ ಮತ್ತು ನಿರ್ಮಾಣ ಮಾಡಲಾಗಿದೆ. ಇದು ದೇಶೀಯ ರಕ್ಷಣಾ ಉತ್ಪಾದನೆಯಲ್ಲಿನ ಮತ್ತು ದೇಸಿ ಯುದ್ಧನೌಕೆ ನಿರ್ಮಾಣದ ಪ್ರಗತಿಯನ್ನು ಸಾರಿದೆ.

ಮಾಲ್ವಾನ್ ಹೆಸರು ಎಲ್ಲಿಂದ ಬಂತು?: ಯುದ್ಧನೌಕೆಗೆ ಮಹಾರಾಷ್ಟ್ರದ ಐತಿಹಾಸಿಕ ಕರಾವಳಿ ನಗರ ಮಾಲ್ವಾನ್ ಹೆಸರಿನಿಂದ ನಾಮಕರಣ ಮಾಡಲಾಗಿದೆ. 2003ರವರೆಗೆ ಬಾಂಬ್ ನಿರೋಧಕ (ಮೈನ್‌ಸ್ವೀಪರ್) ನೌಕೆಯಾಗಿ ನೌಕಾಪಡೆಯಲ್ಲಿ ಸೇವೆ ಸಲ್ಲಿಸಿದ್ದ ಐಎನ್‌ಎಸ್ ಮಾಲ್ವಾನ್ ಅನ್ನು ಗೌರವಿಸುವ ಉದ್ದೇಶದಿಂದ ಈ ಹೆಸರನ್ನೇ ಇಡಲಾಗಿದೆ. ಈ ಹೆಸರಿನಿಂದ ನಾಮಕರಣ ಮಾಡಿದ್ದು, ನೌಕಾಪಡೆ ತನ್ನ ಸಂಪ್ರದಾಯವನ್ನು ಉಳಿಸಿಕೊಂಡು ಹೋಗುವ ಪದ್ಧತಿಯನ್ನು ತೋರಿಸುತ್ತದೆ.



ಶತ್ರುಗಳ ಸಬ್‌ಮೆರೀನ್‌ಗೆ ಸಿಂಹಸ್ವಪ್ನ: ಹಿಂದು ಮಹಾಸಾಗರ ಕರಾವಳಿ ಪ್ರದೇಶದಲ್ಲಿ ಸಂಚರಿಸುತ್ತ ಜಲಾಂತರ್ಗಾಮಿ ನಿರೋಧಕ ಕಾರ್ಯಾಚರಣೆಗಳಲ್ಲಿ ನೀರಿನಾಳದಲ್ಲಿ ಕಣ್ಗಾವಲು ನಡೆಸಲಿರುವ ಮಾಲ್ವಾನ್, ಅತ್ಯಾಧುನಿಕ ಕಣ್ಗಾವಲು ಮತ್ತು ದಾಳಿ ವ್ಯವಸ್ಥೆಗಳಿಂದ ಕೂಡಿದೆ. ಅತ್ಯಾಧುನಿಕ ಸೋನಾರ್ ಮತ್ತು ರಾಡಾರ್ ವ್ಯವಸ್ಥೆಗಳಿಂದ ಕಡಲಿನಾಳದಲ್ಲಿ ಅಡಗಿರುವ ಶತ್ರು ಸಬ್‌ಮೆರೀನ್‌ಗಳನ್ನು ಪತ್ತೆಹಚ್ಚಿ ನಾಶಪಡಿಸಲು ಬೇಕಾದ ಕ್ಷಿಪಣಿಗಳಿರುವ ಅತ್ಯಾಧುನಿಕ ದಾಳಿ ವ್ಯವಸ್ಥೆಯನ್ನು ಹೊಂದಿದೆ.

ಐಎನ್‌ಎಸ್ ಮಾಲ್ವಾನ್ ವಿಶೇಷತೆಗಳು

- ಯುದ್ಧನೌಕೆಯ ವಿಧ: ಜಲಾಂತರ್ಗಾಮಿ ನಿರೋಧಕ
- ಉದ್ದ: 80 ಮೀ.
- ಭಾರ: 1,100 ಟನ್ (ಅಂದಾಜು)
- ಕಾರ್ಯಾಚರಣೆ ಪರಿಧಿ: ಕರಾವಳಿ ಪ್ರದೇಶ
- ಆಯುಧಗಳು: ಟಾರ್ಪಿಡೋ ಕ್ಷಿಪಣಿ, ಜಲಾಂತರ್ಗಾಮಿ ನಿರೋಧಕ ಕ್ಷಿಪಣಿ
- ಸಲಕರಣೆಗಳು: ಅತ್ಯಾಧುನಿಕ ಸೋನಾರ್ ಮತ್ತು ರಾಡಾರ್, ಕಣ್ಗಾವಲು ವ್ಯವಸ್ಥೆಗಳು

ವಾಣಿಜ್ಯ ಎಲ್‌ಪಿಜಿ ದರ 195.50 ರೂ. ಏರಿಕೆ

ಹೊಸದಿಲ್ಲಿ: ಮಧ್ಯಪ್ರಾಚ್ಯ ಯುದ್ಧದಿಂದ ಜಾಗತಿಕ ತೈಲ ಬೆಲೆ ಏರಿಕೆ ಹಿನ್ನೆಲೆ ವಾಣಿಜ್ಯ ಎಲ್‌ಪಿಜಿ ದರ ಬುಧವಾರ ರೂ. 195.50ರಷ್ಟು ಏರಿಕೆಯಾಗಿದೆ. ಆದರೆ ಗೃಹಬಳಕೆ ಎಲ್‌ಪಿಜಿ ದರದಲ್ಲಿ ಯಾವುದೇ ಬದಲಾವಣೆಯಾಗಿಲ್ಲ. ಬೆಂಗಳೂರಿನಲ್ಲಿ ವಾಣಿಜ್ಯ ಎಲ್‌ಪಿಜಿ ಬೆಲೆ ರೂ. 2,153.50 ತಲುಪಿದ್ದು, ಗೃಹಬಳಕೆ ಸಿಲಿಂಡರ್ ಬೆಲೆ ರೂ. 915.50ರಲ್ಲಿದೆ. ದಿಲ್ಲಿಯಲ್ಲಿ 19 ಕೆ.ಜಿ. ವಾಣಿಜ್ಯ ಸಿಲಿಂಡರ್ ಬೆಲೆ ಎರಡು ಸಾವಿರ ದಾಟಿದೆ. ಅಂತಾರಾಷ್ಟ್ರೀಯ ಬೆಂಚ್‌ಮಾರ್ಕ್ ಮತ್ತು ವಿನಿಮಯ ದರ ಆಧಾರದಲ್ಲಿ ಪ್ರತಿ ತಿಂಗಳ ಮೊದಲ ದಿನ, ಸರ್ಕಾರಿ ಸ್ವಾಮ್ಯದ ಇಂಡಿಯನ್ ಆಯಿಲ್ ಕಾರ್ಪೊರೇಷನ್, ಭಾರತ್ ಪೆಟ್ರೋಲಿಯಂ ಮತ್ತು ಹಿಂದೂಸ್ತಾನ್ ಪೆಟ್ರೋಲಿಯಂ ಎಟಿಎಫ್ (ವಿಮಾನ ಟರ್ಬೈನ್ ಇಂಧನ) ಮತ್ತು ಎಲ್‌ಪಿಜಿ ದರ ಪರಿಷ್ಕರಣೆ ಮಾಡುತ್ತವೆ. ಇರಾನ್ ಯುದ್ಧದಿಂದ ಇಂಧನ ಪೂರೈಕೆ ವ್ಯತ್ಯಯ ಉಂಟಾಗಿದ್ದು, ಜಾಗತಿಕ ತೈಲ ದರ ಶೇ.50ರಷ್ಟು ಏರಿಕೆಯಾಗಿದೆ. ಪೆಟ್ರೋಲ್ ಮತ್ತು ಡೀಸೆಲ್ ದರಗಳಲ್ಲಿ ಯಾವುದೇ ಬದಲಾವಣೆಯಾಗಿಲ್ಲ. ಕಳೆದ ವರ್ಷ ಮಾರ್ಚ್‌ನಲ್ಲಿ ಲೀಟರ್‌ಗೆ 2 ರೂ ಕಡಿಮೆಯಾಗಿತ್ತು.



ಕಿರುಸುದ್ದಿ

ಶಾಲಿನಿ ಸಿಕ್ವೇರಾಗೆ 'ಪಿಎಚ್‌ಡಿ' ಪದವಿ ಪ್ರದಾನ



• **ಮಂಗಳೂರು:** ಯೆನೆಪೋಯ ಇನ್ಸ್ಟಿಟ್ಯೂಟ್ ಆಫ್ ಆರ್ಟ್ಸ್ ಸೈನ್ಸ್ ಕಾಮರ್ಸ್ ಆಂಡ್ ಮ್ಯಾನೇಜ್ಮೆಂಟ್‌ನ ಭಾಷಾ ಅಧ್ಯಯನ ವಿಭಾಗದ ಮುಖ್ಯಸ್ಥೆಯಾಗಿರುವ ಶಾಲಿನಿ ಸಿಕ್ವೇರಾ ಅವರಿಗೆ ಶ್ರೀನಿವಾಸ್ ವಿಶ್ವವಿದ್ಯಾಲಯ ಪಿಎಚ್‌ಡಿ ಪದವಿ ಪ್ರದಾನ ಮಾಡಿದೆ. ಸಾಹಿತಿ, ಪ್ರೀತಿ ಶೆಣೈ ಅವರ ಆಯ್ದ ಕಾದಂಬರಿಗಳಲ್ಲಿ 'ಮಾನವ ಸಂಬಂಧಗಳ ವಿಮರ್ಶಾತ್ಮಕ ವಿಶ್ಲೇಷಣೆ' ಎಂಬ ಪ್ರಬಂಧಕ್ಕಾಗಿ 'ಪಿ.ಎಚ್.ಡಿ' ಪದವಿ ಲಭಿಸಿದೆ. ಶ್ರೀನಿವಾಸ್ ವಿಶ್ವವಿದ್ಯಾಲಯದ ಸಂಶೋಧನಾ ಪ್ರಾಧ್ಯಾಪಕರಾದ ಡಾ. ಎ. ಲೌರ್ದುಸಾಮಿ ಅವರ ಮಾರ್ಗದರ್ಶನದಲ್ಲಿ ಸಂಶೋಧನೆಯನ್ನು ನಡೆಸಿದ್ದಾರೆ. ಫೆ.9 ರಂದು ಮೌಖಿಕ ಪರೀಕ್ಷೆ ನಡೆದು, ಮಾ.28 ರಂದು ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಪದವಿ ಪ್ರದಾನ ಕಾರ್ಯಕ್ರಮ ನಡೆಯಿತು. ಮೋಹನ್ ಥಾಮಸ್ ಸಿಕ್ವೇರಾ ಅವರ ಪತ್ನಿಯಾಗಿರುವ ಶಾಲಿನಿ ಸಿಕ್ವೇರಾ, ಕಾಲೇಜಿನ ಸಾಹಿತ್ಯಿಕ ಸಂಘದಲ್ಲಿ ಸಕ್ರಿಯರಾಗಿದ್ದಾರೆ. ಬರಹಗಾರಿಕೆ, ವಾರ್ತಾಪತ್ರಿಕಾ ನಿರ್ವಹಣೆ ಮತ್ತು ಮಂಗಳೂರು, ಆಕಾಶವಾಣಿಯಲ್ಲಿ ಯುವವಾಣಿ ಮೂಲಕ ವಿದ್ಯಾರ್ಥಿಗಳ ಆಂಗ್ಲ ಭಾಷಾ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಿದ್ದಾರೆ.

ಏ.3: ಕ್ರೈಸ್ತರ ವೇದಿಕೆಯಿಂದ ಸವಲತ್ತು ವಿತರಣೆ

• **ಮಂಗಳೂರು:** ರಾಷ್ಟ್ರೀಯವಾದಿ ಕ್ರೈಸ್ತರ ವೇದಿಕೆ ವತಿಯಿಂದ ಏ.3ರಂದು ಪೂರ್ವಾಹ್ನ 11ಕ್ಕೆ ವೆನ್ಲಾಕ್ ಜಿಲ್ಲಾ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಕ್ಕಳಿಗೆ ಹಾಗೂ ನಿರಾಶ್ರಿತ, ನಿರ್ಗತಿಕರಿಗೆ ವಿವಿಧ ಸವಲತ್ತು ವಿತರಣೆ ಕಾರ್ಯಕ್ರಮ ನಡೆಯಲಿದೆ. ಮಾಜಿ ಸಚಿವ ಕೃಷ್ಣ ಜೆ. ಪಾಲೆಮಾರ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮಂಗಳೂರು ಬೆಥನಿ ಕನ್ಯಾ ಮಠದ (ಮದರ್ ಹೌಸ್) ಇಲ್ಲಿನ ಜೇಷ್ಠರಾಗಿರುವ ಭಗಿನಿ ಶುಭಾ ಬಿ.ಎಸ್., ದ.ಕ. ಸಂಸದ ಕ್ಯಾ ಬ್ರಿಜೇಶ್ ಚೌಟ, ಶಾಸಕ ಡಿ.ವೇದವ್ಯಾಸ ಕಾಮತ್, ಜಿಲ್ಲಾ ಪ್ರಧಾನ ವೈದ್ಯಾಧಿಕಾರಿ ಡಾ.ಶಿವಪ್ರಕಾಶ್ ಮತ್ತಿತರರು ಭಾಗವಹಿಸಲಿರುವರು ಎಂದು ಎಂದು ರಾಷ್ಟ್ರೀಯವಾದಿ ಕ್ರೈಸ್ತರ ವೇದಿಕೆಯ ಸಂಚಾಲಕ ಫ್ರಾಂಕ್ಲಿನ್ ಮೊಂತೆರೊ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಕೈಬಿಡಲು ಸೂಚನೆ

ನಿರ್ಧಾರ ಹಿಂಪಡೆಯಲಿ



• **ಮಂಗಳೂರು:** ರಾಜ್ಯ ಸರಕಾರ ಯಾವುದೇ ಚರ್ಚೆ ನಡೆಸದೆ, ವಿದ್ಯಾರ್ಥಿಗಳು, ಪೋಷಕರ ಅಭಿಪ್ರಾಯ ಪಡೆಯದೆ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಹಿಂದಿ ವಿಷಯವನ್ನು ಕೈಬಿಡುವ ಕುರಿತು ಸೂಚನೆ ನೀಡಿರುವುದು ಶಿಕ್ಷಣ ವಲಯದಲ್ಲಿ ಗಂಭೀರ ಗೊಂದಲವನ್ನು ಸೃಷ್ಟಿಸಿದೆ. ಸರಕಾರ ತನ್ನ ನಿರ್ಧಾರವನ್ನು ಹಿಂಪಡೆಯಬೇಕು ಎಂದು ಬಿಜೆಪಿ ಶಿಕ್ಷಣ ಪ್ರಕೋಷ್ಠ ಆಗ್ರಹಿಸಿದೆ.

ರಾಜ್ಯದ ಕಾಂಗ್ರೆಸ್ ಸರಕಾರ ತ್ರಿಭಾಷಾ ಸೂತ್ರದಡಿ ವಿದ್ಯಾರ್ಥಿಗಳು ಹಿಂದಿ ಭಾಷೆಯನ್ನು ಕಲಿಯಬೇಕು ಎಂದು ಹಲವು ವರ್ಷಗಳಿಂದ ಹೇಳುತ್ತಾ ಬಂದಿದೆ. ಇದೀಗ ಹಿಂದಿ ವಿಷಯ ಕೈಬಿಡುವ ಮಾತನ್ನಾಡುತ್ತಿದೆ. ವಿದ್ಯಾರ್ಥಿಗಳ ಭವಿಷ್ಯ, ಅವರ ಸ್ಪರ್ಧಾತ್ಮಕ ಸಾಮರ್ಥ್ಯ ಹಾಗೂ ಬಹುಭಾಷಾ ಅಧ್ಯಯನದ ಅಗತ್ಯತೆಯನ್ನು ಕಡೆಗಣಿಸುವಂತಹ ನಿರ್ಧಾರಗಳು ಶಿಕ್ಷಣ ವ್ಯವಸ್ಥೆಯ ಮೇಲಿನ ವಿಶ್ವಾಸವನ್ನು ಕುಂದಿಸುತ್ತವೆ. ಸರಕಾರ ರಾಜಕೀಯ ಉದ್ದೇಶಕ್ಕಾಗಿ ಶಿಕ್ಷಣ ಕ್ಷೇತ್ರವನ್ನು ಪ್ರಯೋಗಾಲಯವನ್ನಾಗಿ ಮಾಡಬಾರದು ಎಂದು ಬಿಜೆಪಿ ಶಿಕ್ಷಣ ಪ್ರಕೋಷ್ಠದ ರಾಜ್ಯ ಸಮಿತಿ ಸದಸ್ಯ ಮುರಳಿ ಹೊಸಮಜಲು ಬುಧವಾರ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಹಿಂದಿ ವಿಷಯವನ್ನು ಕೈಬಿಡುವ ಕುರಿತು ಶಿಕ್ಷಣ ಸಚಿವರು ನೀಡಿರುವ ಸೂಚನೆ ಶಿಕ್ಷಣ ವಲಯದಲ್ಲಿ ಅನೇಕ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಈಗಾಗಲೇ ನಡೆದಿರುವ ಪರೀಕ್ಷೆಗೆ ಸಂಬಂಧಿಸಿ ವಿದ್ಯಾರ್ಥಿಗಳಿಗೆ ಗ್ರೇಡ್ ನೀಡುತ್ತೇವೆ ಎಂದು ಸರಕಾರ ಹೇಳಿದೆ. ಇದು ವಿದ್ಯಾರ್ಥಿಗಳ ಪರಿಶ್ರಮ ಮತ್ತು ಅವರ ವಿದ್ಯಾಭ್ಯಾಸದ ಮೌಲ್ಯವನ್ನು ಕಡಿಮೆ ಮಾಡುವ ಕ್ರಮವಾಗಿದ್ದು, ಹಿಂದಿಯನ್ನು ಬೋಧಿಸುವ ಶಿಕ್ಷಕರೂ ಆತಂಕಕ್ಕೆ ಒಳಗಾಗುವಂತಹ ಪರಿಸ್ಥಿತಿ ಒದಗಿದೆ. ಸರಕಾರದ ಈ ತೀರ್ಮಾನ ಖಂಡನೀಯ. ವಿದ್ಯಾರ್ಥಿಗಳಿಗೆ ಯಾವುದೇ ಅನ್ಯಾಯ ಆಗದಂತೆ ಗ್ರೇಸ್ ಅಂಕಗಳನ್ನು ನೀಡಬೇಕು ಎಂದು ಆಗ್ರಹಿಸಿದರು.

ಎಸ್‌ಎಸ್‌ಎಲ್‌ಸಿ ಗಣಿತ ಪರೀಕ್ಷೆಯಲ್ಲಿ ಕಂಡುಬಂದಿರುವ ಅವ್ಯವಸ್ಥೆ ರಾಜ್ಯದ ಪರೀಕ್ಷಾ ವ್ಯವಸ್ಥೆಯ ನಿರ್ಲಕ್ಷ್ಯವನ್ನು ಸ್ಪಷ್ಟವಾಗಿ ತೋರಿಸಿದೆ. ವಿಶೇಷವಾಗಿ ಗಣಿತ ಪ್ರಶ್ನೆ ಪತ್ರಿಕೆಯಲ್ಲಿ ಬಾರ್ ಕೋಡ್ ಮುದ್ರಣದಿಂದ ಉಂಟಾದ ತಾಂತ್ರಿಕ ದೋಷದ ಪರಿಣಾಮವಾಗಿ ಕೆಲ ಪ್ರಶ್ನೆಗಳು ಸ್ಪಷ್ಟವಾಗಿ ಕಾಣದಂತಹ ಸಮಸ್ಯೆ ಉಂಟಾಗಿದೆ ಎಂದು ತಿಳಿದುಬಂದಿದೆ. ಪರೀಕ್ಷೆಯಂತಹ ಮಹತ್ವದ ಸಂದರ್ಭಗಳಲ್ಲಿ ಇಂತಹ ಗಂಭೀರ ತಾಂತ್ರಿಕ ದೋಷಗಳು ಸಂಭವಿಸುವುದು ಶಿಕ್ಷಣ ಇಲಾಖೆಯ ನಿರ್ಲಕ್ಷ್ಯವನ್ನು ತೋರಿಸುತ್ತದೆ. ಈ ಕಾರಣದಿಂದ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ಅನ್ಯಾಯವಾಗದಂತೆ ಆ ಪ್ರಶ್ನೆಗಳ ಸಂಬಂಧಿತವಾಗಿ ಗ್ರೇಸ್ ಅಂಕಗಳನ್ನು ನೀಡಬೇಕು. ಪರೀಕ್ಷಾ ವ್ಯವಸ್ಥೆಯಲ್ಲಿ ಉಂಟಾದ ಈ ಗೊಂದಲದ ಕುರಿತು ಸರಕಾರ ಕ್ಷಣ ಸಮಗ್ರ ತನಿಖೆ ನಡೆಸಿ ಹೊಣೆಗಾರ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ರಾಜ್ಯದ ಎಲ್ಲ ಸರಕಾರಿ ಹಾಗೂ ಅನುದಾನಿತ ಶಾಲೆಗಳ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ, ಸಮವಸ್ತ್ರ ಇತರ ಮೂಲಭೂತ ಸೌಲಭ್ಯಗಳನ್ನು ಸಮಯಕ್ಕೆ ಸರಿಯಾಗಿ ಒದಗಿಸಬೇಕು ಎಂದರು.

ಬಿಜೆಪಿ ದ.ಕ. ಜಿಲ್ಲಾ ವಕ್ತಾರ ರಾಜಗೋಪಾಲ ರೈ, ಪುತ್ತೂರು ಮಂಡಲ ಶಿಕ್ಷಣ ಪ್ರಕೋಷ್ಠ ಸದಸ್ಯೆ ಅವನಿ ಪಾರ್ವತಿ, ಹಿಂದಿ ಪ್ರಚಾರ ಸಭಾ ಪ್ರಚಾರಕ ಶಿವಪ್ರಕಾಶ್ ಆರ್., ವಿನೀತ್ ನಾಯರ್ ಉಪಸ್ಥಿತರಿದ್ದರು.

> **ರಾಜ್ಯ ಕಾಂಗ್ರೆಸ್ ಸರಕಾರ ಕೇಂದ್ರ ಸರಕಾರದ ವಿರುದ್ಧ ರಾಜಕೀಯ ದ್ವೇಷದಿಂದ ಹಿಂದಿ ಭಾಷೆಯನ್ನು ಕಡೆಗಣಿಸುತ್ತಿದೆ. ಆ ಮೂಲಕ ಕಾಂಗ್ರೆಸ್ ಪ್ರಾದೇಶಿಕ ಪಕ್ಷದಂತೆ ವರ್ತಿಸುತ್ತಿದೆ. ಎಸ್‌ಎಸ್‌ಎಲ್‌ಸಿ ಹಿಂದಿ ಭಾಷೆ ಪರೀಕ್ಷೆಗೆ ಅಂಕ ನೀಡದಿರುವುದನ್ನು ಪ್ರತಿಭಟಿಸಿ 75 ಸಾವಿರ ಶಿಕ್ಷಕರು ಪರೀಕ್ಷಾ ಮೌಲ್ಯಮಾಪನ ಬಹಿಷ್ಕರಿಸಲು ನಿರ್ಧರಿಸಿದ್ದಾರೆ. ಮುಂದಕ್ಕೆ ಹಿಂದಿ ಶಿಕ್ಷಕರ ನೇಮಕಾತಿ ಸ್ಥಗಿತಗೊಳ್ಳಬಹುದು. 5400 ಶಾಲೆಗಳಲ್ಲಿ ಕನ್ನಡ, ಉರ್ದು, ಮರಾಠಿ, ತಮಿಳು, ತೆಲುಗು ತೃತೀಯ ಭಾಷೆಯಾಗಿದ್ದು, ಈ ಭಾಷಾ ಕಲಿಕೆಗೂ ತೊಂದರೆಯಾಗಿದೆ.**
> ■ ಮುರಳಿ ಹೊಸಮಜಲು, ಬಿಜೆಪಿ ಶಿಕ್ಷಣ ಪ್ರಕೋಷ್ಠ ರಾಜ್ಯ ಸಮಿತಿ ಸದಸ್ಯ

ವಿಕಸಿತ ಭಾರತದ ನಿರ್ಮಾಣಕ್ಕೆ ಅಂಗನವಾಡಿಗಳ ಬಲವರ್ಧನೆ

ಎಳೆಯ ಮಕ್ಕಳ ಮಾನಸಿಕ ಆರೋಗ್ಯ ರಕ್ಷಣೆ ಅತ್ಯಗತ್ಯ

• **ಮಂಗಳೂರು:** ಎಳೆಯ ವಯಸ್ಸಿನ ಮಕ್ಕಳಲ್ಲಿನ ಮಾನಸಿಕ ಆರೋಗ್ಯ ಮತ್ತು ಕಲಿಕಾ ಸವಾಲುಗಳನ್ನು ಪರಿಹರಿಸಲು ಅಂಗನವಾಡಿ ಹಾಗೂ ಆರಂಭಿಕ ಕಲಿಕಾ ಕೇಂದ್ರಗಳ ಸಬಲೀಕರಣಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಸಂಸದ ಕ್ಯಾ.ಬ್ರಿಜೇಶ್ ಚೌಟ ಲೋಕಸಭೆಯಲ್ಲಿ ಒತ್ತಾಯಿಸಿದ್ದಾರೆ.



ಲೋಕಸಭೆಯಲ್ಲಿ ನಿಯಮ 377ರಡಿ ಈ ವಿಷಯ ಪ್ರಸ್ತಾಪಿಸಿರುವ ಅವರು, ಭಾರತದಲ್ಲಿ 0–6 ವರ್ಷ ವಯಸ್ಸಿನ 16.5 ಕೋಟಿಗೂ ಹೆಚ್ಚು ಮಕ್ಕಳಿದ್ದು, ಇವರಲ್ಲಿ ಹೆಚ್ಚಿನವರು ಅಂಗನವಾಡಿ ಸೇರಿದಂತೆ ಪೂರ್ವ ಪ್ರಾಥಮಿಕ ಕಲಿಕಾ ಸಂಸ್ಥೆಗಳಿಗೆ ತೆರಳುತ್ತಿದ್ದಾರೆ. ಆದರೆ, ಈ ಹಂತದಲ್ಲಿ ಮಕ್ಕಳಲ್ಲಿ ಕಾಣಿಸಿಕೊಳ್ಳುವ ಎಡಿಎಚ್‌ಡಿ ಮತ್ತು ಡಿಸ್ಲೆಕ್ಸಿಯಾದಂತಹ ಮಾನಸಿಕ ಸಮಸ್ಯೆ ಹಾಗೂ ಕಲಿಕಾ ನ್ಯೂನತೆಗಳನ್ನು ಗುರುತಿಸುವ ಅಥವಾ ಆ ಬಗ್ಗೆ ಸರಿಯಾದ ಜಾಗೃತಿ ಮೂಡಿಸುವ ಜತೆಗೆ ಅದಕ್ಕೆ ಸೂಕ್ತ ಪರಿಹಾರದ ಹಾಗೂ ಬೆಂಬಲದ ಕೊರತೆ ಇರುವುದು ಕಳವಳಕಾರಿ ಎಂದು ಹೇಳಿದ್ದಾರೆ. ಎಳೆಯ ಮಕ್ಕಳಲ್ಲಿ ಕಾಡುವ ಈ ಮಾನಸಿಕ ಸಮಸ್ಯೆಗಳ ಬಗ್ಗೆಅಂಕಿ–ಅಂಶಗಳನ್ನು ಉಲ್ಲೇಖಿಸಿದ ಸಂಸದರು, ಪ್ರತಿ 7 ಮಕ್ಕಳ ಪೈಕಿ ಒಬ್ಬರು ಮಾನಸಿಕ ತೊಂದರೆ ಎದುರಿಸುತ್ತಿದ್ದು, ಈ ಪೈಕಿ ಸುಮಾರು ಶೇ. 7 ರಿಂದ 8ರಷ್ಟು ಮಕ್ಕಳು ಪತ್ತೆ ಹಚ್ಚಬಹುದಾದ ಮಾನ ಸಿಕ ಅಸ್ವಸ್ಥತೆಗಳಿಂದ ಬಳಲುತ್ತಿದ್ದಾರೆ.

> **ಮಕ್ಕಳ ಬೆಳವಣಿಗೆಯ ಹಂತದಲ್ಲೇ ಸೂಕ್ತ ಮಾರ್ಗದರ್ಶನ ನೀಡಲು ಸರ್ಕಾರದ ತರಬೇತಿ ಪಡೆದ ಆಪ್ತ ಸಮಾಲೋಚಕರನ್ನು ನೇಮಿಸಬೇಕು ಅಥವಾ ಅಂಗನವಾಡಿ ಕಾರ್ಯಕರ್ತೆಯರು, ಶಿಕ್ಷಕರು ಮತ್ತು ಮುಂಚೂಣಿ ಸಿಬ್ಬಂದಿಗೆ ಈ ನಿಟ್ಟಿನಲ್ಲಿ ವಿಶೇಷ ತರಬೇತಿ ನೀಡಬೇಕು.**
> ■ ಕ್ಯಾ. ಬ್ರಿಜೇಶ್ ಚೌಟ, ಸಂಸದ

ಆದರೆ, ಮಗುವಿನ ಶೇ.85ರಷ್ಟು ಮೆದುಳಿನ ಬೆಳವಣಿಗೆ 6 ವರ್ಷದ ಮೊದಲೇ ಆಗುವುದರಿಂದ, ಬಾಲ್ಯದ ಆರೈಕೆ ಮತ್ತು ಶಿಕ್ಷಣ (ಇಸಿಸಿಇ) ಅತ್ಯಂತ ನಿರ್ಣಾಯಕ. ಮಗುವಿನ ಭಾಷೆ, ನಡವಳಿಕೆ ಹಾಗೂ ಕಲಿಕೆಗೆ ಇದೇ ಅಡಿಪಾಯ. ಈ ಹಂತದಲ್ಲಿ ನೀಡುವ ಸಕಾಲಿಕ ಬೆಂಬಲವು ಮುಂದಿನ ಗಂಭೀರ ಸವಾಲುಗಳನ್ನು ತಡೆದು, ಒಟ್ಟಾರೆ ಶಿಕ್ಷಣ ವ್ಯವಸ್ಥೆಯಲ್ಲಿ ಆರೋಗ್ಯಪೂರ್ಣ ಸಮಾಜ ನಿರ್ಮಾಣ ಮಾಡುತ್ತದೆ ಎಂದು ಅವರು ಪ್ರತಿಪಾದಿಸಿದ್ದಾರೆ.

'ಬೆದ್ರ ಮಾಣಿಕ್ಯ' ಪ್ರಶಸ್ತಿಗೆ ಡಾ.ಎಂ.ಎನ್.ಆರ್. ಆಯ್ಕೆ



• **ಮಂಗಳೂರು:** ಜೈನಕಾಶಿ, ವಿದ್ಯಾಕಾಶಿ ಹಾಗೂ ಸಾಂಸ್ಕೃತಿಕ ಪರಂಪರೆಯ ನೆಲೆಯಾಗಿರುವ ಮೂಡುಬಿದಿರೆಯಲ್ಲಿ ಏ.10ರಿಂದ 12ರವರೆಗೆ ವೈಭವಮಯ 'ಬೆದ್ರ ಉತ್ಸವ್' ಸ್ವರಾಜ್ಯ ಮೈದಾನದಲ್ಲಿ ನಡೆಯಲಿದ್ದು, ಈ ಉತ್ಸವದ ಅಂಗವಾಗಿ ನೀಡುವ ಪ್ರತಿಷ್ಠಿತ 'ಬೆದ್ರ ಮಾಣಿಕ್ಯ' ಪ್ರಶಸ್ತಿಗೆ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ (ಎಸ್ ಸಿಡಿಸಿಸಿ ಬ್ಯಾಂಕ್) ಅಧ್ಯಕ್ಷರು ಹಾಗೂ ಸಹಕಾರ ಕ್ಷೇತ್ರದ ಅಪ್ರತಿಮ ನಾಯಕರಾದ 'ಸಹಕಾರ ರತ್ನ ' ಡಾ. ಎಂ.ಎನ್. ರಾಜೇಂದ್ರ ಕುಮಾರ್ ಅವರನ್ನು ಬೆದ್ರ ಉತ್ಸವ ಸಮಿತಿ ಆಯ್ಕೆ ಮಾಡಿದೆ.

ಸಹಕಾರ ಕ್ಷೇತ್ರದಲ್ಲಿ ಡಾ. ಎಂ.ಎನ್.ಆರ್. ಸಲ್ಲಿಸಿರುವ ಅಪೂರ್ವ ಸೇವೆ, ದೀರ್ಘಕಾಲದ ಬದ್ಧತೆ ಹಾಗೂ ಸಮಾಜಮುಖಿ ನಾಯಕತ್ವವನ್ನು ಪರಿಗಣಿಸಿ ಈ ಪ್ರಶಸ್ತಿಗೆ ಬೆದ್ರ ಉತ್ಸವ ಸಮಿತಿ ಆಯ್ಕೆ ಮಾಡಿದೆ. ಇತ್ತೀಚೆಗೆ ಮಂಗಳೂರು ಮ್ಯಾನೇಜ್‌ಮೆಂಟ್ ಅಸೋಸಿಯೇಶನ್ (ಎಂಎಂಎ) ವತಿಯಿಂದ ನೀಡಲಾದ ಪ್ರತಿಷ್ಠಿತ 27ನೇ 'ಎಂಎಂಎ–ಕೆವಿಕೆ ಅತ್ಯುತ್ತಮ ವ್ಯವಸ್ಥಾಪಕ ಪ್ರಶಸ್ತಿ' ಅವರಿಗೆ ದೊರೆತಿದ್ದು, ಅವರ ಆಡಳಿತ ಸಾಮರ್ಥ್ಯಕ್ಕೆ ದೊರೆತ ಮಾನ್ಯತೆ ಆಗಿದೆ.

ಮೂರು ದಶಕಗಳಿಗಿಂತ ಹೆಚ್ಚು ಕಾಲ (32 ವರ್ಷಗಳು) ಎಸ್‌ಸಿಡಿಸಿಸಿ ಬ್ಯಾಂಕ್‌ನ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿರುವ ಡಾ. ಎಂ.ಎನ್.ಆರ್., ಬ್ಯಾಂಕನ್ನು ಶಕ್ತಿಶಾಲಿ ಮತ್ತು ಜನಸ್ನೇಹಿ ಸಂಸ್ಥೆಯಾಗಿ ರೂಪಿಸುವಲ್ಲಿ ಮಹತ್ವದ ಪಾತ್ರವಹಿಸಿದ್ದಾರೆ. ಅವರ ದೂರದೃಷ್ಟಿ ನಾಯಕತ್ವ , ಶಿಸ್ತು ಮತ್ತು ಪ್ರಾಮಾಣಿಕ ಆಡಳಿತದಿಂದ ಬ್ಯಾಂಕ್ ಇಂದು ರಾಜ್ಯದಲ್ಲೇ ಮಾದರಿಯಾದ ಸಹಕಾರಿ ಬ್ಯಾಂಕ್ ಆಗಿ ಬೆಳೆದಿದೆ. ಇದಲ್ಲದೆ, ಅವರು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಾ ಸಹಕಾರ ಚಳುವಳಿಗೆ ಹೊಸ ಚೈತನ್ಯ ತುಂಬಿದ್ದಾರೆ. ಸಹಕಾರ ಕ್ಷೇತ್ರದಲ್ಲಿ ಅವರ ಆಡಳಿತ ಕೌಶಲ್ಯ ಮತ್ತು ನವೀನ ಚಿಂತನೆಗಳು ಅನೇಕ ಸಂಸ್ಥೆಗಳ ಅಭಿವೃದ್ಧಿಗೆ ದಿಕ್ಕು ತೋರಿವೆ.

ಕಳೆದ ನಾಲ್ಕೂವರೆ ದಶಕಗಳಿಗೂ ಹೆಚ್ಚು ಕಾಲ ಸಹಕಾರ ಕ್ಷೇತ್ರದಲ್ಲಿ ನಿರಂತರ ಸೇವೆ ಸಲ್ಲಿಸುತ್ತಿರುವ ಡಾ. ಎಂ.ಎನ್.ಆರ್. ಅವರು, ನವೋದಯ ಗ್ರಾಮ ವಿಕಾಸ ಚಾರಿಟೆಬಲ್ ಟ್ರಸ್ಟ್ ಇದರ ಸಂಸ್ಥಾಪಕರಾಗಿದ್ದು, ನವದೆಹಲಿಯ ಇಫ್ಕೋ ಸಂಸ್ಥೆ ಮತ್ತು ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್‌ನ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ. ಜೊತೆಗೆ ಅನೇಕ ಸಹಕಾರಿ ಸಂಸ್ಥೆಗಳ ಮಾರ್ಗದರ್ಶಕರಾಗಿ, ಅವುಗಳ ಅಭಿವೃದ್ಧಿಗೆ ಸಕ್ರಿಯವಾಗಿ ಕೈಜೋಡಿಸಿದ್ದಾರೆ.ಅವರ ಸಮಾಜಮುಖಿ ಸೇವೆ ಮತ್ತು ನಿಷ್ಠೆಯ ಪರಿಕಲ್ಪನೆಗೆ ಮಾನ್ಯತೆ ನೀಡುವಂತೆ, ಅವರಿಗೆ ಎರಡು ಗೌರವ ಡಾಕ್ಟರೇಟ್ ಸೇರಿದಂತೆ ಅನೇಕ ರಾಜ್ಯ, ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಪ್ರಶಸ್ತಿಗಳು ಲಭಿಸಿವೆ.

ಮೂರು ದಿನಗಳ ಬೆದ್ರ ಉತ್ಸವ ಕಾರ್ಯಕ್ರಮದಲ್ಲಿ ಡಾ. ಎಂ.ಎನ್.ಆರ್. 'ಬೆದ್ರ ಮಾಣಿಕ್ಯ' ಪ್ರಶಸ್ತಿಯನ್ನು ಸ್ವೀಕರಿಸಲಿರುವರು.

ಎಂಆರ್‌ಪಿಎಲ್‌ನಿಂದ ಅರ್ಹರಿಗೆ ಸವಲತ್ತು ವಿತರಣೆ



• **ಮಂಗಳೂರು:** ಎಂಆರ್‌ಪಿಎಲ್ ಸಂಸ್ಥೆಯು ತನ್ನ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ಯೋಜನೆಯ ಭಾಗವಾಗಿ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಉಚಿತ ಕೃತಕ ಅಂಗ ವಿತರಣೆ ಶಿಬಿರವನ್ನು ಇತ್ತೀಚೆಗೆ ಆಯೋಜಿಸಿತ್ತು.

ಈ ಸಂದರ್ಭದಲ್ಲಿ ಮಾತನಾಡಿದ ಎಂಆರ್‌ಪಿಎಲ್ ಮುಖ್ಯ ಮಹಾ ವ್ಯವಸ್ಥಾಪಕ ಪ್ರಶಾಂತ್ ಬಾಳಿಗ ಅವರು, ಸಮುದಾಯದ ಅಭಿವೃದ್ಧಿಗೆ ಎಂಆರ್ ಪಿಎಲ್ ಸಂಸ್ಥೆ ಸದಾ ಬದ್ಧವಾಗಿದ್ದು, ಇಂತಹ ಕಾರ್ಯಕ್ರಮಗಳು ಅಂಗವಿಕಲರಿಗೆ ಸ್ವಾವಲಂಬಿ ಹಾಗೂ ಗೌರವಯುತ ಜೀವನ ನಡೆಸಲು ಸಹಕಾರಿಯಾಗುತ್ತವೆ ಎಂದು ತಿಳಿಸಿದರು.

ಈ ಶಿಬಿರದಲ್ಲಿ ಒಟ್ಟು 36 ಮಂದಿ ಫಲಾನುಭವಿಗಳಿಗೆ ವೈಯಕ್ತಿಕ ಅಗತ್ಯಗಳಿಗೆ ಅನುಗುಣವಾಗಿ ತಯಾರಿಸಲಾದ ಕೃತಕ ಅಂಗಗಳನ್ನು ವಿತರಿಸಲಾಯಿತು. ಈ ಅಂಗಗಳನ್ನು ಫಿಟ್ ವೆಲ್ ಸಂಸ್ಥೆ ತಯಾರಿಸಿತ್ತು. ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಜಯಲಕ್ಷ್ಮಿ, ವಿಶೇಷಚೇತನ ಸಬಲೀಕರಣ ಇಲಾಖೆಯ ಅಧಿಕಾರಿ ಮನೀಷ್ ನಾಯಕ್, ಪ್ರಮುಖರಾದ ಕೇಶವ ಪಾಟಾಳಿ ಹಾಗೂ ಫಿಟ್ ವೆಲ್ ಸಂಸ್ಥೆಯ ಕಿಶೋರ್ ಉಪಸ್ಥಿತರಿದ್ದರು.

ಪದ್ಯಾಣ ಶ್ರೀ ಮಹಾಲಿಂಗೇಶ್ವರ ಕ್ಷೇತ್ರದ ಬ್ರಹ್ಮಕಲಶಾಭಿಷೇಕ

ಇಡೀ ಜಗತ್ತಿಗೆ ಅಮೃತ ನೀಡಿದ ದೇವರು ಈಶ್ವರ: ಪೇಜಾವರ ವಿಶ್ವಪ್ರಸನ್ನ ತೀರ್ಥರು



• **ವಿಟ್ಲ:** ವಿಷವನ್ನು ಪಾನ ಮಾಡಿ, ಜಗತ್ತಿಗೆ ಅಮೃತವನ್ನು ನೀಡಿದ ದೇವರು ಈಶ್ವರ. ಜಗದ್ಗುರು ಮಧ್ವಾಚಾರ್ಯರು ರುದ್ರದೇವನನ್ನು ಗುರುತಿಸಿ, ಮುಖ ಐದು, ಹೃದಯ ಒಂದು ಎಂದು ಹೇಳಿದ್ದಾರೆ. ಏಕಮನಸ್ಕರಾಗಿ ಕ್ಷೇತ್ರಕ್ಕೆ ಬಂದರೆ ಅನುಗ್ರಹ ಪ್ರಾಪ್ತಿಯಾಗುತ್ತದೆ ಎಂದು ಉಡುಪಿ ಪೇಜಾವರ ಮಠಾಧೀಶ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದರು.

ಪದ್ಯಾಣ ಶ್ರೀ ಮಹಾಲಿಂಗೇಶ್ವರ ಕ್ಷೇತ್ರದಲ್ಲಿ ನಡೆಯುತ್ತಿರುವ ಬ್ರಹ್ಮಕಲಶಾಭಿಷೇಕ ಕಾರ್ಯಕ್ರಮದ ಹಿನ್ನೆಲೆ ಬುಧವಾರ ಕ್ಷೇತ್ರಕ್ಕೆ ಭೇಟಿ ನೀಡಿ ಆಶೀರ್ವಚನ ನೀಡಿದರು. ಪದ್ಯಾಣಕ್ಕೂ ತಮಗೂ ಇರುವ ನಂಟನ್ನು ಹೇಳಿದ ಅವರು ಕ್ಷೇತ್ರದಲ್ಲಿ ನಡೆಯುತ್ತಿರುವ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯಲಿ, ಬದುಕಿನಲ್ಲಿ ಬರುವ ಕಷ್ಟಗಳು ದೂರವಾಗಲಿ ಎಂದು ಹಾರೈಸಿದರು.

ಇದಕ್ಕೂ ಮೊದಲು ಜೀರ್ಣೋದ್ಧಾರ ಸಮಿತಿ ಗೌರವಾಧ್ಯಕ್ಷ ಪದ್ಯಾಣ ರಘುರಾಮ ಕಾರಂತ ಅವರು ರುದ್ರಾಕ್ಷಿ ಮಾಲೆಯನ್ನು ಶ್ರೀಗಳಿಗೆ ಅರ್ಪಿಸಿದರು. ಆಡಳಿತ ಮೊಕ್ತೇಸರ ಸತ್ಯನಾರಾಯಣ ಭಟ್ ಸೇರಾಜೆ ಮತ್ತು ಉಷಾ ಸತ್ಯನಾರಾಯಣ ದಂಪತಿ ಶ್ರೀಗಳಿಗೆ ರುದ್ರಾಕ್ಷಿ ಗಿಡವನ್ನು ಸಮರ್ಪಿಸಿ ಸ್ವಾಗತಿಸಿದರು. ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಉಳಿಪ್ಪಾಡಿ ಮಾತನಾಡಿ ಪದ್ಯಾಣ ಶ್ರೀ ಮಹಾಲಿಂಗೇಶ್ವರನ ಅನುಗ್ರಹ ಸರ್ವರಿಗೂ ದೊರಕಲಿ ಎಂದು ಶುಭ ಹಾರೈಸಿದರು.

ಬ್ರಹ್ಮಕಲಶೋತ್ಸವ ಸಮಿತಿ ಸಂಚಾಲಕ ಸೇರಾಜೆ ಗೋಪಾಲಕೃಷ್ಣ ಭಟ್ ಸ್ವಾಗತಿಸಿ ಕ್ಷೇತ್ರಕ್ಕೂ ಶ್ರೀಗಳಿಗೂ ಇರುವ ಸಂಬಂಧವನ್ನು ತಿಳಿಸಿದರು. ಬ್ರಹ್ಮಕಲಶೋತ್ಸವ ಸಮಿತಿ ಗೌರವಾಧ್ಯಕ್ಷ ಶ್ಯಾಮಸುದರ್ಶನ ಹೊಸಮೂಲೆ, ಸಂಘಟನಾ ಕಾರ್ಯದರ್ಶಿ ಶಿವಪ್ರಸಾದ ಶೆಟ್ಟಿ ಆನೆಯಾಲಗುತ್ತು, ಕಾರ್ಯದರ್ಶಿ ಕೃಷ್ಣ ಎಂ.ಆರ್. ಕಡಬ, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಅರವಿಂದ ಪದ್ಯಾಣ, ಕಾರ್ಯದರ್ಶಿ ಈಶಾನ್ಯ ಪದ್ಯಾಣ, ಬಿಜೆಪಿ ಕ್ಷೇತ್ರ ಸಮಿತಿ ಅಧ್ಯಕ್ಷ ಆರ್. ಚೆನ್ನಪ್ಪ ಕೋಟ್ಯಾನ್, ಉಪಾಧ್ಯಕ್ಷ ಸುದರ್ಶನ ಬಜ, ಬಿಜೆಪಿ ರಾಜ್ಯ ಮುಖಂಡ ವಿಕಾಸ್ ಪುತ್ತೂರು ಸಹಿತ ಬ್ರಹ್ಮಕಲಶೋತ್ಸವ, ಜೀರ್ಣೋದ್ಧಾರ, ದೇವಸ್ಥಾನದ ಸಮಿತಿಗಳ ಪದಾಧಿಕಾರಿಗಳು, ಪ್ರಮುಖರು ಉಪಸ್ಥಿತರಿದ್ದರು. ನವ್ಯ ಕೃಷ್ಣಮಾಣಿಪ್ಪಾಡಿ ಕಾರ್ಯಕ್ರಮ ನಿರ್ವಹಿಸಿದರು.

ಬರುವ ಹನಿ ಹನಿ ನೀರಿಗಾಗಿ ತಾಸುಗಟ್ಟಲೆ ಕಾಯುವ ಸ್ಥಿತಿ | ಟ್ಯಾಂಕರ್ ನೀರು ಅಪರೂಪ

ಫಲ್ಗುಣಿ ತಟದಲ್ಲಿ ಕುಡಿಯುವ ನೀರಿಗೆ ಬರ

• ಚಿತ್ರ: ರಾಜೇಶ್ ಶೆಟ್ಟಿ ಬಳ್ಳಾಲ್‌ಬಾಗ್

ದಿಗಂತ ವಾಟರ್ ಚೆಕ್



▸ **ಹರೀಶ ಕುಲ್ಕುಂದ**

ಮಂಗಳೂರು: ಫಲ್ಗುಣಿ ನದಿಯ ತಟದಲ್ಲಿ ವ್ಯಾಪಿಸಿಕೊಂಡಿರುವ ಬೋಳೂರು ವಾರ್ಡ್‌ನ ಬಹುತೇಕ ಕಡೆ ನೀರಿನ ಸಮಸ್ಯೆಯಿದೆ. ಉರ್ವ, ಸುಲ್ತಾನ್ ಬತ್ತೇರಿ, ಬೊಕ್ಕಪಟ್ಣ ಚರ್ಚ್‌ಗೇಟ್ ಪ್ರದೇಶ, ಉರ್ವ ಗೇರುಬೀಜ ಕಾರ್ಖಾನೆ, ವೆಟ್‌ವೆಲ್ ಪರಿಸರ ಸುತ್ತಲಿನ ಪರಿಸರವನ್ನು ಈ ವಾರ್ಡ್ ಹಂಚಿಕೊಂಡಿದೆ. ಮಂಗಳೂರು ಮಹಾನಗರ ಪಾಲಿಕೆಯ ಗಡಿಯ ಅಂಚಿನಲ್ಲಿ, ಪೈಪ್‌ಲೈನ್‌ನ ಕೊನೆಯಲ್ಲಿ ಇರುವ ಕಾರಣ ಪಾಲಿಕೆ ಪೂರೈಸುವ ನೀರು ಇಲ್ಲಿಗೆ ತಲುಪುತ್ತಿಲ್ಲ. ಇದರಿಂದಾಗಿ ಈ ವಾರ್ಡ್‌ನ ಬಹುತೇಕ ಕಡೆಗೆ ಸಮರ್ಪಕವಾಗಿ ನೀರು ಸರಬರಾಜು ಆಗುತ್ತಿಲ್ಲ.

ಬೋಳೂರು ವಾರ್ಡ್‌ನ ಬೊಕ್ಕಪಟ್ಣ ಚರ್ಚ್‌ಗೇಟ್‌ನಿಂದ ಅಕ್ಷಯ ಹಾಲ್, ನ್ಯಾಶನಲ್ ಬೋಳೂರುವರೆಗಿನ ಪ್ರದೇಶಗಳಿಗೆ ಬೆಂದೂರುವೆಲ್‌ನಿಂದ ನೀರು ಬರುತ್ತಿದೆ. ಉರ್ವ ಸುತ್ತಲಿನ ಪ್ರದೇಶಗಳಿಗೆ ಲೇಡಿಹಿಲ್ ಕರಾವಳಿ ಪಂಪ್ ಹೌಸ್‌ನಿಂದ ನೀರು ಪೂರೈಕೆಯಾಗುತ್ತಿದೆ. ಬೆಂದೂರುವೆಲ್‌ನಿಂದ ಆಗಮಿಸುವ ಪೈಪ್‌ಲೈನ್‌ಗೆ ಬೋಳೂರು ವಾರ್ಡ್ ಎಂಡ್ ಪಾಯಿಂಟ್ ಆಗಿದೆ. ಮೊದಲಿನ ವಾರ್ಡ್‌ಗಳಿಗೆ ನೀರು ಹಂಚಿಕೆಗೊಂಡು ಉಳಿದರೆ ಮಾತ್ರ ಈ ವಾರ್ಡ್‌ಗೆ ನೀರು ಬರುತ್ತಿದೆ.

ಸ್ಥಳೀಯರ ದೂರು

'ನಮ್ಮಲ್ಲಿ ಪ್ರತಿದಿನ ನೀರು ಬರುತ್ತಿದೆ ಎಂಬುದೇನೋ ನಿಜ. ಆದರೆ, ಒಂದು ಕೊಡಪಾನ ತುಂಬಲು ಒಮ್ಮೊಮ್ಮೆ ಒಂದು ಗಂಟೆ ಹಿಡಿಯುತ್ತದೆ. ಹನಿ ಹನಿಯಾಗಿ ಮಾತ್ರ ನೀರು ಬರುತ್ತಿದೆ. ಬಾಕಿ ಕಡೆ ಪ್ರೆಶರ್ ಸಮಸ್ಯೆಯಾದರೆ ನಮ್ಮಲ್ಲಿ ನೀರೇ ಬರುವುದಿಲ್ಲ' ಎನ್ನುವುದು ಸ್ಥಳೀಯರ ದೂರು. 'ಪ್ರತಿದಿನ ಕನಿಷ್ಠ ಒಂದು ಗಂಟೆಯಾದರೂ ಉತ್ತಮ ಪ್ರೆಶರ್‌ನೊಂದಿಗೆ ನೀರು ನೀಡಿದರೆ ನಮಗೆ ನೀರಿನ ಸಮಸ್ಯೆ ಉಂಟಾಗದು' ಎಂಬುದು ಇಲ್ಲಿನವರ ಅಭಿಪ್ರಾಯ.

▸ ಟ್ಯಾಂಕರ್ ನೀರು ಬರುತ್ತಿಲ್ಲ

ಈ ವಾರ್ಡ್‌ಗೆ ಟ್ಯಾಂಕರ್ ನೀರು ಬರುವುದು ಅಪರೂಪ. ಇಲ್ಲಿನ ಕೆಲವರ ಪ್ರಕಾರ ಟ್ಯಾಂಕರ್‌ನಲ್ಲಿ ಪೂರೈಕೆಯಾಗುವ ನೀರು ಕೂಡಾ ಚೆನ್ನಾಗಿಲ್ಲ. ಬೋಳೂರು ವಾರ್ಡ್‌ನಲ್ಲಿ ಎಲ್ಲ ಮನೆಗಳಿಗೆ ರಸ್ತೆ ಸಂಪರ್ಕವಿಲ್ಲ. ಪುಟ್ಟ ಪುಟ್ಟ ಮನೆಗಳು ಒತ್ತೊತ್ತಾಗಿ ನಿರ್ಮಿಸಲ್ಪಟ್ಟಿದ್ದು, ಅಗಲ ಕಿರಿದಾದ ದಾರಿಯಿದೆ. ಈ ದಾರಿಗಳಲ್ಲಿ ಟ್ಯಾಂಕರ್ ಸಾಗುವುದು ಸಾಧ್ಯವಿಲ್ಲ. ಮುಖ್ಯರಸ್ತೆಗೆ ಬಂದು ಟ್ಯಾಂಕರ್‌ನಿಂದ ನೀರು ಹೊತ್ತೊಯ್ಯಲು ಜನರು ತಯಾರಿಲ್ಲ. ನೀರು ಸಂಗ್ರಹಿಸಲು ಬೇಕಾದ ಪರಿಕರಗಳಿಲ್ಲ. ಹಾಗಾಗಿ ಇಲ್ಲಿ ಟ್ಯಾಂಕರ್ ನೀರೂ ಪರ್ಯಾಯ ವ್ಯವಸ್ಥೆಗೆ ಆಗಲಾರದು. ಮನಪಾ ನೀರು ಪೂರೈಕೆಯಾಗದ ಕಾರಣ ಇಲ್ಲಿನ ಬಹುತೇಕ ಜನರು ಬೋರ್‌ವೆಲ್, ಬಾವಿಯ ನೀರು ಅವಲಂಬಿಸಿದ್ದಾರೆ. ಸುಲ್ತಾನ್ ಬತ್ತೇರಿಯಲ್ಲಿ ಸರಕಾರಿ ಬಾವಿ ಇದ್ದು, ಇಲ್ಲಿನ ನಿಕಟಪೂರ್ವ ಕಾರ್ಪೋರೇಟರ್ ಅವರು ಈ ಬಾವಿಯನ್ನು ಶುಚಿಗೊಳಿಸಿ ನೀರು ಬಳಕೆಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಖಾಸಗಿ ಬೋರ್‌ವೆಲ್‌ಗಳ ಮೂಲಕವೂ ಬಹುತೇಕ ಮಂದಿ ನೀರು ಪಡೆಯುತ್ತಿದ್ದಾರೆ.



> **ಮಂಗಳೂರು ಮಹಾನಗರ ಪಾಲಿಕೆ ವತಿಯಿಂದ ಪೂರೈಕೆಯಾಗುವ ನೀರಿನ ಹಂಚಿಕೆಯಲ್ಲಿನ ಸಮಸ್ಯೆಯಿಂದ ಬೆಂದೂರ್‌ವೆಲ್‌ನಿಂದ ನೀರು ಸರಬರಾಜು ಆಗುವ ಬೋಳೂರು ವಾರ್ಡ್‌ನ ಎಲ್ಲ ಪ್ರದೇಶಗಳಿಗೆ ನೀರು ಬರುತ್ತಿಲ್ಲ. ಈ ಸಮಸ್ಯೆ ಬಗ್ಗೆ ಅನೇಕ ಬಾರಿ ಮನಪಾ ಅಧಿಕಾರಿಗಳ ಗಮನಕ್ಕೆ ತಂದರೂ ಸಮಸ್ಯೆ ಬಗೆಹರಿದಿಲ್ಲ. ಹನಿ ಹನಿಯಾಗಿ ನೀರು ಬಂದರೆ ಜನರು ಏನು ಮಾಡಬೇಕು? ಮನಪಾ ವತಿಯಿಂದ ಪೂರೈಸುವ ನೀರಿನ ಪ್ರಮಾಣ ಹಾಗೂ ಪಂಪಿಂಗ್ ಅವಧಿಯನ್ನು ಹೆಚ್ಚಿಸಬೇಕು. ಈ ವಾರ್ಡ್‌ನಲ್ಲಿ ಕಾಲನಿ ಮಾದರಿಯ ಮನೆಗಳಿರುವ ಕಾರಣ ಟ್ಯಾಂಕರ್ ಮೂಲಕವೂ ನೀರು ಪೂರೈಕೆ ಸಾಧ್ಯವಾಗುತ್ತಿಲ್ಲ.**
> ■ ಜಗದೀಶ್ ಶೆಟ್ಟಿ, ಬೋಳೂರು ವಾರ್ಡ್ ನಿಕಟಪೂರ್ವ ಕಾರ್ಪೋರೇಟರ್

ಮುಂದಿನ ವಾರ್ಡ್ –28
ಮಣ್ಣಗುಡ್ಡ ಪರಿಸರದ ಸ್ಥಿತಿಗತಿ



> **ಕಳೆದ ನವೆಂಬರ್‌ನಿಂದ ನಮ್ಮಲ್ಲಿ ಮನಪಾ ಪೈಪ್ ಲೈನ್‌ನಲ್ಲಿ ನೀರು ಬರುತ್ತಿಲ್ಲ. ನಾವು ಬೋರ್‌ವೆಲ್ ನೀರು ಕುಡಿಯುತ್ತಿದ್ದೇವೆ. ಬೋರ್‌ವೆಲ್‌ನ ನೀರನ್ನು ಬಕೆಟ್‌ನಲ್ಲಿ ಹಾಕಿ ಸ್ವಲ್ಪ ಹೊತ್ತು ಇರಿಸಿದರೆ ಆ ನೀರು ಕಪ್ಪಾಗುತ್ತಿದೆ. ಮನಪಾ ವತಿಯಿಂದ ಕುಡಿಯುವ ನೀರು ಪೂರೈಸದ ಕಾರಣ ನಾವು ಬೋರ್ ವೆಲ್‌ನ ಕಲುಷಿತ ನೀರು ಕುಡಿಯುವುದು ಅನಿವಾರ್ಯ. ನೀರಿನ ಸಮಸ್ಯೆ ಬಗ್ಗೆ ಬೆಂದೂರ್‌ವೆಲ್‌ನ ಪಂಪ್‌ಹೌಸ್ ಸಿಬ್ಬಂದಿ, ಮನಪಾ ಇಂಜಿನಿಯರ್, ಅಧಿಕಾರಿಗಳ ಸಹಿತ ಎಲ್ಲರ ಗಮನಕ್ಕೆ ತಂದರೂ ಇದುವರೆಗೂ ನೀರು ಬಂದಿಲ್ಲ. ಇಂಜಿನಿಯರ್, ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸುತ್ತೇವೆ ಎಂದು ಹೇಳುತ್ತಿದ್ದಾರೆಯೇ ವಿನಃ ಬರುತ್ತಿಲ್ಲ. ಜನತೆಗೆ ನೀರು ಒದಗಿಸುವುದು ಪಾಲಿಕೆಯ ಪ್ರಥಮ ಕರ್ತವ್ಯ. ನಾವು ಪಾಲಿಕೆಗೆ ತೆರಿಗೆ ಪಾವತಿಸುತ್ತಿದ್ದೇವೆ. ನೀರು ಬರದಿದ್ದರೂ, ನೀರಿನ ಬಿಲ್ ತಿಂಗಳಿಗೆ 200 ರೂ. ಪಾವತಿಸುತ್ತಿದ್ದೇವೆ. ಇನ್ನು ನೀರು ಒದಗಿಸದಿದ್ದರೆ ಮನಪಾ ಮುಂಭಾಗದಲ್ಲಿ ಧರಣಿ ನಡೆಸುತ್ತೇವೆ.**
> ■ ರೀಟಾ ಆಂದ್ರಾದೆ, ಬೊಕ್ಕಪಟ್ಣ ಚರ್ಚ್‌ಗೇಟ್ ಬಳಿಯ ನಿವಾಸಿ

ಜಲಸಿರಿ ಯೋಜನೆ: ಅವೈಜ್ಞಾನಿಕ ಕಾಮಗಾರಿ

ಬೋಳೂರು ವಾರ್ಡ್‌ನಲ್ಲಿ ಜಲಸಿರಿ ಪೈಪ್‌ಲೈನ್ ಕಾಮಗಾರಿ ಬಹುತೇಕ ಆಗಿದೆ. ಆದರೆ, ಕಾಮಗಾರಿಯನ್ನು ಅವೈಜ್ಞಾನಿಕವಾಗಿ ನಿರ್ವಹಿಸಲಾಗಿದೆ. ಕಾಂಕ್ರೀಟ್ ರಸ್ತೆ, ಇಂಟರ್‌ಲಾಕ್‌ಗಳನ್ನು ಅಗೆದ ಬಳಿಕ ಗುಂಡಿ ಮುಚ್ಚಿಲ್ಲ. ಅಲ್ಲಲ್ಲಿ ರಸ್ತೆ ಒಡೆದು ಹಾಕಿ ಹೋಗಿದ್ದಾರೆ. ಕೌಶಲ್ಯರಹಿತ ಕಾರ್ಮಿಕರು ಕಾಮಗಾರಿ ನಡೆಸಿದ ಕಾರಣ ಅವ್ಯವಸ್ಥೆಯಿಂದ ಕೂಡಿದೆ. ಪ್ರಸ್ತುತ ಜಲಸಿರಿ ಕೆಲಸ ನಿಲ್ಲಿಸಿದ್ದಾರೆ ಎಂದು ಸ್ಥಳೀಯರು ಹೇಳುತ್ತಾರೆ.


ಶೇ.100 ಕಡತ ವಿಲೇವಾರಿ ಸಾಧನೆ

• **ಬೆಂಗಳೂರು:** ಕೃಷಿ ಸಚಿವ ಚೆಲುವರಾಯಸ್ವಾಮಿ ಅವರ ನೇತೃತ್ವದ ಕೃಷಿ ಸಚಿವರ ಕಚೇರಿ ಸಾರ್ವಜನಿಕ ಸ್ನೇಹಿ ಆಡಳಿತದ ಭಾಗವಾಗಿ 2025-26ನೇ ಸಾಲಿನಲ್ಲಿ ಶೇ.100 ಕಡತ ವಿಲೇವಾರಿ ಸಾಧನೆ ಮಾಡಿದೆ.

ವಿಕಾಸಸೌಧದಲ್ಲಿರುವ ಸಚಿವರ ಕಚೇರಿಗೆ ಬಂದ ಎಲ್ಲಾ ಕಡತಗಳನ್ನು ಸಮಯಬದ್ಧವಾಗಿ ಪರಿಶೀಲಿಸಿ ನಿಯಮಾನುಸಾರವಾಗಿ ವಿಲೇವಾರಿ ಮಾಡಲಾಗಿದೆ ಎಂದು ತಿಳಿಸಲಾಗಿದೆ. ಈ ಸಾಲಿನಲ್ಲಿ ಒಟ್ಟು 909 ಕಡತಗಳನ್ನು ಪರಿಶೀಲಿಸಿ ಪೂರ್ಣವಾಗಿ ವಿಲೇವಾರಿ ಮಾಡಲಾಗಿದೆ. ಜತೆಗೆ ಮಾರ್ಚ್ ಅಂತ್ಯದವರೆಗೆ ಸ್ವೀಕರಿಸಲ್ಪಟ್ಟ 4201 ಪತ್ರಗಳನ್ನೂ ಸಮಗ್ರವಾಗಿ ಪರಿಶೀಲಿಸಿ ನಿರ್ವಹಿಸಲಾಗಿದೆ. ವಿಧಾನಸಭೆ ಹಾಗೂ ವಿಧಾನಪರಿಷತ್ ಸದಸ್ಯರು ಕೃಷಿ ಇಲಾಖೆಗೆ ಕೇಳಿದ ಒಟ್ಟು 352 ಪ್ರಶ್ನೆಗಳಿಗೆ ಸಹ ಸಮರ್ಪಕ ಉತ್ತರ ನೀಡಲಾಗಿದೆ ಎಂದು ಇಲಾಖೆ ಮಾಹಿತಿ ನೀಡಿದೆ.

ಕಳೆದ ಮೂರು ವರ್ಷಗಳಿಂದಲೂ ಸಚಿವರ ಕಚೇರಿಯಲ್ಲಿ ನಿರಂತರವಾಗಿ ಶೇ.100ಕಡತ ವಿಲೇವಾರಿ ಸಾಧನೆ ಮುಂದುವರಿದಿದ್ದು, ಇದು ಆಡಳಿತದ ದಕ್ಷತೆ ಮತ್ತು ಪಾರದರ್ಶಕತೆಯ ಪ್ರತೀಕವಾಗಿದೆ. ಈ ಸಾಧನೆಗೆ ಸಹಕರಿಸಿದ ಸಿಬ್ಬಂದಿಯ ಪರಿಶ್ರಮವನ್ನು ಸಚಿವರು ಶ್ಲಾಘಿಸಿದ್ದು, ಮುಂದಿನ ದಿನಗಳಲ್ಲಿಯೂ ಇದೇ ರೀತಿಯ ಸೇವಾಭಾವದಿಂದ ಕಾರ್ಯನಿರ್ವಹಿಸಲು ಸೂಚಿಸಿದ್ದಾರೆ.

ರಾಮ ಬಾಣ



ವಿದ್ಯಾರ್ಥಿಗಳಿಗೆ ಹಿಂದಿ ಭಾಷೆ ಕಲಿಕೆ ಅಗತ್ಯ

• **ಬೆಂಗಳೂರು:** ರಾಜ್ಯದ ಶಿಕ್ಷಣ ಕ್ಷೇತ್ರದಲ್ಲಿ ಇತ್ತೀಚೆಗೆ ಉಂಟಾಗಿರುವ ಬೆಳವಣಿಗೆಗಳ ಕುರಿತು ಬಿಜೆಪಿಯ ಶಿಕ್ಷಣ ಪ್ರಕೋಷ್ಠ ತೀವ್ರ ಆತಂಕ ಹಾಗೂ ಅಸಮಾಧಾನವನ್ನು ವ್ಯಕ್ತಪಡಿಸಿದೆ.

ಪ್ರೆಸ್‌ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ಶಿಕ್ಷಣ ಪ್ರಕೋಷ್ಠದ ರಾಜ್ಯ ಸಂಚಾಲಕ ಡಾ. ಸಿ.ಬಿ. ಶಶಿಧರ್ ಅವರು, ರಾಜ್ಯದ ಕಾಂಗ್ರೆಸ್ ಸರ್ಕಾರವು ತ್ರಿಭಾಷಾ ಸೂತ್ರದ ಅಡಿಯಲ್ಲಿ ವಿದ್ಯಾರ್ಥಿಗಳು ಹಿಂದಿ ಭಾಷೆಯನ್ನು ಕಲಿಯಬೇಕು ಎಂದು ಹಲವು ವರ್ಷಗಳಿಂದ ಹೇಳುತ್ತ ಬಂದಿದ್ದರೂ, ಇದೀಗ ಯಾವುದೇ ಪೂರ್ವ ಚರ್ಚೆ ಇಲ್ಲದೆ ಮತ್ತು ವಿದ್ಯಾರ್ಥಿಗಳು ಹಾಗೂ ಪೋಷಕರ ಅಭಿಪ್ರಾಯವನ್ನು ಪರಿಗಣಿಸದೆ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಹಿಂದಿ ವಿಷಯವನ್ನು ಕೈಬಿಡುವ ಕುರಿತು ಸೂಚನೆ ನೀಡಿರುವುದು ಶಿಕ್ಷಣ ವಲಯದಲ್ಲಿ ಗಂಭೀರ ಗೊಂದಲವನ್ನು ಸೃಷ್ಟಿಸಿದೆ ಎಂದು ಹೇಳಿದರು.

ವಿದ್ಯಾರ್ಥಿಗಳ ಭವಿಷ್ಯ, ಅವರ ಸ್ಪರ್ಧಾತ್ಮಕ ಸಾಮರ್ಥ್ಯ ಹಾಗೂ ಬಹುಭಾಷಾ ಅಧ್ಯಯನದ ಅಗತ್ಯತೆಯನ್ನು ಕಡೆಗಣಿಸುವಂತಹ ನಿರ್ಧಾರಗಳು ಶಿಕ್ಷಣ ವ್ಯವಸ್ಥೆಯ ಮೇಲಿನ ವಿಶ್ವಾಸವನ್ನು ಕುಂದಿಸುತ್ತವೆ. ಸರ್ಕಾರವು ರಾಜಕೀಯ ಲಾಭಕ್ಕಾಗಿ ಶಿಕ್ಷಣ ಕ್ಷೇತ್ರವನ್ನು ಪ್ರಯೋಗಾಲಯವನ್ನಾಗಿ ಮಾಡಬಾರದು ಎಂದರು.

ಇದಕ್ಕಿಂತಲೂ ಆತಂಕಕಾರಿ ವಿಷಯವೆಂದರೆ,



ಇತ್ತೀಚೆಗೆ ರಾಜ್ಯದ ಶಿಕ್ಷಣ ಸಚಿವರು ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಹಿಂದಿ ವಿಷಯವನ್ನು ಕೈಬಿಡುವ ಕುರಿತು ನೀಡಿರುವ ಸೂಚನೆ ಶಿಕ್ಷಣ ವಲಯದಲ್ಲಿ ಅನೇಕ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಈಗಾಗಲೇ ನಡೆದಿರುವ ಪರೀಕ್ಷೆಗೆ ಸಂಬಂಧಿಸಿದಂತೆ, ವಿದ್ಯಾರ್ಥಿಗಳಿಗೆ ಗ್ರೇಡ್ ನೀಡುತ್ತೇವೆ ಎಂದು ಸರ್ಕಾರ ಹೇಳಿದೆ. ಇದು ವಿದ್ಯಾರ್ಥಿಗಳ ಪರಿಶ್ರಮ ಹಾಗೂ ಅವರ ವಿದ್ಯಾಭ್ಯಾಸದ ಮೌಲ್ಯವನ್ನು ಕಡಿಮೆ ಮಾಡುವ ಕ್ರಮವಾಗಿದ್ದು, ಬಿಜೆಪಿ ಶಿಕ್ಷಣ ಪ್ರಕೋಷ್ಠ ಇದನ್ನು ತೀವ್ರವಾಗಿ ಖಂಡಿಸುತ್ತದೆ. ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ಅನ್ಯಾಯವಾಗದಂತೆ ಅವರಿಗೆ ಸಮರ್ಪಕವಾದ ಗ್ರೇಸ್ ಅಂಕಗಳನ್ನು ನೀಡುವ ಮೂಲಕ ನ್ಯಾಯ ಒದಗಿಸಬೇಕು ಎಂದು ಸರ್ಕಾರವನ್ನು ಒತ್ತಾಯಿಸುತ್ತೇವೆ ಎಂದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಶಿಕ್ಷಣ ಪ್ರಕೋಷ್ಠದ ರಾಜ್ಯ ಸಮಿತಿ ಸದಸ್ಯ ಕೆ. ಹರೀಶ್ ಸೇರಿದಂತೆ ಇತರರಿದ್ದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ರಾಜ್ಯ ಸರ್ಕಾರದಲ್ಲಿ ಯೋಜನೆ, ಅನುದಾನ, ಅನುಷ್ಠಾನದ ನಡುವೆ ತಾಳ ಮೇಳವೇ ಕಂಡು ಬರುತ್ತಿಲ್ಲ – ಸುನೀಲ್ ಕುಮಾರ್

– ಒಬ್ಬಾತ ಸಂಗೀತ ಕಾರ್ಯಕ್ರಮವೊಂದನ್ನು ಕೇಳಿ ಹೀಗೆ ಹೇಳಿದನಂತೆ --- ವ್ಹಾ, ರಾಗ- ಸರಾಗ, ತಾಳ -ಬೇತಾಳ, ಲಯ- ಮಾಯವಾಗಿದ್ದ ಅಪೂರ್ವ ಕಾರ್ಯಕ್ರಮ!

ದಿನ ಭವಿಷ್ಯ

ಮೇಷ ಕೆಲವರನ್ನು ಬದಲಿಸಲು ನಿಮ್ಮಿಂದ ಅಸಾಧ್ಯ. ಅವರ ಜತೆ ಹೊಂದಿಕೊಂಡು ಬಾಳುವುದು ಒಳ್ಳೆಯದು. ವಿದ್ಯಾರ್ಥಿಗಳಿಗೆ ಯಶ.

ವೃಷಭ ವಿದ್ಯಾರ್ಥಿಗಳಿಗೆ ಸಫಲ ದಿನ. ವೃತ್ತಿಯಲ್ಲಿ ಸಮಸ್ಯೆ ನೀಗಿಸಲು ಶಕ್ತರಾಗುವಿರಿ. ಆರೋಗ್ಯ ಕಾಳಜಿ ನೋಡಿಕೊಳ್ಳಿ. ಸಿಕ್ಕಿದ್ದನ್ನು ತಿನ್ನಬೇಡಿ.

ಮಿಥುನ ಪ್ರತಿಕೂಲ ಪರಿಸ್ಥಿತಿ ಎದುರಿಸುತ್ತಿದ್ದರೆ ಸ್ವಲ್ಪ ಕಾಲ ಕಾದು ನೋಡಿ. ಬಳಿಕ ಸರಿ ಹೋಗುವುದು. ದುಡುಕಿನ ಕ್ರಮ ಕೈಗೊಳ್ಳಬೇಡಿ. ಆರ್ಥಿಕ ಸ್ಥಿರತೆ.

ಕಟಕ ವೃತ್ತಿಯಲ್ಲಿ ಸ್ಪರ್ಧೆ ಎದುರಿಸುವಿರಿ. ನಿಮ್ಮ ಪ್ರಭುತ್ವ ಸ್ಥಾಪಿಸಲು ಸ್ವಲ್ಪ ಕಷ್ಟ ಪಡಬೇಕಾಗುವುದು. ಮನೆಯಲ್ಲಿ ಶಾಂತ ಪರಿಸ್ಥಿತಿ. ಧನ ಪ್ರಾಪ್ತಿ.

ಸಿಂಹ ಮಾನಸಿಕ ಶಾಂತಿ ಕದಡುವ ಬೆಳವಣಿಗೆ. ಸಮಚಿತ್ತ ಕಾಯ್ದುಕೊಳ್ಳಿ. ಕೆಲವರ ಕೆಣಕುವಿಕೆ ನಿರ್ಲಕ್ಷಿಸಿ. ವಿದ್ಯಾರ್ಥಿಗಳಿಗೆ ಆಂಶಿಕ ಯಶಸ್ಸು.

ಕನ್ಯಾ ಹೆತ್ತವರು ಮಕ್ಕಳ ಕುರಿತು ಕಾಳಜಿ ವಹಿಸಿ. ಆದಾಯಕ್ಕಿಂತ ಹೆಚ್ಚು ಖರ್ಚು ಮಾಡಬೇಡಿ. ನೆಂಟರಿಂದ ಟೀಕೆ ಕೇಳುವಿರಿ.

ತುಲಾ ಕೆರಿಯರ್‌ನಲ್ಲಿ ಮುಂದೆ ಹೆಜ್ಜೆ ಇಡಿ. ಸಣ್ಣ ಅಪಯಶಸ್ಸು ಕಂಡು ಹಿಂದಡಿ ಇಡಬೇಡಿ. ಹೊಸ ವ್ಯವಹಾರದಲ್ಲಿ ಧನ ಸಂಪಾದನೆ ಹೆಚ್ಚಳ.

ವೃಶ್ಚಿಕ ಆರ್ಥಿಕ ಒತ್ತಡ. ಅನ್ಯರ ನೆರವು ಅಪೇಕ್ಷಿಸಿದರೂ ಸಿಗದು. ಸಣ್ಣ ಘಟನೆಯೊಂದು ಮಾನಸಿಕ ಕ್ಷೋಭೆ ಉಂಟು ಮಾಡಬಹುದು.

ಧನು ನಿಮ್ಮ ಕಾರ್ಯಕ್ಕೆ ಮೆಚ್ಚುಗೆ ಸಿಗಲಿದೆ. ಟೀಕೆಗಳಿಗೆ ಅಂಜಿ ಉದ್ದೇಶಿತ ಕೆಲಸದಿಂದ ಹಿಂದೆ ಸರಿಯಬೇಡಿ. ವಿದ್ಯಾರ್ಥಿಗಳಿಗೆ ಒತ್ತಡ.

ಮಕರ ಅಡ್ಡಿಗಳಿಗೆ ಅಂಜಬೇಡಿ. ಅದನ್ನು ದಾಟಿ ಮುಂದೆ ಸಾಗಲು ಯತ್ನಿಸಿ. ಹಿರಿಯರ ಆರೋಗ್ಯ ಚಿಂತೆಗೆ ಕಾರಣವಾದೀತು.

ಕುಂಭ ಹತಾಶೆಯ ಮನೋಭಾವ. ಅದಕ್ಕೆ ಕಾರಣ ಮುಗಿಯದ ಸಮಸ್ಯೆ. ಗ್ರಹಗತಿ ಕೆಲ ಕಾಲ ಮಾನಸಿಕ ಕಿರಿಕಿರಿ ಸೃಷ್ಟಿಸಲಿದೆ.

ಮೀನ ಕಠಿಣ ಶ್ರಮಕ್ಕೆ ಫಲ ಸಿಗುವುದು. ಆದರೆ ಉದಾಸೀನತೆ ಬಿಡುವುದು ಮುಖ್ಯ. ನಾಳೆಗೆ ಮುಂದೂಡುವ ಅಭ್ಯಾಸ ಬಿಟ್ಟುಬಿಡಿ.

ರಾಹುಕಾಲ: 1.30-3.00
ಗುಳಿಕಕಾಲ: 9.00-10.30

ಅದೃಷ್ಟ ಸಂಖ್ಯೆ: 0,4,9,2

ಕೇರಳ ಮಾದರಿಯಲ್ಲೇ ಆರೈಕೆ ಒದಗಿಸಲು ಆರೋಗ್ಯ ಇಲಾಖೆ ಮುಂದು

ಕ್ಯಾನ್ಸರ್ ಪೀಡಿತರಿಗೆ ಮನೆ ಆರೈಕೆ

• **ಬೆಂಗಳೂರು:** ಕ್ಯಾನ್ಸರ್ ಪೀಡಿತರಿಗೆ ಆರೋಗ್ಯ ಇಲಾಖೆ ಸಿಹಿ ಸುದ್ದಿ ನೀಡಿದ್ದು, ಮಾರಣಾಂತಿಕ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳು ಇನ್ನು ಮುಂದೆ ಆಸ್ಪತ್ರೆಗೆ ಹೋಗುವ ಅಗತ್ಯವಿಲ್ಲ. ಬದಲಾಗಿ ಮನೆಯಲ್ಲಿಯೇ ಉಪಶಮನ ಆರೈಕೆ ನೀಡುವ ಕುರಿತು ಕರುಣಾಶ್ರಯ ಸಂಸ್ಥೆಯು ಕನ್ನಡದಲ್ಲಿ ಆ್ಯನಿಮೇಷನ್ ವಿಡಿಯೋಗಳ ಸರಣಿಗಳನ್ನು ನಿರ್ಮಿಸಿದೆ.

ಆರೋಗ್ಯ ಸೌಧದಲ್ಲಿ ಬುಧವಾರ ಕರುಣಾಶ್ರಯ ಸಂಸ್ಥೆ ವತಿಯಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ 17 ವಿವಿಧ ಬಗೆಯ ವಿಡಿಯೊ ಸರಣಿಗಳನ್ನು ಲೋಕಾರ್ಪಣೆಗೊಳಿಸಿ ಮಾತನಾಡಿ, ಜನರಿಗೆ ಕೇರಳದಲ್ಲಿ ಗೃಹ ಆಧಾರಿತ ಉಪಶಮನ ಆರೈಕೆ ಮಾದರಿ ರೀತಿಯಲ್ಲಿ ರಾಜ್ಯದಲ್ಲೂ ಅದೇ ರೀತಿ ಆರೈಕೆ ಒದಗಿಸಲು ಆರೋಗ್ಯ ಇಲಾಖೆ ಮುಂದಾಗಿದೆ ಎಂದು ತಿಳಿಸಿದರು.

52 ಸಾವಿರ ಮಂದಿ ಕ್ಯಾನ್ಸರ್ ಪೀಡಿತರಿಗೆ ಆರೋಗ್ಯ ಇಲಾಖೆಯಿಂದ ಮನೆ ಆಧಾರಿತ ಚಿಕಿತ್ಸೆ ನೀಡುತ್ತಿದ್ದೇವೆ. ಕ್ಯಾನ್ಸರ್ ಅಂತಿಮ ಹಂತದ ಮಾರಣಾಂತಿಕ ಕಾಯಿಲೆಯಿಂದ ಬಳಲುತ್ತಿರುವವರು, ಒಂದೇ ಕಡೆ ಮಲಗಿರುವುದರಿಂದ ಹುಣ್ಣು, ಸೋಂಕು ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಅಂತಹವರಿಗೆ ಗುಣಪಡಿಸಲು ಸಾಧ್ಯವಾಗದಿದ್ದರೂ, ಆರೈಕೆ ಅಗತ್ಯವಿರುತ್ತದೆ. ಆದ್ದರಿಂದ ಮನೆಗಳಲ್ಲಿ ಅವರ ಆರೈಕೆ ಬಗ್ಗೆ ಅರಿವು ಮೂಡಿಸಬೇಕಿದೆ. ಅದಕ್ಕೆ ಈ ವಿಡಿಯೋ ಸಹಕಾರಿಯಾಗಲಿದೆ ಎಂದು ಹೇಳಿದರು.

ಉಪಶಮನ ಆರೈಕೆಗೆ ಹೊಸ ನಿಯಮ ರೂಪಿಸಲು ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿತ್ತು. ಈ ಆರೈಕೆಗೆ ಸಂಬಂಧಿಸಿದಂತೆ ರಾಜ್ಯ ಮಟ್ಟದ ತಾಂತ್ರಿಕ ಸಲಹಾ ಸಮಿತಿ ರಚಿಸಲಾಗಿದೆ ಎಂದು ಹೇಳಿದರು.

ಸರ್ಕಾರಿ ಜಿಲ್ಲಾ ಆಸ್ಪತ್ರೆಗಳಲ್ಲಿಯೂ ಉಪ ಶಮನ ಆರೈಕೆ ಹಿನ್ನೆಲೆ ತಲಾ 6 ಹಾಸಿಗೆಗಳನ್ನು ಮೀಸಲಿಡಲಾಗಿದ್ದು, ಉಪಶಮನ ಆರೈಕೆಗೆ ಹೊರ ರೋಗಿ ವಿಭಾಗದಲ್ಲಿ ಪ್ರತಿ ವರ್ಷ 87 ಸಾವಿರ ನೋಂದಣಿಯಾಗುತ್ತಿದ್ದಾರೆ. ಜತೆಗೆ ಒಳರೋಗಿಗೆ ವಿಭಾಗದಲ್ಲಿ 17 ಸಾವಿರಕ್ಕೂ ಅಧಿಕ ಮಂದಿಗೆ ಚಿಕಿತ್ಸೆ ಒದಗಿಸಲಾಗುತ್ತಿದೆ ಎಂದರು. ಈ ವೇಳೆ ಸಂಸ್ಥೆಯ ವೈದ್ಯಕೀಯ ನಿರ್ದೇಶಕ ಡಾ. ನಾಗೇಶ್ ಸಿಮ್ಹಾ, ಆರೋಗ್ಯ ಇಲಾಖೆ ಆಯುಕ್ತ ಗುರುದತ್ತ ಹೆಗಡೆ, ರಾಷ್ಟ್ರೀಯ ಆರೋಗ್ಯ ಅಭಿಯಾನದ (ಎನ್‌ಎಚ್‌ಎಂ) ವ್ಯವಸ್ಥಾಪಕ ನಿರ್ದೇಶಕ ಅವಿನಾಶ್ ಮೆನನ್ ಸೇರಿದಂತೆ ಇತರರಿದ್ದರು.



ಆರೈಕೆ ಮಾಡುವುದೇ ದೊಡ್ಡ ಕೆಲಸ

ಕ್ಯಾನ್ಸರ್ ರೋಗಿಗಳು ದೀರ್ಘಕಾಲೀನ ಚಿಕಿತ್ಸೆ ಪಡೆದ ನಂತರ ಮನೆಗೆ ಹೋದ ವೇಳೆ ಕುಟುಂಬಸ್ಥರಿಗೆ ಅವರ ಆರೈಕೆ ಮಾಡುವುದೇ ದೊಡ್ಡ ಸವಾಲಿನ ಕೆಲಸವಾಗಿ ಪರಿಣಮಿಸಲಿದೆ. ಆದ್ದರಿಂದ ಮನೆಯಲ್ಲಿ ಸುಲಭವಾಗಿ ಆರೈಕೆ ಮಾಡುವ ಬಗ್ಗೆ 17 ವಿಡಿಯೊಗಳನ್ನು ಸಿದ್ಧಪಡಿಸಲಾಗಿದೆ. ಇದು ಯೂಟ್ಯೂಬ್ ಚಾನಲ್ (ಕರುಣಾಶ್ರಮ ಬಿಎಚ್‌ಟಿ)ನಲ್ಲಿ ಅಳವಡಿಸಲಾಗಿದೆ. ಸೋಂಕು, ಬೆನ್ನು ಆರೈಕೆ, ಹುಣ್ಣು ತಡೆಗಟ್ಟುವಿಕೆ, ಮೂತ್ರಕೋಶದ ಆರೈಕೆ, ಗಾಯಕ್ಕೆ ಔಷಧ ಹಚ್ಚುವ ಸರಿಯಾದ ರೀತಿ ಸೇರಿ ಅನೇಕ ಅಗತ್ಯತೆ ಹಾಗೂ ಕೌಶಲಗಳ ಬಗ್ಗೆ ಅತ್ಯಂತ ಸರಳ ವಿಧಾನಗಳನ್ನು ಈ ವಿಡಿಯೋಗಳನ್ನು ವೀಕ್ಷಿಸಿದರೆ ಮಾರ್ಗದರ್ಶನ ಸಿಗಲಿದೆ ಎಂದು ತಿಳಿಸಿದರು.

ನ್ಯಾಟೋಗೆ ಟಾಟಾ?

ಪುಟ ೧➡ ತಜ್ಞರ ಪ್ರಕಾರ, ಅಮೆರಿಕ ತನ್ನ ನ್ಯಾಟೋ ಬದ್ಧತೆಗಳಿಂದ ಹೊರ ನಡೆದರೆ ರಷ್ಯಾ, ನ್ಯಾಟೋ ಸದಸ್ಯ ರಾಷ್ಟ್ರಗಳ ಯುದ್ಧ ಸನ್ನದ್ಧತೆಯನ್ನು ಪರೀಕ್ಷಿಸುವ ಎಲ್ಲಾ ಸಾಧ್ಯತೆಗಳಿವೆ.

ತಾಳ್ಮೆ ವಹಿಸಲು ಪೋಲೆಂಡ್ ಸಲಹೆ: ಅಮೆರಿಕ ಅಧ್ಯಕ್ಷರು ಭಾವನಾತ್ಮಕ ಮಾತುಗಳನ್ನಾಡಿದ್ದಾರೆ. ಆದರೆ ಅವರು ತಾಳ್ಮೆ ವಹಿಸಲಿದ್ದಾರೆಂಬ ಭರವಸೆ ನನಗಿದೆ. ಯಾಕೆಂದರೆ ಅಮೆರಿಕ ಇಲ್ಲದೆ ನ್ಯಾಟೋ ಇಲ್ಲ, ನ್ಯಾಟೋ ಇಲ್ಲದಿದ್ದರೆ ಅಮೆರಿಕ ತನ್ನ ಶಕ್ತಿ ಕಳೆದುಕೊಳ್ಳಲಿದೆ ಎಂದು ಪೋಲೆಂಡ್ ರಕ್ಷಣಾ ಸಚಿವ ವ್ಲಾಡಿಸ್ಲಾವ್ ಕೊಸಿನಿಯಾಕ್ ಕ್ಯಾಮಿಸ್ ಹೇಳಿದ್ದಾರೆ. ನ್ಯಾಟೋ ಸದ್ಯ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಆದರೆ ಜರ್ಮನಿ ಸರ್ಕಾರದ ವಕ್ತಾರರೊಬ್ಬರು, ಅಧ್ಯಕ್ಷ ಟ್ರಂಪ್ ಹೀಗೆ ಹೇಳುತ್ತಿರುವುದು ಇದೇ ಮೊದಲಲ್ಲ. ಇದರ ಪರಿಣಾಮಗಳ ಬಗ್ಗೆ ಅವರೇ ಯೋಚಿಸಲಿ. ಜರ್ಮನಿ ನ್ಯಾಟೋ ಮೈತ್ರಿ ಜತೆಗಿರಲಿದೆ ಎಂದು ಪ್ರತಿಕ್ರಿಯೆ ನೀಡಿದ್ದಾರೆ.

ಅನಿಲ, ತೈಲ ಪೂರೈಕೆಗೆ ಅಗತ್ಯ ಕ್ರಮ

ಪುಟ ೧➡ **ರಕ್ಷಣಾ ಸಚಿವರ ಗೈರು:** ಕೇರಳದಲ್ಲಿ ವಿಧಾನಸಭೆ ಚುನಾವಣಾ ಪ್ರಚಾರದಲ್ಲಿ ವ್ಯಸ್ತರಾಗಿರುವ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಸಿಸಿಎಸ್ ಸಭೆಗೆ ಗೈರಾಗಿದ್ದಾರೆ.

ಹತ್ತು ದಿನದಲ್ಲಿ 2ನೇ ಸಭೆ: ಇರಾನ್ ಯುದ್ಧದಿಂದ ಉಂಟಾದ ತೈಲ, ಅನಿಲ ವ್ಯತ್ಯಯ ಹಿನ್ನೆಲೆ ಹತ್ತು ದಿನಗಳೊಳಗೆ ಇದು ಎರಡನೇ ಬಾರಿಗೆ ಸಿಸಿಎಸ್ ಸಭೆ ಯನ್ನು ಪ್ರಧಾನಿ ಮೋದಿ ನಡೆಸಿದ್ದಾರೆ. ಹಿಂದಿನ ಸಭೆ ಮಾ.22ರಂದು ಪ್ರಧಾನಿ ನೇತೃತ್ವದಲ್ಲಿ ನಡೆದಿತ್ತು. ಹಿಂದಿನ ಸಭೆಯಲ್ಲಿ, ದೇಶದ ಎಲ್ಲಾ ವಿದ್ಯುತ್ ಸ್ಥಾವರಗಳಲ್ಲಿ ಸಾಕಷ್ಟು ಕಲ್ಲಿದ್ದಲು ಶೇಖರಿಸುವ ಮೂಲಕ ವಿದ್ಯುತ್ ಕೊರತೆ ತಡೆಗಟ್ಟಲು ಕ್ರಮ ತೆಗೆದುಕೊಳ್ಳಲು ನಿರ್ಧರಿಸಲಾಗಿತ್ತು.

- ಕೃಷಿ, ರಸಗೊಬ್ಬರ, ಸರಕು ಸಾಗಣೆ (ಶಿಪ್ಪಿಂಗ್), ವಿಮಾನಯಾನ, ಲಾಗಿಸ್ಟಿಕ್ಸ್ ಮತ್ತು ಎಂಎಸ್‌ಎಂಇ ಸವಾಲುಗಳ ಬಗ್ಗೆ ಚರ್ಚೆ
- ತೈಲ ಸುಂಕ ಕಡಿತಗೊಳಿಸಲು ಮತ್ತು ಎಲ್‌ಪಿಜಿ, ದ್ರವೀಕೃತ ನೈಸರ್ಗಿಕ ಅನಿಲ (ಎಲ್‌ಎನ್‌ಜಿ) ಪೂರೈಕೆ ವ್ಯತ್ಯಯದ ಬಗ್ಗೆ ಚರ್ಚೆ
- ನೈಸರ್ಗಿಕ ಅನಿಲ (ಪಿಎನ್‌ಜಿ) ಕನೆಕ್ಷನ್ ಹೆಚ್ಚಿಸಲು ಉತ್ತೇಜನ
- ಅಗತ್ಯ ವಸ್ತುಗಳ ಅಕ್ರಮ ಮಾರಾಟದ ವಿರುದ್ಧ ಕಠಿಣ ಕಾನೂನು ಕ್ರಮ ತೆಗೆದುಕೊಳ್ಳುವ ಕುರಿತು ಚರ್ಚೆ
- ಯೂರಿಯಾ ಉತ್ಪಾದನೆಗೆ ಉತ್ತೇಜನ, ಖಾರಿಫ್ ಮತ್ತು ರಾಬಿ ಋತುವಿನಲ್ಲಿ ರಸಗೊಬ್ಬರ ಲಭ್ಯತೆಗಾಗಿ ಅಗತ್ಯ ಕ್ರಮ
- ಸಾಮಾನ್ಯ ಪ್ರಜೆಯ ಅಗತ್ಯತೆಗಳ ಬಗ್ಗೆ ಪ್ರಧಾನಿ ಅವಲೋಕನ
- ಸಾರ್ವಜನಿಕರಿಗೆ ಯಾವುದೇ ವದಂತಿ ಮತ್ತು ಸುಳ್ಳು ಸುದ್ದಿ ಹರಡುವುದನ್ನು ತಡೆಗಟ್ಟಲು ಪ್ರಧಾನಿ ಕರೆ
- ವಿದ್ಯುತ್ ಸ್ಥಾವರಗಳಲ್ಲಿ ಕಲ್ಲಿದ್ದಲು ಸಂಗ್ರಹಕ್ಕಾಗಿ ಸಲಹೆ

ನುಸುಳುಕೋರರ ರಕ್ಷಕ ಕಾಂಗ್ರೆಸ್: ಮೋದಿ

ಪುಟ ೧➡ **ಕಾನೂನು ತರಲು ಮುಂದಾಗಿದ್ದ ಕಾಂಗ್ರೆಸ್:** 2014ರಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವ ಮುನ್ನ ಕಾಂಗ್ರೆಸ್ ಕೇಂದ್ರದಲ್ಲಿ ಹೊಸ ಕಾನೂನು ತರಲು ಮುಂದಾಗಿತ್ತು. ಆದರೆ ಬಿಜೆಪಿ ನೇತೃತ್ವದ ಎನ್‌ಡಿಎ ಅದನ್ನು ವಿರೋಧಿಸಿತು.ಅಸ್ಸಾಂನಲ್ಲಿ ಅಕ್ರಮ ನುಸುಳುಕೋರರನ್ನು ರಕ್ಷಿಸುವುದಕ್ಕಾಗಿ ಹೊಸ ಕಾನೂನು ತರುವುದಾಗಿ ಕಾಂಗ್ರೆಸ್ ನಾಯಕರು ಬಹಿರಂಗವಾಗಿ ಹೇಳುತ್ತಿದ್ದು, ಇಂತಹ ಅಕ್ರಮ ನುಸುಳುವಿಕೆಯನ್ನು ಬೆಂಬಲಿಸುತ್ತಿದ್ದಾರೆ ಎಂದು ಮೋದಿ ಬೊಟ್ಟು ಮಾಡಿದರು.

ದೇಶ ವಿಭಜನೆ ವೇಳೆ ಮುಸ್ಲಿಂ ಲೀಗ್ ಏನು ಮಾಡಿತ್ತೋ ಅದೇ ರೀತಿ ಈಗ ಗ್ರ್ಯಾಂಡ್ ಓಲ್ಡ್ ಪಾರ್ಟಿ ಕಾಂಗ್ರೆಸ್ ದೇಶವನ್ನು ವಿಭಜಿಸಲು ಯತ್ನಿಸುತ್ತಿದೆ .ಅಷ್ಟೇ ಅಲ್ಲದೆ ಬಾಬಾ ಸಾಹೇಬ್ ಅಂಬೇಡ್ಕರ್ ರಚಿಸಿದ ಸಂವಿಧಾನಕ್ಕೇ ದ್ರೋಹ ಬಗೆಯಲು ಮುಂದಾಗಿದೆ ಎಂದು ಅವರು ನುಡಿದರು. ಕಾಂಗ್ರೆಸಿಗೆ ದಿಲ್ಲಿಯಲ್ಲಿ ಮತ್ತು ಅಸ್ಸಾಮಿನಲ್ಲಿ ಎರಡು ಕುಟುಂಬಗಳಿವೆ. ಅವರ ಆದ್ಯತೆ ತಮ್ಮ ಕುಟುಂಬಗಳ ಹಿತಾಸಕ್ತಿಯನ್ನು ರಕ್ಷಿಸಿಕೊಳ್ಳುವುದೇ ವಿನಾ ಜನತೆಯ ಹಿತವನ್ನು ಕಾಯುವುದಲ್ಲ ಎಂದರು. ಈ ಮೂಲಕ ಅವರು ಗಾಂಧಿ ಕುಟುಂಬ ಮತ್ತು ಅಸ್ಸಾಂನಲ್ಲಿನ ಗೊಗೋಯಿ ಕುಟುಂಬಗಳನ್ನು ಬೊಟ್ಟು ಮಾಡಿದರು.

ಸಮಾನ ನಾಗರಿಕ ಸಂಹಿತೆ, ಬುಡಕಟ್ಟು ಜನರ ರಕ್ಷಣೆ: ಬಿಜೆಪಿ ಮತ್ತೊಮ್ಮೆ ಅಧಿಕಾರಕ್ಕೆ ಬಂದಲ್ಲಿ ಸಮಾನ ನಾಗರಿಕ ನೀತಿಸಂಹಿತೆ ಜಾರಿಗೊಳಿಸಿ, ಅಸ್ಸಾಮಿನ ಅನನ್ಯತೆಯನ್ನು ರಕ್ಷಿಸುವುದಕ್ಕಾಗಿ 6ನೇ ಶೆಡ್ಯೂಲ್‌ನಲ್ಲಿ ಬುಡಕಟ್ಟು ಜನರ ಹಿತವನ್ನು ಸಂರಕ್ಷಿಸಲಾಗುವುದು. ಕಳೆದ 10 ವರ್ಷಗಳ ಬಿಜೆಪಿ ಆಡಳಿತವು ಅಸ್ಸಾಮಿನಲ್ಲಿ ಸೇವೆ ಮತ್ತು ಸುಶಾಸನ (ಉತ್ತಮ ಆಡಳಿತ)ದ ನವೋದಯಕ್ಕೆ ನಾಂದಿ ಹಾಡಿದೆ. ಅಸ್ಸಾಂನಲ್ಲಿ ಅತ್ಯಾಧುನಿಕ ಮೂಲಸೌಕರ್ಯಗಳನ್ನು ಬಿಜೆಪಿ ನೇತೃತ್ವದ ಎನ್‌ಡಿಎ ಮಾತ್ರವೇ ನಿರ್ಮಿಸಬಲ್ಲುದು ಎಂಬುದಾಗಿ ಈಗ ಎಲ್ಲರೂ ಹೇಳಲಾರಂಭಿಸಿದ್ದಾರೆ ಎಂದು ಮೋದಿ ತಿಳಿಸಿದರು.

ಕಾಂಗ್ರೆಸ್ ತನ್ನ 60-65 ವರ್ಷಗಳ ಸುದೀರ್ಘ ಆಡಳಿತದಲ್ಲಿ ಕೇವಲ 3 ಸೇತುವೆಗಳನ್ನು ನಿರ್ಮಿಸಿದ್ದರೆ, ಬಿಜೆಪಿ 10 ವರ್ಷಗಳಲ್ಲೇ 5ಸೇತುವೆಗಳನ್ನು ನಿರ್ಮಿಸಿ ಜನಜೀವನ ಸುಲಲಿತವಾಗುವಂತೆ ಮಾಡಿದೆ.ಅಸ್ಸಾಮಿಗೆ ಸಂಪನ್ಮೂಲಗಳ ಕೊರತೆ ಇದ್ದುದಲ್ಲ. ಆದರೆ ಕಾಂಗ್ರೆಸ್ ತನ್ನ ಅಧಿಕಾರದಾಹಕ್ಕಾಗಿ ಅಸ್ಸಾಮಿನ ಜನತೆಯನ್ನು ವಿಭಜಿಸಿ ಬ್ರಹ್ಮಪುತ್ರಾ ನದಿಯ 2 ದಡಗಳ ಜನರನ್ನು ಒಟ್ಟು ಸೇರಲು ಬಿಡಲಿಲ್ಲ.ಆದರೆ ಎನ್‌ಡಿಎ ಸರಕಾರ ಜನರ ಸಂಕಷ್ಟ ಮತ್ತು ನೋವನ್ನು ಅರ್ಥ ಮಾಡಿಕೊಂಡು ಸೇತುವೆಗಳನ್ನು ನಿರ್ಮಿಸಿ ಅವರ ಬದುಕಿನ ಸಂಕಷ್ಟವನ್ನು ನಿವಾರಿಸಲು ಮುಂದಾಯಿತು. ಅಸ್ಸಾಮಿನ ಜನರನ್ನು ಪ್ರವಾಹದಿಂದ ರಕ್ಷಿಸುವುದಕ್ಕಾಗಿ 1800 ಕೋಟಿ. ರೂ.ಗಳ ಸುಬಾನ್‌ಸಿರಿ ಜಲವಿದ್ಯುತ್ ಯೋಜನೆ ಜಾರಿಗೊಳಿಸಲು ಮುಂದಾಗಿದೆ ಎಂದರು.

ಅಸ್ಸಾಮಿನಲ್ಲಿ ಕಳೆದ 10 ವರ್ಷಗಳಲ್ಲಿ 22 ಲಕ್ಷ ಬಡ ಕುಟುಂಬಗಳಿಗೆ ಪಕ್ಕಾ ಮನೆಗಳನ್ನು ನಿರ್ಮಿಸಿಕೊಡಲಾಗಿದೆ .ಮುಂದೆ 15 ಲಕ್ಷ ಕುಟುಂಬಗಳಿಗೆ ಇದೇ ರೀತಿ ಮನೆಗಳನ್ನು ನಿರ್ಮಿಸಿಕೊಡಲಾಗುವುದು. ಡಬಲ್ ಇಂಜಿನ್ ಸರಕಾರವು ಈಗ 3 ಲಕ್ಷ ಮಹಿಳೆಯರನ್ನು 'ಲಖ್ ಪತಿ'ಗಳನ್ನಾಗಿಸಿದ್ದು, ಮುಂದೆ 40 ಲಕ್ಷ ಮಹಿಳೆಯರನ್ನು ಲಖ್‌ಪತಿಗಳನ್ನಾಗಿಸಲಿದೆ.

ಚಹಾ ಎಲೆ ಕೊಯ್ಲು ಮಾಡಿದ ನಮೋ

ಅಸ್ಸಾಂ ವಿಧಾನಸಭೆ ಚುನಾವಣೆ ಪ್ರಚಾರದಲ್ಲಿ ಭಾಗಿಯಾಗಿರುವ ಪ್ರಧಾನಿ ನರೇಂದ್ರ ಮೋದಿಯವರು ಕೆಲ ಹೊತ್ತು ಗುವಾಹಟಿ ಸಮೀಪ ಡಿಬ್ರುಗಢದ ಟೀ ಗಾರ್ಡನ್‌ಗೆ ಭೇಟಿ ನೀಡಿ ಚಹಾದ ಎಲೆಗಳನ್ನು ಕಿತ್ತು ಕಾರ್ಮಿಕ ಮಹಿಳೆಯರ ಯೋಗಕ್ಷೇಮ ವಿಚಾರಿಸಿದರು. ಅವರೊಂದಿಗೆ ಸಂವಾದ ನಡೆಸಿದರು. ನಾನು ಕೂಡ ಚಿಕ್ಕವನಿರುವಾಗ ಚಹಾ ಮಾರಿದ್ದು, ನಿಮ್ಮ ಜೀವನ ವ್ಯವಸ್ಥೆಯನ್ನು ಕಾಣುವಾಗ ನನ್ನ ಅಂದಿನ ಕಷ್ಟದ ದಿನಗಳು ನೆನಪಿಗೆ ಬರುತ್ತವೆ ಎಂದರು. ಪ್ರಧಾನಿ ಮೋದಿಯವರು ತಮ್ಮನ್ನು ಭೇಟಿ ಮಾಡಿ ಮಾತನಾಡಿಸಿದ್ದು, ಚಹಾ ತೋಟದ ಕಾರ್ಮಿಕ ಮಹಿಳೆಯರಲ್ಲಿ ಸಂಭ್ರಮವನ್ನುಂಟು ಮಾಡಿತು. ಈ ಕಾರ್ಮಿಕ ಮಹಿಳೆಯರು ಪ್ರಧಾನಿ ಜತೆ ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದರು.

ಅಪ್ರಾಪ್ತರ ಡಿಜಿಟಲ್ ಕರಡು ಸಿದ್ಧ

ಪುಟ ೧➡ ಸುಮಾರು ಪ್ರತಿ ನಾಲ್ಕು ಮಕ್ಕಳಲ್ಲಿ ಒಬ್ಬರಿಗೆ ಹೆಚ್ಚಾದ ಇಂಟರ್‌ನೆಟ್ ಬಳಕೆಯ ಸಮಸ್ಯೆಗಳ ಲಕ್ಷಣಗಳು ಕಾಣಿಸುತ್ತಿರುವುದರಿಂದ, ಈ ನೀತಿಯಲ್ಲಿ ಹೆಚ್ಚು ಸಮಯದ ಸ್ಕ್ರೀನ್ ಬಳಕೆಯಿಂದ ಉಂಟಾಗುವ ಮಾನಸಿಕ ಆರೋಗ್ಯ ಸಮಸ್ಯೆಗಳಾದ ಆತಂಕ, ನಿದ್ರಾಹೀನತೆ, ಕಡಿಮೆ ಶೈಕ್ಷಣಿಕ ಕಾರ್ಯಕ್ಷಮತೆ ಮತ್ತು ಸಾಮಾಜಿಕ ಪ್ರತ್ಯೇಕತೆ ಇತ್ಯಾದಿ ಸಮಸ್ಯೆಗಳನ್ನು ಗುರುತಿಸಲಾಗಿದ್ದು, ಜತೆಗೆ ಸಾಮಾಜಿಕ ಜಾಲತಾಣಗಳ ಮುಖೇನ ಹೆಚ್ಚುತ್ತಿರುವ ಆನ್‌ಲೈನ್ ಕಿರುಕುಳ, ಮೋಸ ಮತ್ತು ಆನ್‌ಲೈನ್ ದುರುಪಯೋಗ ಸೇರಿದಂತೆ ಸೈಬರ್ ಅಪಾಯಗಳನ್ನು ಪ್ರಮುಖವಾಗಿ ಸೂಚಿಸುತ್ತದೆ ಎಂದರು.

ಶಿಕ್ಷಕರಿಗೆ ತರಬೇತಿ: ಟ್ರೈನಿಂಗ್ ಆಫ್ ಟ್ರೈನರ್ಸ್ (ಟಿಒಟಿ) ಮಾದರಿ ಮೂಲಕ, ತಂತ್ರಜ್ಞಾನ ವ್ಯಸನದ ಕುರಿತು ಸಮಸ್ಯೆಗಳನ್ನು ಆರಂಭದಲ್ಲೇ ಗುರುತಿಸಿ, ಸೂಕ್ತ ಚಿಕಿತ್ಸೆ, ಆರೈಕೆ ಮೂಲಕ ನಿಯಂತ್ರಿಸುವ ಕಾರ್ಯ ಆಗಬೇಕಿದೆ. ಈ ಸಂಬಂಧ ಡಿಜಿಟಲ್ ಬಳಕೆ ಕುರಿತು ಶಾಲೆಯಲ್ಲಿ ತಂತ್ರಜ್ಞಾನ ಬಳಕೆಯ ಕುರಿತು ಮಕ್ಕಳಿಗೆ ಹೇಗೆ ತಿಳಿಸಬೇಕು ಹಾಗೂ ಮನೆಯಲ್ಲಿ ಸಾಮಾಜಿಕ ಜಾಲತಾಣಗಳ ಬಳಕೆ ಹೇಗೆ ಮಾಡಬೇಕು ಎಂಬುದನ್ನು ಕಲಿಸಲು ಶಿಕ್ಷಕರಿಗೆ ತಜ್ಞರಿಂದ ತರಬೇತಿ ನೀಡಲಾಗುವುದು ಹಾಗೂ ಪೋಷಕರಿಗೆ ಜಾಗೃತಿ ಮೂಡಿಸಲಾಗುವುದು ಎಂದರು.

ಬೆಂ-ವಿಜಯಪುರ ಎಕ್ಸ್‌ಪ್ರೆಸ್ ರೈಲಿಗೆ ಆಗ್ರಹ

• **ಬೆಂಗಳೂರು:** ಬೆಂಗಳೂರು ವಿಜಯಪುರ ನಡುವಿನ ಎಕ್ಸ್‌ಪ್ರೆಸ್ ರೈಲು ಸೇವೆ ಆರಂಭಿಸಬೇಕು ಎಂದು ಕೋರಿ ಸಚಿವ ಎಂ.ಬಿ ಪಾಟೀಲ ಅವರು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ವಿ.ಸೋಮಣ್ಣ ಅವರಿಗೆ ಪತ್ರ ಬರೆದಿದ್ದಾರೆ. ಆಲಮಟ್ಟಿ-ವಂದಾಲ್ ನಡುವಿನ 9.60 ಕಿ.ಮೀ. ಉದ್ದ ಜೋಡಿಹಳಿ ಕಾಮಗಾರಿ ಮುಗಿದು, ಸಂಚಾರಕ್ಕೆ ಮುಕ್ತವಾಗಿದೆ. ಇದು ಮುಗಿದರೆ ಬೆಂ.-ವಿಜಯಪುರ ನಡುವೆ ಎಕ್ಸ್‌ಪ್ರೆಸ್ ರೈಲು ಆರಂಭಿಸಬಹುದು ಎಂದು ಹಿಂದಿನ ಭೇಟಿಯಲ್ಲಿ ಹೇಳಿದ್ದಿರಿ. ಈಗ ಇದಕ್ಕೆ ಆದ್ಯತೆ ಕೊಡಬೇಕು ಎಂದರು.

ಒರಾಕಲ್‌ನ 12 ಸಾವಿರ ಉದ್ಯೋಗಿಗಳ ವಜಾ

ಪುಟ ೧➡ ಯಾವುದೇ ಮುನ್ಸೂಚನೆ ಇಲ್ಲದೆ ಇಮೇಲ್ ಮೂಲಕ ವಜಾ ಆದೇಶ ನೀಡಲಾಗಿದ್ದು, ನೋಟಿಸ್ ಅವಧಿಯ ವೇತನ ಮತ್ತು ಸೇವಾ ಅವಧಿಗೆ ಅನುಗುಣವಾಗಿ ಪರಿಹಾರ ಪ್ಯಾಕೇಜ್ ನೀಡಲಾಗುತ್ತಿದೆ. ಮುಂದಿನ ವಾರಗಳಲ್ಲಿ ಮತ್ತೊಂದು ಸುತ್ತಿನ ಉದ್ಯೋಗ ಕಡಿತ ನಡೆಯುವ ಸಾಧ್ಯತೆಯಿದೆ ಎಂದು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಎಐ ಕಡೆಗೆ ಕಾರ್ಯತಂತ್ರ ಬದಲಾವಣೆ: ಒರಾಕಲ್ ಕಂಪನಿ ಸಾಂಪ್ರದಾಯಿಕ ಎಂಟರ್‌ಪ್ರೈಸ್ ಸಾಫ್ಟ್‌ವೇರ್ ಮತ್ತು ಆಂತರಿಕ ಕಾರ್ಯಾಚರಣೆಗಳಿಂದ ಬಂಡವಾಳ ಹಿಂಪಡೆದು, ಎಐ-ಸಿದ್ಧ ಡೇಟಾ ಸೆಂಟರ್‌ಗಳು ಮತ್ತು ಕ್ಲೌಡ್ ಸೇವೆಗಳ ಮೇಲೆ ದೊಡ್ಡ ಪ್ರಮಾಣದಲ್ಲಿ ಹೂಡಿಕೆ ಮಾಡುತ್ತಿದೆ. ಇದರ ಪ್ರಮುಖ ಭಾಗವಾಗಿ 'ಸ್ಟಾರ್‌ಗೇಟ್' ಎಐ ಮೂಲಸೌಕರ್ಯ ಯೋಜನೆಯನ್ನು ಕೈಗೆತ್ತಿಕೊಂಡಿದ್ದು, ಮುಂದಿನ ಪೀಳಿಗೆಯ ಡೇಟಾ ಸೆಂಟರ್ ಸಾಮರ್ಥ್ಯ ಅಭಿವೃದ್ಧಿಪಡಿಸಲು ಮುಂದಾಗಿದೆ. ಮುಂದಿನ ಕೆಲವು ವರ್ಷಗಳಲ್ಲಿ ನೂರಾರು ಬಿಲಿಯನ್ ಡಾಲರ್ ಹೂಡಿಕೆ ಮಾಡುವ ನಿರೀಕ್ಷೆಯಿದೆ.

ಜಾಗತಿಕ ತಂತ್ರಜ್ಞಾನ ಕ್ಷೇತ್ರದ ಟ್ರೆಂಡ್

ಜಾಗತಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ಉದ್ಯೋಗಗಳ ಕಡಿತ, ಎಐ ಆಧಾರಿತ ಬೆಳವಣಿಗೆಗೆ ಹಣ ಹೂಡಿಕೆ ಸಾಮಾನ್ಯವಾಗುತ್ತಿದೆ. ಅಮೆಜಾನ್ ಮತ್ತು ಆಲ್ಫಾಬೆಟ್‌ನಂತಹ ಕಂಪನಿಗಳಿಗೆ ಪೈಪೋಟಿ ನೀಡಲು ಒರಾಕಲ್ ತನ್ನ ಕ್ಲೌಡ್ ಮೂಲ ಸೌಕರ್ಯ ವಿಸ್ತರಿಸುತ್ತಿದೆ. ಎಐ ಆರ್ಥಿಕತೆಯಲ್ಲಿ ಪ್ರಮುಖ ಮೂಲ ಸೌಕರ್ಯ ಪೂರೈಕೆದಾರನೆಂದು ಗುರುತಿಸಿಕೊಳ್ಳಲು ಕಂಪನಿ ಇತ್ತೀಚೆಗೆ ಜನರೇಟಿವ್ ಎಐ ತಂತ್ರಜ್ಞಾನ ಅಳವಡಿಸಿಕೊಂಡಿದೆ.

ವ್ಯಕ್ತಿತ್ವ ನಿರ್ಮಾಣಕ್ಕೆ ಶಿಕ್ಷಣವೇ ಬುನಾದಿ

ಪುಟ ೧➡ ರಾಷ್ಟ್ರ ನಿರ್ಮಾಣ, ಲೋಕೋಪಕಾರ ಮತ್ತು ಕರ್ತವ್ಯ ನಿಷ್ಠೆಯ ಮಾರ್ಗವನ್ನು ಅನುಸರಿಸಿದರೆ ಮಾತ್ರ ನಾವು ಶ್ರೀ ಶಿವಕುಮಾರ ಸ್ವಾಮೀಜಿ ಅವರಿಗೆ ನಿಜವಾದ ಗೌರವ ಸಲ್ಲಿಸಿದಂತಾಗುತ್ತದೆ ಎಂದು ಅವರು ಹೇಳಿದರು.

ಕುವೆಂಪು ವಿರಚಿತ ನಾಡಗೀತೆಗೆ ರಾಷ್ಟ್ರಪತಿ ನಮನ: ವಂದೇ ಮಾತರಂ ರಾಷ್ಟ್ರೀಯ ಗೀತೆಯ ರಚನೆಗೆ 150 ವರ್ಷಗಳು ಸಂದಿದ್ದು, ದೇಶಾದ್ಯಂತ 150ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿದ್ದೇವೆ. ಇದೇ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿದ ರಾಷ್ಟ್ರಕವಿ ಕುವೆಂಪು ಅವರು ರಚಿಸಿದ ಕರ್ನಾಟಕ ಗೀತೆಯಲ್ಲಿ ಕರ್ನಾಟಕ ಮಾತೆಯನ್ನು ಭಾರತ ಮಾತೆಯ ಮಗಳು ಎಂದು ವರ್ಣಿಸಿರುವುದು ನೆನಪಾಗುತ್ತದೆ ಎಂದ ಅವರು, 'ಭಾರತ ಜನನಿಯ ತನುಜಾತೆ, ಜಯಹೇ ಕರ್ನಾಟಕ ಮಾತೆ' ಎಂಬ ಆ ಅಮರ ವಾಣಿಯು ದೇಶ ವಾಸಿಗಳ ಹೃದಯದಲ್ಲಿ ಕರ್ನಾಟಕದ ಬಗ್ಗೆ ಹಾಗೂ ರಾಷ್ಟ್ರೀಯ ಏಕತೆಯ ಬಗ್ಗೆ ಇರುವ ಹೆಮ್ಮೆಯ ಭಾವನೆಯನ್ನು ಜಾಗೃತಗೊಳಿಸುತ್ತದೆ. ಈ ಮೂಲಕ ಗೀತೆಯ ಭಾರತೀಯ ಮೌಲ್ಯಗಳ ಸಮಗ್ರತೆ ಮತ್ತು ಔದಾರ್ಯದ ವಿವರಣೆಯನ್ನು ಒದಗಿಸುತ್ತದೆ. ಇದೇ ಭಾರತೀಯ ಮೌಲ್ಯಗಳು ಲಿಂಗೈಕ್ಯ ಶ್ರೀಗಳ ಅಸಾಧಾರಣ ಕೊಡುಗೆಯಲ್ಲಿಯೂ ಪ್ರತಿಫಲಿಸುತ್ತವೆ ಎಂದರು.

ಶ್ರೀ ಶಿವಕುಮಾರ ಸ್ವಾಮೀಜಿಯವರ ಸತ್ಕಾರ್ಯಗಳ ಪರಂಪರೆಯನ್ನು ಇಂದಿನ ಶ್ರೀಗಳು ಮುಂದುವರೆಸಿಕೊಂಡು ಹೋಗುತ್ತಿದ್ದು, ಮಠದೊಂದಿಗಿನ ಭಕ್ತರ ಬಾಂಧವ್ಯ ಶ್ರೀಮಠದಿಂದ ಗ್ರಾಮೀಣ ಮಕ್ಕಳಿಗೆ ಮತ್ತು ಗ್ರಾಮೀಣ ಜನತೆಗೆ ಸಿಗುತ್ತಿರುವ ತ್ರಿವಿಧ ದಾಸೋಹ ಮತ್ತು ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೂ ಸಿಗುತ್ತಿರುವ ವಿಶೇಷ ಸೌಲಭ್ಯಗಳು ಮತ್ತಷ್ಟು ಉನ್ನತ ಮಟ್ಟದಲ್ಲಿ ನಡೆಯಲಿ ಎಂದು ಆಶಿಸಿದರು.

ಆದರ್ಶಪ್ರಾಯರು: ಗೃಹ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಜಿ.ಪರಮೇಶ್ವರ ಮಾತನಾಡಿ, ಲಿಂಗೈಕ್ಯ ಡಾ.ಶ್ರೀ ಶಿವಕುಮಾರ ಸ್ವಾಮೀಜಿ ಅವರು ಆದರ್ಶ ಜೀವಿಗಳು. ಸರಳತೆ ಮತ್ತು ಮಾನವೀಯತೆಯ ಮೂಲಕ ಬಡವರಿಗೆ ತ್ರಿವಿಧ ದಾಸೋಹದ ಮೂಲಕ ಸೇವೆಯನ್ನು ಮಾಡುವ ಮೂಲಕ ಆದರ್ಶಪ್ರಾಯರಾಗಿದ್ದಾರೆ ಎಂದರು.

ಸಾನಿಧ್ಯ ವಹಿಸಿದ್ದ ಶ್ರೀ ಸಿದ್ಧಗಂಗಾ ಮಠದ ಮಠಾಧ್ಯಕ್ಷರಾದ ಶ್ರೀ ಸಿದ್ದಲಿಂಗ ಮಹಾಸ್ವಾಮೀಜಿ ಮಾತನಾಡಿ, 111 ವರ್ಷಗಳ ಸುದೀರ್ಘ ತಮ್ಮ ಜೀವಿತಾವಧಿಯಲ್ಲಿ 79 ವರ್ಷಗಳ ಸುದೀರ್ಘ ಸೇವೆಯನ್ನು ಶ್ರೀ ಶಿವಕುಮಾರ ಸ್ವಾಮೀಜಿ ಅವರು ಸಮಾಜ ಸೇವೆಗಾಗಿಯೇ ಮುಡಿಪಾಗಿಟ್ಟಿದ್ದರು. ಇದು ಅವರ ಆದರ್ಶ, ಆಚಾರ, ವಿಚಾರ, ವಿಸ್ಮಯ, ಪವಾಡ ಎಂದರೆ ತಪ್ಪಾಗಲಾರದು. ಗ್ರಾಮಾಂತರ ಭಾಗದ ಬಡ ಮಕ್ಕಳಿಗೆ, ಹೆಣ್ಣು ಮಕ್ಕಳಿಗೆ ಶಿಕ್ಷಣ ಸಿಗಬೇಕೆಂಬುದು ಶ್ರೀಗಳ ಮಹತ್ತರ ಆಶಯವಾಗಿತ್ತು. ಈ ನಿಟ್ಟಿನಲ್ಲಿ ಭಕ್ತರಿಗೆ ಸನ್ಮಾರ್ಗವನ್ನು ತೋರುವ ಮೂಲಕ ಶ್ರೀ ಮಠವು ನಿರಂತರ ಸೇವೆಯನ್ನು ಮುಂದುವರಿಸಿದೆ ಎಂದರು. ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ರಾಜ್ಯಸಚಿವ ವಿ. ಸೋಮಣ್ಣ ಅವರು ಗಣ್ಯರನ್ನು ಸ್ವಾಗತಿಸಿದರು. ಕಾರ್ಯಕ್ರಮದಲ್ಲಿ ಗೌರವಾನ್ವಿತ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್, ಸಚಿವರಾದ ಎಂ.ಬಿ. ಪಾಟೀಲ್, ಲಕ್ಷ್ಮೀ ಹೆಬ್ಬಾಳ್ಕರ್ ಉಪಸ್ಥಿತರಿದ್ದರು.


ಶಿಷ್ಟಾಚಾರ ಹೆಸರಲ್ಲಿ ಅವಮಾನ: ಭಕ್ತರ ಆಕ್ರೋಶ

• **ತುಮಕೂರು:** ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಭಾಗವಹಿಸಿದ್ದ ಡಾ.ಶಿವಕುಮಾರ ಸ್ವಾಮೀಜಿ ಅವರ 119ನೇ ಜನ್ಮ ವರ್ಧಂತಿ ಮಹೋತ್ಸವದ ವೇದಿಕೆ ಕಾರ್ಯಕ್ರಮದಲ್ಲಿ ರಾಷ್ಟ್ರಪತಿಗಳ ಉಪಸ್ಥಿತಿಯಲ್ಲೇ ವೇದಿಕೆ ಆಸನದ ಶಿಷ್ಟಾಚಾರ ಪಾಲನೆಗೆ ಸಂಬಂಧಿಸಿದಂತೆ ತೀವ್ರ ಗೊಂದಲ ಉಂಟಾಯಿತು. ಶಿಷ್ಟಾಚಾರ ಪಾಲನೆ ನೆಪದಲ್ಲಿ ಶ್ರೀ ಸಿದ್ದಲಿಂಗ ಸ್ವಾಮೀಜಿ ಅವರನ್ನು ವೇದಿಕೆಯ ಮೇಲೆ ಕೊನೆಯ ಆಸನದಲ್ಲಿ ಕೂರಿಸಿದ್ದಕ್ಕೆ ಭಕ್ತರು ಆಕ್ರೋಶ ವ್ಯಕ್ತಪಡಿಸಿದರು. ಸುಮಾರು ಹತ್ತು ನಿಮಿಷಗಳ ಕಾಲ ನಡೆದ ಈ ಹಗ್ಗಜಗ್ಗಾಟದಿಂದಾಗಿ ಸಿದ್ಧಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿಯವರು ವೇದಿಕೆಯ ಕೊನೆಯಲ್ಲಿ ಕುಳಿತುಕೊಳ್ಳಬೇಕಾದ ಪ್ರಸಂಗ ಎದುರಾಯಿತು. ನಿಯಮದಂತೆ ರಾಷ್ಟ್ರಪತಿಗಳ ಪಕ್ಕದಲ್ಲಿ ಸಿದ್ದಲಿಂಗ ಸ್ವಾಮೀಜಿಯವರು ಕುಳಿತುಕೊಳ್ಳಲು ಅವಕಾಶ ನೀಡಬೇಕು ಎಂದು ಕೇಂದ್ರ ಸಚಿವರಾದ ಪ್ರಲ್ಹಾದ್ ಜೋಶಿ ಹಾಗೂ ವಿ. ಸೋಮಣ್ಣ ಅವರು ಭದ್ರತಾ ಸಿಬ್ಬಂದಿ ಬಳಿ ಮನವಿ ಮಾಡಿಕೊಂಡರು. ಆದರೆ, ರಾಷ್ಟ್ರಪತಿಗಳ ಭದ್ರತಾ ಸಿಬ್ಬಂದಿ ಈ ಮನವಿಗೆ ಒಪ್ಪಲಿಲ್ಲ. ಶಿಷ್ಟಾಚಾರದ ಪಟ್ಟಿಯ ಪ್ರಕಾರವೇ ಆಸನಗಳನ್ನು ಕಲ್ಪಿಸಬೇಕು ಎಂದು ಪಟ್ಟು ಹಿಡಿದರು. ಕೇಂದ್ರ ಸಚಿವರು ಎಷ್ಟೇ ಪ್ರಯತ್ನಿಸಿದರೂ ಭದ್ರತಾ ಸಿಬ್ಬಂದಿ ಮಾತ್ರ ತಮ್ಮ ಪಟ್ಟು ಸಡಿಲಿಸಲಿಲ್ಲ. ಇದರಿಂದಾಗಿ ವೇದಿಕೆಯ ಮೇಲೆ ಕೆಲಕಾಲ ಅಸಮಾಧಾನ ಮತ್ತು ಗೊಂದಲದ ವಾತಾವರಣ ನಿರ್ಮಾಣವಾಗಿತ್ತು.

ಆಧುನಿಕ ಸಂಶೋಧನಾ ಕೇಂದ್ರ

ಕೇಂದ್ರ ಗ್ರಾಹಕ ವ್ಯವಹಾರಗಳು ಮತ್ತು ಆಹಾರ ಸಚಿವ ಪ್ರಹ್ಲಾದ ಜೋಶಿ ಮಾತನಾಡಿ, ಶ್ರೀ ಸಿದ್ಧಗಂಗಾ ಮಠವು ಕೇವಲ ಆಧ್ಯಾತ್ಮಿಕ ಕೇಂದ್ರವಲ್ಲದೆ, ಆಧುನಿಕ ಸಂಶೋಧನಾ ಕೇಂದ್ರವಾಗಿದೆ. ಸಂಸ್ಕಾರವನ್ನು ಕೊಡುವ ಮೂಲಕ ಭಕ್ತರಿಗೆ ಸನ್ಮಾರ್ಗವನ್ನು ತೋರಿಸುವ ವಿಶ್ವದ ಏಕೈಕ ಮಠ. ಇದಕ್ಕೆ ಕಾರಣ ಶ್ರೀ ಶಿವಕುಮಾರ ಸ್ವಾಮೀಜಿ ಅವರಿಗೆ ಹಸಿವಿನ ಅರ್ಥವಾಗಿತ್ತು. ಜಾತಿ, ಧರ್ಮವನ್ನು ಮೀರಿ ಬಡವರು ಹಸಿವಿನಿಂದ ನರಳಬಾರದು. ಹಣವಿಲ್ಲದವರು ಜ್ಞಾನದಿಂದ ವಂಚಿತರಾಗಬಾರದು ಎಂಬ ಧ್ಯೇಯವನ್ನು ಇಟ್ಟುಕೊಂಡಿರುವ ವಿಶ್ವದ ಏಕೈಕ ಮಠ ಇದಾಗಿದೆ. ಈ ಮೂಲಕ ಲಿಂಗೈಕ್ಯ ಶ್ರೀಗಳು ಮನುಷ್ಯನಿಂದ ಮಹಾದೇವರಾದರು ಎಂದರು.

ತೃತೀಯ ಭಾಷೆಗೆ ಅಂಕಗಳ ಬದಲಿಗೆ ಗ್ರೇಡ್
ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಕೆ



ಬೆಂಗಳೂರು: ಕರ್ನಾಟಕ ರಾಜ್ಯ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆಗೆ ಅಂಕಗಳ ಬದಲಿಗೆ ಗ್ರೇಡ್ ನೀಡುವುದಕ್ಕೆ ಮುಂದಾಗಿರುವ ರಾಜ್ಯ ಸರ್ಕಾರದ ಪ್ರಸ್ತಾವ ಪ್ರಶ್ನಿಸಿ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಕೆಯಾಗಿದೆ.

ಬೆಂಗಳೂರಿನ ಎಚ್.ಎನ್. ಚಂದನಾ, ಎಸ್.ವೆಂಕಟೇಶ್ ಅವರು ಅರ್ಜಿ ಸಲ್ಲಿಸಿದ್ದು, ಶಾಲಾ ಶಿಕ್ಷಣ ಇಲಾಖೆ ಕಾರ್ಯದರ್ಶಿ, ಆಯುಕ್ತರು, ಶಿಕ್ಷಣ ಇಲಾಖೆ ಸಚಿವ ಮಧು ಬಂಗಾರಪ್ಪ ಅವರನ್ನು ಪ್ರತಿವಾದಿಗಳನ್ನಾಗಿಸಲಾಗಿದೆ. ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಇತ್ತೀಚೆಗೆ ಸುದ್ದಿಗೋಷ್ಠಿಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆ ಕಡ್ಡಾಯವಲ್ಲ. ಈ ಭಾಷೆಗಳಿಗೆ ಅಂಕಗಳ ಬದಲಿಗೆ ಗ್ರೇಡ್ ನೀಡಲಾಗುತ್ತದೆ. ಪ್ರಸ್ತುತ ಶೈಕ್ಷಣಿಕ ವರ್ಷದಿಂದಲೇ ದ್ವಿಭಾಷಾ ಸೂತ್ರವನ್ನು ಜಾರಿಗೆ ತರವುದಾಗಿ ತಿಳಿಸಿದ್ದಾರೆ. ಅಲ್ಲದೆ, ಸಚಿವರು ಈ ನಿರ್ಧಾರವನ್ನು ಪ್ರಕಟಿಸುವುದಕ್ಕೂ ಮುನ್ನ ಸಾರ್ವಜನಿಕವಾಗಿ ಚರ್ಚೆ ನಡೆಸಿಲ್ಲ. ಸಚಿವ ಸಂಪುಟದ ಅನುಮೋದನೆ ಪಡೆದಿಲ್ಲ ಹಾಗೂ ಭಾಷಾ ತಜ್ಞರ ಸಲಹೆ ಇಲ್ಲದೇ ಏಕಪಕ್ಷೀಯವಾಗಿ ನಿರ್ಧಾರ ತೆಗೆದುಕೊಂಡಿದ್ದಾರೆ ಎಂದು ಆಕ್ಷೇಪಿಸಲಾಗಿದೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಯುತ್ತಿರುವ ಸಂದರ್ಭದಲ್ಲಿಯೇ ಈ ರೀತಿಯ ಹೇಳಿಕೆ ಹೊರಬಿದ್ದಿರುವುದರಿಂದ ವಿದ್ಯಾರ್ಥಿಗಳು ಗೊಂದಲಕ್ಕೀಡಾಗಿದ್ದಾರೆ. ಈವರೆಗೂ ಈ ಕುರಿತಂತೆ ಯಾವುದೇ ಅಧಿಕೃತ ಸರ್ಕಾರಿ ಆದೇಶ ಅಥವಾ ಅಧಿಸೂಚನೆ ಹೊರಬಂದಿಲ್ಲ. ಸಚಿವರ ಈ ನಿರ್ಧಾರಕ್ಕಾಗಿ ಸಾರ್ವಜನಿಕರಿಂದ ವ್ಯಾಪಕ ವಿರೋಧ ವ್ಯಕ್ತವಾಗಿದೆ ಎಂದು ವಿವರಿಸಲಾಗಿದೆ. ಸಚಿವರ ಈ ನಿರ್ಧಾರ ಸಂವಿಧಾನದ 14ನೇ ವಿಧಿಯಡಿ ಸಮಾನತೆ ಹಕ್ಕಿನ ಉಲ್ಲಂಘನೆಯಾಗಿದೆ.



ಮೇಲುಕೋಟೆ ಕಲ್ಯಾಣಿಯಲ್ಲಿ ಝುಗಮಗಿಸುವ ದೀಪಾಲಂಕಾರದ ನಡುವೆ ಶ್ರೀ ಚಲುವನಾರಾಯಣಸ್ವಾಮಿ ವೈರಮುಡಿ ತೆಪ್ಪೋತ್ಸವ ಬುಧವಾವ ರಾತ್ರಿ ಅದ್ದೂರಿಯಾಗಿ ನೆರವೇರಿತು. ನೂರಾರು ಭಕ್ತರು ಉತ್ಸವಕ್ಕೆ ಸಾಕ್ಷಿಯಾದರು.

ವಿದ್ಯಾರ್ಥಿಗಳಿಗೆ ದ್ವಿಭಾಷಾ ನೀತಿ: ಎಬಿವಿಪಿ ಖಂಡನೆ

ಬೆಂಗಳೂರು: ಪರೀಕ್ಷೆಯ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ದ್ವಿಭಾಷಾ ನೀತಿ ಎಂಬ ಗೊಂದಲವನ್ನು ಸೃಷ್ಟಿಸಿ, ಕನಿಷ್ಠ ಸಾಮಾನ್ಯ ಜ್ಞಾನವೂ ಇಲ್ಲದ ರೀತಿಯಲ್ಲಿ ವರ್ತಿಸಿ ವಿದ್ಯಾರ್ಥಿ ಸಮೂಹವನ್ನು ಹಾದಿ ತಪ್ಪಿಸುವಂತಹ ನಿರ್ಧಾರವನ್ನು ತೆಗೆದುಕೊಂಡಿರುವ ಸರ್ಕಾರದ ಕ್ರಮವನ್ನು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್(ಎಬಿವಿಪಿ) ತೀವ್ರವಾಗಿ ಖಂಡಿಸಿದೆ.

ಈ ಬಗ್ಗೆ ಮಾಧ್ಯಮ ಪ್ರಕಟಣೆ ನೀಡಿರುವ ಎಬಿವಿಪಿ, ತ್ರಿಭಾಷಾ ಸೂತ್ರ ಎಂಬುವುದು ಯಾವುದೋ ಭಾಷೆಯ ಹೇರಿಕೆಗಾಗಿಯೋ ಅಥವಾ ಯಾವುದೋ ಹೋರಾಟದ ಫಲವಾಗಿ ಬಂದದ್ದಲ್ಲ, ಶಿಕ್ಷಣ ತಜ್ಞರು ಮತ್ತು ಶೈಕ್ಷಣಿಕ ಪರಿಸರದ ಅನೇಕ ವರ್ಷಗಳ ಯೋಜನೆಯೊಂದಾಗಿ ಮಕ್ಕಳ ಪ್ರತಿಭೆಯನ್ನು ಅನಾವರಣ ಗೊಳಿಸುವುದಕ್ಕಾಗಿ ಬಂದಂತಹ ನೀತಿಯಾಗಿದೆ. ಆದರೆ ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕಾದ ಸರ್ಕಾರವು ಪರೀಕ್ಷೆಯ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ದ್ವಿಭಾಷಾ ನೀತಿ ಎಂಬ ಗೊಂದಲವನ್ನು ಸೃಷ್ಟಿಸಿ, ಕನಿಷ್ಠ ಸಾಮಾನ್ಯ ಜ್ಞಾನವು ಇಲ್ಲದ ರೀತಿಯಲ್ಲಿ ವರ್ತಿಸಿ ವಿದ್ಯಾರ್ಥಿ ಸಮೂಹವನ್ನು ಹಾದಿ ತಪ್ಪಿಸುವಂತಹ ನಿರ್ಧಾರವನ್ನು ತೆಗೆದುಕೊಂಡಿದೆ ಎಂದು ದೂರಿದೆ.

ದ್ವಿಭಾಷಾ ಸೂತ್ರವನ್ನು ತರಬೇಕೆಂಬ ಯೋಜನೆ ಸರ್ಕಾರದ ಬಳಿ ಇದ್ದದ್ದೇ ಆದಲ್ಲಿ, ಈ ಮೊದಲೇ ಘೋಷಣೆ ಮಾಡಿ, ಸಾರ್ವಜನಿಕವಾಗಿ ಚರ್ಚೆಗೆ ಅವಕಾಶ ಮಾಡಿಕೊಡಬೇಕಾಗಿತ್ತು. ಅದನ್ನು ಬಿಟ್ಟು ಯಾರದ್ದೋ ಒತ್ತಡಕ್ಕೆ ಮಣಿದು, ಪರೀಕ್ಷೆ ಸಂದರ್ಭದಲ್ಲೇ ದ್ವಿಭಾಷಾ ನೀತಿಯ ಮುಖಾಂತರ ದೇಶೀಯ ಭಾಷೆಗಳನ್ನು ನಾಶಮಾಡಲು ಹೊರಟಿರುವ ರಾಜ್ಯ ಸರ್ಕಾರದ ನಿಲುವನ್ನು ಎಬಿವಿಪಿ ತೀವ್ರವಾಗಿ ವಿರೋಧಿಸುತ್ತದೆ ಎಂದು ತಿಳಿಸಿದೆ. ಈಗಾಗಲೇ ಆಂಗ್ಲ ಮಾಧ್ಯಮ ಶಾಲೆಗಳ ಹಾವಳಿಯಿಂದ ಕನ್ನಡ ಸೇರಿದಂತೆ ಪ್ರಾದೇಶಿಕ ಭಾಷೆಯ ಕುಂಠಿತವಾಗುತ್ತಿದೆ. ಇಂತಹ ಸಂದರ್ಭದಲ್ಲಿಯೇ ದೇಶೀಯ ಭಾಷೆಗಳ ನಾಶ ಮಾಡುವ ದ್ವಿಭಾಷಾ ನೀತಿಯು ನಮ್ಮ ಮಾತೃಭಾಷೆಯಾದ ಕನ್ನಡಕ್ಕೂ ಸಹ ಹೊಡೆತ ಕೊಡಲಿದೆ ಎಂದು ಸರ್ಕಾರವು ಯೋಚಿಸಬೇಕೆಂದು ಎಬಿವಿಪಿ ಆಗ್ರಹಿಸಿದೆ.

ಕಿರುಸುದ್ದಿ

ಶಿವಮೊಗ್ಗದಲ್ಲಿ ಮಳೆ: ಮನೆಗೆ ನುಗ್ಗಿದ ನೀರು

ಶಿವಮೊಗ್ಗ: ನಗರದಲ್ಲಿ ಮಂಗಳವಾರ ತಡರಾತ್ರಿ ಸುರಿದ ಮಳೆಯಿಂದ ವಿವಿಧೆಡೆ ಸಾಕಷ್ಟು ಹಾನಿಯಾಗಿದೆ. ಭಾರೀ ಪ್ರಮಾಣದ ಗುಡುಗು, ಸಿಡಿಲಿನೊಂದಿಗೆ ಸುರಿದ ಮಳೆ ವಿವಿಧೆಡೆ ಪ್ರವಾಹ ಸೃಷ್ಟಿಸಿತ್ತು. ಶರಾವತಿ ನಗರದಲ್ಲಿ ರಾಜಾ ಕಾಲುವೆ ಸ್ವಚ್ಛಗೊಳಿಸದ ಹಿನ್ನೆಲೆಯಲ್ಲಿ 10.15 ಮನೆಗಳಿಗೆ ಗಲೀಜು ನೀರು ನುಗ್ಗಿತ್ತು. ಇಲ್ಲಿನ 7ನೇ ತಿರುವಿನ ನಿವಾಸಿಗಳಾದ ಗೌರಮ್ಮ, ಮಂಜುನಾಥ್, ಪದ್ಮಮ್ಮ, ಮಾದಯ್ಯ, ಲಿಲ್ಲಿ ಎಂಬುವರ ಮನೆಗೆ ನೀರು ನುಗ್ಗಿದ ಕಾರಣ ಫ್ರಿಡ್ಜ್, ಟಿವಿ, ವಾಷಿಂಗ್ ಮೆಷಿನ್ ಮೊದಲಾದ ಯಂತ್ರೋಪಕರಣಗಳು ಹಾಳಾಗಿವೆ. ಇಲ್ಲಿನ ಮನೆಗಳು ತಗ್ಗಿನ ಪ್ರದೇಶದಲ್ಲಿರುವುದರಿಂದ ಮಳೆ ನೀರು ಸಲೀಸಾಗಿ ನುಗ್ಗಿದೆ. ಸಾಗರ ರಸ್ತೆಯ ಎಸ್.ಎಸ್ ಇಂಡಸ್ಟ್ರೀಸ್‌ಗೆ ಭಾರೀ ಪ್ರಮಾಣದ ನೀರು ನುಗ್ಗಿ ಜಲಾವೃತವಾಗಿತ್ತು. ಮುಳ್ಳು ತಂತಿ ಮತ್ತು ಚೈನ್ ಲಿಂಕ್ ಮೆಶ್ ಇಲ್ಲಿ ತಯಾರಿಸಲಾಗುತ್ತದೆ. ತಯಾರಿಸಲಾಗಿದ್ದ ಲಕ್ಷಾಂತರ ರೂ ಮೌಲ್ಯದ ತಂತಿ ಮತ್ತು ಇತರೆ ವಸ್ತುಗಳಿಗೆ ಮಳೆ ನೀರು ನುಗ್ಗಿ ಹಾನಿಗೊಳಗಾಗಿದೆ.

ಸರ್ಕಾರ ಜನಹಿತ ಮರೆತಿದೆ: ಬಿ.ಎಸ್. ಯಡಿಯೂರಪ್ಪ

ದಾವಣಗೆರೆ: ರಾಜ್ಯದ ಕಾಂಗ್ರೆಸ್ ಸರ್ಕಾರ ಜನಹಿತವನ್ನು ಮರೆತಿದೆ. ಸರ್ಕಾರದ ಖಜಾನೆಯನ್ನು ಲೂಟಿ ಮಾಡುವಂತಹ ಹಗಲು ದರೋಡೆಯಲ್ಲಿ ಸಿದ್ದರಾಮಯ್ಯ ನಿರತರಾಗಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಆರೋಪ ಮಾಡಿದರು. ದಾವಣಗೆರೆ ದಕ್ಷಿಣ ಕ್ಷೇತ್ರದ ಚುನಾವಣಾ ಪ್ರಚಾರಕ್ಕೆಂದು ಆಗಮಿಸಿದ್ದ ಅವರು ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಬಿಜೆಪಿ ಅಭ್ಯರ್ಥಿಪರ ಮತಯಾಚನೆ ಮಾಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು. ದಾವಣಗೆರೆ ಹಾಗೂ ಬಾಗಲಕೋಟೆ ಎರಡೂ ಕಡೆ ನಿರೀಕ್ಷೆ ಮೀರಿದ ಜನಸ್ಪಂದನೆ ವ್ಯಕ್ತವಾಗುತ್ತಿದೆ. ಬಾಗಲಕೋಟೆಯಲ್ಲೂ ಎರಡು ದಿನ ಪ್ರಚಾರ ಮಾಡುತ್ತೇನೆ. ಜನ ಈ ಭ್ರಷ್ಟಾಚಾರದ ಸರ್ಕಾರದಿಂದ ಬೇಸತ್ತು ಹೋಗಿದ್ದಾರೆ. ರಾಜ್ಯ ಸರ್ಕಾರದ ಮೇಲಿನ ಜನರ ಆಕ್ರೋಶದಿಂದಾಗಿ ಎರಡೂ ಕ್ಷೇತ್ರದ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳು ಜಯ ಸಾಧಿಸಲಿದ್ದಾರೆ ಎಂದರು.

ಪ್ಲಾಟ್‌ಫಾರ್ಮ್‌ಗೆ ನುಗ್ಗಿದ ಬಸ್: ಮಗು ಸಾವು

ಹಾವೇರಿ: ಕೇಂದ್ರ ಬಸ್ ನಿಲ್ದಾಣದಲ್ಲಿ ಬಸ್ಸಿಗಾಗಿ ಕಾಯುತ್ತಾ ನಿಂತಿದ್ದ ಪ್ರಯಾಣಿಕರ ಮೇಲೆ ದಿಢೀರನೇ ಹರಿದ ಬಸ್‌ನಿಂದಾಗಿ ತೀವ್ರವಾಗಿ ಗಾಯಗೊಂಡಿದ್ದ ಎರಡು ವರ್ಷದ ಬಾಲಕ ಸಾವನ್ನಪ್ಪಿ ನಾಲ್ವರಿಗೆ ಗಂಭೀರ ಗಾಯಗಳಾದ ಘಟನೆ ಬುಧವಾರ ನಡೆದಿದೆ. ಈ ಅಪಘಾತದಲ್ಲಿ ಸವಣೂರು ಪಟ್ಟಣದ ಹಜರತ್ ಅಲಿ ಇಸ್ಮಾಯಿಲ್ ರಾಯಚೂರ (2 ವರ್ಷ)ದ ಮಗು ಸಾವನ್ನಪ್ಪಿದೆ. ಗಂಭೀರ ಗಾಯಗಳಾಗಿದ್ದು, ಪ್ರಾಥಮಿಕ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗೆ ಹುಬ್ಬಳ್ಳಿಯ ಕಿಮ್ಸ್‌ಗೆ ಕಳಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಿಸದೇ ಮಗು ಸಾವನ್ನಪ್ಪಿದೆ. ಅಲ್ಲದೇ ವಾಸುದೇವ ಗುರುನಾಥಪ್ಪ ಉತಳೇಕರ (44), ಹರ್ಷಾ ವಾಸುದೇವ ಉತಳೇಕರ (6), ಕಾವ್ಯಾಂಜಲಿ ವಿಷ್ಣು ಉತಳೇಕರ (39) ಹಾಗೂ ಅರ್ಬಾಜಖಾನ ಸೌದಾಗರ (13) ಎಂಬುವರಿಗೆ ಗಾಯಗಳಾಗಿದ್ದು ಇವರಿಗೆ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಗಾಯಾಳುಗಳು ಬಂಕಾಪುರ ಪಟ್ಟಣದ ನಿವಾಸಿಗಳಾಗಿದ್ದು, ಚಾಲಕ-ಕಂಡಕ್ಟರ್ ಮಂಜುನಾಥ ರಾಜಪ್ಪ ಅವರ ಮೇಲೆ ಎಫ್‌ಐಆರ್ ದಾಖಲಿ ಸಲಾಗಿದೆ. ಘಟನಾ ಸ್ಥಳಕ್ಕೆ ಪೊಲೀಸರ ಭೇಟಿ, ಪರಿಶೀಲನೆ ನಡೆಸಿದ್ದು, ಹಾವೇರಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

ಅಭಿವೃದ್ಧಿಗಾಗಿ ಕಾಂಗ್ರೆಸ್‌ಗೆ ಬೆಂಬಲ: ಸಿಎಂ ಸಿದ್ದರಾಮಯ್ಯ ವಿಶ್ವಾಸ
ಕೈಗೆ ದೊಡ್ಡ ಅಂತರದ ಗೆಲುವು

ದಾವಣಗೆರೆ: ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಗಳಲ್ಲಿ ಕಾಂಗ್ರೆಸ್ ದೊಡ್ಡ ಅಂತರದ ಗೆಲುವು ಸಾಧಿಸಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಶಾಮನೂರು ಶಿವಶಂಕರಪ್ಪ ಹಾಗೂ ಬಾಗಲಕೋಟೆಯಲ್ಲಿ ಹೆಚ್. ವೈ. ಮೇಟಿ ಕ್ಷೇತ್ರದ ಅಭಿವೃದ್ಧಿಗೆ ಗಣನೀಯ ಕೊಡುಗೆ ನೀಡಿದ್ದಾರೆ. ಅಭಿವೃದ್ಧಿ ಕಾರ್ಯಕ್ರಮ ಮತ್ತು ಗ್ಯಾರಂಟಿ ಯೋಜನೆಗಳು ಕಾಂಗ್ರೆಸ್ ಪಕ್ಷದ ನೆರವಿಗೆ ಬಂದಿವೆ. ಎರಡೂ ಕ್ಷೇತ್ರಗಳಲ್ಲಿ ಜನರು ಬೆಂಬಲಿಸುವ ವಿಶ್ವಾಸವಿದೆ. ಸಚಿವ ಜಮೀರ್ ಅಹ್ಮದ್ ಖಾನ್ ಕೂಡ ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಲಿದ್ದಾರೆ ಎಂದರು.

ಬಿಜೆಪಿಯವರು ರಾಜ್ಯದಲ್ಲಿ 4 ವರ್ಷ ಅಧಿಕಾರದಲ್ಲಿದ್ದಾಗಲೂ ದಾವಣಗೆರೆ, ಬಾಗಲಕೋಟೆಗೆ ಯಾವುದೇ ಕೊಡುಗೆ ನೀಡಿಲ್ಲ. ನಮ್ಮ ಸರ್ಕಾರ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಅನುದಾನವನ್ನು ಈ ಕ್ಷೇತ್ರಗಳಿಗೆ ನೀಡಲಿದೆ. ಬಿಜೆಪಿಯವರ ಅಪಪ್ರಚಾರದ ನಡುವೆಯೂ ಹಿಂದೆ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಭಾರಿ ಬಹುಮತ ಸಾಧಿಸಿತ್ತು. ಮಾಜಿ ಸಿಎಂಗಳ ಪುತ್ರರು ನಿಂತಿದ್ದ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದರು. ಅದೇ ರೀತಿ ಈಗಲೂ ಜಯ ನಮ್ಮದಾಗಲಿದೆ ಎಂದು ತಿಳಿಸಿದರು. ಜೆಡಿಎಸ್ ಹಾಗೂ ಬಿಜೆಪಿಯಲ್ಲಿ ಕೂಡ ಕುಟುಂಬ ರಾಜಕಾರಣ ಇದೆ. ಯಡಿಯೂರಪ್ಪ, ದೇವೇಗೌಡರ ಕುಟುಂಬ ಸದಸ್ಯರು ರಾಜಕೀಯದಲ್ಲಿ ಸಕ್ರಿಯವಾಗಿದ್ದಾರೆ. ಕಾಂಗ್ರೆಸ್ ಪಕ್ಷ ಕುಟುಂಬ ರಾಜಕಾರಣ ಮಾಡುತ್ತಿದೆ ಎಂಬ ಆರೋಪದಲ್ಲಿ ಹುರುಳಿಲ್ಲ ಎಂದರು.



> ಮತಪಟ್ಟಿ ವ್ಯತ್ಯಾಸಗೊಳಿಸುವ ಅಧಿಕಾರ ಕೇಂದ್ರ ಸರ್ಕಾರದ ಅಧೀನದಲ್ಲಿರುವ ಕೇಂದ್ರ ಚುನಾವಣಾ ಆಯೋಗಕ್ಕೆ ಇದೆ. ಇಂತಹ ಕೃತ್ಯಗಳಲ್ಲಿ ಕಾಂಗ್ರೆಸ್ ಎಂದಿಗೂ ಭಾಗಿಯಾಗಿಲ್ಲ. ಹಿಂದೆ ಎಂದಿಗೂ ಇರದಿದ್ದ ವೋಟ್ ಚೋರಿಯ ವಿಷಯ ಪ್ರಧಾನಿ ನರೇಂದ್ರ ಮೋದಿಯವರ ಅವಧಿಯಲ್ಲಿ ಕೇಳಿಬರುತ್ತಿದೆ.
> ■ ಸಿದ್ದರಾಮಯ್ಯ, ಮುಖ್ಯಮಂತ್ರಿ

1 ರೂ. ತೆರಿಗೆಗೆ 15 ಪೈಸೆ ವಾಪಸ್

ಕನ್ನಡಿಗರು ತಮ್ಮ ಬೆವರ ಗಳಿಕೆಯಿಂದ ನೀಡುವ 1 ರೂಪಾಯಿ ತೆರಿಗೆಗೆ ಪ್ರತಿಯಾಗಿ ಕೇಂದ್ರ ಸರ್ಕಾರ 15 ಪೈಸೆ ಮಾತ್ರ ವಾಪಸ್ಸು ನೀಡುತ್ತಿದೆ. ಇದನ್ನು ತೆರಿಗೆ ಭಯೋತ್ಪಾದನೆ ಎನ್ನಲೇ ತೆರಿಗೆ ದರೋಡೆ ಎನ್ನಲೇ ಈ ಪ್ರಶ್ನೆಗೆ ರಾಜ್ಯದ ಬಿಜೆಪಿ ನಾಯಕರು ಉತ್ತರಿಸುವ ಧೈರ್ಯ ಮಾಡುತ್ತಾರೆಯೇ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ. ಮಾಧ್ಯಮ ಹೇಳಿಕೆಯಲ್ಲಿ ಕೇಂದ್ರವನ್ನು ಟೀಕಿಸಿರುವ ಅವರು, ತೆರಿಗೆ ಹಂಚಿಕೆ, ಜಿಎಸ್‌ಟಿ ಪರಿಹಾರ ಮತ್ತು ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ನೀಡುವ ಅನುದಾನದಲ್ಲಿ ಅನ್ಯಾಯ ಮಾಡದೆ ನಮಗೆ ಸಿಗಬೇಕಾದ ನ್ಯಾಯಬದ್ಧ ಸಂಪನ್ಮೂಲದ ಪಾಲನ್ನು ನೀಡಿದರೆ 1 ಪೈಸೆ ಸಾಲವನ್ನು ಮಾಡದೆ ರಾಜ್ಯದ ಆರ್ಥಿಕತೆಯನ್ನು ನಿರ್ವಹಿಸುವೆ. ಈ ಸವಾಲು ಸ್ವೀಕರಿಸಲು ಬಿಜೆಪಿ ನಾಯಕರು ಸಿದ್ಧರಿದ್ದಾರಾ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಜಿಎಸ್‌ಟಿ ಸಂಗ್ರಹದಲ್ಲಿ ದೇಶದಲ್ಲಿಯೇ 2ನೇ ಸ್ಥಾನದಲ್ಲಿ ರಾಜ್ಯ ಇದೆ. ಇನ್ನು ಜಿಎಸ್‌ಟಿ ಸಂಗ್ರಹದ ಬೆಳವಣಿಗೆ ದರವನ್ನು ಗಮನಿಸಿದರೆ ಶೇ.17ರ ಸಾಧನೆಯ ಮೂಲಕ ದೇಶದಲ್ಲೇ ಮೊದಲ ಸ್ಥಾನದಲ್ಲಿ ಕರ್ನಾಟಕವಿದೆ. ವಿಪರ್ಯಾಸವೆಂದರೆ ಈ ಪ್ರಮಾಣದಲ್ಲಿ ಜಿಎಸ್‌ಟಿ ಹಣವನ್ನು ಕೇಂದ್ರಕ್ಕೆ ಸಂಗ್ರಹಿಸಿ ನೀಡಿದರೂ ಇದರಿಂದ ರಾಜ್ಯಕ್ಕೆ ಮರಳಿ ದೊರೆಯುತ್ತಿರುವುದು ಶೇ.52 ಪಾಲು ಮಾತ್ರ. ಜಿಎಸ್‌ಟಿಯ ಅವೈಜ್ಞಾನಿಕ ಅನುಷ್ಠಾನದಿಂದಾಗಿ ಕರ್ನಾಟಕವು ಸಾವಿರಾರು ಕೋಟಿ ರೂಪಾಯಿ ಕಳೆದುಕೊಂಡಿದೆ ಎಂದು ತಿಳಿಸಿದ್ದಾರೆ. ಕಳೆದ 3 ವರ್ಷಗಳಲ್ಲಿ ಹಲವಾರು ಬಾರಿ ತೆರಿಗೆ ದರೋಡೆಯನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದಿದ್ದೇವೆ. ಸಂಸತ್ ಭವನದ ಎದುರಿಗೆ ನಿಂತು ಈ ಅನ್ಯಾಯವನ್ನು ಕೂಗಿಕೂಗಿ ಹೇಳಿದ್ದೇವೆ. ಆಗ ಬಾಯಿ ಮುಚ್ಚಿಕೊಂಡು 7 ಕೋಟಿ ಕನ್ನಡಿಗರಿಗೆ ದ್ರೋಹ ಬಗೆದಿರುವ ಈ ಬಸವರಾಜ ಬೊಮ್ಮಾಯಿ, ಅಶೋಕ್ ಮತ್ತು ಮೊದಲಾದ ಬಿಜೆಪಿ ನಾಯಕರು ಈಗ ನಮ್ಮ ವಿರುದ್ಧ ಕೂಗು ಹಾಕುತ್ತಿದ್ದಾರೆ ಎಂದು ತೀರುಗೇಟು ನೀಡಿದ್ದಾರೆ.

ಆರ್ಥಿಕ ಅಧೋಗತಿ: ಬಿವೈವಿ



ಬಾಗಲಕೋಟೆ: ಗ್ಯಾರಂಟಿ ಯೋಜನೆಗಳಿಂದ ರಾಜ್ಯವು ದಿವಾಳಿಯತ್ತ ಸಾಗುತ್ತಿಲ್ಲ. ಈಗಾಗಲೇ ದಿವಾಳಿ ಆಗಿದೆ. ಆರ್ಥಿಕ ಸ್ಥಿತಿ ಅಧೋಗತಿ ತಲುಪಿದ್ದು, ಅದನ್ನು ಜನರ ಮುಂದೆ ಬಿಚ್ಚಿಡಲಾಗದೇ ಶ್ವೇತಪತ್ರ ಹೊರಡಿಸುವಂತೆ ಬಿಜೆಪಿಯು ಕೇಳಿದರೆ ಹತಾಶೆಯ ಸಿದ್ದರಾಮಯ್ಯ "ಸಿಟ್ಟರಾಮಯ್ಯ"ರಂತೆ ವರ್ತಿಸುತ್ತಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ನವನಗರದ ಬಿಜೆಪಿ ಕಚೇರಿಯಲ್ಲಿ ಹಮ್ಮಿಕೊಂಡ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬಾಗಲಕೋಟೆಯ ಬಿಸಿಲಿನ ಪರಿಣಾಮಕ್ಕೋ ಸೋಲಿನ ಭಯಕ್ಕೊ ಸಿಎಂ ಸಿದ್ದರಾಮಯ್ಯ ಮನಬಂದಂತೆ ಮಾತನಾಡುತ್ತಿದ್ದಾರೆ. ರಾಜ್ಯದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಶ್ವೇತಪತ್ರ ಹೊರಡಿಸುವಂತೆ ಕೇಳಿದರೆ ವಿಜಯೇಂದ್ರ ಅವರಿಗೆ ಆರ್ಥಿಕತೆಯ ಬಗ್ಗೆ ಜ್ಞಾನವಿಲ್ಲ ಎಂಬ ಹತಾಶೆಯ ಹೇಳಿಕೆ ಕೊಡುತ್ತಿದ್ದಾರೆ. ಪ್ರಸ್ತುತ ರಾಜ್ಯದ ಆರ್ಥಿಕ ಸ್ಥಿತಿ ಜನ ಸಾಮಾನ್ಯರಿಗೆ ಅರ್ಥವಾಗುತ್ತಿದ್ದು, ಅದಕ್ಕೆ ಆರ್ಥಿಕ ತಜ್ಞರಾಗುವ ಆವಶ್ಯಕತೆ ಇಲ್ಲ ಎಂದು ತಿರುಗೇಟು ನೀಡಿದರು.

ರಾಜ್ಯದ ಜನತೆಗೆ ಹಣಕಾಸಿನ ಪರಿಸ್ಥಿತಿಯ ಬಗ್ಗೆ ಸತ್ಯ ಸಂಗತಿಗಳನ್ನು ತಿಳಿಸುವ ಕೆಲಸವನ್ನು ಮಾಡಲು ಸರಕಾರ ಸಿದ್ಧವಿಲ್ಲ. ಅಧಿಕಾರಕ್ಕೆ ಬಂದ ಒಂದು ತಿಂಗಳಿನಲ್ಲಿ ನೇರನಾಮಕಾತಿ ಮಾಡುತ್ತೇವೆ ಎಂದು ಹೇಳಿದ್ದು ಇನ್ನೂವರೆಗೂ ಆಗಿಲ್ಲ. ಗ್ಯಾರಂಟಿಗಳಿಗೆ ಹಣ ಕ್ರೂಢೀಕರಿಸಲು ಸಾಧ್ಯವಾಗದೆ ಸಿಕ್ಕ ಸಿಕ್ಕಲ್ಲಿ ದೋಚುವ ಕೆಲಸ ಮಾಡುತ್ತಿದ್ದಾರೆ ಎಂದರು.

ಕುರ್ಚಿಬಿಡುವ ಸಮಯ ಸನ್ನಿಹಿತ: ವಿಜಯೇಂದ್ರ

ಕೇಂದ್ರ ಸರ್ಕಾರದ ಮೇಲೆ ಆರೋಪ ಮಾಡುತ್ತ ಅಧಿಕಾರ ಮಾಡುತ್ತಿದೆ. ರಾಜ್ಯದ ಗ್ಯಾರಂಟಿ ಯೋಜನೆಗಳನ್ನು ಬೇರೆ ರಾಜ್ಯಗಳು ಅನುಸರಿಸಿ ಅತಂತ್ರವಾಗಿವೆ. ಹಿಮಾಚಲ ಪ್ರದೇಶದಲ್ಲಿ ಗ್ಯಾರಂಟಿ ನೀಗಿಸಲು ಹಣ ಇಲ್ಲದ್ದಕ್ಕೆ ಅಲ್ಲಿನ ಸಿಎಂಗಳೇ ದೇವಸ್ಥಾನಗಳ ದೇಣಿಗೆಯನ್ನು ಸರ್ಕಾರಕ್ಕೆ ಕೊಡುವಂತೆ ಪತ್ರ ಬರೆದು ಮನವಿ ಮಾಡಿಕೊಂಡಿದ್ದಾರೆ. ತೆಲಂಗಾಣದ ಅಧಿವೇಶನದಲ್ಲಿ ಮುಖ್ಯಮಂತ್ರಿಗಳು ಗ್ಯಾರಂಟಿಗಳಿಂದ ಸಂಬಳ ಕೊಡಲಾಗುತ್ತಿಲ್ಲ ಎಂದು ಒಪ್ಪಿಕೊಂಡಿದ್ದಾರೆ. ಆದರೂ ರಾಜ್ಯದಲ್ಲಿ ಅಸಲಿ ಸತ್ಯ ಮುಚ್ಚಿಟ್ಟು ಗ್ಯಾರಂಟಿಗಳ ಬಗ್ಗೆ ಮನವರಿಕೆ ಮಾಡಲು ಬರುತ್ತಿರುವ ಕಾಂಗ್ರೆಸ್ ಇವುಗಳಿಂದ ಬೇಸತ್ತ ತಮ್ಮ ಪಕ್ಷದ ಶಾಸಕರಿಗೆ, ಕಾರ್ಯಕರ್ತರಿಗೆ ಮೊದಲು ಮನವರಿಕೆ ಮಾಡಲಿ. ಗ್ಯಾರಂಟಿ ಬಗ್ಗೆ ವಿಶ್ವಾಸ ಇದ್ದಿದ್ದರೆ ಮಂತ್ರಿ ಮಂಡಲದ ಜೊತೆಗೆ ಸೂಟಕೇಸ್ ಸಮೇತ ಬಾಗಲಕೋಟೆಯಲ್ಲಿ ಬೆಂಡಾ ಹೂಡುವ ಅವಶ್ಯಕತೆ ಇರುತ್ತಿರಲಿಲ್ಲ. ಜಾತಿಗಳ ಆಧಾರದ ಮೇಲೆ ರಾಜಕೀಯ ಮಾಡುವ ಸಿದ್ದರಾಮಯ್ಯ ಕಾಂಗ್ರೆಸ್ ಗೆಲ್ಲಲಿ ನಾನೇ ಮುಖ್ಯಮಂತ್ರಿ ಎಂದು ಹೇಳುತ್ತಿದ್ದಾರೆ. ಆದರೆ ಕುರ್ಚಿಬಿಡುವ ಸಮಯ ಸನ್ನಿಹಿತವಾಗಿದೆ ಎಂದರು.

ಆಸ್ಪತ್ರೆಗಳಲ್ಲಿ ಪೋಡಿಯಾಟ್ರಿಕ್ ವಿಭಾಗ ಆರಂಭ: ಶರಣಪ್ರಕಾಶ್

ಬೆಂಗಳೂರು: ಮಧುಮೇಹ ಪಾದದ ಶುಶ್ರೂಷೆಗಾಗಿ ರಾಜ್ಯದ ಎಲ್ಲ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ ಪೋಡಿಯಾಟ್ರಿಕ್ ವಿಭಾಗವನ್ನು ಆರಂಭಿಸಲಾಗುವುದು ಎಂದು ಸಚಿವ ಡಾ.ಶರಣಪ್ರಕಾಶ್ ಪಾಟೀಲ ತಿಳಿದರು.

ಮಧುಮೇಹದಿಂದ ಉಂಟಾಗುವ ಪಾದ ಸಮಸ್ಯೆಗಳನ್ನು ತಡೆಗಟ್ಟುವ ಉದ್ದೇಶದಿಂದ ಪ್ರೈಯಾಸ್ (PRAIAS) ರಾಷ್ಟ್ರೀಯ ಜಾಗೃತಿ ಮತ್ತು ತಪಾಸಣಾ ಅಭಿಯಾನಕ್ಕೆ ಗುಲ್ಬರ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಜಿಮ್ಸ್) ಆವರಣದಲ್ಲಿ ಚಾಲನೆ ನೀಡಿ ಮಾತನಾಡಿ, ಮಧುಮೇಹ - ಪಾದದ ಶುಶ್ರೂಷೆಗಾಗಿ (ಡಯಾಬಿಟಿಕ್ ಫೂಟ್ ಕೇರ್) ರಾಜ್ಯದ ಎಲ್ಲ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ ಪೋಡಿಯಾಟ್ರಿಕ್ ವಿಭಾಗಗಳನ್ನು ಆರಂಭಿಸಲಾಗುವುದು. ಜತೆಗೆ, ಮುಂಬರುವ ದಿನಗಳಲ್ಲಿ ಇಲಾಖೆಯ ವತಿಯಿಂದ ಮಧುಮೇಹ-ಪಾದ ತಪಾಸಣೆಗೂ (ಸ್ಕ್ರೀನಿಂಗ್) ವ್ಯವಸ್ಥೆ ಮಾಡಲಾಗುವುದು ಎಂದರು.



ಬೆಂಗಳೂರಿನಲ್ಲಿರುವ ಕರ್ನಾಟಕ ಮಧುಮೆಹ ಸಂಸ್ಥೆ ಉತ್ತಮವಾಗಿ ಕಾರ್ಯಾಚರಿಸುತ್ತಿದೆ. ಅದೇ ಮಾದರಿಯಲ್ಲಿ ಕಲಬುರಗಿ ಮತ್ತು ಮೈಸೂರಿನಲ್ಲಿ ಮಧುಮೇಹ ಸಂಸ್ಥೆಯ ಶಾಖಾ ಕೇಂದ್ರಗಳನ್ನು ಸ್ಥಾಪಿಸುವ ನಿಟ್ಟಿನಲ್ಲಿ ಈಗಾಗಲೇ ಕಾರ್ಯ ಆರಂಭಗೊಂಡಿದೆ ಎಂದರು.

ಆರಂಭಿಕ ಹಂತದಲ್ಲಿಯೇ ಪತ್ತೆ

ಆಧುನಿಕ ತಂತ್ರಜ್ಞಾನದ ನೆರವಿನಿಂದ ಸಕ್ಕರೆ ರೋಗಿಗಳ ಪಾದದಲ್ಲಿನ ಒತ್ತಡದ ಬಿಂದುಗಳನ್ನು ಆರಂಭಿಕ ಹಂತದಲ್ಲಿಯೇ ಸ್ಕ್ರೀನಿಂಗ್ ಮೂಲಕ ಪತ್ತೆಹಚ್ಚಬಹುದು. ಇದರಿಂದಾಗಿ ಒತ್ತಡವನ್ನು ಕಡಿಮೆಗೊಳಿಸಿ ಪಾದಗಳನ್ನು ಸಂರಕ್ಷಿಸಲು ಸಾಧ್ಯವಾಗುತ್ತದೆ. ಭಾರತವು ಮಧುಮೇಹದ ತವರಾಗಿರುವುದರಿಂದ ಪಾದಗಳ ಸುರಕ್ಷತೆ ಬಗ್ಗೆ ಜಾಗೃತಿ ಮೂಡಿಸುವುದು ಅತ್ಯವಶ್ಯವಾಗಿದೆ ಎಂದರು.

ಕಾಂಗ್ರೆಸ್ ಸರ್ಕಾರ ಪತನ: ಶಾಸಕ

ದಾವಣಗೆರೆ: ಮುಂದೆಯೂ ನಾನೇ ಮುಖ್ಯಮಂತ್ರಿ ಎನ್ನುತ್ತಿದ್ದ ಸಿದ್ದರಾಮಯ್ಯ ಈಗ ನಾನೇ ಮುಖ್ಯಮಂತ್ರಿ ಎನ್ನುತ್ತಿದ್ದಾರೆ. ದಾವಣಗೆರೆ ಮತ್ತು ಬಾಗಲಕೋಟೆ ಉಪ ಚುನಾವಣೆ ಫಲಿತಾಂಶದ ನಂತರ ಕಾಂಗ್ರೆಸ್ ಸರ್ಕಾರ ಪತನವಾಗಲಿದೆ ಎಂದು ಶಾಸಕ ಸುನಿಲ್ ಕುಮಾರ್ ಹೇಳಿದರು.



ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಘೋಷಣೆಗಳ ಮೂಲಕ ದೊಡ್ಡ ಮಟ್ಟದ ಪ್ರಚಾರ ಪಡೆಯುವ ಕಾಂಗ್ರೆಸ್ ಸರ್ಕಾರ, ಬಾಗಲಕೋಟೆ, ದಾವಣಗೆರೆ ಚುನಾವಣಾ ಫಲಿತಾಂಶಗಳು ರಾಜ್ಯ ರಾಜಕೀಯಕ್ಕೆ ಮಹತ್ವದ ಸಂದೇಶ ನೀಡಲಿವೆ. ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ಜನರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲಿದ್ದಾರೆ.

ಈ ಫಲಿತಾಂಶ ಕಾಂಗ್ರೆಸ್ ಸರ್ಕಾರದ ಪತನದ ಸೂಚನೆಯಾಗಲಿದೆ. ಅಹಿಂದ ವರ್ಗದ ಹಿತಾಸಕ್ತಿಗಳನ್ನು ಕಾಪಾಡಲು ವಿಫಲವಾಗಿರುವ ಸರ್ಕಾರದ ವಿರುದ್ಧ ಜನರು ತಮ್ಮ ಆಕ್ರೋಶ ವ್ಯಕ್ತಪಡಿಸಬೇಕು ಎಂದರು.

ಸ್ವಯಂ ಗಣತಿ ದಾಖಲಿಸಿದ ಶಾಲಿನಿ ರಜನೀಶ್

ಬೆಂಗಳೂರು: ಕೇಂದ್ರ ಸರ್ಕಾರ ಹಮ್ಮಿಕೊಂಡಿರುವ ಜನಗಣತಿ 2027ರ ಅಂಗವಾಗಿ ಸ್ವಯಂ ಗಣತಿ ವ್ಯವಸ್ಥೆ ಪರಿಚಯಿಸಿದ್ದು, ಬುಧವಾರ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಅವರು ತಮ್ಮ ಮೊಬೈಲ್ ಮೂಲಕ ಸ್ವಯಂ ಗಣತಿ ದಾಖಲಾತಿ ಪೂರ್ಣಗೊಳಿಸಿದರು.



ನಮ್ಮ ಜನಗಣತಿ ನಮ್ಮ ಅಭಿವೃದ್ಧಿ ಎಂಬ ಧ್ಯೇಯ ವಾಕ್ಯದೊಂದಿಗೆ ಸರ್ಕಾರ ಜನಗಣತಿ 2027 ಹಮ್ಮಿಕೊಂಡಿದ್ದು, ಇದರ ಅಂಗವಾಗಿ ಸರ್ಕಾರ ಸ್ವಯಂ ಗಣತಿ ವ್ಯವಸ್ಥೆಯನ್ನು ಪರಿಚಯಿಸಿದೆ.ಈ ಪ್ರಕ್ರಿಯೆ ಸರಳ ಮತ್ತು ಸುರಕ್ಷಿತವಾಗಿದೆ ಏಪ್ರಿಲ್ 1 ರಿಂದ 15 ರವರೆಗೆ ಎಲ್ಲಾ ನಾಗರಿಕರು ಅಧಿಕೃತ ಪೋರ್ಟಲ್ se.census.gov.in ಮೂಲಕ ತಮ್ಮ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ದಾಖಲಿಸಿಕೊಳ್ಳಬೇಕೆಂದು ಅವರು ತಿಳಿಸಿದರು.

ಜನಗಣತಿ ನಮ್ಮ ರಾಜ್ಯ ಮತ್ತು ದೇಶದ ಭವಿಷ್ಯ ರೂಪಿಸುವ ಮಹತ್ವದ ಕಾರ್ಯ. ಇದು ದತ್ತಾಂಶ ಆಧಾರಿತ ನಿರ್ಧಾರಗಳಿಗೆ ಸಹಾಯ ಮಾಡುತ್ತದೆ. ಆರೋಗ್ಯ, ಶಿಕ್ಷಣ, ವಸತಿ ಮತ್ತು ಮೂಲಸೌಕರ್ಯ ಕ್ಷೇತ್ರಗಳಲ್ಲಿ ಸಮರ್ಪಕ ಸಂಪನ್ಮೂಲ ಹಂಚಿಕೆಗೆ ದಾರಿ ತೋರುತ್ತದೆ. ನಿಮ್ಮ ಭಾಗವಹಿಸುವಿಕೆ ಅತ್ಯಂತ ಮುಖ್ಯ ಎಂದು ಕರೆ ನೀಡಿದರು.

ಇದು ಕೇವಲ ಕರ್ತವ್ಯವಲ್ಲ ಕರ್ನಾಟಕದ ಅಭಿವೃದ್ಧಿಗೆ ನಿಮ್ಮ ಕೊಡುಗೆಯಾಗಿದೆ. ಇಂದು ನೀಡುವ ನಿಖರ ಮಾಹಿತಿ, ನಾಳೆಯ ಉತ್ತಮ ನೀತಿಗಳು, ಸೇವೆಗಳಿಗೆ ಆಧಾರವಾಗುತ್ತದೆ. ಜನಗಣತಿಯಿಂದ ಯಾರೂ ಬಿಟ್ಟು ಹೋಗದಂತೆ ಸರ್ಕಾರ ಮುತುವರ್ಜಿ ವಹಿಸಿದೆ. ನಿಗದಿತ ಅವಧಿಯಲ್ಲಿ ಸ್ವಯಂ ಗಣತಿಯನ್ನು ಪೂರ್ಣಗೊಳಿಸಿ, ಜನಗಣತಿ 2027 ಅನ್ನು ಯಶಸ್ವಿಗೊಳಿಸಲು ನಾವು ಎಲ್ಲರೂ ಕೈಜೋಡಿಸೋಣ ಎಂದು ನಾಗರಿಕರಲ್ಲಿ ಮನವಿ ಮಾಡಿದ್ದಾರೆ.

ಮೊಬೈಲ್ ಮೂಲಕ ಗಣತಿ

ಬೆಂಗಳೂರು: ಡಿಜಿ ಮತ್ತು ಐಜಿಪಿ ಡಾ.ಎಂ.ಎ.ಸಲೀಂ ಅವರು ಅವರು ತಮ್ಮ ಕಚೇರಿಯಲ್ಲಿ ಮೊಬೈಲ್ ಮೂಲಕ ಸ್ವಯಂ ಗಣತಿ ದಾಖಲಾತಿ ಪೂರ್ಣಗೊಳಿಸಿದ್ದು, ಈ ಪ್ರಕ್ರಿಯೆ ಅತ್ಯಂತ ಸರಳ ಮತ್ತು ಸುರಕ್ಷಿತ ವಾಗಿದ್ದು, ನಾಗರಿಕರು ಯಾವುದೇ ಆತಂಕವಿಲ್ಲದೇ ಸ್ವಯಂ ಮಾಹಿತಿಯನ್ನು ದಾಖಲಿಸಬಹುದು ಎಂದು ಹೇಳಿದರು.



ಮತದಾರರಿಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮನವಿ | ಅಭ್ಯರ್ಥಿ ಪರ ನಾಯಕರ ಮತ ಪ್ರಚಾರ
ಗ್ಯಾರಂಟಿ ಯೋಜನೆಯ ಫಲಾನುಭವಿಗಳು ಉಪಕಾರ ಮಾಡಿ



ಬಾಗಲಕೋಟೆ: ಸರ್ಕಾರದ ಐದು ಗ್ಯಾರಂಟಿಗಳಿಂದ ಜನರಿಗೆ ಉಪಯುಕ್ತವಾಗಿದ್ದು, ಇದರ ಉಪಕಾರ ಸ್ಮರಣೆಯನ್ನು ತೋರಿಸಲಿದ್ದಾರೆ ಹೀಗಾಗಿ ಬಾಗಲಕೋಟೆ ಮತ್ತು ದಾವಣಗೆರೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ನಗರದ ಖಾಸಗಿ ರೆಸಾರ್ಟ್‌ದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮತದಾರರು ಗ್ಯಾರಂಟಿ ಯೋಜನೆ ಋಣವನ್ನು ತೀರಿಸುತ್ತೇವೆ ಎಂದು ಹೇಳುತ್ತಿದ್ದಾರೆ ಎಂದರು. ಕೇಂದ್ರ ಸರ್ಕಾರದ ಬೆಲೆ ಏರಿಕೆಯನ್ನು ತಪ್ಪಿಸಲು ಗ್ಯಾರಂಟಿ ಯೋಜನೆಗಳನ್ನು ರಾಜ್ಯದಲ್ಲಿ ಜಾರಿಗೆ ತರಲಾಗಿದೆ. 15ನೇ ಹಣಕಾಸು ಆಯೋಗದ ವರದಿಯಂತೆ ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದ ದುಡ್ಡು ಬರಲಿಲ್ಲ. ಗ್ಯಾಸ್, ಪೆಟ್ರೋಲ್, ಡಿಸೇಲ್ ದರ ಏರಿಕೆ ಯಾಗುತ್ತಿದೆ. ದೇಶದಲ್ಲಿ ಅಚ್ಚೆದಿನ್ ಬರಲೇ ಇಲ್ಲ. ಇದನ್ನು ಜನರಿಗೆ ಕೇಳುತ್ತಿದ್ದೇವೆ ಎಂದರು.

ಬಾಗಲಕೋಟೆಯಲ್ಲಿ ಕೆಲವೊಂದು ವಿದ್ಯಾರ್ಥಿಗಳ ಹೆಸರನ್ನು ಮತದಾರರ ಪಟ್ಟಿಯಲ್ಲಿ ಸೇರಿಸಿದ್ದಾರೆ. ಅದರ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ. ಕೆಲವೊಂದು ವಿದ್ಯಾರ್ಥಿಗಳು ಎರಡೆರಡು ಊರುಗಳಲ್ಲಿ ಮತದಾರರ ಪಟ್ಟಿಯನ್ನು ಹೊಂದಿದ್ದು, ಈ ಕುರಿತು ದೂರು ಕೊಡುತ್ತೇವೆ. ಇದನ್ನು ಪರಿಶೀಲನೆ ಮಾಡಲು ದೊಡ್ಡ ತಂಡ ನಮ್ಮಲ್ಲಿದೆ. ವಿದ್ಯಾರ್ಥಿಗಳುತಮ್ಮ ಊರಿನಲ್ಲಿ ಮತದಾನದ ಹಕ್ಕನ್ನು ಉಳಿಸಿಕೊಳ್ಳಬೇಕು ಎಂದರು. ಸಚಿವ ಭೈರತಿ ಸುರೇಶ, ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ, ಶಿವಾನಂದ ಪಾಟೀಲ, ಶಾಸಕ ಜೆ.ಟಿ.ಪಾಟೀಲ ಇದ್ದರು.

ಕಾಂಗ್ರೆಸ್ ಸರ್ಕಾರವಿದ್ದರೆ ಗ್ಯಾರಂಟಿಗೆ ಸುರಕ್ಷತೆ

ರಾಜ್ಯದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಜನ ಕಲ್ಯಾಣ, ಜನಜಾಗೃತಿ, ಸಮಗ್ರ ಅಭಿವೃದ್ಧಿಯನ್ನು ಇಟ್ಟುಕೊಂಡು ಹೊರಟಿದೆ ಆದರೆ ಬಿಜೆಪಿ ದ್ವೇಷ, ದೇಶ ವಿಘಟನೆ ಮಾಡುವತ್ತ ಸಾಗಿದೆ. ರಾಜ್ಯದ ಜನರಿಗೆ ಐದು ವರ್ಷ ನಾವು ನೌಕರರಾದರೆ ಅವರು ನಮಗೆ ಮಾಲೀಕರಾಗಿದ್ದಾರೆ ಎಂದು ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪಸಿಂಗ್ ಸುರ್ಜೇವಾಲಾ ಹೇಳಿದರು. ನಗರದ ಖಾಸಗಿ ರೆಸಾರ್ಟ್‌ದಲ್ಲಿ ಪಕ್ಷದ ಮುಖಂಡರ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಐದು ಗ್ಯಾರಂಟಿಗಳಿಗೆ ಎರಡು ವರ್ಷದಲ್ಲಿ 1ಲಕ್ಷ 31 ಸಾವಿರ ಕೋಟಿ ರೂ. ನೀಡಲಾಗಿದೆ. ಕಾಂಗ್ರೆಸ್ ಸರ್ಕಾರವಿದ್ದರೆ ಗ್ಯಾರಂಟಿಗಳಿಗೆ ಸುರಕ್ಷತೆ, ಬಿಜೆಪಿ ಇದ್ದರೆ ಬೆಲೆ ಏರಿಕೆಗೆ ಎಂದು ದೂರಿದರು. ಏಪ್ರಿಲ್ 1 ಆಂಗ್ಲರು ಏಪ್ರಿಲ್ ಫೂಲ್ ಎನ್ನುತ್ತಾರೆ. ಮೋದಿ ಸರ್ಕಾರ ಏ.1ರಂದು ಜೇಬಿಗೆ ಕತ್ತರಿ ಹಾಕುವ ಕೆಲಸ ಮಾಡಿದ್ದಾರೆ. ಕೇಂದ್ರ ಸರ್ಕಾರ ಬೆಲೆ ಏರಿಕೆ ಮಾಡುತ್ತಿರುವುದರಿಂದ ಸಾಮಾನ್ಯ ಜನರ ಜೀವನಕ್ಕೆ ಹೊಡೆತ ಬಿದ್ದಿದೆ.ಬಿಜೆಪಿಯವರು ಪಿಕ್ ಪಾಕೇಟ್ ಕಳ್ಳರಂತೆ ಅವರಿಂದ ಎಚ್ಚರವಾಗಿರಿ ಎಂದರು. 450 ರೂ. ಗ್ಯಾಸ್ ಸಿಗುತ್ತಿರುವುದು ಈಗ 2000 ಗಡಿ ದಾಟಿದೆ. ಮೂರು ಬಾರಿ ಗ್ಯಾಸ್ ದರವನ್ನು ಕೇಂದ್ರ ಸರ್ಕಾರ ಏರಿಕೆ ಮಾಡಿದೆ. ರಾಷ್ಟ್ರೀಯ ಹೆದ್ದಾರಿಗಳಲ್ಲಿ ಟೋಲ್ ಫೀ ಕೂಡ ಹೆಚ್ಚಿಸಿದ್ದಾರೆ. ರಾಜ್ಯದಿಂದಲೇ ವರ್ಷಕ್ಕೆ 23 ಸಾವಿರ ಕೋಟಿ ರೂ. ಸಂಗ್ರಹವಾಗಿದೆ. ಏರ್ ಕಂಡೀಶನರ್, ಫ್ರಿಡ್ಜ್ ವಾಟರ್ ಕೂಲರ್ ದರ ಶೇ.8ರಿಂದ 15ರಷ್ಟು ಏರಿಕೆಯಾಗಿದೆ. 900 ಔಷಧಿಗಳ ಬೆಲೆ ಕೂಡ ಹೆಚ್ಚಿಸಿದೆ. . ಜೆಟ್ ವಿಮಾನಗಳಿಗೆ ನೀಡುವ ಪೆಟ್ರೋಲ್ ದರ 2 ಲಕ್ಷ ಕ್ರಾಸ್ ಆಗಿದೆ. ಇದು ಬಿಜೆಪಿಯವರು ಕೊಟ್ಟ ಕೊಡುಗೆ ಎಂದರು.

ಅನ್ಯಾಯದ ಸರಣಿ ಮುಂದುವರಿಸಿದ ಕೇಂದ್ರ: ಸಚಿವ ಪ್ರಿಯಾಂಕ್ ಖರ್ಗೆ

ಬೆಂಗಳೂರು: ಕೇಂದ್ರ ಸರ್ಕಾರವು ಕನ್ನಡಿಗರನ್ನು ಶತ್ರುಗಳಂತೆ ಕಾಣುತ್ತಿದೆ. ಪ್ರತಿ ಹಂತದಲ್ಲೂ ಪ್ರತಿ ವಿಷಯದಲ್ಲೂ ರಾಜ್ಯಕ್ಕೆ ಅನ್ಯಾಯದ ಸರಣಿ ಮುಂದುವರೆಸಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಗುಡುಗಿದ್ದಾರೆ.

ತಮ್ಮ ಎಕ್ಸ್ ಖಾತೆಯಲ್ಲಿ ಕೇಂದ್ರ ಸರ್ಕಾರವನ್ನು ಟೀಕಿಸಿರುವ ಅವರು, 15ನೇ ಹಣಕಾಸು ಆಯೋಗದ ಅವಧಿ ಮುಕ್ತಾಯವಾಗಿದೆ. ಈ ಹೊತ್ತಿನಲ್ಲಿ ರಾಜ್ಯಕ್ಕೆ ಕೇಂದ್ರ ಸರ್ಕಾರದ ಅನ್ಯಾಯದ ದೊಡ್ಡ ಸಾಕ್ಷಿಗುಡ್ಡೆಯನ್ನೂ ಉಳಿಸಿದೆ. ಈ ವಂಚನೆ ಕೇವಲ 15ನೇ ಹಣಕಾಸು ಆಯೋಗದ ಅನುದಾನಕ್ಕೆ ಮಾತ್ರ ಸೀಮಿತವಲ್ಲ. ಬಜೆಟ್‌ನಿಂದ ಹಿಡಿದು ನೆರೆ, ಬರ ಪರಿಹಾರ, ತೆರಿಗೆ ಹಂಚಿಕೆ, ಕೇಂದ್ರ ಪುರಸ್ಕೃತ ಯೋಜನೆಗಳು ಸೇರಿದಂತೆ ಎಲ್ಲದರಲ್ಲೂ ಕನ್ನಡಿಗರು ಮಲತಾಯಿ ಮಕ್ಕಳೇ ಎಂದು ಅಸಹನೆ ವ್ಯಕ್ತಪಡಿಸಿದ್ದಾರೆ.

ಮನರೇಗಾ ಯೋಜನೆಯೂ ಮಾ. 31ಕ್ಕೆ ಕೊನೆಯಾಗಿದೆ. ಸದರಿ ಯೋಜನೆಯಲ್ಲಿ ರಾಜ್ಯಕ್ಕೆ 1,943 ಕೋಟಿ ಅನುದಾನ ಬಾಕಿ ಇದೆ. ಈ ಅನುದಾನದ ಬಗ್ಗೆ ಇದುವರೆಗೂ ಕೇಂದ್ರ ಸರ್ಕಾರ ಯಾವುದೇ ಸ್ಪಷ್ಟತೆ ನೀಡಿಲ್ಲ, ಏ.1ರಿಂದ ಜನರಿಗೆ ಉದ್ಯೋಗ ಒದಗಿಸಬೇಕಿದ್ದ ವಿಬಿ ಗ್ರಾಮ್ ಜಿ ಯೋಜನೆಯ ಸುಳಿವೂ ಇಲ್ಲ. ಈ ಯೋಜನೆಯ ಜಾರಿಗೆ ನಿಯಮಗಳ ರೂಪುರೇಷೆಯೂ ಸಿದ್ಧವಾಗಿಲ್ಲ. ಇದು ಗ್ರಾಮೀಣ ಜನರ ಕಾನೂನಾತ್ಮಕ ಉದ್ಯೋಗದ ಹಕ್ಕನ್ನು ಕಸಿದಂತಾಗಿಲ್ಲವೇ ಎಂದು ಪ್ರಶ್ನಿಸಿದ್ದಾರೆ.

ಕೇಂದ್ರ ಸರ್ಕಾರವು ಕರ್ನಾಟಕಕ್ಕೆ ಮಾಡುತ್ತಿರುವುದು ಅನ್ಯಾಯ ಮಾತ್ರವಲ್ಲ, ನಿಷ್ಕರುಣೆಯ ಕ್ರೌರ್ಯ, ಮೋದಿ ಸರ್ಕಾರವು ಕರ್ನಾಟಕಕ್ಕೆ ಬಾಂಗ್ಲಾದೇಶ, ಅಫ್ಘಾನಿಸ್ತಾನಗಳಿಗೆ ತೋರಿದಷ್ಟು ಕಾಳಜಿಯನ್ನೂ ತೋರುತ್ತಿಲ್ಲ ಎಂದು ಟೀಕಿಸಿದ್ದಾರೆ.

ಸಂಪಾದಕೀಯ

ನಕ್ಸಲ್ ಪಿಡುಗಿನ ಅಂತ್ಯ

ಈ ವರ್ಷದ ಮಾರ್ಚ್ 31ರೊಳಗೆ ನಕ್ಸಲ್ ಪಿಡುಗನ್ನು ಸಂಪೂರ್ಣ ನಾಶಮಾಡಬೇಕು ಎಂಬ ಗುರಿಯನ್ನು ಕೇಂದ್ರ ಸರಕಾರ ಹಾಕಿಕೊಂಡಿತ್ತು. ಆದರಂತೆ ಮಾರ್ಚ್ 30ರಂದೇ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು 'ದೇಶವು ಈಗ ನಕ್ಸಲ್ ಮುಕ್ತವಾಗಿದೆ' ಎಂದು ಸಂಸತ್ತಿನಲ್ಲಿ ಘೋಷಿಸಿದ್ದಾರೆ. ದೇಶದಲ್ಲಿ ನಕ್ಸಲ್‌ವಾದಿ ನಾಯಕರು ಬಹುತೇಕ ಹತಗೊಂಡಿದ್ದಾರೆ. ಇನ್ನೊಂದಿಷ್ಟು ಮಂದಿ ಶಸ್ತ್ರಾಸ್ತ್ರ ತ್ಯಜಿಸಿ ಶರಣಾಗತರಾಗಿದ್ದಾರೆ. ಬೆರಳೆಣಿಕೆಯ ನಕ್ಸಲ್ ಕಾರ್ಯಕರ್ತರು ಉಳಕೊಂಡಿದ್ದಾರಾದರೂ ಅವರೂ ಶರಣಾಗುವ, ತಪ್ಪಿದಲ್ಲಿ ಹತರಾಗುವ ದಿನಗಳು ದೂರವಿಲ್ಲ. 2024ರಲ್ಲಿ ಸುಮಾರು 2000ದಷ್ಟಿದ್ದ ನಕ್ಸಲೀಯರ ಸಂಖ್ಯೆ ಈಗ ಬೆರಳೆಣಿಕೆಗೆ ಇಳಿದಿರುವುದೇ ನಕ್ಸಲೀಯ ಸಮಸ್ಯೆ ಅಂತ್ಯಗೊಳ್ಳುತ್ತಿರುವುದರ ಸಂಕೇತವಾಗಿದೆ.

ನಕ್ಸಲೀಯ ಪಿಡುಗು ಆರಂಭ ವಾದುದು 1967ರಲ್ಲಿ. ಪ.ಬಂಗಾಳದ ನಕ್ಸಲ್‌ಬಾರಿ ಎಂಬಲ್ಲಿ ಜಮೀನ್ದಾರ ಪದ್ಧತಿಯ ವಿರುದ್ಧ ಆರಂಭಗೊಂಡ



ಚಳವಳಿ ಬಳಿಕ ಹಿಂಸಾತ್ಮಕ ರೂಪ ತಾಳಿತು. ಕಮ್ಯುನಿಸ್ಟ್ ಚೀನಾ ಅದಕ್ಕೆ ಪ್ರೇರಣೆಯೊದಗಿಸಿತು. ಸಶಸ್ತ್ರ ನಕ್ಸಲೀಯ ಚಳವಳಿಯನ್ನು ಆರಂಭಿಸಿದವರು ಭಾರತವನ್ನೂ ಚೀನಾದಂತಾಗಿಸುವ ಕನಸು ಕಂಡರು. ನಕ್ಸಲ್ ಚಳವಳಿಯ ರೂವಾರಿಗಳಲ್ಲೊಬ್ಬನಾದ ಚಾರು ಮಜುಂದಾರ್ ಅಂತೂ "ಚೀನಾ ಅಧ್ಯಕ್ಷರು ನಮ್ಮ ಅಧ್ಯಕ್ಷರು, ಚೀನಾದ ಹಾದಿಯೇ ನಮ್ಮದು ಕೂಡಾ" ಎಂದು ಘೋಷಿಸಿದ್ದ. ಎಡಪಂಥೀಯ ಬುದ್ಧಿಜೀವಿಗಳಿಂದಲೂ ನಕ್ಸಲ್ ಚಳವಳಿಗೆ ಬೆಂಬಲ ದೊರಕಿತಲ್ಲದೆ, ಇನ್ನಿತರ ಹಲವು ರಾಜ್ಯಗಳಿಗೂ ನಕ್ಸಲೀಯ ಪಿಡುಗು ವ್ಯಾಪಿಸಿತು. ಪೊಲೀಸರು, ಅರೆಸೈನಿಕ ಪಡೆಗಳು, ಸಾರ್ವಜನಿಕರು ಸೇರಿದಂತೆ ಸಾವಿರಾರು ಜನರು ನಕ್ಸಲೀಯರ ಗುಂಡಿಗೆ ಬಲಿಯಾದರು. "ನಕ್ಸಲ್ ವಾದವು, ಭಾರತದ ಅತೀ ದೊಡ್ಡ ಆಂತರಿಕ ಅಪಾಯ" ಎಂದು ಮಾಜಿ ಪ್ರಧಾನಿ ಮನಮೋಹನ ಸಿಂಗ್ ಕೂಡಾ ಘೋಷಿಸಿದ್ದರು. ದುರಂತವೆಂದರೆ ಯಾವುದೇ ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರ ನಕ್ಸಲೀಯರನ್ನು ದಮನಿಸಲು ಸುಸಜ್ಜಿತ ಯೋಜನೆ ಯಾ ಕಾರ್ಯಾಚರಣೆ ರೂಪಿಸಲಿಲ್ಲ. ನಕ್ಸಲ್ ದಮನ ಕಾರ್ಯಾಚರಣೆ ಆರಂಭಿಸಿದರೂ ಅದು ಅಲ್ಪಕಾಲ ಮಾತ್ರ ನಡೆಯಿತು. 2024ರಲ್ಲಿ ನರೇಂದ್ರ ಮೋದಿ ಸರಕಾರ ಅಧಿಕಾರಕ್ಕೆ ಬಂದ ಮೇಲೆಯೇ ನಕ್ಸಲೀಯರ ನಿರ್ನಾಮಕ್ಕೆ ನಿರ್ಣಾಯಕ ಸ್ವರೂಪ ದೊರಕಿದ್ದು. ಸುಸಜ್ಜಿತ ಯೋಜನೆ, ಪರಿಣಾಮಕಾರಿ ಕಾರ್ಯಾನುಷ್ಠಾನದ ಮೂಲಕ ನಕ್ಸಲೀಯ ಸಮಸ್ಯೆಯನ್ನು ಈಗ ಸಂಪೂರ್ಣ ದಮನಿಸಲಾಗಿದೆ. ದೇಶವೀಗ ನಕ್ಸಲ್ ಮುಕ್ತವಾಗಿದೆ. ಆದರೂ ನಕ್ಸಲ್ ಮನಸ್ಥಿತಿಯ 'ನಗರ ನಕ್ಸಲರು' ಇನ್ನೂ ಸಕ್ರಿಯರಾಗಿದ್ದಾರೆ. ಅವರನ್ನೂ ನಿಯಂತ್ರಿಸಬೇಕಾಗಿರುವುದು ಮುಂದಿನ ಕಾರ್ಯವಾಗಬೇಕಾಗಿದೆ.

ಖಾಂಡವ ದಹನ ಪ್ರಸಂಗ

ಇಡೀ ಪ್ರಕೃತಿಗೆ ನಾವಷ್ಟೇ ಉತ್ತರಾಧಿಕಾರಿಗಳಲ್ಲ, ಈಗಾಗಲೇ ಜನಿಸಿದ ಮಕ್ಕಳೂ ಇದರ ಹಕ್ಕುದಾರರು. ಅವರಿಗಾಗಿ ನಾವಿದನ್ನು ಉಳಿಸಬೇಕಾದ ಬದ್ಧತೆ ನಮಗಿದೆ.

ಆ-ಲೋಚನ



ರಾಧಾಕೃಷ್ಣ ಕಲ್ಚಾರ್
rkkalchar@gmail.com

ಆರೇಳು ತಿಂಗಳುಗಳ ಹಿಂದೆ ಹೆಗ್ಗೋಡಿನ ನೀನಾಸಮ್ ನಡೆಸಿದ ರಂಗ ಶಿಬಿರದಲ್ಲಿ ಒಂದೂವರೆ ಗಂಟೆಯ ತಾಳಮದ್ದಲೆ. ಪ್ರಸಂಗ ಖಾಂಡವ ದಹನ.

ಒಟ್ಟು ತಾಳಮದ್ದಲೆ ರಂಗಭೂಮಿಯ ಸ್ವರೂಪಕ್ಕೆ ಅದು ತೀರ ಸಣ್ಣ ಅವಧಿ. ಅಲ್ಲದೆ ಪ್ರಾಕೃತಿಕವಾದ ಸಂಪತ್ತಿಗೆ ಒಟ್ಟು ಜೀವ ಸಂಕುಲವೇ ಉತ್ತರಾಧಿಕಾರಿ ಎಂಬ ಆಶಯವೂ ಪ್ರಕಟವಾಗಬೇಕಿತ್ತು. ಯಥಾಸಾಧ್ಯ ಅದನ್ನು ನಿರೂಪಿಸಿದೆವು. ನಾಡಿನ ನಾನಾ ಕಡೆಯಿಂದ ಬಂದ ಬಹುಮಂದಿ ರಂಗಕರ್ಮಿಗಳೂ ರಂಗಾಸಕ್ತರೂ ಇದ್ದ ಸಭೆಯದು. ಅವರಿಗೂ ತಾಳಮದ್ದಲೆ ಮೆಚ್ಚುಗೆಯಾಯ್ತು.

ಇರಲಿ, ಆ ಕಾರ್ಯಕ್ರಮವು ಮುಗಿದ ಮೇಲೆ ನನ್ನೊಳಗೆ ಕೆಲವು ಪ್ರಶ್ನೆಗಳು ಹುಟ್ಟಿಕೊಂಡವು. ಲಾಗಾಯ್ತಿನಿಂದಲೂ ಮಾನವ ಮತ್ತು ಪ್ರಕೃತಿಯ ಸಂಘರ್ಷ ನಿರಂತರವಾಗಿ ನಡೆಯುತ್ತ ಬಂದಿದೆ. ಇದಕ್ಕೆ ಕೊನೆಯುಂಟೆ? ಪ್ರಕೃತಿ ಉಳಿಯಬೇಕು ಎಂಬುದು ಸತ್ಯವಾದರೂ ದಿನೇ ದಿನೇ ಹೆಚ್ಚುತ್ತಿರುವ ಜನಸಂಖ್ಯೆ ಇದನ್ನು ಆಗಗೊಡುವುದೆ? ಇತ್ಯಾದಿ. ಈ ಎಲ್ಲ ಸಂಕಷ್ಟ, ಸಮಸ್ಯೆಗಳಿಗೂ ಒಂದು ಸಂಕೇತವಾಗಿ ಖಾಂಡವ ದಹನ ಪ್ರಕರಣ ಇದೆ ಅಂತ ಅನಿಸತೊಡಗಿತು. ಅದನ್ನೊಂದಿಷ್ಟು ಚಿಂತಿಸೋಣ.

ಮಹಾಭಾರತದಲ್ಲಿ ಬರುವ ಖಾಂಡವ ವನ ದಹನದ ಕಥೆ ಹೀಗಿದೆ. ಇಂದ್ರಪ್ರಸ್ಥದಲ್ಲಿ ಪಾಂಡವರು ನೆಲೆಯಾದ ಮೇಲೆ ಒಂದು ದಿನ ಕೃಷ್ಣಾರ್ಜುನರು ವನವಿಹಾರಕ್ಕೆ ತೆರಳುತ್ತಾರೆ. ಅಲ್ಲಿ ಬಂದ ಅಗ್ನಿದೇವ, ತನಗೆ ಬಹು ಹಿಂದೆ ಶ್ವೇತಕಿ ಎಂಬ ರಾಜನ ಯಜ್ಞದಲ್ಲಿ ತುಪ್ಪ ಕುಡಿದುದು ಹೆಚ್ಚಾಗಿ, ಅಜೀರ್ಣವಾಗಿದೆ. ಇದಕ್ಕೆ ಔಷಧಿಯಾಗಿ ಖಾಂಡವವನ್ನು ಸುಡಬೇಕಿದೆ. ಆದರೆ ಇಂದ್ರನ ವಶದಲ್ಲಿರುವ ಆ ವನವನ್ನು ಸುಡುವುದಕ್ಕೆ ಅವನು ಬಿಡುತ್ತಿಲ್ಲ. ತನಗೆ ಸಹಾಯ ಮಾಡಿ ಎಂದು ಕೋರಿದ. ಕೃಷ್ಣಾರ್ಜುನರು ಅದಕ್ಕೊಪ್ಪಿದರು. ಅವರಿಗೆ ಬೇಕಾದ ಆಯುಧಾದಿಗಳನ್ನು ಅಗ್ನಿಯೇ ಒದಗಿಸಿದ. ಅರ್ಜುನನಿಗೆ ದಿವ್ಯ ರಥಾಶ್ವಗಳು, ಗಾಂಡಿವ ಧನುಸ್ಸು, ಅಕ್ಷಯವಾದ ಬತ್ತಳಿಕೆಗಳು ಲಭಿಸಿದವು. ಕೃಷ್ಣನಿಗೆ ಸುದರ್ಶನ ಚಕ್ರವೂ, ಕೌಮೋದಕಿ ಎಂಬ ಗದೆಯೂ ದತ್ತವಾದವು. ಇವುಗಳ ಸಹಾಯದಿಂದ ಖಾಂಡವ ವನವನ್ನು ದಹಿಸುವ ಅಗ್ನಿಗೆ ಅವರು ಸಹಾಯಕರಾದರು. ಇಂದ್ರ ಬಂದ. ಆದರೆ ಅವನು ಇವರೆದುರು ನಿಲ್ಲಲಾರದೆ ಹೋದ. ಆಯಿತು. ಅರಣ್ಯ ಪೂರ್ಣವಾಗಿ ಅಗ್ನಿಗೆ ಆಹುತಿಯಾಯಿತು.

ಇದೆಲ್ಲ ಆದ ಮೇಲೆ ಇಂದ್ರ ಸಂಧಾನಕ್ಕೆ ಬಂದ. ಪ್ರಸಂಗದಲ್ಲಿ (ಖಾಂಡವ ದಹನ - ರಚನೆ ಪ್ರೊ.ಎಂ. ಎ. ಹೆಗಡೆ) ಒಂದು ಪದ್ಯ ಇದೆ.

ಅನಲನುರುಹಿದ ವನವು ಚಿಗಿತುಕೊಳ್ಳಲಿ ಮತ್ತೆ ।
ವನನಾಶ ತರವಲ್ಲ ಜಗದಿ ॥
ಅನಿವಾರ್ಯ ವನವ ನಿರ್ಮಿಸಿ ಪೋಷಿಸಿದ ಬಳಿಕ ।
ಜನರು ನೆಮ್ಮದಿಯುಣಲಿ ಮನದಿ॥

ಅಗ್ನಿಯು ಸುಟ್ಟ ಖಾಂಡವ ವನವು ಮತ್ತೆ ಚಿಗುರಿ ಹಿಂದಿನಂತೆ ಸಮೃದ್ಧ ಅರಣ್ಯವಾಗಲಿ. ಅರಣ್ಯ ನಾಶವು ವಿಹಿತವಲ್ಲ. ಕಾಡನ್ನು ಬೆಳೆಸುವುದು ಅನಿವಾರ್ಯವಿದೆ. ಅದರಿಂದ ಜನರು ನೆಮ್ಮದಿಯನ್ನು ಕಾಣುತ್ತಾರೆ ಎಂಬುದು ಪ್ರಸಂಗದ ಆಶಯ.



ಇದನ್ನಷ್ಟೇ ಇಟ್ಟುಕೊಂಡರೆ ಸಮಸ್ಯೆಯನ್ನು ಸರಳಗೊಳಿಸಿದಂತೆ ಆಗುತ್ತದೆ. ಯಾಕೆಂದರೆ ಇಂದಿನ ದಿನಗಳಲ್ಲಿ ಜನಸಂಖ್ಯೆ ಎಂಬುದು ವಿಪರೀತವಾಗಿ ಹೆಚ್ಚುತ್ತಿದೆ. ದಶಕಗಳ ಹಿಂದಿನವರೆಗೂ ಜನಸಂಖ್ಯಾ ನಿಯಂತ್ರಣ ಎಂಬುದು ಒಂದು ಕರ್ತವ್ಯವೆಂಬಂತೆ ಭಾವನೆಯಿತ್ತು. ಅದು ಒಂದು ರೀತಿಯ ಮೌಲ್ಯವೂ ಆಗಿತ್ತು. ಆದರೆ ಇತ್ತೀಚೆಗೆ ಸಾಮೂಹಿಕವಾಗಿ ಜನರ ದೃಷ್ಟಿಕೋನವೇ ಬದಲಾದಂತೆ ಕಾಣುತ್ತಿದೆ. ಹಾಗಾಗಿ ಜನನ ಪ್ರಮಾಣ ಹೆಚ್ಚುವುದು ಸ್ವಾಭಾವಿಕ. ಹೀಗೆ ಹೆಚ್ಚಿದ ಜನರು ಎಲ್ಲಿಗೆ ಹೋಗಬೇಕು? ಸಹಜವಾಗಿ ಅವರಿಗೆ ಬೇಕಾದ ಮೂಲಭೂತ ಅಗತ್ಯಗಳಿಗಾಗಿ ಅರಣ್ಯವನ್ನು ಅವಲಂಬಿಸುವುದು ಅನಿವಾರ್ಯ. ಇದರಿಂದಾಗಿ ಅರಣ್ಯದ ಪ್ರಮಾಣ ದಿನೇದಿನೇ ತಗ್ಗುತ್ತಿದೆ. ಅಂದರೆ ಮಾನವ ತನ್ನ ಉಳಿವಿಗಾಗಿ ಅರಣ್ಯವನ್ನು ಬಲಿಗೊಡುತ್ತಿದ್ದಾನೆ. ಮನುಷ್ಯ ಮತ್ತು ಪ್ರಕೃತಿಯ ನಡುವಿನ ಸಂಘರ್ಷ ಪ್ರಾಚೀನವಾದುದೇ ಹೌದಾದರೂ, ಕಳೆದ ನಾಲ್ಕಾರು ದಶಕಗಳಿಂದ ಇದು ಹೆಚ್ಚು ತೀವ್ರವಾಗಿದೆ.

ಮತ್ತೆ ಖಾಂಡವ ವನದ ಕಥೆಗೆ ಬರೋಣ. ಹಸ್ತಿನಾವತಿಯಿಂದ ಇಂದ್ರಪ್ರಸ್ಥಕ್ಕೆ ಬಂದ ಪಾಂಡವರಿಗೆ ರಾಜಧಾನಿಯ ವಿಸ್ತರಣೆ, ಜನವಸತಿಗಳ ನಿರ್ಮಾಣ, ಅಗತ್ಯಕ್ಕಾಗಿ ಕಾಡಿನ ಮರಗಳ ಬಳಕೆ-ಹೀಗೆ ಹಲವು ನೆಲೆಗಳಿಂದ ಕಾಡನ್ನು ಕಡಿಯುವ ಅನಿವಾರ್ಯವಿತ್ತು. ಹಾಗೆ ಕಡಿಯದೆ ಇದ್ದರೆ ಇನ್ನೊಂದು ಸಂಕಟವಿತ್ತು. ಆ ಕಾಲದಲ್ಲಿ ದಟ್ಟವಾದ ಅರಣ್ಯದಲ್ಲಿದ್ದ ಮೃಗಗಳಿಂದ ಬಾಧೆಯೂ ಇತ್ತು. ವಿಷಜಂತುಗಳು ಜನರಿಗೆ ಆಪತ್ತನ್ನು ತರುತ್ತಿದ್ದವು. ಹೀಗಾಗಿ ಅಗ್ನಿಯ ಬೇಡಿಕೆಯನ್ನು ನೆಪವಾಗಿಸಿಕೊಂಡು ಖಾಂಡವವೆಂಬ ಆ ದಟ್ಟಾರಣ್ಯವನ್ನು ಸುಟ್ಟುಹಾಕಿದರು. ಆ ಪಾತ್ರಗಳಿಗೆ ಪರಿಸರ, ಅರಣ್ಯ ನಾಶದ ಅಪಾಯದ ಕಲ್ಪನೆಯಿತ್ತೋ ಇಲ್ಲವೋ, ಪ್ರಸಂಗಕರ್ತನಿಗೆ ಇದ್ದ ಕಾರಣ ಕೊನೆಯ ಪದ್ಯ ಪರಿಸರದ ಪ್ರೀತಿಯನ್ನು ಉತ್ತೇಜಿಸುವಂತೆ ಇದೆ. ಇದರಿಂದ ಪರಿಸರ ರಕ್ಷಣೆಯ ಒಂದು ಸಂದೇಶವನ್ನು ಕಲಾತ್ಮಕವಾಗಿ ನೀಡುವುದು ಸುಲಭವಾಯಿತು.

ಈ ಸಮಸ್ಯೆಯನ್ನು ಇವತ್ತಿಗೆ ಅನ್ವಯಿಸಿ ನೋಡೋಣ. ಆಗ ಹೇಳಿದಂತೆ ಜನಸಂಖ್ಯೆ ಬೆಳೆಯುತ್ತಿದೆ. ಅವರ ಅಗತ್ಯಕ್ಕಾಗಿ ನಾಡು ವಿಸ್ತರಿಸುತ್ತಿದೆ. ನೀವು ಗಮನಿಸಿರಬಹುದು, ಹಳ್ಳಿಗಾಡಿನ ಗುಡ್ಡಗಳೂ ತಲೆಕತ್ತರಿಸಿಕೊಂಡು ಮನೆ ನಿವೇಶನಗಳಾಗುವುದಕ್ಕೆ ತಯಾರಾಗಿ ನಿಂತಿವೆ. ಇನ್ನು ನಗರದೊಳಗಿನ ದಟ್ಟಣೆಯ ಮಾತು ಬಿಡಿ. ಅದರೊಂದಿಗೆ ಬೃಹತ್ ಉದ್ಯಮಗಳು, ಹೆದ್ದಾರಿಗಳು ಸಾವಿರಾರು ಎಕರೆ ಅರಣ್ಯ ಹಾಗೂ ಕೃಷಿ ಭೂಮಿಯನ್ನು ನುಂಗಿ ಬೆಳೆಯುತ್ತಿವೆ. ಇನ್ನೊಂದು ಕಡೆಯಲ್ಲಿ ಕೃಷಿಕರೂ ತಮ್ಮ ಕೃಷಿ ಭೂಮಿಯನ್ನು ವಿಸ್ತರಿಸುತ್ತಿದ್ದಾರೆ. ರಬ್ಬರು, ಕಾಫಿ, ಅಡಿಕೆ- ಹೀಗೆ ಅನೇಕ ವಾಣಿಜ್ಯ ಬೆಳೆಗಳೂ ತಮ್ಮ ಕೈಗಳನ್ನು ಅಂತಿಮವಾಗಿ ಅರಣ್ಯ ಭೂಮಿಯತ್ತ ಚಾಚುತ್ತಿವೆ. ಇವೆಲ್ಲದರ ಒಟ್ಟು ಪರಿಣಾಮ ಭೂಮಿಯ ವಾತಾವರಣದ ಮೇಲೆ ಆಗುವುದು ಸ್ವಾಭಾವಿಕ. ನೀರು, ಗಾಳಿ ಎಂಬ ಎರಡು ಜೀವಾಧಾರ ಸಂಗತಿಗಳು ಕಲುಷಿತವಾಗುತ್ತಿವೆ. ಹೀಗೆ ನಗರಗಳೆಲ್ಲ 'ಇಂದ್ರಪ್ರಸ್ಥವಾಗುವ' ರಭಸದಲ್ಲಿ ಖಾಂಡವದಂತಹ ನೂರಾರು ವನಗಳು ಸುಟ್ಟು ಹೋಗುತ್ತಿವೆ. ಇದರೊಂದಿಗೆ ಪ್ರಭುತ್ವವೂ ಹಲವಾರು ಮಹಾ ಯೋಜನೆಗಳನ್ನು (ಸಾಧ್ಯಾಸಾಧ್ಯ ವಿವೇಚನೆಯಿಲ್ಲದೆ) ಹಮ್ಮಿಕೊಳ್ಳುತ್ತಿದೆ.

ಈ ಎಲ್ಲ ವಿಪತ್ತುಗಳನ್ನು ಎದುರಿಸಿದ ಪ್ರಕೃತಿಯೂ ಸುಮ್ಮನಿರುವುದಿಲ್ಲ. ಕೃಷಿಕರ ತೋಟಕ್ಕೆ ನುಗ್ಗುವ ವನ್ಯಮೃಗಗಳಿಂದ ತೊಡಗಿ ಬರಿದಾಗುತ್ತಿರುವ ನೀರ ಸೆಲೆಯವರೆಗೆ ಅದೂ ಪ್ರತಿಭಟನೆಯನ್ನು ತೋರಿಸುತ್ತದೆ. ಈಗ ಜನಿಸಿದ, ಮುಂದೆ ಜನಿಸಲಿರುವ ಮಕ್ಕಳೂ ಮೂಲತಃ ಇರಬೇಕಾದ ಸಮತೋಲನ ತಪ್ಪಿದ್ದರ ಎಲ್ಲ ಪರಿಣಾಮಗಳನ್ನೂ ಎದುರಿಸಬೇಕಾಗಿ ಬರುತ್ತದೆ. ಅನಿವಾರ್ಯವಿರಲಿ, ಇಲ್ಲದಿರಲಿ, ಪ್ರಕೃತಿಯ ಮೇಲೆ ಹಸ್ತಕ್ಷೇಪ ಮಾಡುವಾಗ ಮುಂದಿನ ಪರಿಣಾಮಗಳನ್ನು ತರ್ಕಿಸಿಕೊಂಡು ಮಾಡಬೇಕಾಗುತ್ತದೆ. ಆಧುನಿಕ ಅಗ್ನಿದೇವರ ಅಜೀರ್ಣಕ್ಕೆ ಔಷಧವಾಗಿಯೋ, ತಕ್ಷಕ ಸಂತಾನದಂತಹ ವಿಷ ಜಂತುಗಳ ನಿವಾರಣೆಗೋ ಕಾಡನ್ನು ನಾಶ ಮಾಡಿಯೇ ತೀರಬೇಕಾದ ಸನ್ನಿವೇಶದಲ್ಲೂ ನೆನಪಿಡಬೇಕಾದುದು 'ಅನಲನುರುಹಿದ ವನವು ಚಿಗಿತುಕೊಳ್ಳಲಿ ಮತ್ತೆ' ಎಂಬ ಧ್ವನಿಯನ್ನು.

ಇಡೀ ಪ್ರಕೃತಿಗೆ ನಾವಷ್ಟೇ ಉತ್ತರಾಧಿಕಾರಿಗಳಲ್ಲ, ಈಗಾಗಲೇ ಜನಿಸಿದ ಮಕ್ಕಳೂ ಇದರ ಹಕ್ಕುದಾರರು. ಅವರಿಗಾಗಿ ನಾವಿದನ್ನು ಉಳಿಸಬೇಕಾದ ಬದ್ಧತೆ ನಮಗಿದೆ. ಪ್ರಕೃತಿ ನಾಶದ ಆಪತ್ತು ಹೇಗೆಲ್ಲ ಕಾಡಬಹುದು ಎಂಬುದರ ಕಲ್ಪನೆಯೂ ನಮಗಿಲ್ಲ. ಅಂದಿನ ವನದಹನ ಪ್ರಕರಣದಲ್ಲಿ ಅರ್ಜುನನಿಗೆ ಹಗೆಯಾದ ತಕ್ಷಕನ ಮಗ ಅಶ್ವಸೇನ ಎಂಬ ನಾಗ, ಮುಂದೆ ಎಷ್ಟೋ ಕಾಲದ ಬಳಿಕ ಸರ್ಪಾಸ್ತ್ರವಾಗಿ ಕರ್ಣನ ಬತ್ತಳಿಕೆಯಲ್ಲಿ ಕುಳಿತು ಅರ್ಜುನನ ಕೊರಳು ಕತ್ತರಿಸುವುದಕ್ಕೆ ಕಾಯುತ್ತಿದ್ದ. ಕರ್ಣನ ಧೋರಣೆಯಲ್ಲದಿದ್ದರೆ ಅರ್ಜುನನ ಪ್ರಾಣವೇ ಹೋಗಿಬಿಡುತ್ತಿತ್ತೋ ಏನೋ. ಹಾಗಾಗಿ ಪ್ರಕೃತಿಯನ್ನು ಒಲಿಸಿಕೊಂಡು ಬಾಳುವುದು ಸುಖವೇ ಹೊರತು ಅದರ ವಿನಾಶದಿಂದ ಅಲ್ಲ.

ವ್ಯವಸ್ಥಿತವಾಗಿ ಬರೆಯುವುದು ಕಷ್ಟ

ಬಹ್ವಪಿ ಸ್ವೇಚ್ಛಯಾ ಕಾಮಂ ಪ್ರಕೀರ್ಣಮಭಿಧೀಯತೇ ।
ಅನುಜ್ಝಿತಾರ್ಥ ಸಂಬಂಧಃ ಪ್ರಬಂಧೋ ದುರುದಾಹೃತಃ ॥

-ಶಿಶುಪಾಲವಧೆ

ಮನಸ್ಸಿಗೆ ಬಂದ ಹಾಗೆ ಅಸಂಬದ್ಧವಾದ ಮಾತುಗಳನ್ನು ಬೇಕಾದಷ್ಟು ಆಡಬಹುದು. ಆದರೆ ಒಂದು ವಿಷಯವನ್ನು ಕುರಿತು ಸಂಗತವಾದ ರೀತಿಯಲ್ಲಿ ವ್ಯವಸ್ಥಿತವಾಗಿ ಬರೆಯುವುದು ಕಷ್ಟ - ಎಂಬುದು ಶ್ಲೋಕಾರ್ಥ.

ಪ್ರಕೃತ ಶ್ಲೋಕದಲ್ಲಿ ಚೆನ್ನಾಗಿ ಬರೆಯುವುದು, ಇತರರ ಮನಸ್ಸನ್ನು ಸೆರೆ ಹಿಡಿಯುವಂತೆ ಬರೆಯುವುದು ಕಷ್ಟ ಎಂಬುದನ್ನು ಕವಿಯು ಹೇಳುತ್ತಾನೆ. ಯಾವುದೇ ವಿಷಯವನ್ನು ಮನಮುಟ್ಟುವಂತೆ ಬರೆಯುವುದು ಸುಲಭದ ಕೆಲಸವಲ್ಲ. ಬರವಣಿಗೆಯಲ್ಲಿ ಸಿದ್ಧಿಯಾಗಬೇಕು. ಕೆಲವರ ಬರಹವನ್ನು ಓದಿದಾಗ ಏನನ್ನು ಹೇಳಲು ಹೊರಟಿದ್ದಾರೆ ಎಂಬುದು ಅರ್ಥವಾಗುವುದೇ ಇಲ್ಲ. ಇನ್ನು ಕೆಲವರ ಬರಹ ಬೇಗನೆ ಅರ್ಥವಾಗುತ್ತದೆ. ಅಷ್ಟೇ ಅಲ್ಲ , ಇಂತಹ ಬರಹವನ್ನು ಇನ್ನಷ್ಟು ಓದಬೇಕು ಅನ್ನಿಸುತ್ತದೆ.



ಬರಹ ಮಾತನಾಡಿದಷ್ಟು ಸುಲಭವಲ್ಲ. ಮಾತಿನ ವೈಖರಿಯೇ ಬೇರೆ. ಲೇಖನದ ಶೈಲಿಯೇ ಬೇರೆ. ಮಾತನಾಡುವಾಗ ಏನನ್ನೂ ಮಾತನಾಡಬಹುದು. ಹೇಗೂ ಮಾತನಾಡಬಹುದು. ಆದರೆ ಅದನ್ನೇ ಲೇಖನ ರೂಪಕ್ಕೆ ಇಳಿಸುವಾಗ ಸಾಕಷ್ಟು ಜಾಗ್ರತೆ ವಹಿಸಬೇಕು. ಲೇಖನವೆಂಬುದು ಒಂದು ಬಗೆಯ ದಾಖಲೆ ಇದ್ದಂತೆ. ಮಾತಿನ ಬರದಲ್ಲಿ ಮನಸ್ಸಿಗೆ ಬಂದಂತೆ ಅಸಂಬದ್ಧ ಮಾತುಗಳನ್ನು ಆಡಬಹುದು. ಎದುರಿಗಿರುವ ಅಭಿಮಾನಿಗಳನ್ನು ಮೆಚ್ಚಿಸುವುದಕ್ಕೆ, ಚಪ್ಪಾಳೆ ಗಿಟ್ಟಿಸುವುದಕ್ಕೆ ಏನನ್ನೂ ಹೇಳಬಹುದು. ಆಡಿದ ಮಾತು ಕೆಡುಕಾಗಿರಲಿ,ಒಳಿತಾಗಿರಲಿ ಕೆಲವು ಕಾಲವಿದ್ದು ತನ್ನಷ್ಟಕ್ಕೇ ಮಾಯವಾಗಿ ಬಿಡುತ್ತದೆ.

ಆದರೆ ಬರಹ ಹಾಗಲ್ಲ.ಕೆಲವೊಮ್ಮೆ ಬರೆದದ್ದು ವಿವಾದಕ್ಕೆ ಕಾರಣವಾಗುತ್ತದೆ. 'ಸಹಸ್ರಂ ವದ , ಏಕಂ ಮಾ ಲಿಖ' ಎಂಬ ಮಾತು ಈ ಕಾರಣಕ್ಕಾಗಿಯೇ ಬಂದಿದೆ. ಬರೆಯುವಾಗ ಎಚ್ಚರವಿರಲೆಂಬುದು ಕಥನದ ಆಶಯ. ಆಡುವುದೆಲ್ಲವನ್ನೂ ಬರೆಯುವುದು ಕಷ್ಟ.' 'ಬರೆಯುವುದು ಆಡಿದಷ್ಟು ಸುಲಭವಲ್ಲ' ಇಂತಹ ಮಾತುಗಳು ಬರಹದ ಮಹತ್ವವನ್ನು ಹೇಳುತ್ತವೆ. ಮಾತನಾಡಿದ ಬಳಿಕ ನಾನು ಹಾಗೆ ಹೇಳಿಲ್ಲ , ನನ್ನ ಆಶಯ ಹಾಗಿರಲಿಲ್ಲ. ನನ್ನ ಮಾತನ್ನು ತಪ್ಪಾಗಿ ಅರ್ಥ ಮಾಡಿಕೊಂಡಿದ್ದಾರೆ. ಪತ್ರಕರ್ತರು ನನ್ನ ಮಾತನ್ನು ತಿರುಚಿ ಬರೆದಿದ್ದಾರೆ ಎಂದೆಲ್ಲಾ ಹೇಳಲು ಅವಕಾಶವಿದೆ. ರಾಜಕಾರಣಿಗಳು ಇದನ್ನೇ ಮಾಡುವುದು.ಆದರೆ ಬರವಣಿಗೆ ಸಂಬಂಧಿಸಿ ಈ ರೀತಿ ಹೇಳಲು ಸಾಧ್ಯವಿಲ್ಲ. ಏಕೆಂದರೆ ಬರಹವೇ ದಾಖಲೆಯನ್ನು ಒದಗಿಸುತ್ತದೆ.

ಬರವಣಿಗೆಗೆ ಆಧಾರವನ್ನು ನೀಡಬೇಕಾಗುತ್ತದೆ. ಎಲ್ಲಿಂದ ಸ್ವೀಕರಿಸಿದ್ದು ಎಂಬುದನ್ನು ಉಲ್ಲೇಖಿಸಬೇಕಾಗುತ್ತದೆ. ತಾನು ಬರೆಯಬೇಕಾದದ್ದನ್ನು ಒಪ್ಪ ಓರಣವಾಗಿ ಜೋಡಿಸಬೇಕಾಗುತ್ತದೆ. ಜೊತೆಗೆ ಬರವಣಿಗೆಗೆ ಶೈಲಿ, ಶಬ್ದ ಸಂಗ್ರಹ, ನಿರಂತರ ಓದು ಇವೆಲ್ಲವೂ ಬೇಕಾಗುತ್ತದೆ. ಇಂದಿನ ರಾಜಕಾರಣಿಗಳು ಮಾತನಾಡಿದಂತಲ್ಲ. ಹೇಳುವಾಗ ಸುಳ್ಳು ದಾಖಲೆಗಳನ್ನು, ಅಂಕಿ ಅಂಶಗಳನ್ನು, ಅಸಂಬದ್ಧ ಟೀಕೆಗಳನ್ನು ಮಾಡುತ್ತಾರೆ. ಎದುರಿಗಿರುವ ಕಾರ್ಯಕರ್ತರನ್ನು ಮೆಚ್ಚಿಸುವುದಕ್ಕೆ ಪ್ರಯತ್ನಿಸುತ್ತಾರೆ. ಸುಳ್ಳು ಅಂಕಿ ಅಂಶಗಳನ್ನು ಹೇಳಿ ನಗೆ ಪಾಟಲಾದವರನ್ನು ನಿತ್ಯವೂ ನೋಡುತ್ತೇವೆ. ಇಂತಹ ಪ್ರವೃತ್ತಿ ಬರಹಕ್ಕೆ ಸಲ್ಲದು. ಆದ್ದರಿಂದ ಎಚ್ಚರಿಕೆಯಿಂದ, ಸರಿಯಾದ ಮಾಹಿತಿ ಪಡೆದು ಜನರನ್ನು ಆಕರ್ಷಿಸುವಂತೆ ಬರೆಯಬೇಕು. ಅದಕ್ಕಾಗಿ ಪರಿಶ್ರಮವಿರಬೇಕು.

ಪರದೆಯಾಚೆಗಿನ 'ಧುರಂಧರ್' ಅಜಿತ್ ದೋವಲ್!

ಪೃಥ್ವಿರಾಜ್ ಕುಲಕರ್ಣಿ



ಬಾಲಿವುಡ್‌ನ 'ಶೌರ್ಯ' ಎಂಬ ಸಿನಿಮಾದಲ್ಲಿ ಪಾತ್ರಧಾರಿ ಬ್ರಿಗೇಡಿಯರ್ ಪ್ರತಾಪ್ ನ್ಯಾಯಾಲಯದಲ್ಲಿ 'ನಿಮ್ಮಲ್ಲಿ ಎಷ್ಟು ತಿಳಿದುಕೊಳ್ಳುವ ಕ್ಷಮತೆ ಮತ್ತು ತಡೆದುಕೊಳ್ಳುವ ಶಕ್ತಿ ಇದೆಯೋ ಅಷ್ಟೇ ತಿಳಿದುಕೊಳ್ಳುತ್ತೀರಿ. ಅದಕ್ಕಿಂತ ಹೆಚ್ಚು ತಿಳಿದುಕೊಂಡರೆ ನಿಮಗೆ ಅರಗಿಸಿಕೊಳ್ಳಲಾಗಲ್ಲ' ಎಂಬ ಡೈಲಾಗ್ ಹೇಳುತ್ತಾರೆ. ಅದು ಸಿನಿಮಾ ಸನ್ನಿವೇಶಕ್ಕೆ ತಕ್ಕಂತೆ ಬರೆಯಲಾದ ಸ್ಕ್ರಿಪ್ಟ್. ಅದೇ ಡೈಲಾಗ್ ಇದೀಗ 'ಧುರಂಧರ್' ವಿಚಾರದಲ್ಲಿ ಸತ್ಯವಾಗಿ ಬದಲಾಗುತ್ತಿದೆ. ಧುರಂಧರ್ ಎಂಬ ಸಿನಿಮಾದ context ತಿಳಿದುಕೊಂಡವರಿಗೆ ಅದು ಅರ್ಥವಾಗುತ್ತದೆ. ತಡೆದುಕೊಂಡವರಿಗೆ ಅದು ದೇಶದ ಹೆಮ್ಮೆ. ತಿಳಿದುಕೊಳ್ಳದವರಿಗೆ ಪ್ರೊಪಗೆಂಡಾ. ಒಂದು ಕಾಲದಲ್ಲಿ 'ಭಜರಂಗಿ ಭಾಯಿಜಾನ್' ಅಂತಹ ಸಿನಿಮಾಗಳೊಂದಿಗೆ ಪಾಕ್ ಓಲೈಕೆಗೆ ಕೈಚಾಚುತ್ತಿದ್ದ ಬಾಲಿವುಡ್ ಇದೀಗ ಪ್ರೋ ಇಂಡಿಯನ್ ಸಿನಿಮಾ ಮಾಡುತ್ತಿದೆ.

Context ವಿಚಾರಕ್ಕೆ ಬಂದರೆ ಧುರಂಧರ್ ಒಬ್ಬ ವ್ಯಕ್ತಿಯ ಕಾರ್ಯತಂತ್ರದ ಬಗ್ಗೆ ಮಾತ್ರ ಹೇಳಿಲ್ಲ. ಪಾಕಿಸ್ತಾನಕ್ಕೆ ನುಗ್ಗಿ ಅಲ್ಲಿನ ಜನರಿಗೆ ಚಳ್ಳೆ ಹಣ್ಣು ತಿನ್ನಿಸಿ ದೇಶಕ್ಕಾಗಿ ಹೋರಾಟ ಮಾಡಿದ, ಉಗ್ರರನ್ನು ಕೊಂದ ಮತ್ತು ಆಂತರಿಕ ಮಾಹಿತಿಗಳನ್ನು ಕಳುಹಿಸಿದ ನೂರಾರು ಸ್ಪೈಗಳ ಕಾರ್ಯತಂತ್ರಗಳ ಬಗ್ಗೆ ಒಂದೇ ಸಂಯೋಜಿತ ಪಾತ್ರದ ಮೂಲಕ ತಿಳಿಸಲು ಯತ್ನಿಸಲಾಗಿದೆ. ಸಿನೆಮಾಕ್ಕೆ ತಕ್ಕಂತೆ ಒಂದಿಷ್ಟು ಫಿಕ್ಷನ್ ಕೂಡ ಸೇರಿಸಿರುವುದು ಸುಳ್ಳೇನಲ್ಲ. ಆದರೆ ಕೆಲವರು ಸಾಕ್ಷಿ ಕೇಳುತ್ತಿದ್ದಾರೆ. ಅದಕ್ಕೆ ಅಜಿತ್ ದೋವಲ್ ಅವರೇ ಸಾಕ್ಷಿ. ದೇಶದ ಭದ್ರತೆಯ ದಿಕ್ಕು ಬದಲಾಯಿಸಿ ಪಾಕಿಸ್ತಾನಕ್ಕೆ ನುಗ್ಗಿ ಭಯೋತ್ಪಾದಕರನ್ನು ಬೇಟೆಯಾಡಿ, ಇದು ಹೊಸ ಭಾರತ ಎಂಬ ಎಚ್ಚರಿಕೆಯನ್ನು ಶತ್ರುದೇಶಕ್ಕೆ ತಿಳಿಸಿದ ಪ್ರತ್ಯಕ್ಷ ಧುರಂಧರ್ ಅಜಿತ್ ದೋವಲ್ ಅವರ ಕತೆ ಸಿನಿಮಾಗಿಂತ ಕಮ್ಮಿಯೇನಿಲ್ಲ.

ವಾರದೊಳಗೆ ದಂಗೆ ನಿಲ್ಲಿಸಿದ ಐಪಿಎಸ್ ದೋವಲ್: 1971ರಲ್ಲಿ ಕೇರಳದ ಕಣ್ಣೂರು ಜಿಲ್ಲೆಯ ತಲಶ್ಶೇರಿಯ ಖಾಸಗಿ ಹೋಟೆಲ್‌ನಲ್ಲಿ ದಂಗೆಯಾಯಿತು. ಅದು ಕೋಮು ಘರ್ಷಣೆಯಾಗಿ ಬದಲಾಯಿತು. ಅದರ ಭೀಕರತೆಯಿಂದ ತತ್ತರಿಸಿದ ಕೇರಳದ ಗೃಹ ಸಚಿವ ಕರುಣಾಕರನ್ ಅವರು ತ್ವರಿತ ಪರಿಹಾರಕ್ಕಾಗಿ ಗಲಭೆ ಅಡಗಿಸಲು ನಿಷ್ಠಾವಂತ ಪೊಲೀಸ್ ಅಧಿಕಾರಿಯನ್ನು ಹುಡುಕುತ್ತಿದ್ದರು. ಇದೇ ವೇಳೆ ಅಲ್ಲಿನ ಹಿರಿಯ ಪೊಲೀಸ್ ಅಧಿಕಾರಿಗಳು ತಟ್ಟನೆ ಆಗಷ್ಟೇ ಯುಪಿಎಸ್‌ಸಿ ಪಾಸಾಗಿದ್ದ ಅಜಿತ್ ದೋವಲ್ ಅವರ ಹೆಸರನ್ನು ಸೂಚಿಸಿದರು. ಮೂರು ವರ್ಷವಷ್ಟೇ ಅನುಭವ ಹೊಂದಿದ್ದ ದೋವಲ್, ಡೈರೆಕ್ಟ್ ಫೋರ್ಸ್‌ಗಳನ್ನು ಬಳಸದೆ strategic intelligence gathering technique ಬಳಸಿದರು. ಮೂಲ ಹುಡುಕುತ್ತಾ ಗಲಭೆಕೋರ ಸಂಘಟನೆಗಳ ನಾಯಕರತ್ತ ತಲುಪಿದರು. ಸಂಘಟನೆಗಳ ನಾಯಕರ ಮನವೊಲಿಸಲು ಯಶಸ್ವಿಯಾದರು. ಲೂಟಿಯಾದ ವಸ್ತು ಸಿಕ್ಕ ತಕ್ಷಣಕ್ಕೆ ದಂಗೆಗಳು ನಿಂತು ಹೋದವು. ಶಾಂತಿ ಸ್ಥಾಪನೆಯಾಯಿತು. ವಾರದೊಳಗೆ ಅಜಿತ್ ದೋವಲ್ ಅವರು ಬಗೆಹರಿಸಿದ ಕಾರ್ಯತಂತ್ರದ ಬಗ್ಗೆ ದೇಶದಲ್ಲೆಲ್ಲಾ ಚರ್ಚೆಯಾದವು. ಅವರ ಹೆಗ್ಗಳಿಕೆ ಅವರನ್ನು ದಿಲ್ಲಿಗೆ ಕಳುಹಿಸಿತು. ಅಲ್ಲೇ ಅವರನ್ನು ಇಂಟಲಿಜೆನ್ಸ್ ಬ್ಯೂರೋಗೆ ಸೇರಿಸಲಾಯಿತು.

ಮಿಜೋರಾಂ ಮತ್ತು ದೋವಲ್ ವೈಖರಿ: ಆಗಿನ ಅಸ್ಸಾಂ ಭಾಗವಾಗಿದ್ದ ಮಿಜೋರಾಂನಲ್ಲಿ ಬರಗಾಲ ಭೀತಿ ಶುರುವಾಗಿತ್ತು. ಜೊತೆಗೆ ಅದೇ ಹೊತ್ತಲ್ಲಿ ಅಸ್ಸಾಮಿ ಭಾಷೆಯ ಕ್ರಾಂತಿಯಾಯಿತು. ಸ್ಥಳೀಯರು ಅಸ್ಸಾಮಿ ಭಾಷೆ ಬಲ್ಲವರಿಗೆ ಮಾತ್ರ ನೌಕರಿ ನೀಡಬೇಕೆಂದು ಬೇಡಿಕೆ ಇಟ್ಟರು. ಅದರ ವಿರೋಧಕ್ಕೆ ನಿಂತ ಲಾಲ್ ಡೆಂಗಾ ಎಂಬ ವ್ಯಕ್ತಿ ಹೊಸ ಪಾರ್ಟಿ ನಿರ್ಮಿಸಿ, ಸರ್ಕಾರದ ವಿರುದ್ಧ ಮಾತನಾಡತೊಡಗಿದರು. ಅದಕ್ಕೆ ಜನರ ಬೆಂಬಲ ದೊರೆತು, ವಿವಿಧ ಇಲಾಖೆಗಳ ಜನರು ಹೋರಾಟಕ್ಕೆ ಬೆಂಬಲ ನೀಡಿದರು. ಸರ್ಕಾರದ ವಿರುದ್ಧ ನಿಂತವರು ಪ್ರತ್ಯೇಕ ಮಿಜೋರಾಂ ದೇಶಕ್ಕಾಗಿ ಆಗ್ರಹಿಸಿದರು. ಅಲ್ಲಿಗೆ ದೋವಲ್ ಕಾಲಿಟ್ಟರು. ಹೋರಾಟಗಾರರನ್ನು ಸಂಪರ್ಕಿಸಿ ಸ್ನೇಹ ಬೆಳೆಸಿದರು. ಸರ್ಕಾರ ಮತ್ತು ಹೋರಾಟಗಾರರ ಮಧ್ಯೆ ಸೇತುವೆಯಾಗಿ ಕಾರ್ಯನಿರ್ವಹಿಸಿ ಸರ್ಕಾರದಿಂದ ಕೆಲವು ಬೇಡಿಕೆಗಳನ್ನು ಪೂರೈಸಿಕೊಡುವುದಾಗಿ ದೋವಲ್ ಭರವಸೆ ನೀಡಿದರು. 2 ವರ್ಷಗಳ ಪ್ರಯತ್ನದಿಂದ ಬೇಡಿಕೆಗಳನ್ನು ಈಡೇರಿಸಿದರು. 1974 ರಲ್ಲಿ ಮಿಜೋರಾಂ ಹೊಸ ರಾಜ್ಯವಾಯಿತು. ಹೊಸ ಸಿಎಂ ಲಾಲ್ ಡೆಂಗಾ ಆದರು.



ಸಿಕ್ಕಿಂ ವಿಲೀನದಲ್ಲಿ ದೊಡ್ಡ ಪಾತ್ರ: ಸಿಕ್ಕಿಂ ನ ಪಾಲ್ದೆನ್ ಎಂಬ ರಾಜ ಅಮೆರಿಕದ ಸಿಐಎ ಏಜೆಂಟ್ ಹೋಪ್ ಕೋಕ್‌ನ ಹನಿಟ್ರ್ಯಾಪ್‌ಗೆ ಸಿಕ್ಕಿಬಿದ್ದಿದ್ದ. ಮಾಸ್ಟರ್‌ಪ್ಲಾನ್ ಮಾಡಿದ ರಾ ಹೆಡ್ ಆರ್.ಎನ್ ಕಾವ್, ಸ್ಥಳೀಯ ರಾಜಕಾರಣಿಗಳನ್ನು ಒಗ್ಗೂಡಿಸುವ ಕೆಲಸಕ್ಕೆ ಮುಂದಾದರು. ಜನರನ್ನು ಒಗ್ಗೂಡಿಸಿ ಮನವೊಲಿಸುವ ಕೆಲಸವನ್ನು ಅಜಿತ್ ದೋವಲ್ ಅವರಿಗೆ ನೀಡಲಾಗಿತ್ತು. ಅಚ್ಚುಕಟ್ಟಾದ ಯೋಜನೆಗಳನ್ನು ರೂಪಿಸಿಕೊಂಡ ದೋವಲ್ ಸಿಕ್ಕಿಂ ಭಾರತದೊಂದಿಗೆ ಸೇರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಕೇರಳ, ಮಿಜೋರಾಂ, ಸಿಕ್ಕಿಂನ ದೊಡ್ಡ ದಂಗೆಗಳನ್ನು ನಿಲ್ಲಿಸಿದ್ದಕ್ಕೆ ಅಜಿತ್ ದೋವಲ್ ಭಾರತ ಭದ್ರತಾ ಪಡೆಯ ಪ್ರಮುಖ ವ್ಯಕ್ತಿಯಾದರು. ಅಲ್ಲಿಗೆ ಅವರು ವಿವಿಧ ಆಪರೇಷನ್‌ಗಳಿಗಾಗಿ ಭಾರತೀಯ ರಾಯಭಾರ ಕಚೇರಿಯ ಕಾರ್ಯದರ್ಶಿಯಾಗಿ ಪಾಕಿಸ್ತಾನಕ್ಕೆ ಹೋದರು. ಅಲ್ಲಿಂದಲೇ ಅಜಿತ್ ದೋವಲ್ ಪಾಕ್ ಪಾಲಿನ ಭಯೋತ್ಪಾದಕರಿಗೆ ದುಃಸ್ವಪ್ನವಾದರು. ಪಾಕಿಸ್ತಾನದ ಪರಮಾಣು ಪರೀಕ್ಷೆಯ ಕುರಿತು ಮಾಹಿತಿ ಹೊರತರುವಲ್ಲಿ ಇವರು ಸಿಂಹ ಪಾತ್ರ ವಹಿಸಿದ್ದರು ಎಂಬ ಮಾತುಗಳಿವೆ. ಭಯೋತ್ಪಾದಕರ ಯೋಜನೆಗಳನ್ನು ವಿಫಲಗೊಳಿಸಿದ ವರದಿಗಳಿವೆ. ಗೌಪ್ಯ ಮಿಶನ್‌ಗಳಿಗೆ ಅಜಿತ್ ದೋವಲ್ ಈಗ ರಾಜ. ಆಪರೇಷನ್ ಬ್ಲಾಕ್ ಥಂಡರ್

ಖಲಿಸ್ತಾನಿಗಳ ಉಪಟಳ ಹೆಚ್ಚಾಯಿತು. ಖಲಿಸ್ತಾನಿಗಳು ಸ್ವರ್ಣ ಮಂದಿರದೊಳಗೆ ಅಡಗಿದಾಗ ಪಾಕಿಸ್ತಾನದಲ್ಲಿದ್ದ ಅಜಿತ್ ದೋವಲ್ ಅವರನ್ನು ಕರೆಸಲಾಯಿತು. ಮಂದಿರವನ್ನು ಕಬ್ಜಾ ಮಾಡಿ ಕುಳಿತಿದ್ದ ಖಲಿಸ್ಥಾನಿಗಳಿಗೆ ದೋವಲ್ ಒಮ್ಮೆ ಆಟೋ ಡ್ರೈವರ್ ಆಗಿ, ಒಮ್ಮೆ ಪಾಕ್ ಮೂಲದ ವ್ಯಕ್ತಿಯಾಗಿ ಭೇಟಿ ಮಾಡಿದರು. ಉಗ್ರರು ಯಾವ ಕೋಣೆಯಲ್ಲಿದ್ದಾರೆ ಎಂಬುದನ್ನು ಪತ್ತೆ ಮಾಡಿದ ನಂತರ ಒಳಗೆ ವಿದ್ಯುತ್ ಮತ್ತು ನೀರು ಪೂರೈಕೆ ಕತ್ತರಿಸಿದರು. ಖಲಿಸ್ಥಾನಿ ನಾಯಕ ಹೊರಬರುವಂತೆ ಮಾಡಿದರು. ನಾಯಕ ಹೊರಬರುತ್ತಿದ್ದಂತೆ ಎನ್‌ಎಸ್‌ಜಿ ಕಮಾಂಡೋಗಳಿಂದ ಗುಂಡು ಹಾರಿಸಿದರು. ಖಲಿಸ್ತಾನಿಗಳ ಶಕ್ತಿಯೇ ಉಡುಗಿತು. ಒಳಗಿದ್ದ ಇನ್ನಷ್ಟು ಖಲಿಸ್ತಾನಿಗಳ ಮನವೊಲಿಸುವಲ್ಲಿ ಯಶ ಕಂಡ ಅವರು, ಮತ್ತೊಮ್ಮೆ ಆಪತ್ಬಾಂಧವರಾಗಿ ಕಾಣಿಸಿಕೊಂಡರು. ಪಾಕಿಸ್ತಾನ, ಲಂಡನ್ ಸೇರಿದಂತೆ ವಿವಿಧ ದೇಶಕ್ಕೆ ಹೋಗಿ ಅಲ್ಲಿಂದ ಇಂಟೆಲ್ ಮಾಹಿತಿ ಕೊಟ್ಟ ದೊಡ್ಡ ದೊಡ್ಡ ದಾಳಿಗಳನ್ನು ನಿಲ್ಲಿಸಿದರು. ಮುಂದೊಂದು ದಿನ ಅವರು ಭಾರತದ ಪ್ರಮುಖ ಭದ್ರತಾ ಅಧಿಕಾರಿಯಾದರು. ರಾ ಮುಖ್ಯಸ್ಥರಾಗುವ ಸಮಯ ಬಂದಾಗ ಯಾವುದೋ ಕಾರಣ ಅವರನ್ನು ತಡೆಯಿತು. ಗುಜರಾತಿನಲ್ಲಿ ಬಿಜೆಪಿ ಸರ್ಕಾರ ಬಂದಾಗ ವಿವೇಕಾನಂದ ಫೌಂಡೇಶನ್ ಮೂಲಕ ಇಂಟರ್‌ನ್ಯಾಷನಲ್ ಫೌಂಡೇಶನ್ ಕಟ್ಟಿದರು. ಯೂನಿವರ್ಸಿಟಿ ಕಟ್ಟಿ ಅದರಲ್ಲಿ ಸಾವಿರಾರು ಯುವಕರಿಗೆ ಗುಪ್ತಚರ ಮತ್ತು ಭದ್ರತಾ ತರಬೇತಿ ನೀಡಿದರು. 2004ರಲ್ಲಿ ಐಬಿ ನಿರ್ದೇಶಕ ಆಗುವ ಸಮಯ ಬಂತು. ಆದರೆ ಅಧಿಕಾರದಲ್ಲಿದ್ದ ಕಾಂಗ್ರೆಸ್ ಅವರಿಗೆ ಐಬಿ ನಿರ್ದೇಶಕನ ಪಟ್ಟ ಕಟ್ಟಿದರೂ, 2 ವರ್ಷದ ಮಟ್ಟಿಗಿದ್ದ ಅವಧಿಯನ್ನು 8 ತಿಂಗಳಿಗೆ ಇಳಿಸಿತು. ಅಜಿತ್ ದೋವಲ್ ನಿವೃತ್ತಿಯಾದ ನಂತರ ಅವಧಿಯನ್ನು ಮತ್ತೆ 2 ವರ್ಷಕ್ಕೆ ವಿಸ್ತರಿಸಿತು!

2005ರಲ್ಲಿ ಅಜಿತ್ ದೋವಲ್ ನಿರ್ದೇಶಕರಾಗಿ ನಿವೃತ್ತಿಯಾದರೂ ಮಾಫಿಯಾ ಡಾನ್ ದಾವುದ್ ಇಬ್ರಾಹಿಂ ಸಂಹಾರಕ್ಕೆ ಅಚ್ಚುಕಟ್ಟಾದ ಯೋಜನೆ ರೂಪಿಸಿದ್ದರು. ಆದರೆ ಆ ಯೋಜನೆಗೆ ಮುಂಬೈ ಪೊಲೀಸ್ ಅಡ್ಡಿಪಡಿಸಿ ವಿಫಲಗೊಳಿಸಿದರೆಂಬ ಮಾತುಗಳಿವೆ. 2014ರಲ್ಲಿ ಎನ್‌ಡಿಎ ಸರ್ಕಾರ ಬಂದ ನಂತರ ಅನಂತರ ರಾಷ್ಟ್ರೀಯ ಭದ್ರತಾ ಸಲಹೆಗಾರ ಎಂಬ ಪಟ್ಟ ನೀಡಿತು. ವಿವಿಧ ರಾಷ್ಟ್ರೀಯ ಗೌರವಗಳನ್ನು, ಪ್ರಶಸ್ತಿಗಳನ್ನು ನೀಡಿತು. ಅಲ್ಲಿಂದ ಅಜಿತ್ ದೋವಲ್ ಭಾರತದ ಭದ್ರತಾ ಸ್ಟ್ರಾಟರ್ಜಿಯನ್ನೇ ಬದಲಾಯಿಸಿಬಿಟ್ಟರು. ಆರ್ಟಿಕಲ್ 375 ತೆಗೆಯುವಲ್ಲಿ ದೊಡ್ಡ ಪಾತ್ರ ವಹಿಸಿದರು. ಉರಿ ದಾಳಿಗೆ ಪ್ರತಿದಾಳಿ ಯೋಜನೆ ಹಾಕಿಕೊಟ್ಟರು. ಪಾಕ್‌ನ ಪ್ರತಿಯೊಂದು ಷಡ್ಯಂತ್ರಕ್ಕೆ ತ್ವರಿತ ಮತ್ತು ತಕ್ಕ ಉತ್ತರ ನೀಡುತ್ತಾ ಬಂದರು. ನೋಟು ನಿಷೇಧ ಸಮಯದಲ್ಲೂ ಅಜಿತ್ ಅವರ ಪಾತ್ರ ದೊಡ್ಡದಿದೆ ಎಂಬ ಮಾತುಗಳಿವೆ. ಒಟ್ಟಿನಲ್ಲಿ ಅಜಿತ್ ದೋವಲ್ ಅವರ ಕಾರ್ಯವೈಖರಿ ವಿಶ್ವಕ್ಕೆ ಮಾದರಿ. ಸಾರ್ವಜನಿಕ ವಲಯದಲ್ಲಿ ಲಭ್ಯವಿರುವ ಮಾಹಿತಿ ಒಗ್ಗೂಡಿಸಿದಾಗ ಇಂತಹ ಕೆಲವು ಪವಾಡಗಳು ಮಾತ್ರ ಹೊರಬರುತ್ತವೆ. ಅಸಲಿಯತ್ತಾಗಿ ಪಬ್ಲಿಕ್ ಡೋಮೇನಿನಲ್ಲಿ ಇಲ್ಲದ ಮಾಹಿತಿ ಹುಡುಕಿದರೆ ದೋವಲ್ ಬಗ್ಗೆ ಇನ್ನೆಷ್ಟಿರಬಹುದೋ! ಯಾವ ದೇಶದ ಗುಪ್ತಚರ ಇಲಾಖೆಯ ಬಗ್ಗೆ ಅಷ್ಟೊಂದು ಹೇಳಲಾಗುವುದಿಲ್ಲವೋ ಅಷ್ಟು ಬಲಿಷ್ಠವಾಗಿರುತ್ತವೆ ಎಂಬ ಮಾತುಗಳು ಇಲ್ಲಿಗೆ ನೆನಪಿಸಿಕೊಳ್ಳಬಹುದು. ರಾ ಮತ್ತು ಐಬಿಯ ಕಾರ್ಯವೈಖರಿಗಳು ಮೊಸಾದ್, ಸಿಐಎ ಕಾರ್ಯಾಚರಣೆಗಳಂತೆ ಪ್ರಚಾರಗೊಂಡಿಲ್ಲ. ಅದಕ್ಕೆ ಕಾರಣ ಆಪರೇಷನ್‌ಗಳನ್ನು ಗುಪ್ತವಾಗಿ ಇಟ್ಟಿದ್ದು ಅನ್ನಬಹುದು. ಇದಕ್ಕೆ ಅಜಿತ್ ದೋವಲ್ ಅಂತಹ ಧುರಂಧರ್‌ಗಳೇ ಮುಖ್ಯ ಕಾರಣ. ಭಾರತ ಸುರಕ್ಷಿತವಾಗಿದೆ, ನಾವೆಲ್ಲಾ ನೆಮ್ಮದಿಯಿಂದ ನಿದ್ದೆ ಮಾಡುತ್ತಿದ್ದೇವೆ. ಹಾಗೇ ಧುರಂಧರ್ ಅಂತಹ ಸಿನೆಮಾಗಳ ಬಗ್ಗೆ ಮಾತನಾಡುತ್ತೇವೆ ಎಂದರೆ ಅದಕ್ಕೆ ರಾ ಮತ್ತು ಐಬಿಯ ಬಲಿದಾನವೇ ಕಾರಣ. ಆದ್ದರಿಂದ 'ಬಲಿದಾನ ಪರಮೋ ಧರ್ಮಃ'.

ಹನುಮಂತನ ಪ್ರಸಂಗಾವಧಾನತೆ ಮತ್ತು ಇಂಗಿತಜ್ಞತೆ

ಗ.ನಾ.ಭಟ್ಟ

ಹನುಮಂತನ ಪ್ರಸಂಗಾವಧಾನತೆಗೆ ಒಂದು ಸುಂದರ ಉದಾಹರಣೆ ಕಿಷ್ಕಿಂಧಾಕಾಂಡದಲ್ಲಿ ಬರುತ್ತದೆ. ಆತ ತಾನೇ ರಾಮಲಕ್ಷ್ಮಣರಿಗೆ ಪರಿಚಯಿಸಿಕೊಂಡು ಸುಗ್ರೀವನಿಗೆ ಅವರನ್ನು ಪರಿಚಯಿಸಿಕೊಡುತ್ತಾ ಹನುಮಂತ, "ಇವರು ರಾಮಲಕ್ಷ್ಮಣರು. ಅಯೋಧ್ಯಾ ಅರಸು ಕುಮಾರರು; ದಶರಥ ಮಹಾರಾಜನ ಮಕ್ಕಳು. ಪಿತೃವಾಕ್ಯಪರಿಪಾಲನೆಗಾಗಿ ವನವಾಸ ದೀಕ್ಷೆ ಹೊತ್ತು ಅರಣ್ಯಕ್ಕೆ ಬಂದಿದ್ದಾರೆ. ಮಧ್ಯಂತರದಲ್ಲಿ ರಾಮನ ಮಡದಿ ಸೀತೆ ರಾವಣನಿಂದ ಅಪಹೃತಳಾದಳು. ಅವಳನ್ನು ಹುಡುಕುತ್ತಾ ನಿನ್ನ ಸಹಾಯವನ್ನು ಯಾಚಿಸಿ ಇಲ್ಲಿಗೆ ಬಂದಿದ್ದಾರೆ. ಇವರನ್ನು ಸರಿಯಾಗಿ ಸ್ವಾಗತಿಸಿ, ಅರ್ಚಿಸು. ಇವರು ಪೂಜ್ಯತಮರು" ಎಂದು ಹೇಳುತ್ತಾನೆ. ಹನುಮಂತನ ಈ ಮಾತಿನ ಸೂಕ್ಷ್ಮ, ಅದರ ಆಳ ಸುಗ್ರೀವನಿಗೆ ಅರ್ಥವಾಗಲಿಲ್ಲ.

ಸುಗ್ರೀವ ರಾಮನ ವಿಷಯದಲ್ಲಿ ಹೇಗೆ ನಡೆದುಕೊಂಡ ಎಂದು ಗಮನಿಸಿದರೆ ಆತ ಮಾಡಿದ ತಪ್ಪು ಏನು ಅಂತ ಗೊತ್ತಾಗುತ್ತದೆ. ಹೊಸದಾಗಿ ಪರಿಚಿತನಾದ ರಾಮನನ್ನು ಕುರಿತು ಆತ ಹೇಳಿದ-"ನೀನು ಧರ್ಮದಲ್ಲಿ ಸುಶಿಕ್ಷಿತನೆಂದೂ, ವೀರನೆಂದೂ, ಸರ್ವಭೂತಗಳಲ್ಲೂ ದಯೆ ಇರುವವನೆಂದೂ" ಹನುಮಂತ ಹೇಳಿದ. "ಅವನು ನಿನ್ನ ಸದ್ಗುಣವನ್ನು ಪರಿಚಯಿಸಿದ್ದಾನೆ. ನಾನೋ ವಾನರ, ನೀನೋ ಅರಸುಕುಮಾರ, ನಿನಗೆ ನನ್ನ ಸಖ್ಯ ಬೇಕಿದ್ದರೆ ಇಗೋ ಕೈ ನೀಡಿದ್ದೇನೆ. ಕೈ ಹಿಡಿ" ಎಂದು ಒಂದು ಬಗೆಯ ದರ್ಪವನ್ನು ತೋರಿಸಿದ. "ರೋಚತೆ ಯದಿ ವಾ ಸಖ್ಯಂ ಬಾಹುರೇಷ ಪ್ರಸಾರಿತಃ-ಕಿ: 5-12. ರಾಮನ ಕಾಲಿಗೂ ಬೀಳಲಿಲ್ಲ. ನಮಸ್ಕರಿಸಲೂ ಇಲ್ಲ. ಇದು ರಾಮನಿಗೆ ಮಾಡಿದ ಅಪಚಾರವಾಯಿತು. ರಾಮ ಇದನ್ನು ಗಮನಿಸಿದ ಮತ್ತು ಸಹಿಸಿಕೊಂಡ. ಹಾಗೆಯೇ ಮುಂದೆ ಅವರೀರ್ವರಲ್ಲಿ ಅಗ್ನಿಸಾಕ್ಷಿಯಾಗಿ ಸ್ನೇಹವೂ ಆಯಿತು. ಅಷ್ಟು ಹೊತ್ತೂ ರಾಮನಿಗೆ ಕೂತುಕೊ ಎನ್ನದ ಸುಗ್ರೀವ ರಾಮನೊಡನೆ ಸ್ನೇಹವುಂಟಾಗಿ, ರಾಮನ ಮೇಲೆ ನಂಬಿಕೆ ಹುಟ್ಟಿದ ಮೇಲೆ ಎಲೆ ಮತ್ತು ಹೂಗಳಿಂದ ತುಂಬಿ ತುಳುಕುತ್ತಿದ್ದ ಸಾಲವೃಕ್ಷದ ಒಂದು ದೊಡ್ಡ ಕೊಂಬೆಯನ್ನು ಮುರಿದು ಹಾಸಿ ಅದರ ಮೇಲೆ ರಾಮನಿಗೆ ಕೂತುಕೊಳ್ಳುವಂತೆ ಹೇಳಿ ತಾನೂ ಅದರ ಮೇಲೇ ಕೂತ. ರಾಮನ ಒತ್ತಿನಲ್ಲೇ ಇದ್ದ ಲಕ್ಷ್ಮಣನನ್ನು "ಬಂದೆಯಾ? ಹೋದೆಯಾ?" ಅಂತಲೂ ವಿಚಾರಿಸಲಿಲ್ಲ. ಮಹಾಭಾಗವತನಾದ ಲಕ್ಷ್ಮಣನಿಗೆ ಹೀಗೆ ಅಪಚಾರವಾದುದನ್ನು ರಾಮ ಗಮನಿಸಿದ. ಮಾತ್ರವಲ್ಲ.



ಹನುಮಂತನೂ ಗಮನಿಸಿದ. ಅಯ್ಯೋ ಕೆಲಸ ಕೆಟ್ಟಿತಲ್ಲ! ಎಂದುಕೊಂಡು ಹನುಮಂತ ತನ್ನ ದೊರೆಯ ಮಾನ ಮುಚ್ಚಲು ಶ್ರೀರಾಮನಿಗೆ ಹಾಕಿದ ಸಾಲವೃಕ್ಷದ ಟೊಂಗೆಗಿಂತಲೂ ಉತ್ತಮವಾದ, ತುಂಬಾ ಹೂಗಳಿಂದ ಕೂಡಿದ ಶ್ರೀಗಂಧದ ಟೊಂಗೆಯೊಂದನ್ನು ಮುರಿದು ಲಕ್ಷ್ಮಣನಿಗೆ ನೀಡಿದ ಮತ್ತು ತಾನು ನಿಂತುಕೊಂಡೇ ಉಳಿದ. ಲಕ್ಷ್ಮಣ ಅದರ ಮೇಲೆ ಆಸೀನನಾದ.

ಇದು ಕೇವಲ ಒಂದು ಸಲ ನಡೆದದ್ದಲ್ಲ. ಮತ್ತೊಮ್ಮೆಯೂ ಸುಗ್ರೀವ ಹಾಗೆಯೇ ನಡೆದುಕೊಂಡ. ಹನುಮಂತ ಮತ್ತೆ ಅದನ್ನು ಸರಿಪಡಿಸಿದ. ಹನುಮಂತನ ಆ ನಡವಳಿಕೆಯಿಂದ ಶ್ರೀರಾಮ ಪ್ರಸನ್ನನಾದನಂತೆ. (ಪ್ರಸನ್ನಮುದಧಿಂ ಯಥಾ) ಸುಗ್ರೀವ ಬೇಕು ಅಂತಲೇ ಉದ್ದೇಪೂರ್ವಕವಾಗಿ ಮಾಡಿದ್ದಲ್ಲ ಅದು. ಆದರೆ ತಪ್ಪು ತಪ್ಪೇ. ಸುಗ್ರೀವ ರಾಮನಿಗೆ ಮಾಡಿದ ಉಪಚಾರದಂತೆ ಲಕ್ಷ್ಮಣನಿಗೂ ಮಾಡಬೇಕಿತ್ತು. ಏಕೆಂದರೆ ರಾಮನಿಗೆ ಲಕ್ಷ್ಮಣ ಎಲ್ಲವೂ ಆಗಿದ್ದ. ಅವನು ರಾಮನ ಏಕೈಕ ಪರಿವಾರ. ಮಿತ್ರ, ಮಂತ್ರಿ, ಭೃತ್ಯ, ಸಖಾ ಎಲ್ಲವು ಆಗಿದ್ದ. ಅದನ್ನು ಗಮನಿಸದ ಸುಗ್ರೀವ ಗುರುತರ ಪ್ರಮಾದವನ್ನೇ ಎಸಗಿದ್ದ. ಅದನ್ನು ಸರಿಪಡಿಸುವ ಪ್ರಸಂಗಾವಧಾನತೆಯನ್ನು ಹನುಮಂತ ಮಾಡಿದ. ಇಂತಹ ಕಾರಣಗಳಿಂದಲೇ ಹನುಮಂತನನ್ನು ವಿವೇಕದ ಸಾಕಾರಮೂರ್ತಿಯೆಂದೂ, ಚಾಣಾಕ್ಷನೆಂದೂ ಕರೆಯುವುದು.

ಅವನ ಇಂಗಿತಜ್ಞತೆಯಂತೂ ಅಮೋಘವಾದುದು.ಆತ ಸೀತೆಯನ್ನು ಹುಡುಕುತ್ತಾ ಹುಡುಕುತ್ತಾ ಅಶೋಕವನದತ್ತ ಹೋದ. ಅಲ್ಲಿ ಸೀತೆ ಕಂಡಳು. ಆದರೆ ಅವನು ಅಲ್ಲಿಗೆ ಹೋದ ಸಮಯ ರಾತ್ರಿಯಾಗಿತ್ತು. ಬೆಳಗಾಗಲು ಸ್ವಲ್ಪವೇ ಸಮಯವಿತ್ತು. ಅಷ್ಟರಲ್ಲಿ ರಾವಣನ ಸವಾರಿ ಅವಳಲ್ಲಿ ಪ್ರಣಯಯಾಚನೆ ಮಾಡಲು ಅಲ್ಲಿಗೆ ಬಂತು. ಹನುಮಂತ ಶಿಂಶಪಾವೃಕ್ಷದ ಮೇಲೆ ಮರೆಯೊಂದರಲ್ಲಿ ಕೂತು ಅದನ್ನೆಲ್ಲ ಗಮನಿಸತೊಡಗಿದ. ರಾವಣನ ಪ್ರಣಯಯಾಚನೆಗೆ ಸೀತೆ ಧಿಕ್ಕಾರ ಸೂಚಿಸಿದಳು. ಅದರಿಂದ ಸಿಟ್ಟುಗೊಂಡ ರಾವಣ ಅವಳು ಒಲಿಯುವುದಕ್ಕೆ ಎರಡು ತಿಂಗಳ ಅವಧಿಯನ್ನು ನೀಡಿ ಹೊರಟುಹೋದ. ರಾವಣನ ಈ ದರಿದ್ರ ಕೋಟಲೆಯನ್ನು ಸಹಿಸಲಾರದ ಸೀತಾದೇವಿ ನಂತರ ಸ್ವಲ್ಪ ಹೊತ್ತಿನಲ್ಲಿ ಆತ್ಮಹತ್ಯೆಗೆ ಯತ್ನಿಸುತ್ತಾಳೆ. ಇಂತಹ ಸಂದರ್ಭದಲ್ಲಿ ಹನುಮಂತ ಏನು ಮಾಡಬೇಕು? ದಿಢೀರನೆ ಅವಳೆದುರು ಪ್ರತ್ಯಕ್ಷನಾಗಬೇಕೆ? ಹಾಗೆ ಪ್ರತ್ಯಕ್ಷನಾದರೆ ಅವನೇ ವೇಷ ಮರೆಸಿಕೊಂಡು ಬಂದ ರಾವಣ ಅಂತ ಆಕೆ ತಿಳಿದರೆ ಏನು ಮಾಡುವುದು? ಅವಳಲ್ಲಿ ವಿಶ್ವಾಸ ಸಂಪಾದಿಸುವುದು ಹೇಗೆ? ಅವಳಲ್ಲಿ ಮಾತನಾಡಬೇಕಾದ ಭಾಷೆ ಯಾವುದು? ಹೀಗೆ ಅವನಿಗೆ ಅನೇಕ ಗೋಜಲುಗಳು ಕಾಣಿಸಿಕೊಳ್ಳುತ್ತವೆ. ಇಲ್ಲಿಯೇ ಅವನ ಬುದ್ಧಿವಂತಿಕೆಯಿರುವುದು.

ಹಾಗಾದರೆ ಏನು ಮಾಡಿದ? ಸೀತೆಗೆ ತನ್ನಲ್ಲಿ ನಂಬಿಕೆ ಹುಟ್ಟುವಂತೆ ಅವನು ರಾಮನ ಕಥೆಯನ್ನು ಸಂಕ್ಷಿಪ್ತವಾಗಿ ಹೇಳಿದ. ಸೀತೆಗೆ ನಂಬಿಕೆ ಹುಟ್ಟಿತು. ಮುಂದೆ ಅವನು ರಾಮನಾಮಾಂಕಿತ ಮುದ್ರೆಯುಂಗರವನ್ನು ಸೀತೆಗೆ ನೀಡಿದ್ದು, ಅವಳು ಚೂಡಾಮಣಿಯನ್ನು ನೀಡಿದ್ದು ಎಲ್ಲರಿಗೂ ಗೊತ್ತು. ಇವೆಲ್ಲ ಆದ ಮೇಲೆ ಅವನು ಏನು ಮಾಡಿದ ಅನ್ನುವುದು ಬಹಳ ಮುಖ್ಯ. ಅಶೋಕವನ ಧ್ವಂಸ, ರಾವಣನ ಕಿಂಕರರೆಂಬ ಎಂಭತ್ತು ಸಾವಿರ ರಕ್ಕಸರನ್ನು ಕೊಂದು ಹಾಕಿದ್ದು, ರಾವಣನ ಮುದ್ದು ಮಗ ಅಕ್ಷನೆಂಬವನನ್ನು ಕೊಂದು ಅವನ ಹೆಣದ ಗುರುತೂ ಸಿಗದಂತೆ ಉಂಡೆ ಮಾಡಿ ಎಸೆದಿದ್ದು, ರಾವಣನಿಗೆ ಉಪದೇಶ ಮಾಡಿದ್ದು ಇತ್ಯಾದಿ ಇತ್ಯಾದಿ.

ಇಲ್ಲಿ ಹನುಮಂತ ಯಾವುದನ್ನೂ ಅನುಚಿತವಾಗಿ ಮಾಡಿರಲಿಲ್ಲ. ರಾಮನ ಇಂಗಿತಕ್ಕೆ ತಕ್ಕಂತೆ ನಡೆದುಕೊಂಡಿದ್ದ.

ಕಿರುಸುದ್ದಿ

ಮಹಂತರ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾಟ

ಮುಲ್ಕಿ: ಕ್ರೀಡೆಯ ಮೂಲಕ ಸಂಘಟನೆ ಬಲಪಡಿಸಿ ಸಮಾಜದಲ್ಲಿ ಸೇವಾ ಕಾರ್ಯಕ್ರಮ ಮೂಲಕ ಮಾದರಿಯಾಗಿ ಎಂದು ಸುರೇಶ್ ಗುರಿಕಾರ ಹೇಳಿದರು. ಅವರು ಒಡೆಯರಬೆಟ್ಟು ಶ್ರೀ ಮಹಂತರ ಮಠದ ವತಿಯಿಂದ ಬಪ್ಪನಾಡು ಕೋಟೆದಬಬ್ಬು ದೈವಸ್ಥಾನದ ಬಳಿಯ ಮೈದಾನದಲ್ಲಿ ನಡೆದ ಮಹಂತರ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾಟ-2026 ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದರು. ಕ್ರಿಕೆಟ್ ಪಂದ್ಯಾಟವನ್ನು ಉದ್ಯಮಿ ಶಾಂತಾರಾಮ ಕುಂದರ್ ಉದ್ಘಾಟಿಸಿದರು ಮುಖ್ಯ ಅತಿಥಿಗಳಾಗಿ ಮುಲ್ಕಿ ನಗರ ಪಂಚಾಯತ್ ಮಾಜಿ ಅಧ್ಯಕ್ಷ ಸುನಿಲ್ ಆಳ್ವ, ಲತಾ ಶೇಖರ್, ನಿಶಾ ಗಿರೀಶ್ ಮೆಂಡನ್ ಒಡೆಯರ ಬೆಟ್ಟು, ರಾಜೇಶ್ವರಿ ಕೊಳಚ ಕಂಬಳ, ಪತ್ರಕರ್ತ ಹರೀಶ್ ಹೆಜ್ಮಾಡಿ, ಶಂಕರ, ಚರಣ್, ಕೃಷ್ಣ ಕೋಟ್ಯಾನ್ ಕೊಳಚಿ ಕಂಬಳ, ಪ್ರೇಮ್ ಬಿ ಒಡೆಯರ ಬೆಟ್ಟು ಸಂಘಟಕರಾದ ಮಹಾಂತರ ಮಠದ ಅಧ್ಯಕ್ಷ ಹರೀಶ್ ಪುರುಷೋತ್ತಮ ಮತ್ತು ಸುನಿಲ್ ದೇವಾಡಿಗ ಮತ್ತಿತರರು ಉಪಸ್ಥಿತರಿದ್ದರು. ಬಳಿಕ ಮಹಂತರ ಮಠದ ಅಧ್ಯಕ್ಷ ಹರೀಶ್ ದೇವಾಡಿಗ ಸ್ವಾಗತಿಸಿದರು ದಿನೇಶ್ ಕೋಲ್ನಾಡು ನಿರೂಪಿಸಿದರು ಬಳಿಕ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾಟ ನಡೆಯಿತು.

ಏ. 4-5ರಂದು ಈಜು ಸ್ಪರ್ಧೆ

ಮಂಗಳೂರು: ದಕ್ಷಿಣ ಕನ್ನಡ ಸ್ವಿಮ್ಮಿಂಗ್ ಅಸೋಸಿಯೇಷನ್, ಪನಾಮಾ ಅಕಾಡೆಮಿ ಸ್ಪೋರ್ಟ್ಸ್ ಆ್ಯಂಡ್ ಬಾಡಿ ಸೈನ್ಸ್ ಇದರ ಸಹಯೋಗದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಈಜು ಸ್ಪರ್ಧೆ –ಫ್ಲಡ್‌ಲೈಟ್ ಮೀಟ್ ಏ.4 ಮತ್ತು 5ರಂದು ಮಂಗಳೂರು ಲೇಡಿಹಿಲ್‌ನಲ್ಲಿರುವ ಮಂಗಳೂರು ಮಹಾನಗರ ಪಾಲಿಕೆ ಈಜುಕೊಳದಲ್ಲಿ ಆಯೋಜಿಸಲಾಗಿದೆ. ಈ ಸ್ಪರ್ಧೆಗಳು ಪ್ರತಿದಿನ ಸಂಜೆ 4 ಗಂಟೆಯಿಂದ ಆರಂಭವಾಗಲಿದ್ದು, ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸುವ ಪ್ರತಿಭಾವಂತ ಈಜುಗಾರರು ಒಟ್ಟು 97 ವಿಭಿನ್ನ ಸ್ಪರ್ಧೆಗಳಲ್ಲಿ ಭಾಗವಹಿಸಲಿದ್ದಾರೆ. ಈ ಕಾರ್ಯಕ್ರಮವು ಯುವ ಪ್ರತಿಭೆಗಳನ್ನು ಉತ್ತೇಜಿಸಲು ಮತ್ತು ಕ್ರೀಡಾಕೌಶಲ್ಯ ಪ್ರದರ್ಶನಕ್ಕೆ ವೇದಿಕೆ ಒದಗಿಸುವ ಉದ್ದೇಶವನ್ನು ಹೊಂದಿದೆ. ವಿವಿಧ ವಯೋಮಿತಿಯ ಸ್ಪರ್ಧೆಗಳು ಭಾಗವಹಿಸುವ ನಿರೀಕ್ಷೆಯಿದ್ದು, ಕ್ರೀಡಾಭಿಮಾನಿಗಳಿಗೆ ಮನರಂಜನೀಯ ಮತ್ತು ರೋಚಕ ಅನುಭವವನ್ನು ನೀಡಲಿದೆ. ಫ್ಲಡ್‌ಲೈಟ್ ವ್ಯವಸ್ಥೆಯೊಂದಿಗೆ ನಡೆಯುವ ಈ ಸ್ಪರ್ಧೆ ವಿಶಿಷ್ಟ ಆಕರ್ಷಣೆಯಾಗಲಿದೆ. ಸ್ಪರ್ಧೆಯಲ್ಲಿ ವಿಜೇತರಾದವರಿಗೆ ನಗದು ಬಹುಮಾನಗಳೊಂದಿಗೆ ಪದಕಗಳು ಹಾಗೂ ಪ್ರಮಾಣಪತ್ರಗಳನ್ನು ನೀಡಿ ಗೌರವಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಮಹಿಳೆ, ಇಬ್ಬರು ಮಕ್ಕಳು ನಾಪತ್ತೆ: ದೂರು

ಕಾಸರಗೋಡು: ಮಹಿಳೆ ಹಾಗೂ ಇಬ್ಬರು ಮಕ್ಕಳು ನಾಪತ್ತೆಯಾದ ಬಗ್ಗೆ ದೂರಲಾಗಿದೆ. ನೆಲ್ಲಿಕುಂಜೆ ಬೀಚ್ ರಸ್ತೆಯ ಎನ್.ಯಮುನಾ ಎಂಬವರ ಪುತ್ರಿ ಶರಣ್ಯಾ (27) ಹಾಗೂ ಆಕೆಯ ಆರು ವರ್ಷದ ಪುತ್ರ, ಎರಡು ವರ್ಷದ ಪುತ್ರಿ ನಾಪತ್ತೆಯಾದವರು. ಶನಿವಾರ ಮಧ್ಯಾಹ್ನ ಕೋಟಿಕುಳಂನಲ್ಲಿರುವ ಪತಿಯ ಮನೆಗೆ ಹೋಗುವುದಾಗಿ ತಿಳಿಸಿ ಶರಣ್ಯಾ ತನ್ನ ಮಕ್ಕಳನ್ನು ಕರೆದುಕೊಂಡು ಮನೆಯಿಂದ ಹೋಗಿದ್ದು, ಬಳಿಕ ಅವರು ನಾಪತ್ತೆಯಾಗಿರುವುದಾಗಿ ಶರಣ್ಯಾ ಅವರ ತಾಯಿ ಕಾಸರಗೋಡು ನಗರಠಾಣೆ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.



ದಾವಣಗೆರೆ ಉಪಚುನಾವಣೆಯ ಹಿನ್ನೆಲೆಯಲ್ಲಿ ಕ್ಷೇತ್ರದ ಜಾಲಿ ನಗರ ಮತ್ತು ಎಸ್.ಪಿ.ಎಸ್ ನಗರದಲ್ಲಿ ಭಾರತೀಯ ಜನತಾ ಪಾರ್ಟಿಯ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ ಅವರ ಪರವಾಗಿ ಕಾರ್ಕಳ ಶಾಸಕ ಸುನೀಲ್ ಕುಮಾರ್ ಮತಯಾಚನೆ ನಡೆಸಿದರು. ಹಲವು ಮಂದಿ ಕಾರ್ಯಕರ್ತರು ಶಾಸಕರ ಜೊತೆಗಿದ್ದರು.

ಶಕ್ತಿನಗರ ಸಾನಿಧ್ಯ ಭಿನ್ನ ಸಾಮರ್ಥ್ಯದ ಮಕ್ಕಳ ವಸತಿ ಶಾಲೆ

ಇಂದು ಆಟಿಸಂ ಬಗ್ಗೆ ಮಾಹಿತಿ ಶಿಬಿರ

ಮಂಗಳೂರು: ಏ. 2ರಂದು ಅಂತಾರಾಷ್ಟ್ರೀಯ ಆಟಿಸಂ ದಿನ. ಅಂದು, ಮಂಗಳೂರಿನ ಶಕ್ತಿನಗರದಲ್ಲಿರುವ ಸಾನಿಧ್ಯ ಭಿನ್ನ ಸಾಮರ್ಥ್ಯದ ಮಕ್ಕಳ ವಸತಿ ಶಾಲೆಯಲ್ಲಿ ಆಟಿಸಂ ಬಗ್ಗೆ ಮಾಹಿತಿ ಶಿಬಿರವನ್ನು ಏರ್ಪಡಿಸಲಾಗಿದೆ.

ಪ್ರಸ್ತುತ ಸನ್ನಿವೇಶದಲ್ಲಿ ಆಟಿಸಂ ಒಂದು ದೊಡ್ಡ ವಿಚಾರವಾಗಿದ್ದು, ಹುಟ್ಟಿದ ಮಕ್ಕಳು ಒಂದರಿಂದ ಮೂರು ವರ್ಷದವರೆಗೆ ಸಾಮಾನ್ಯರಂತಿದ್ದು, ತಕ್ಷಣ ಅವರಲ್ಲಿ ಬದಲಾವಣೆ ಕಂಡು ಬಂದು ಮಾತು ನಿಂತು ಹೋಗುವುದಲ್ಲದೆ ಉಳಿದ ಚಟುವಟಿಕೆಗಳು ವ್ಯತಿರಿಕ್ತವಾಗಿ ಕಂಡುಬರುವುದು. ಈ ಸಂದರ್ಭದಲ್ಲಿ ಹೆತ್ತವರು ತಾವೇನು ಮಾಡಬೇಕು ಎಂಬುದನ್ನೇ ತಿಳಿಯದಾಗುವರು. ಈ ಬಗ್ಗೆ ಸಾರ್ವಜನಿಕವಾಗಿ ಎಚ್ಚರ ಮೂಡಿಸಬೇಕಾಗಿರುವುದು ಅಗತ್ಯ. ಕೆಲವಾರು ವರ್ಷಗಳಿಂದ ಈ ದಿನದಂದು ಬೇರೆ ಬೇರೆ ಸಾರ್ವಜನಿಕ ಸೇವೆಗಳಲ್ಲಿ ತೊಡಗಿಸಿಕೊಂಡಿರುವ ವ್ಯಕ್ತಿಗಳಿಗೆ ಮಾಹಿತಿ ಶಿಬಿರಗಳನ್ನು ಸಾನಿಧ್ಯ ಸಂಘಟಿಸಿಕೊಂಡು ಬರುತ್ತಿದೆ. ಈ ಬಾರಿ ದಕ್ಷಿಣ ಕನ್ನಡ ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಯೋಗದೊಂದಿಗೆ ಮಂಗಳೂರು ಗ್ರಾಮಾಂತರ ಪ್ರದೇಶದ ಅಂಗನವಾಡಿ ಕಾರ್ಯಕರ್ತೆಯರಿಗೆ ಮಾಹಿತಿ ಶಿಬಿರವನ್ನು ಏ. 2ರಂದು ಸಾನಿಧ್ಯದಲ್ಲಿ ವ್ಯವಸ್ಥೆ ಮಾಡಲಾಗಿದೆ.

ಮಂಗಳೂರು ಗ್ರಾಮಾಂತರ ಪ್ರದೇಶದ ಸುಮಾರು 50 ಮಂದಿ ಅಂಗನವಾಡಿ ಕಾರ್ಯಕರ್ತೆಯರು ಈ ಶಿಬಿರದಲ್ಲಿ ಭಾಗವಹಿಸಲಿದ್ದಾರೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಉಸ್ಮಾನ್ ಎ. ಪೂರ್ವಾಹ್ನ ಘಂಟೆ 10ಕ್ಕೆ ಶಿಬಿರವನ್ನು ಉದ್ಘಾಟಿಸಲಿದ್ದಾರೆ. ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಗುವುದು. ಸಾನಿಧ್ಯ ಶಾಲೆಯ ಆಡಳಿತಾಧಿಕಾರಿ ಡಾ. ವಸಂತಕುಮಾರ್ ಶೆಟ್ಟಿ, ವಿಶೇಷ ಶಿಕ್ಷಕಿ ಸೋಫಿಯಾ ಡಿಸೋಜಾ ಹಾಗೂ ಪ್ರಾಂಶುಪಾಲೆ ಮೀನಾಕ್ಷಿ ಎಂ. ಕೆ. ಆಟಿಸಂ ಬಗ್ಗೆ ಮಾಹಿತಿ ನೀಡಲಿದ್ದಾರೆ.

ಆಟಿಸಂ ಬಾಲಕಿಯರಿಗಿಂತ ಮೂರು ಪಟ್ಟು ಅಧಿಕವಾಗಿ ಬಾಲಕರಲ್ಲಿ ಉಂಟಾಗುತ್ತದೆ. ಎಲ್ಲಾ ಜನಾಂಗದ, ಎಲ್ಲಾ ಭಾಷೆಯ, ಎಲ್ಲಾ ಸಾಮಾಜಿಕ ಹಿನ್ನೆಲೆಯಲ್ಲಿರುವ ಜನರಲ್ಲಿ ಇದು ಕಂಡುಬಂದಿದೆ.

2 ತಿಂಗಳ ಬ್ಯಾಡ್ಮಿಂಟನ್ ಬೇಸಿಗೆ ಶಿಬಿರ ಉದ್ಘಾಟನೆ



ಮಂಗಳೂರು: ದಕ್ಷಿಣ ಕನ್ನಡ ಬ್ಯಾಡ್ಮಿಂಟನ್ ಅಸೋಸಿಯೇಷನ್ ವತಿಯಿಂದ ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಷನ್ ಹಾಗೂ ಯುವ ಸಬಲೀಕರಣ ಕ್ರೀಡಾ ಇಲಾಖೆ ದಕ್ಷಿಣ ಕನ್ನಡ ಸಹಭಾಗಿತ್ವದಲ್ಲಿ 2 ತಿಂಗಳ ಬ್ಯಾಡ್ಮಿಂಟನ್ ಬೇಸಿಗೆ ಶಿಬಿರ ಉರ್ವಾ ಒಳಾಂಗಣ ಕ್ರೀಡಾಂಗಣದಲ್ಲಿ ಉದ್ಘಾಟನೆಗೊಂಡಿತು.

ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಷನ್ ಕ್ರೀಡಾ ಅಭಿವೃದ್ಧಿ ಸಮಿತಿ ಅಧ್ಯಕ್ಷ ಗುರುಪ್ರಸಾದ್ ಉದ್ಘಾಟಿಸಿದರು. ಅಶೋಕ್ ಪೂವಾಯ, ಕದ್ರಿ ಐವನ್ ಪಿಂಟೊ, ಅಸೋಸಿಯೇಷನ್ ಉಪಾಧ್ಯಕ್ಷ ಅಶೋಕ್ ಹೆಗಡೆ, ಸಮಿತಿ ಸದಸ್ಯರಾದ ನೂರು ಮಹಮ್ಮದ್ ಮುಖ್ಯ ಅತಿಥಿಯಾಗಿದ್ದರು. ಈ ಸಂದರ್ಭದಲ್ಲಿ ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿ ಪಡೆದ 17 ವರ್ಷದ ಒಳಗಿನ ಆಟಗಾರರಾದ ಸಾನ್ವಿ, ಆದಿತ್ಯ, ಕಿಯನ್ ಪಿ.ಸಿ., ಅನನ್ಯ, ಅವಿನಾಶ್, ಕನಿಶ್ ಅವರನ್ನು ಗೌರವಿಸಲಾಯಿತು. ಈ ಶಿಬಿರದಲ್ಲಿ ಸುಮಾರು 90 ಮಕ್ಕಳು ಭಾಗವಹಿಸಿದ್ದಾರೆ. ಅಸೋಸಿಯೇಷನ್ ಅಧ್ಯಕ್ಷ ಸಂತೋಷ್ ಕುಮಾರ್ ಶೆಟ್ಟಿ ಸ್ವಾಗತಿಸಿದರು. ಕಾರ್ಯದರ್ಶಿ ಸುಪ್ರೀತಾ ಆಳ್ವ ವಂದಿಸಿದರು. ಸಮಿತಿಯ ಸದಸ್ಯ ಡಾ. ಶರತ್ ಕಾರ್ಯಕ್ರಮ ನಿರೂಪಿಸಿದರು.

ಕಾರು ಅಪಘಾತ; ಓರ್ವ ಗಂಭೀರ

ಸುಳ್ಯ: ಕಲ್ಲುಗುಂಡಿ ಬಳಿಯಲ್ಲಿ ಕಾರೊಂದು ಚಾಲಕನ ನಿಯಂತ್ರಣ ತಪ್ಪಿ ಕಿರು ಸೇತುವೆಗೆ ಡಿಕ್ಕಿ ಹೊಡೆದು ಓರ್ವ ಗಂಭೀರ ಗಾಯಗೊಂಡು ಆಸ್ಪತ್ರೆಗೆ ದಾಖಲಾದ ಘಟನೆ ಮಂಗಳವಾರ ತಡರಾತ್ರಿ ನಡೆದಿದೆ. ಮಡಿಕೇರಿ ಕಡೆಯಿಂದ ಪುತ್ತೂರಿನತ್ತ ಬರುತ್ತಿದ್ದ ಕಾರು ಚಾಲಕನ ನಿಯಂತ್ರಣ ತಪ್ಪಿ ಕಲ್ಲುಗುಂಡಿ ಕೂಲಿಶೆಡ್ ಬಳಿ ಕಿರು ಸೇತುವೆಗೆ ಡಿಕ್ಕಿ ಹೊಡೆದಿದೆ. ಕಾರಿನಲ್ಲಿ ಐದು ಮಂದಿ ಇದ್ದು ಅವರಲ್ಲಿ ಓರ್ವರಿಗೆ ಗಂಭೀರ ಗಾಯವಾಗಿದೆ. ಗಾಯಾಳುಗಳನ್ನು ಸುಳ್ಯ ಸರಕಾರಿ ಆಸ್ಪತ್ರೆಗೆ ಕರೆ ತಂದಿದ್ದು ಗಂಭೀರ ಗಾಯಗೊಂಡ ವ್ಯಕ್ತಿಯನ್ನು ಪ್ರಾಥಮಿಕ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗೆ ಮಂಗಳೂರು ಆಸ್ಪತ್ರೆಗೆ ಕಳುಹಿಸಿಕೊಡಲಾಗಿದೆ. ಗಾಯಾಳುಗಳು ಕೇರಳದ ಮಲಪ್ಪುರಂ ನಿವಾಸಿಯಾಗಿದ್ದು, ಅವರು ತಮ್ಮ ಊರಿಗೆ ಮರಳುತ್ತಿದ್ದ ವೇಳೆ ಈ ಘಟನೆ ನಡೆದಿದೆ.

ಕೊಡಗು ಜಿಲ್ಲಾಡಳಿತದಿಂದ ಜನರಲ್ ಕೆ.ಎಸ್.ತಿಮ್ಮಯ್ಯ ಜನ್ಮದಿನಾಚರಣೆ

ಸಾಧನೆ ಯುವಜನರಿಗೆ ಮಾದರಿ

ಮಡಿಕೇರಿ: ಪದ್ಮಭೂಷಣ ಜನರಲ್ ಕೆ.ಎಸ್. ತಿಮ್ಮಯ್ಯ ಅವರ ಜನ್ಮ ದಿನವನ್ನು ನಗರದ ಜನರಲ್ ಕೆ.ಎಸ್ .ತಿಮ್ಮಯ್ಯ ಸ್ಮಾರಕ ಭವನ (ಸನ್ನಿಸೈಡ್) ದಲ್ಲಿ ಮಂಗಳವಾರ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಮುಖ್ಯಮಂತ್ರಿಯವರ ಕಾನೂನು ಸಲಹೆಗಾರ ಹಾಗೂ ವೀರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಎ.ಎಸ್ .ಪೊನ್ನಣ್ಣ ಅವರು ಜನರಲ್ ತಿಮ್ಮಯ್ಯ ಸ್ಮಾರಕ ಭವನದಲ್ಲಿ ದೀಪ ಬೆಳಗಿ, ಜನರಲ್ ತಿಮ್ಮಯ್ಯ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಗೌರವ ನಮನ ಸಲ್ಲಿಸಿದರು.

ಬಳಿಕ ಮಾತನಾಡಿದ ಅವರು, ಜನರಲ್ ಕೋಡಂದೇರ ಸುಬ್ಬಯ್ಯ ತಿಮ್ಮಯ್ಯ ಅವರು ಭಾರತೀಯ ಸೇನಾ ಕ್ಷೇತ್ರದಲ್ಲಿ ಅತ್ಯಂತ ಧೈರ್ಯಶಾಲಿ, ತಂತ್ರಗಾರಿಕೆ ಹಾಗೂ ಚತುರತೆಯ ನಾಯಕರಾಗಿದ್ದರು ಎಂದು ಹೇಳಿದರು.

1957ರಿಂದ 1961ರ ವರೆಗೆ ಸೇನಾ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದ ಕೆ.ಎಸ್.ತಿಮ್ಮಯ್ಯ ಅವರು ಎರಡನೇ ಮಹಾಯುದ್ಧ ಮತ್ತು 1948 ರ ಕಾಶ್ಮೀರ ಯುದ್ಧದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಯಲ್ಲೂ ಸೇವೆ ಸಲ್ಲಿಸಿ ದಾಖಲೆ ನಿರ್ಮಿಸಿದ್ದಾರೆ ಎಂದು ಪೊನ್ನಣ್ಣ ಅವರು ವಿವರಿಸಿದರು.

ಸಣ್ಣ ವಯಸ್ಸಿನಲ್ಲಿಯೇ ಸೇನೆಗೆ ಸೇರಿ ಭಾರತೀಯ ಸೇನಾ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ ಅವರ ಸೇನಾ ಕ್ಷೇತ್ರದಲ್ಲಿನ ಕೆಲಸಗಳು ಇಂದಿನ ಯುವ ಜನತೆಗೆ ಮಾದರಿಯಾಗಿದೆ ಎಂದು ನುಡಿದರು.

ಜಿ.ಪಂ.ಸಿಇಒ ಆನಂದ್ ಪ್ರಕಾಶ್ ಮೀನಾ ಅವರು ಮಾತನಾಡಿ, ಜನರಲ್ ತಿಮ್ಮಯ್ಯ ಅವರ ಸೇನಾ ಕ್ಷೇತ್ರದಲ್ಲಿನ ಸಾಧನೆಯನ್ನು ಪ್ರತಿಯೊಬ್ಬರೂ ಸ್ಮರಿಸಬೇಕು. ಅವರ ಮೌಲ್ಯಯುತ ಜೀವನ ಮತ್ತು ಬದುಕು ಸೇನಾ ಕ್ಷೇತ್ರದಲ್ಲಿ ಇಂದಿಗೂ ಸಹ ಮಾದರಿಯಾಗಿದೆ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ ಅವರು ಮಾತನಾಡಿ, ಪದ್ಮಭೂಷಣ ಜನರಲ್ ಕೆ.ಎಸ್.ತಿಮ್ಮಯ್ಯ ಅವರು ಭಾರತೀಯ ಸೇನೆಯಲ್ಲಿ ನೀಡಿರುವ ಕೊಡುಗೆ ಅಪಾರವಾಗಿದೆ. ಆ ನಿಟ್ಟಿನಲ್ಲಿ ಇದನ್ನು ಪೊಲೀಸ್ ಇಲಾಖೆಗಳಲ್ಲಿಯೂ ಸಹ ಅಳವಡಿಸಿಕೊಳ್ಳಬೇಕಿದೆ ಎಂದರು.



> **ಶಿಸ್ತು, ಸಮಯಪ್ರಜ್ಞೆ, ಬದ್ಧತೆ ಮತ್ತು ಪ್ರಾಮಾಣಿಕತೆಗೆ ಹೆಸರಾಗಿದ್ದ ಜನರಲ್ ಕೆ.ಎಸ್.ತಿಮ್ಮಯ್ಯ ಅವರು ಸೇನಾ ಕ್ಷೇತ್ರದ ಇತಿಹಾಸದಲ್ಲಿ ಮರೆಯಲಾಗದ ಸಾಧನೆ ಮಾಡಿದ್ದಾರೆ.**
> ■ **ಎ.ಎಸ್.ಪೊನ್ನಣ್ಣ**, ವೀರಾಜಪೇಟೆ ಶಾಸಕ

ಜನರಲ್ ತಿಮ್ಮಯ್ಯ ಅವರ ಕರ್ತವ್ಯ ಪ್ರಜ್ಞೆ, ಭಾರತೀಯ ಸೇನೆಗೆ ನೀಡಿರುವ ಕೊಡುಗೆಯನ್ನು ತಿಳಿದುಕೊಂಡು ಇಂದಿನ ಯುವಜನರು ಅವರ ಬದುಕನ್ನು ಅಳವಡಿಸಿಕೊಳ್ಳಬೇಕು ಎಂದರು.

ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಅವರು ಮಾತನಾಡಿ, ರಾಷ್ಟ್ರಕಂಡ ಮೇರುಶಿಖರ ಜನರಲ್ ತಿಮ್ಮಯ್ಯ ಅವರಾಗಿದ್ದು, ಇಂಡೋ-ಚೈನಾ ಯುದ್ಧ ಸಂದರ್ಭದಲ್ಲಿ ದೇಶದ ರಕ್ಷಣೆ ಮತ್ತು ಸುರಕ್ಷತೆಗಾಗಿ ಚತುರತೆಯಿಂದ ಸೇನೆಯನ್ನು ಕಟ್ಟಿದ್ದಾರೆ ಎಂದು ಹೇಳಿದರು.

ಜನರಲ್ ತಿಮ್ಮಯ್ಯ ಅವರ ಮೌಲ್ಯಯುತ ಬದುಕು, ಸಮಯ ಮತ್ತು ಕರ್ತವ್ಯ ಪ್ರಜ್ಞೆಯನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕು ಎಂದು ನುಡಿದರು.

ನಿವೃತ್ತ ಸೇನಾನಿ ಗೌಡಂಡ ತಿಮ್ಮಯ್ಯ ಅವರು ಜನರಲ್ ತಿಮ್ಮಯ್ಯ ಅವರ ಜೀವನದ ಮಹತ್ವದ ಮಜಲುಗಳನ್ನು ಸವಿಸ್ತಾರವಾಗಿ ವಿವರಿಸಿದರು.

ಉಪ ವಿಭಾಗಾಧಿಕಾರಿ ನಿತಿನ್ ಚಕ್ಕಿ, ತಹಶೀಲ್ದಾರ್ ಶ್ರೀಧರ, ನಗರಸಭೆ ಸದಸ್ಯರಾದ ಅನಿತಾ ಪೂವಯ್ಯ, ಸವಿತಾ, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಸದಸ್ಯರಾದ ಪಪ್ಪು ತಿಮ್ಮಯ್ಯ, ಸಂಜು ಕಾವೇರಪ್ಪ, ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಮತ್ತು ಜನರಲ್ ತಿಮ್ಮಯ್ಯ ಫೌಂಡೇಶನ್ ಗೌರವ ಸಂಚಾಲಕ ತಮ್ಮು ಪೂವಯ್ಯ, ರೋಟರಿ ಮಿಸ್ಟಿ ಹಿಲ್ಸ್ ಅಧ್ಯಕ್ಷ ರತ್ನಾಕರ ರೈ, ನಿರ್ದೇಶಕರಾದ ಅನಿಲ್ ಎಚ್.ಟಿ., ವಿನೋದ್ ಅಂಬೆಕಲ್ಲು, ರೆಡ್‌ಕ್ರಾಸ್ ನಿರ್ದೇಶಕ ಪಿ.ಆರ್.ರಾಜೇಶ್, ರೋಟರಿ ವುಡ್ಸ್ ಕಾರ್ಯದರ್ಶಿ ಪ್ರಮಿಳಾ ಶೆಟ್ಟಿ, ನಿರ್ದೇಶಕರಾದ ಸ್ಮಿತಾ ಚಂಗಪ್ಪ, ಧನಂಜಯ ಶಾಸ್ತ್ರಿ, ಕೊಡವ ಮಕ್ಕಡ ಕೂಟದ ಸಂಚಾಲಕ ಬೊಳ್ಳಜಿರ ಅಯ್ಯಪ್ಪ ಚೆಯ್ಯಂಡ ಸತ್ಯ, ಪೊಲೀಸ್ ಇಲಾಖೆಯ ವೃತ್ತ ನಿರೀಕ್ಷಕ ಪಿ.ಆರ್.ರಾಜು, ಪೊಲೀಸ್ ಇನ್ಸ್‌ಪೆಕ್ಟರ್ ಉಮೇಶ್ ಕುಮಾರ್ ಇತರರು ಇದ್ದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿಯರಾದ ಎ.ಎಸ್.ರಿಷಿತಾ ಮುತ್ತಮ್ಮ, ಯಶ್ರಿತಾ ಎ.ಎಚ್., ಎ.ಆರ್. ದೇಚಮ್ಮ, ಚಿನ್ಮಯಿ ಎ.ಆರ್. ಅವರು ದೇಶಭಕ್ತಿಗೀತೆ ಹಾಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕುಮಾರ ಸ್ವಾಗತಿಸಿ, ರಮ್ಯಾ ಮಾಚಯ್ಯ ಪ್ರಾರ್ಥಿಸಿ, ಮಣಜೂರು ಮಂಜುನಾಥ್ ನಿರೂಪಿಸಿ, ವಂದಿಸಿದರು.

ಎಂಆರ್‌ಪಿಎಲ್ ಕೋಸ್ಟಲ್ ಸ್ಟಾರ್ಟ್ ಅಪ್ ಎಕ್ಸಲೆನ್ಸ್ ಅವಾರ್ಡ್ಸ್ ಸಂಪನ್ನ



ಮಂಗಳೂರು: ಎರಡು ದಿನಗಳ ನಿಟ್ಟೆ–ಎಂಆರ್‌ಪಿಎಲ್ ಕೋಸ್ಟಲ್ ಸ್ಟಾರ್ಟ್ ಅಪ್ ಫೆಸ್ಟ್ 2026, ಕೋಸ್ಟಲ್ ಸ್ಟಾರ್ಟ್ ಅಪ್ ಎಕ್ಸಲೆನ್ಸ್ ಅವಾರ್ಡ್ಸ್ ಪ್ರದಾನ ಸಮಾರಂಭದೊಂದಿಗೆ ಸಮಾಪನಗೊಂಡಿತು.

ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಾಲ್ಗೊಂಡ ಸ್ಪೀಕರ್ ಯು.ಟಿ. ಖಾದರ್ ಮಾತನಾಡಿ, ಕೋಸ್ಟಲ್ ಸ್ಟಾರ್ಟ್‌ಅಪ್ ಫೆಸ್ಟ್ ನಮ್ಮ ಯುವಕರು ತಮ್ಮ ಆಲೋಚನೆಗಳು, ಜ್ಞಾನವನ್ನು ಹಂಚಿಕೊಳ್ಳಲು ಮತ್ತು ಪ್ರಸ್ತುತಪಡಿಸಲು ಮತ್ತು ಅವರ ಪ್ರತಿಭೆಯನ್ನು ಪ್ರದರ್ಶಿಸಲು ಸಹಾಯ ಮಾಡುವ ಒಂದು ರೀತಿಯ ಕಾರ್ಯಕ್ರಮವಾಗಿದೆ ಎಂದರು.

ಕೊಡಗು ವಿಶ್ವವಿದ್ಯಾಲಯದ ಉಪಕುಲಪತಿ ಡಾ. ಅಶೋಕ್ ಎಸ್. ಆಲೂರ್, ಚಿನ್ಮಯ ವಿಶ್ವ ವಿದ್ಯಾಪೀಠದ ಡೀನ್ ಡಾ. ಎಸ್. ಗ್ಲೋರಿ ಸ್ವರೂಪ, ಸಿರಿ ವ್ಯವಸ್ಥಾಪಕ ನಿರ್ದೇಶಕ ಡಾ. ಕೆ. ಎನ್. ಜನಾರ್ದನ್ ಮತ್ತು ಎಂಎಸ್‌ಎಂಇ ಮತ್ತು ಸ್ಟಾರ್ಟ್‌ಅಪ್ ಮಾರ್ಗದರ್ಶಕ ಸಿಎ ಎಸ್. ಎಸ್. ನಾಯಕ್ ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಸಮಾರಂಭವನ್ನು ಉಡುಪಿ ವಾಣಿಜ್ಯ ಮತ್ತು ಕೈಗಾರಿಕಾ ಮಂಡಳಿಯ (ಯುಸಿಐ) ಕಾರ್ಯ ದರ್ಶಿ ಡಾ. ವಿಜಯೇಂದ್ರ ವಸಂತ್ ಆಯೋಜಿಸಿದ್ದರು. ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಬಪ್ಪನಾಡು ಕ್ಷೇತ್ರಾಭಿವೃದ್ಧಿ ಕಾರ್ಯಕ್ರಮಗಳ ವಿಜ್ಞಾಪನಾ ಪತ್ರ ಬಿಡುಗಡೆ

ದೇವಳದ ಅಭಿವೃದ್ಧಿಗೆ ಎಲ್ಲರ ಸಹಕಾರ ಅಗತ್ಯ

ಮುಲ್ಕಿ: ಸೀಮೆಯ ಒಂಬತ್ತು ಮಾಗಣೆಯ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ನೂತನ ಬ್ರಹ್ಮರಥ ನಿರ್ಮಾಣ ಮತ್ತು ಕ್ಷೇತ್ರಪಾಲ ಗುಡಿಯ ನವೀಕರಣ ಹಾಗೂ ದೇವಳದ ವಿವಿಧ ಕಾಮಗಾರಿಗಳ ಬಗ್ಗೆ ವಿಜ್ಞಾಪನ ಪತ್ರ ಬಿಡುಗಡೆ ಸಮಾರಂಭ ಏ.1ರಂದು 10ಕ್ಕೆ ಕ್ಷೇತ್ರದಲ್ಲಿ ನಡೆಯಿತು.

ಕ್ಷೇತ್ರದ ತಂತ್ರಿಗಳಾದ ಶಿಬರೂರು ಗೋಪಾಲಕೃಷ್ಣ ತಂತ್ರಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಮನವಿ ಪತ್ರ ಬಿಡುಗಡೆ ಮಾಡಿ ಕ್ಷೇತ್ರದ ಅನುವಂಶಿಕ ಮೊಕ್ತೇಸರ ದುಗ್ಗಣ್ಣ ಸಾವಂತ ಅರಸರು ಮಾತನಾಡಿ, ದೇವಸ್ಥಾನದ ಅಭಿವೃದ್ಧಿಗೆ ದಾನಿಗಳ, ಗ್ರಾಮಸ್ಥರ ಹಾಗೂ ಭಕ್ತರ ಸಹಕಾರ ಅಗತ್ಯ ಎಂದರು. ಈ ಸಂದರ್ಭ ಅತ್ತೂರು ಬೈಲು ರಾಘವೇಂದ್ರ ಉಡುಪ, ಕ್ಷೇತ್ರದ ಅರ್ಚಕರಾದ ಶ್ರೀಪತಿ ಉಪಾಧ್ಯಾಯ, ನರಸಿಂಹ ಭಟ್, ಶಾಸಕ ಉಮಾನಾಥ ಕೋಟ್ಯಾನ್, ಮಾಜಿ ಸಚಿವ ಅಭಯ ಚಂದ್ರ ಜೈನ್, ಕಾರ್ಯನಿರ್ವಹಣಾಧಿಕಾರಿ ಶ್ವೇತಾ ಪಳ್ಳಿ, ಮಾಜಿ ಮೊಕ್ತೇಸರ ಡಾ. ಹರಿಕೃಷ್ಣ ಪುನರೂರು, ಜಾಗತಿಕ ಬಂಟರ ಸಂಘದ ಒಕ್ಕೂಟದ ಅಧ್ಯಕ್ಷ ಐಕಳ ಹರೀಶ್ ಶೆಟ್ಟಿ, ಧಾರ್ಮಿಕ ಪರಿಷತ್ ಸದಸ್ಯ ಸುಬ್ರಹ್ಮಣ್ಯ ರಾವ್ ಕೊರಿಯಾರ್, ಕ್ಷೇತ್ರದ ಮಾಜೀ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಪಾದೆಮನೆ ಜಯಂತ ರೈ, ಅಭಿವೃದ್ಧಿ



ಸಮಿತಿಯ ರಾಮಚಂದ್ರ ನಾಯಕ್ ಕೋಲ್ನಾಡ್ ಗುತ್ತು, ಸುನಿಲ್ ಆಳ್ವ, ಸುಕುಮಾರ್ ಶೆಟ್ಟಿ, ಸೂರ್ಯ ಕುಮಾರ್ ಹಳೆಯಂಗಡಿ, ಮುಲ್ಕಿ ನಾಲ್ಕು ಪಟ್ಣ ಮೊಗವೀರ ಸಭಾ ಅಧ್ಯಕ್ಷ ಚಂದ್ರಕಾಂತ ಶ್ರೀಯಾನ್, ಸಮಿತಿಯ ಪುರಂದರ ಶೆಟ್ಟಿಗಾರ, ರತ್ನಾಕರ ಶೆಟ್ಟಿಗಾರ್ ಯಾನೆ ಕಾಂತಣ್ಣ ಗುರಿಕಾರ್, ಸಸಿಹಿತ್ಲು ಶ್ರೀ ಭಗವತಿ ಕ್ಷೇತ್ರದ ಆಡಳಿತ ಸಮಿತಿಯ ಅಧ್ಯಕ್ಷ ವಾಮನ್ ಇಡ್ಯಾ, ದಾನಿ ಶರತ್ ಸಾಲ್ಯಾನ್, ರವಿರಾಜ್ ಮುಂಬೈ, ಡಾ. ಹರಿಶ್ಚಂದ್ರ ಪಿ. ಸಾಲ್ಯಾನ್, ಸುಕುಮಾರ್ ಎನ್ ಶೆಟ್ಟಿ ತಾಳಿಪಾಡಿಗುತ್ತು, ಯಾದವ ದೇವಾಡಿಗ ಹಳೆಯಂಗಡಿ, ಸುಜಿತ್ ಸಾಲ್ಯಾನ್, ಭಾಸ್ಕರ್ ಸಾಲ್ಯಾನ್ ಹಳೆಯಂಗಡಿ, ಉದಯಕುಮಾರ್ ಶೆಟ್ಟಿ ಅಧಿಧನ್, ಕಿಶೋರ್ ಶೆಟ್ಟಿ ಬಪ್ಪನಾಡು, ಚಂದ್ರಶೇಖರ ಸುವರ್ಣ, ನಾಗೇಶ್ ಬಪ್ಪನಾಡು, ಅಕೌಂಟೆಂಟ್ ಶಿವಶಂಕರ್ ವರ್ಮಾ ಮತ್ತಿತರರು ಉಪಸ್ಥಿತರಿದ್ದರು ವಿನೋದ್ ಸಾಲ್ಯಾನ್ ಬೆಳ್ಳಾಯರು ನಿರೂಪಿಸಿದರು.

ಎಸ್‌ಡಿಎಂ ಕಾನೂನು ಕಾಲೇಜಿನಲ್ಲಿ ಬೃಹತ್ ರಕ್ತದಾನ ಶಿಬಿರ ಉದ್ಘಾಟನೆ

ರಕ್ತದಾನ ಅತ್ಯಂತ ಶ್ರೇಷ್ಠ: ಶಾಂತಾರಾಮ ಶೆಟ್ಟಿ

ಮಂಗಳೂರು: ರಕ್ತದಾನವು ಅತ್ಯಂತ ಶ್ರೇಷ್ಠ ದಾನ. ರಕ್ತವು ಜೀವ ರಕ್ಷಕ ಸಾಧನ. ನಾವು ನೀಡುವ ರಕ್ತವು ಜೀವವೊಂದನ್ನು ಉಳಿಸಬಲ್ಲದು ಎಂದು ದ.ಕ. ಜಿಲ್ಲಾ ರೆಡ್‌ಕ್ರಾಸ್ ಅಧ್ಯಕ್ಷ ಸಿ.ಎ. ಶಾಂತಾರಾಮ ಶೆಟ್ಟಿ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾನೂನು ಮಹಾ ವಿದ್ಯಾಲಯದ ಎನ್.ಎಸ್.ಎಸ್., ಯುವ ರೆಡ್ ಕ್ರಾಸ್ ಹಾಗೂ ಪೂರ್ವ ವಿದ್ಯಾರ್ಥಿ ಸಂಘ, ಮಂಗಳೂರು ವಕೀಲರ ಸಂಘ ಮತ್ತು ಲಯನ್ಸ್ ಕ್ಲಬ್ ಬೆಂದೂರುವೆಲ್ ಸಂಯುಕ್ತ ಆಶ್ರಯದಲ್ಲಿ ನಡೆದ ಬೃಹತ್ ರಕ್ತದಾನ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಎಸ್.ಡಿ.ಎಂ. ಪೂರ್ವ ವಿದ್ಯಾರ್ಥಿ ಸಂಘದ ಅಧ್ಯಕ್ಷ ರಾಘವೇಂದ್ರ ರಾವ್, ಮಂಗಳೂರು ವಕೀಲರ ಸಂಘದ ಅಧ್ಯಕ್ಷ ಎಚ್.ವಿ.ರಾಘವೇಂದ್ರ, ಲಯನ್ಸ್ ಕ್ಲಬ್ ಅಧ್ಯಕ್ಷ ಮುರಳೀಧರ ಭಂಡಾರಿ, ಲಯನ್ಸ್ ಜಿಲ್ಲಾ ರಕ್ತದಾನ ಸಂಯೋಜಕ ನಾಗೇಶ್ ಕುಮಾರ್ ಎನ್.ಜೆ. ಮುಖ್ಯ ಅತಿಥಿಗಳಾಗಿದ್ದರು. ಪ್ರಾಂಶುಪಾಲ ಡಾ. ತಾರಾನಾಥ ಅಧ್ಯಕ್ಷತೆ ವಹಿಸಿದ್ದರು.



ಎನ್.ಎಸ್.ಎಸ್. ಯೋಜನಾ ಧಿಕಾರಿ ಪ್ರೊ. ಪುಷ್ಪರಾಜ್ ಕೆ. ಸ್ವಾಗತಿಸಿದರು. ರೆಡ್ ಕ್ರಾಸ್ ಘಟಕ ನಾಯಕ ಹೇಮಂತ್ ವಂದಿಸಿದರು. ಎನ್.ಎಸ್.ಎಸ್. ಅಧಿಕಾರಿ ಡಾ. ಡಿಂಪಲ್ ಮೇಸ್ತಾ, ಘಟಕ ನಾಯಕರಾದ ಶ್ರುತಿಕಾ ಹಾಗೂ ಸಂಜನ್ ಉಪಸ್ಥಿತರಿದ್ದರು. ರಶ್ಮಿತಾ ನಿರೂಪಿಸಿದರು.

ಉಚಿತ ಸ್ಯಾನಿಟರಿ ಪ್ಯಾಡ್ ವಿತರಣೆ

ದೈಹಿಕ ಅಶಕ್ತತೆ ಹೊಂದಿರುವ ಕೆಲ ಬಡವರ್ಗದ ಹೆಣ್ಣು ಮಕ್ಕಳಿಗೆ ಕಾಲೇಜಿನ ಎನ್. ಎಸ್. ಎಸ್. ವತಿಯಿಂದ ದಾನಿಗಳ ಮೂಲಕ ಸಂಗ್ರಹಿಸಲಾದ ಸ್ಯಾನಿಟರಿ ಪ್ಯಾಡ್‌ಗಳನ್ನು ಹಾಗೂ ಜಿಲ್ಲಾ ರೆಡ್ ಕ್ರಾಸ್ ವತಿಯಿಂದ ಅಡುಗೆ ಪರಿಕರಗಳು, ತರ್ಮಲ್ ಹಾಗೂ ಆಕ್ಸಿಮೀಟರ್‌ಗಳನ್ನು ಇದೇ ಸಂದರ್ಭದಲ್ಲಿ ವಿತರಿಸಲಾಯಿತು.

ಬೆಳ್ತಂಗಡಿಯ ಸಿರಿ ಕೇಂದ್ರ ಕಚೇರಿಗೆ ಡಾ. ನಿರಂಜನ್ ಕುಮಾರ್ ದಂಪತಿ ಭೇಟಿ

ಸಿರಿ ಉತ್ಪಾದನಾ ಚಟುವಟಿಕೆಗಳ ವೀಕ್ಷಣೆ

ಬೆಳ್ತಂಗಡಿ: ಧಾರವಾಡದ ಎಸ್.ಡಿ.ಎಂ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಡಾ. ನಿರಂಜನ್ ಕುಮಾರ್ ಹಾಗೂ ಕಾರ್ಯನಿರ್ವಾಹಕ ನಿರ್ದೇಶಕರಾದ ಪದ್ಮಲತಾ ನಿರಂಜನ್ ಕುಮಾರ್ ದಂಪತಿ ಬೆಳ್ತಂಗಡಿಯಲ್ಲಿರುವ ಸಿರಿ ಕೇಂದ್ರ ಕಚೇರಿಗೆ ಭೇಟಿ ನೀಡಿದರು.

ಸಿರಿ ಸಂಸ್ಥೆಯ ವಿವಿಧ ಉತ್ಪನ್ನಗಳ ಉತ್ಪಾದನಾ ವಿಭಾಗಗಳಿಗೆ ಭೇಟಿ ನೀಡಿದ ಅವರು, ಸಂಸ್ಥೆಯಲ್ಲಿ ನಡೆಯುತ್ತಿರುವ ಉತ್ಪಾದನಾ ಚಟುವಟಿಕೆಗಳನ್ನು ವೀಕ್ಷಿಸಿ, ಸಿರಿ ಸಿಬ್ಬಂದಿಯವರ ಕಾರ್ಯವೈಖರಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಸಿರಿ ಸಿಬ್ಬಂದಿಯನ್ನುದ್ದೇಶಿಸಿ ಮಾತನಾಡಿದ ಅವರು, ಸುಮಾರು 22 ವರ್ಷಗಳ ಹಿಂದೆ ಹೆಗ್ಗಡೆಯವರು ಹಾಗೂ ಹೇಮಾವತಿ ಅಮ್ಮನವರು



ಪ್ರಾರಂಭಿಸಿದ 'ಸಿರಿ' ಎಂಬ ಕನಸಿನ ಕೂಸು ಇಂದು ಬೆಳೆದು ಹೆಮ್ಮರವಾಗಿ ನಿಂತಿದೆ. ಪ್ರಾರಂಭಿಕ ಹಂತದಲ್ಲಿ ಹಳ್ಳಿ-ಹಳ್ಳಿಗಳಲ್ಲಿರುವ ಬಡ ಗ್ರಾಮೀಣ ಮಹಿಳೆಯರಿಗೆ ಅವರವರ ಮನೆಗಳಲ್ಲಿಯೇ ಸಿರಿ ಉತ್ಪನ್ನಗಳನ್ನು ತಯಾರಿಸುವ ತರಬೇತಿ ನೀಡಿ, ಅವರಿಂದ ಉತ್ಪಾದಿಸಲ್ಪಟ್ಟ ವಸ್ತುಗಳನ್ನು ಮಾರುಕಟ್ಟೆಗೆ ತಂದು ಮಾರಾಟ ಮಾಡುವ ಮೂಲಕ, ಬಂದ ಆದಾಯದಿಂದ ಮಹಿಳೆಯರ ಜೀವನಕ್ಕೆ ಆರ್ಥಿಕ ಬಲ ನೀಡುವ ಉದ್ದೇಶದಿಂದ ಆರಂಭವಾದ ಸಿರಿ ಸಂಸ್ಥೆ, ಹಂತ ಹಂತವಾಗಿ ಬೆಳೆಯುತ್ತಾ ಇಂದು ಸಾವಿರಾರು ಮಹಿಳೆಯರ ಬದುಕು ಬೆಳಗಿಸುವಲ್ಲಿ ಯಶಸ್ವಿಯಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಸಿರಿ ಸಂಸ್ಥೆ ಸೇರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಸ್.ಡಿ.ಎಂ ಆಸ್ಪತ್ರೆಗಳು, ಮೆಡಿಕಲ್ ಕಾಲೇಜುಗಳು ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ಶೇ. 70ರಷ್ಟು ಮಹಿಳೆಯರೇ ಉದ್ಯೋಗ ನಿರ್ವಹಿಸುತ್ತಿರುವುದು ಹೆಮ್ಮೆಯ ವಿಷಯ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಸಿರಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್. ಜನಾರ್ದನ ಅವರು ಪ್ರಸ್ತಾವಿಕವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ ಸಿರಿ ಸಂಸ್ಥೆಯ ವಿವಿಧ ವಿಭಾಗಗಳ ಮೇಲ್ವಿಚಾರಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಜೀವನ್ ಕುಮಾರ್ ಕಾರ್ಯಕ್ರಮ ನಿರೂಪಿಸಿದರು.

ಮಕ್ಕಳ ರಕ್ಷಣಾ ನಿರ್ದೇಶನಾಲಯ

ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಬೆಂಗಳೂರು ಪೂರ್ವ, ಹಳೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಸರ್ಕಾರಿ ಶಾಲೆ ಹತ್ತಿರ ತ್ರಿವೇಣಿನಗರ ಕೆ.ಆರ್ ಪುರಂ, ಬೆಂಗಳೂರು-560036.

ಇ-ಮೇಲ್: **dcpoblreast2022@gmail.com** ದೂ. ಸಂ. 080-29904132

ಸಂಖ್ಯೆ: ಜಿ.ಮ.ರ.ಘ/ಬೆಂ(ಪೂ)ಮಾ.ಸಂ.ಸೇ/2025-26 ದಿನಾಂಕ: 01.04.2026

ಪತ್ರಿಕಾ ಪ್ರಕಟಣೆ

ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಡಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಬೆಂಗಳೂರು ಪೂರ್ವ ಕಛೇರಿಗೆ ಒಟ್ಟು 11 ಹುದ್ದೆಗಳನ್ನು ಮಾನವ ಸಂಪನ್ಮೂಲ ಸೇವೆಯನ್ನು ಹೊರಗುತ್ತಿಗೆ ಪಡೆಯಲು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಮರು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪದ್ಧತಿಯಂತೆ **https://kppp.karnataka.gov.in** ಆನ್‌ಲೈನ್ ಮುಖಾಂತರ ಮಾತ್ರ ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ವಿಳಾಸದಲ್ಲಿ ಸಂಪರ್ಕಿಸಬಹುದು.

ಸಹಿ/- ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಬೆಂಗಳೂರು ಪೂರ್ವ.

ವಾಸಾಸಂಇ/ಉನಿ-ಸಿ.ಪಿ/16/ಕೆಎಸ್‌ಎಂಸಿಎ/2026-27

ಕರ್ನಾಟಕ ಸರ್ಕಾರ

ತಾಲೂಕ ಮಟ್ಟದ ಆಸ್ಪತ್ರೆ ರಾಣೆಬೆನ್ನೂರು ಜಿ॥ ಹಾವೇರಿ

Email : amoghrnr11@gmail.com Ph : 08378-241477

ಕ್ರ.ಸಂ: ತಾ.ಮ.ಆ.ರಾ/ಪಥ್ಯಾಹಾರ/ಟೆಂಡರ/01/2025-26

ದಿನಾಂಕ : 31/03/2026

ಇ-ಪ್ರೊಕ್ಯೂರ್ಮೆಂಟ್ ಟೆಂಡರ್ ಪ್ರಕಟಣೆ

2026-27 ನೇ ಸಾಲಿನಲ್ಲಿ ತಾಲೂಕ ಸಾರ್ವಜನಿಕ ಆಸ್ಪತ್ರೆ, ರಾಣೆಬೆನ್ನೂರು ಒಳರೋಗಿಗಳಿಗೆ ಸಿದ್ದಪಡಿಸಿದ ಪಥ್ಯಾಹಾರ ಪದಾರ್ಥಗಳು ಹಾಗೂ ಉತ್ತಮ ದರ್ಜೆ ಬ್ರೆಡ್ ಪದಾರ್ಥಗಳು ಸರಬರಾಜು ಮಾಡಲು ಇ-ಪ್ರೋಕ್ಯೂರ್ಮೆಂಟ್ ಪ್ಲಾಟ್ ಫಾರ್ಮನ ಮೂಲಕ ಟೆಂಡರ್ ಕರೆಯಲಾಗಿದೆ.

ಹೆಚ್ಚಿನ ವಿವರಗಳನ್ನು ಹಾಗೂ ಟೆಂಡರ್ ದಾಸ್ತಾವೇಜುಗಳ ವಿವರಗಳನ್ನು **www.kppp.karnataka.gov.in** ನಲ್ಲಿ ವೀಕ್ಷಿಸಬಹುದಾಗಿರುತ್ತದೆ. ಹಾಗೂ ಮೇಲ್ಕಂಡ ವಿಳಾಸದ ಕಛೇರಿಯಿಂದ ಪಡೆಯಬಹುದಾಗಿರುತ್ತದೆ. **ಸಹಿ/- ಆಡಳಿತ ವೈದ್ಯಾಧಿಕಾರಿಗಳು**
ತಾಲೂಕ ಸಾರ್ವಜನಿಕ ಆಸ್ಪತ್ರೆ, ರಾಣೆಬೆನ್ನೂರು

ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/03/2026-27

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ

ಉಗ್ರಾಣ ಮತ್ತು ಖರೀದಿ ಇಲಾಖೆ, ಕೇಂದ್ರ ಕಛೇರಿ, ಶಾಂತಿನಗರ ಬೆಂಗಳೂರು – 27.

ಸಂಖ್ಯೆ: ಬೆಂಮಸಾಸಂಸ್ಥೆ/ಕೇಕ/ಉ&ಖನಿ/ಟೆಂಡರ್/01/2026-27 ದಿನಾಂಕ: 01.04.2026

ಟೆಂಡರ್ ಆಹ್ವಾನ ಪ್ರಕಟಣೆ

ಬೆ.ಮ.ಸಾ.ಸಂಸ್ಥೆಗೆ ಈ ಕೆಳಗೆ ನಮೂದಿಸಿರುವ ಬಿಡಿಭಾಗಗಳನ್ನು/ಸೇವೆಗಳನ್ನು ಪಡೆಯಲು KPP Portal ನ ಮೂಲಕ ಟೆಂಡರನ್ನು ಆಹ್ವಾನಿಸಿದ್ದು, ಆಸಕ್ತರು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ.

ಕ್ರ. ಸಂ	ಟೆಂಡರ್ ಸಂಖ್ಯೆ	ಟೆಂಡರ್ ವಿವರ	ಕೆಪಿಪಿಪಿ ಮೂಲಕ ಬಿಡ್ ಸಲ್ಲಿಸಲು ಕೊನೆ ದಿನಾಂಕ
		ನಿಯಮಿತ ಟೆಂಡರ್	
1	BMTC/2025-26/ SE1231	ಮೆಟೀರಿಯಲ್ ಮ್ಯಾನೇಜ್ಮೆಂಟ್ ಅಂಡ್ ವೆಹಿಕಲ್ ಮೆಂಟೇನೆನ್ಸ್ ಸಾಫ್ಟ್‌ವೇರ್ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಸೇವಾ ಪೂರೈಕೆದಾರರ ಆಯ್ಕೆ.	21.04.2026, 17:00 ಗಂಟೆಗೆ
2	BMTC/2026-27/IND0283	ಕೋಲ್ಡ್ ಅಪ್ಲೈಡ್ ಸೆಲ್ಫ್ ಅಡೇಸಿವ್ ಪಾಲಿಮರ್ ಮಾಡಿಫೈಡ್ ಬಿಟ್ಯೂಮಿನಸ್ ಕಾಂಪೋಸಿಟ್ ಮೆಂಬ್ರೇನ್ ವಿತ್ ಅಲ್ಯೂಮಿನಿಯಂ ಫಾಯ್ಲ್ ಅಟ್ ದಾ ಟಾಪ್ ಪ್ಲಾಸ್ಟಿಕ್ ಫೆಲ್ಟ್ 20 ಮೀಟರ್ ಉದ್ದ X 1 ಮೀಟರ್ ಅಗಲ	21.04.2026, 17:00 ಗಂಟೆಗೆ

ಈ ಮೇಲಿನ ಟೆಂಡರ್‌ಗಳಿಗೆ ಸಂಬಂಧಿಸಿದ ವಿವರಗಳನ್ನು **https://kppp.karnataka.gov.in** ನಿಂದ ಪಡೆಯಬಹುದು. ಮುಂದುವರೆದು, ಸಾಮಗ್ರಿಗಳ ತಾಂತ್ರಿಕ ವಿವರಗಳು, ವ್ಯಾಪ್ತಿ ಇತರೆ ನಿಯಮ ಮತ್ತು ನಿಬಂಧನೆಗಳಲ್ಲಿ ಹಾಗೂ ಮೇಲ್ಕಂಡ ದಿನಾಂಕದಲ್ಲಿ ಯಾವುದೇ ಸೇರ್ಪಡೆ / ತಿದ್ದುಪಡಿ ಇದ್ದಲ್ಲಿ KPP-ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಗೊಳಿಸಲಾಗುವುದು.

ಸೂಚನೆ: ಆಸಕ್ತಿಯುಳ್ಳ ಬಿಡ್ಡುದಾರರು KPP-ಪೋರ್ಟಲ್‌ನಲ್ಲಿ ನೋಂದಣಿ ಹೊಂದಿರಬೇಕು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿ ಅಥವಾ KPP-ಪೋರ್ಟಲ್ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/- ಉಗ್ರಾಣ ಮತ್ತು ಖರೀದಿ ನಿಯಂತ್ರಕರು (ಟೆಂಡರ್ ಕರೆಯುವ ಪ್ರಾಧಿಕಾರಿ)

ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ, ಡಾ॥ ಎಂ.ಹೆಚ್.ಮರಿಗೌಡ ರಸ್ತೆ, ಬೆಂಗಳೂರು-560029.

ಫೋನ್: 25536567/26096832/910/922 ಫ್ಯಾಕ್ಸ್: 080-25536105 ಇಮೇಲ್: purchase@kmf.coop

ಸಂ.ಕಹಾಮ/ಖರೀದಿ/ಟೆಂಡರ್-896/2026-27 ದಿನಾಂಕ: 01.04.2026

ಟೆಂಡರ್ ಪ್ರಕಟಣೆ

ಕಹಾಮದ ಪಶು ಆಹಾರ ಘಟಕಗಳ ಉಪಯೋಗಕ್ಕೆ ಅಗತ್ಯವಿರುವ ಈ ಕೆಳಕಂಡ ಸಾಮಗ್ರಿಗಳನ್ನು ಖರೀದಿಸಲು ಟೆಂಡರ್‌ನ್ನು ಆಹ್ವಾನಿಸಲಾಗಿದೆ.

SL No	Tender Nos	Particulars	Approx. Qty. & EMD Details
1	KMF/PUR/ Tender-896/ 2026-27 (KMF/2025-26/IND2107)	Supply of Pellet Mill 6mm Die and Press Roller Shells to KMF Cattle feed Plants for a Period of One Year	Please refer the tender document

ಇ-ಪ್ರೊಕ್ಯೂರ್‌ಮೆಂಟ್ **https://kppp.karnataka.gov.in** ಮೂಲಕ ಟೆಂಡರ್ ಅನ್ನು ದಿನಾಂಕ 15.04.2026 ರಂದು 05.00 ಗಂಟೆಯ ಒಳಗೆ ಸಲ್ಲಿಸಬಹುದಾಗಿದೆ. ಇಎಂಡಿ ಹಾಗೂ ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/- ನಿರ್ದೇಶಕರು (ಖರೀದಿ)

ಕರ್ನಾಟಕ ಸರ್ಕಾರ

ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಶಿರಸಿ, ಉತ್ತರ ಕನ್ನಡ

ದೂರವಾಣಿ: 08384-226381 ಇ-ಮೇಲ್: ee_zpedsirsi@yahoo.co.in

ಕ್ರ.ಸಂ: ಪಂ.ರಾ.ಇಂ/ವಿಶಿ/ಪಿ.ಬಿ-1/ಟೆಂಡರ್-43/CMIDP/2025-26/3388

ದಿನಾಂಕ: 27-03-2026

ಟೆಂಡರ್ ಪ್ರಕಟಣೆ 43/2025-26 (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಶಿರಸಿ ಇವರಿಂದ ಲೋಕೋಪಯೋಗಿ ಇಲಾಖೆಯಲ್ಲಿ ನವೀಕೃತ ನೊಂದಾಯಿತ 2019-20 ನೇ ಸಾಲಿನ ನವೀಕೃತ ನೋಂದಾಯಿಸಿದ ಅರ್ಹ ಹಾಗೂ ಇ-ಪ್ರೊಕ್ಯೂರ್‌ಮೆಂಟ್ ಸಂಸ್ಥೆಯಿಂದ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ CMIDP ಯೋಜನೆಯಡಿ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ Standard Tender Document ನಂತೆ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ http://www.kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು ಟೆಂಡರ್ ವಿವರಗಳು ಈ ಕೆಳಗಿನಂತಿವೆ.

ಕಾಮಗಾರಿ ಹೆಸರು: SC Category: (1) RDPR/2025-26/RD/WORK_INDENT25770
CAT II (A) Category (2) RDPR/2025-26/RD/WORK_INDENT25754 (3) RDPR/2025-26/RD/WORK_INDENT25354
Others Category: (4) RDPR/2025-26/RD/WORK_INDENT25767 (5) RDPR/2025-26/RD/WORK_INDENT25769 (6) RDPR/2025-26/RD/WORK_INDENT25352

(1) ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 10-04-2026 ರ ಸಂಜೆ 16.00 ಘಂಟೆವರೆಗೆ (2) ಟೆಂಡರನ್ನು ತೆರೆಯುವ ದಿನಾಂಕ: 13-04-2026 ಸಂಜೆ 16.30 ಘಂಟೆಗೆ (ಸಾಧ್ಯವಾದಲ್ಲಿ) ಹೆಚ್ಚಿನ ವಿವರಗಳನ್ನು www.kppp.karnataka.gov.in ವೆಬ್‌ಸೈಟಿನಲ್ಲಿ ಅಥವಾ ಈ ಕಚೇರಿಯಲ್ಲಿ ಪಡೆಯಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರು,
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಶಿರಸಿ

DIPR/KWR/KSMCA/1268/25-26 dt.31.03.2026

ಕರ್ನಾಟಕ ಸರ್ಕಾರ

ಸಾಲಿಗ್ರಾಮ ಪಟ್ಟಣ ಪಂಚಾಯತ್ ಕಾರ್ಯಾಲಯ

ಬ್ರಹ್ಮಾವರ ತಾಲೂಕು, ಉಡುಪಿ ಜಿಲ್ಲೆ-576225

E-mail: ka.saligrama.tp@gmail.com Website: www.saligramatown.mrc.gov.in

ನಂ: ಸಾ.ಪ.ಪಂ/ಆವಿ/ಟೆಂಡರ್/4638/3/2025-26 ದಿನಾಂಕ: 31-03-2026

"ಇ-ಟೆಂಡರ್ ಪ್ರಕಟಣೆ"

ಸಾಲಿಗ್ರಾಮ ಪಟ್ಟಣ ಪಂಚಾಯತಿಗೆ 1 ಹೆಲ್ಪರ್/ವಾಟರ್ ಸಪ್ಲೆಯರ್ ವಾಲ್ಮೆನ್ ಹೊರಗುತ್ತಿಗೆ ಆಧಾರದಲ್ಲಿ ಸರಬರಾಜು ಮಾಡಲು ಅಧಿಕೃತ ಮಾನ್ಯತೆ ಪಡೆದ ಏಜೆನ್ಸಿಯಿಂದ (ಹೊರ ಸಂಪನ್ಮೂಲ ಏಜೆನ್ಸಿ) ಕಾರ್ಮಿಕ ಸಿಬ್ಬಂದಿಯನ್ನು ಪೂರೈಸಲು ಸವಿವರವಾದ ದರಪಟ್ಟಿ ಆಹ್ವಾನಿಸಲಾಗಿದೆ.

ಕ್ರ ಸಂ.	ನಿರ್ವಹಣೆ/ಸರಬರಾಜು ಟೆಂಡರ್ ವಿವರ	ಸಿಬ್ಬಂದಿ ಸಂಖ್ಯೆ	ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ)	ಟೆಂಡರ್ ಫಾರಂ ಬೆಲೆ (ಎಲ್ಲಾ ತೆರಿಗೆಗಳು ಸೇರಿ) (ರೂ.ಗಳಲ್ಲಿ)
1	ಹೆಲ್ಪರ್/ವಾಟರ್ ಸಪ್ಲೆಯರ್ ವಾಲ್ಮೆನ್	01	e-Portal ನಲ್ಲಿ ನಮೂದಿಸಿದಂತೆ	e-Portal ನಲ್ಲಿ ನಮೂದಿಸಿದಂತೆ

(1) ಟೆಂಡರ್ ಅವದಿ: ಒಂದು ವರ್ಷ ಮಾತ್ರ, (2) ಟೆಂಡರ ಫಾರಂ ಪಡೆಯಲು ಅರ್ಜಿ ಸಲ್ಲಿಸಿ, ಟೆಂಡರ್ ಫಾರಂ ಪಡೆಯಲು ಕೊನೆಯ ದಿನಾಂಕ: e-Portal ನಲ್ಲಿ ನಮೂದಿಸಿದಂತೆ (3) ಭರ್ತಿ ಮಾಡಿದ ಟೆಂಡರ ಫಾರಂ ಸಲ್ಲಿಸಲು ಕಡೆಯ ದಿನಾಂಕ: e-Portal ನಲ್ಲಿ ನಮೂದಿಸಿದಂತೆ (4) ಸ್ವೀಕರಿಸಿದ ಟೆಂಡರ ಫಾರಂಗಳನ್ನು ತೆರೆಯುವ ದಿನಾಂಕ: e-Portal ನಲ್ಲಿ ನಮೂದಿಸಿದಂತೆ.

ಹೆಚ್ಚಿನ ಮಾಹಿತಿಯನ್ನು ಕಛೇರಿಯ ವೇಳೆಯಲ್ಲಿ ಅಥವಾ ಕಛೇರಿಯ ವೆಬ್‌ಸೈಟ್ www.saligramatown.mrc.gov.in ನಲ್ಲಿ ಸಹ ಪಡೆಯಬಹುದು.

ಸಹಿ/- ಆಡಳಿತಾಧಿಕಾರಿಗಳು, ಸಾಲಿಗ್ರಾಮ ಪಟ್ಟಣ ಪಂಚಾಯತ
ಸಹಿ/- ಮುಖ್ಯಾಧಿಕಾರಿ, ಸಾಲಿಗ್ರಾಮ ಪಟ್ಟಣ ಪಂಚಾಯತ

ವಾಸಾಇ/ಸನಿಉ/ಕೆಎಸ್‌ಎಂಸಿಎ/01/26-27 ದಿ: 01.04.2026

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ನಂ.ಲೋ.ಇ./ಚಿ.ವಿ./ಸ.ಇಂ.-2/ಟೆಂಡರ/2025-26/9134 ದಿನಾಂಕ: 31/03/2026

ಇ-ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2025-26 ನೇ ಸಾಲಿನ ಲೆಕ್ಕ ಶೀರ್ಷಿಕೆ 3054-ಜಿಮುರ ನಿರ್ವಹಣೆ ಅಡಿ 4 ಕಾಮಗಾರಿಗಳು, 3054-ರಾಹೆ ನಿರ್ವಹಣೆ ಅಡಿ 1 ಕಾಮಗಾರಿ, 4059-ಮಾನ್ಯ ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ (CMIDP) ಅಡಿ 2 ಕಾಮಗಾರಿಗಳು 5054-ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ - ಬಂಡವಾಳ ವೆಚ್ಚ ಅಡಿ 1 ಕಾಮಗಾರಿ ಹಾಗೂ 4059-ಮಾನ್ಯ ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ - ಎಸ್.ಸಿ.ಪಿ. (CMIDP), ಹೀಗೆ ಒಟ್ಟು 9 ಕಾಮಗಾರಿಗಳು ಇದ್ದು, ಗುತ್ತಿಗೆಗೆ ಇಟ್ಟ ಕನಿಷ್ಠ ಮೊತ್ತ ರೂ. 20.00 ಲಕ್ಷ ಹಾಗೂ ಗರಿಷ್ಠ ಮೊತ್ತ ರೂ. 132.00 ಲಕ್ಷ ಇರುವ ಕಾಮಗಾರಿಗಳಿಗೆ ಟೆಂಡರ್ ಆವ್ಹಾನಿಸಲಾಗಿದೆ.

ಕ್ರ.ಸಂ. 1, 3, 5 ರಿಂದ 7 & 9 ರಲ್ಲಿನ ಕಾಮಗಾರಿಗಳಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ : 10-04-2026 ರಂದು (11.00 ಗಂಟೆಗೆ) 2)ಆಕ್ಷೇಪಣೆ - ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ : 13-04-2026 (ಸಾಯಂಕಾಲ 5.30 ಗಂಟೆಯವರೆಗೆ) 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 16-04-2026 (ಸಾಯಂಕಾಲ 5.00 ಗಂಟೆಯವರೆಗೆ) 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 18-04-2026 (ಸಾಯಂಕಾಲ 4.30 ಗಂಟೆಗೆ) 5) ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ" 6) ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ-ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕ್ರ.ಸಂ. 2, 4 ಮತ್ತು 8 ರಲ್ಲಿನ ಕಾಮಗಾರಿಗಳಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ : 16-04-2026 ರಂದು (11.00 ಗಂಟೆಗೆ) 2) ಆಕ್ಷೇಪಣೆ - ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ : 18-04-2026 (ಸಾಯಂಕಾಲ 5.30 ಗಂಟೆಯವರೆಗೆ) 3) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 21-04-2026 (ಸಾಯಂಕಾಲ 5.00 ಗಂಟೆಯವರೆಗೆ) 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 23-04-2026 (ಸಾಯಂಕಾಲ 4.30 ಗಂಟೆಗೆ) 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ" 6) ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ-ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-NO-12/KSMCA/2026-27

ಕಾರ್ಕಳ ಪುರಸಭೆ

ಕಾರ್ಕಳ-574104, ಉಡುಪಿ ಜಿಲ್ಲೆ

ನಂ: ಕಾಪುಸ: ತಾಂತ್ರಿಕ ಶಾಖೆ: ಸಿ.ಆರ್.: 154: 2025-26 ದಿನಾಂಕ :25.03.2026

ಇ-ಟೆಂಡರ್ ಪ್ರಕಟಣೆ

ಕಾರ್ಕಳ ಪುರಸಭೆಯ 2025-26ನೇ ಸಾಲಿನ 15ನೇ ಹಣಕಾಸು ಆಯೋಗದ ನಿಬಂಧಿತ ಅನುದಾನದಡಿ ಈ ಕೆಳಗಿನ ಕಾಮಗಾರಿಯನ್ನು ನಿರ್ವಹಿಸಲು ಅರ್ಹ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಗುತ್ತಿಗೆದಾರರಿಂದ ನಿರ್ದಿಷ್ಟ ಟೆಂಡರ್ ದಸ್ತಾವೇಜಿನಲ್ಲಿ (Standard tender document) ಟೆಂಡರನ್ನು KPPP ಪೋರ್ಟಲ್ (Website:karnataka.gov.in/) ಮುಖಾಂತರ ಆಹ್ವಾನಿಸಲಾಗಿದೆ.

1. DMA/2025-26/OW/WORK_INDENT56511- ರೂ. 22.95 ಲಕ್ಷ

ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 07.04.2026 ಅಪರಾಹ್ನ 4.30 ಗಂಟೆ.
ಟೆಂಡರ್‌ಗಳನ್ನು ತೆರೆಯುವ ದಿನಾಂಕ: 09.04.2026 ಪೂರ್ವಾಹ್ನ 10.30 ಗಂಟೆ.

ಸಹಿ/-(ಮುಖ್ಯಾಧಿಕಾರಿ)
ಪುರಸಭೆ, ಕಾರ್ಕಳ, ಉಡುಪಿ ಜಿಲ್ಲೆ

ಮಂಗಳೂರು ಮಹಾನಗರಪಾಲಿಕೆ

ಇಎಸ್‌ಟಿ ಟೆಂಡರ್ 69/2025-26 ದಿನಾಂಕ: 27-03-2026

ಟೆಂಡರ್ ಪ್ರಕಟಣೆ

ಈ ಕೆಳಗೆ ಸೂಚಿಸಿರುವ ಕಾಮಗಾರಿಗಳನ್ನು ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999-2000ರ ಪ್ರಕರಣ ಆಕ್ಟ್ 2000ರ ನಿಯಮದಂತೆ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ನ ಕೆ.ಡಬ್ಲ್ಯೂ-1 ನಿಯಮದನ್ವಯ ಮ್ಯಾನುವಲ್ ಟೆಂಡರ್‌ನ್ನು ಸಾಮಾನ್ಯ ನಿಧಿಯಲ್ಲಿ ನಿರ್ವಹಿಸುವ ಬಗ್ಗೆ ಲೋಕೋಪಯೋಗಿ ಇಲಾಖೆಯ ನೊಂದಾಯಿತ ಗುತ್ತಿಗೆದಾರರಿಂದ ಐಟಂವಾರು ನೆಲೆಯಲ್ಲಿ ಮೊಹರಾದ ಟೆಂಡರನ್ನು ಆಹ್ವಾನಿಸಲಾಗಿದೆ. ಗುತ್ತಿಗೆದಾರರು ನೋಂದಾವಣಿ ಹೊಂದಿರುವ ಬಗ್ಗೆ ದಾಖಲೆಯನ್ನು ಅರ್ಜಿಯೊಂದಿಗೆ ಸಲ್ಲಿಸುವುದು.

ಕ್ರ ಸಂ.	ಕಾಮಗಾರಿಗಳ ಸ್ವರೂಪ	ಒಟ್ಟು ಕಾಮಗಾರಿಗಳು	ಟೆಂಡರ್ ಮೊತ್ತ
1	ಮಹಾನಗರಪಾಲಿಕಾ ವ್ಯಾಪ್ತಿಯ ವಿವಿಧ ವಿಭಾಗಗಳಲ್ಲಿ ವಾಲ್ವ್ ಅಳವಡಿಕೆ, ಆಳುಗುಂಡಿ ದುರಸ್ತಿ, ಗೇಟ್ ವಾಲ್ವ್ ಅಳವಡಿಕೆ, ನಳ್ಳಿ ನೀರಿನ ಕೊಳವೆ ಅಳವಡಿಕೆ, ಡಾಂಬರೀಕರಣ, ಕಾಂಕ್ರೀಟೀಕರಣ, ಇಂಟರ್‌ಲಾಕ್ ಅಳವಡಿಕೆ, ಮಣ್ಣು ತುಂಬಿಸಿ ಎತ್ತರಿಸುವುದು, ತಡೆಗೋಡೆ ನಿರ್ಮಾಣ, ಟ್ರಯಲ್ ಪಿಟ್, ಒಳಚರಂಡಿ ಕೊಳವೆ ವಿಸ್ತರಣೆ - ಇತ್ಯಾದಿ ಕಾಮಗಾರಿಗಳು (ಕಾಮಗಾರಿಗಳ ಸ್ಥಳ ವಿವರ ಅಂದಾಜು ಮೊತ್ತ, ಅನುದಾನ, ಇ.ಎಂ.ಡಿ. ಫಾರಂ ಬೆಲೆ ಬಗ್ಗೆ ಮಾಹಿತಿಯನ್ನು ಕಾರ್ಯಪಾಲಕ ಅಭಿಯಂತರರ ವಿಭಾಗದಲ್ಲಿ ಪಡೆಯಬಹುದು)	22	ರೂ. 75.09 ಲಕ್ಷಗಳು

(1) ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 05-05-2026**
(2) ಭರ್ತಿ ಮಾಡಿದ ಟೆಂಡರ್ **ಫಾರಂ ಸಲ್ಲಿಸುವ ಕೊನೆಯ ದಿನಾಂಕ: 06-05-2026 ಅಪರಾಹ್ನ 4.00 ಗಂಟೆಯವರೆಗೆ.** ಸಾಧ್ಯವಾದರೆ ಅದೇ ದಿನ ತೆರೆಯಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಮಹಾನಗರಪಾಲಿಕೆ, ಮಂಗಳೂರು

DIPR/DK/KSMCA/8/26-27 dt: 01.04.2026

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್, ಮಂಡ್ಯ

ಜಿಲ್ಲಾ ಅಧಿಕಾರಿಗಳ ಕಛೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ.
ಮಂಡ್ಯ ಜಿಲ್ಲೆ. ಮೌಲಾನಾ ಆಜಾದ್ ಭವನ, ಕೆರೆಯಂಗಳ,
ಮಂಡ್ಯ-571402, ದೂ-08232-297240.
ಇ-ಮೇಲ್ : dommandya@gmail.com
ಸಂಖ್ಯೆ:ಅಸಂಕಇ(3)/ಆಹಾರ-ಟೆಂಡರ್/ಸಿ.ಆರ್-04/2023-24.
ದಿನಾಂಕ:31.03.2026.

ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಮಂಡ್ಯ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖಾ ವ್ಯಾಪ್ತಿಯಲ್ಲಿ ಬರುವ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು/ವಸತಿ ಶಾಲೆಗಳಿಗೆ "ಗ್ರೂಪ್-ಎ ಗ್ರೂಪ್-ಬಿ, ಗ್ರೂಪ್-ಸಿ ಮತ್ತು ಗ್ರೂಪ್-ಡಿ ಆಹಾರ ಪದಾರ್ಥಗಳ ಪೂರೈಕೆಗಾಗಿ ಟೆಂಡರ್ ಅನ್ನು (ಪ್ರಕಟಣೆ ಸಂಖ್ಯೆ: MWD/2025-26/1NO123) ದ್ವಿ-ಲಕೋಟೆ ಪದ್ಧತಿಯಂತೆ ಆಹ್ವಾನಿಸಲಾಗಿದ್ದು, ಅರ್ಹ ಸಂಸ್ಥೆಯವರು ಟೆಂಡರ್‌ಅನ್ನು ಸಲ್ಲಿಸಬಹುದಾಗಿದೆ.

(1) ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ : 296.00 ಲಕ್ಷಗಳು. (2) ಟೆಂಡರ್ ಫಾರಂ ಅಪ್ ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ : 23.03.2026 ಬೆಳಿಗ್ಗೆ 11.00. (3) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : 22.04.2026, 5.00 ಗಂಟೆಗೆ. (4) ಟೆಂಡರ್‌ನ ಪೂರ್ವ ಭಾವಿ ಸಭೆಯ ದಿನಾಂಕ ಮತ್ತು ಸ್ಥಳ : ದಿ:02.04.2026, 11.00 ಗಂಟೆಗೆ ಸ್ಥಳ:- ಜಿಲ್ಲಾ ಅಧಿಕಾರಿಗಳ ಕಾರ್ಯಾಲಯ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮಂಡ್ಯ ಜಿಲ್ಲೆ, ಮಂಡ್ಯ. (5) ತಾಂತ್ರಿಕ ಲಕೋಟೆ ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ : ದಿ:24.04.2026, 11.00 ಗಂಟೆಗೆ ಸ್ಥಳ:- ಜಿಲ್ಲಾ ಅಧಿಕಾರಿಗಳ ಕಛೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮಂಡ್ಯ. (6) ಆರ್ಥಿಕ ಲಕೋಟೆಯನ್ನು ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ : (ತಾಂತ್ರಿಕ ಲಕೋಟೆಯಲ್ಲಿ ಯಶಸ್ವಿಯಾದವರಿಗೆ ಆನಂತರ ತಿಳಿಸಲಾಗುವುದು) ಜಿಲ್ಲಾ ಅಧಿಕಾರಿಗಳ ಕಛೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮಂಡ್ಯ. (7) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ : 4,44,000/-.

ಹೆಚ್ಚಿನ ಮಾಹಿತಿಗಾಗಿ Website: https://kppp.karnataka.gov.in ಅಥವಾ ಜಿಲ್ಲಾ ಅಧಿಕಾರಿಗಳ ಕಛೇರಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮಂಡ್ಯ ಜಿಲ್ಲೆ ಕಛೇರಿಯನ್ನು ದೂರವಾಣಿ ಸಂಖ್ಯೆ:-08232-297240 ಅನ್ನು ಸಂಪರ್ಕಿಸಲು ಕೋರಿದೆ.

ಸಹಿ/-ಜಿಲ್ಲಾ ಅಧಿಕಾರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,
ಮಂಡ್ಯ ಜಿಲ್ಲೆ.

ವಾಸಾಸಂಇ/ಸನಿ-ಮಂ/ಕೆಎಸ್‌ಎಂಸಿ&ಎ/927/2026-27

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ ನಂ.1, ಸಕಲೇಶಪುರ, ಹಾಸನ ಜಿಲ್ಲೆ. ದೂರವಾಣಿ ಸಂಖ್ಯೆ:08173-244454

ನೋಂದಾಯಿತಕಛೇರಿ ವಿಳಾಸ: ನಂ.148, ಎಂಬೆಸಿ ಸ್ಕ್ವೇರ್, ಇನ್‌ಫೇಂಟ್ರಿ ರೋಡ್, ಬೆಂಗಳೂರು-560001

ಪೋ: 080-22289966/22256688, ಫ್ಯಾಕ್ಸ್: 080-22264477 ಇ-ಮೇಲ್: **mdvjnl@gmail.com**

ವೆಬ್‌ಸೈಟ್: **www.vjnl.in CIN No: U41000KA2016SGC097260**

ಸಂ:ಕಾಇಂ/ವಿಜನಿನಿ/ಎಯೋವಿ.1/ಸ/ಟೆಂಡರ್ ಪ್ರಕಟಣೆ/ TND-10/2025-26 ದಿನಾಂಕ:- 01/04/20266.02

ಶೇಕಡಾವಾರು ಟೆಂಡರ್ ಪ್ರಕಟಣೆ ಸಂಖ್ಯೆ : VJNL/EE/D1/SKP/FOREST/TND-10/2025-26/2024 Dated:- 25.03.2026 (Two Tender Document System) (ಕೆ.ಪಿ.ಪಿ.ಪಿ ಪೋರ್ಟಲ್ ಪದ್ಧತಿ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ರವರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರುಗಳಿಂದ ಈ ವಿಭಾಗದಡಿಯಲ್ಲಿ 01 ಕಾಮಗಾರಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ಸದರಿ ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ ರೂ. 15.00 ಲಕ್ಷಗಳು (ಜಿ.ಎಸ್.ಟಿ. ಮೊತ್ತ ಹೊರತುಪಡಿಸಿ) ಇರುತ್ತದೆ. ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಹಾಗೂ ಟೆಂಡರ್‌ಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಸಲ್ಲಿಸಲು ಟೆಂಡರ್ ವೇಳಾಪಟ್ಟಿ ಈ ಕೆಳಕಂಡಂತ್ತಿರುತ್ತದೆ

ಕ್ರ.ಸಂ	ಟೆಂಡರ್ ಕಾಮಗಾರಿ ಕ್ರ.ಸಂ.	ಟೆಂಡರ್ ದಸ್ತಾವೇಜುಗಳನ್ನು ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕ	ಭರ್ತಿ ಮಾಡಿದ ಟೆಂಡರ್ ದಸ್ತಾವೇಜುಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ	ತಾಂತ್ರಿಕ ಬಿಡ್ (ಲಕೋಟೆ-1) ತೆರೆಯುವ ದಿನಾಂಕ
1	01	02.04.2026 ರಿಂದ 15.04.2026 ಸಂಜೆ 5.30 ರ ವರೆಗೆ	15.04.2026 ಸಂಜೆ 5.30 ರ ವರೆಗೆ	ದಿನಾಂಕ: 17.04.2026 ರವರೆಗೆ ಬೆಳಿಗ್ಗೆ 11.00 ಗಂಟೆಗೆ

ತಾಂತ್ರಿಕ ಬಿಡ್‌ನ್ನು ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ.1, ಸಕಲೇಶಪುರ ಇಲ್ಲಿ ತೆರೆಯಲಾಗುವುದು ಮತ್ತು ತಾಂತ್ರಿಕ ಬಿಡ್‌ಗಳಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದುಕೊಂಡ ನಂತರ ಆರ್ಥಿಕ ಬಿಡ್ಡನ್ನು ತೆರೆಯಲಾಗುವುದು. ಸದರಿ ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ/ಪೂರ್ವಾರ್ಹತ ಷರತ್ತುಗಳು/ಇ.ಎಂ.ಡಿ ಮೊತ್ತ/ಬಿಡ್ಡುದಾರರ ಅರ್ಹತೆ/ಟೆಂಡರ್ ನಿಭಂಧನೆಗಳು/ಪೂರ್ವ ಬಿಡ್ ಸಭೆಯ ವಿವರಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್‌ಗಳನ್ನು ಒಪ್ಪಿಕೊಳ್ಳುವ ಹಾಗೂ ಯಾವುದೇ ಕಾರಣ ನೀಡದೆ ಎಲ್ಲಾ ಅಥವಾ ಯಾವುದೇ ಟೆಂಡರ್‌ಗಳನ್ನು ತಿರಸ್ಕರಿಸುವ ಹಕ್ಕನ್ನು ಸಕ್ಷಮ ಪ್ರಾಧಿಕಾರವು ಹೊಂದಿರುತ್ತದೆ ಹಾಗೂ ಕಡಿಮೆ ಮೊತ್ತದ ಟೆಂಡರ್ ಸ್ವೀಕರಿಸಲು ಬದ್ಧವಾಗಿರುವುದಿಲ್ಲ. ಯಾವುದೇ ಮಾರ್ಪಾಡುಗಳು ಅಥವಾ ತಿದ್ದುಪಡಿಗಳನ್ನು ಕೆ.ಪಿ.ಪಿ.ಪಿ. ಪೋರ್ಟಲ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ಸಮಯದಲ್ಲಿ ಈ ಕೆಳ ಸಹಿದಾರರಿಂದ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ಅಂತರ್ಜಾಲ ತಾಣ, https://kppp.karnataka.gov.in/#/portal/portal-home ರಲ್ಲಿ ಪಡೆಯಬಹುದಾಗಿದೆ.

ಸಹಿ/-ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ
ಯೋಜನಾ ವಿಭಾಗ, ನಂ.1 ಸಕಲೇಶಪುರ.

ವಾಸಾಸಂಇ/ಹಿಸನಿ/ಹಾಸನ/04/ಕೆಎಸ್‌ಎಂಸಿಎ/2026-27

ಕರ್ನಾಟಕ ಸರ್ಕಾರ

ಆರೋಗ್ಯ ಮತ್ತುಕುಟುಂಬ ಕಲ್ಯಾಣ ಇಲಾಖೆ

ಜಿಲ್ಲಾ ಅಂಧತ್ವ ನಿವಾರಣಾಧಿಕಾರಿಗಳ ಕಛೇರಿ ವಿಜಯನಗರ ಜಿಲ್ಲೆ,ಹೊಸಪೇಟೆ-583201 ದೂರವಾಣಿ ಸಂಖ್ಯೆ : 9449842086

ಈಮೇಲ್:dlovijayanagara@gmail.com

ಸಂಖ್ಯೆ:ಜಿ.ಅ.ನಿ.ಕಾ/262/2025-26 ದಿನಾಂಕ:27.03.2026

-: ಇ-ಟೆಂಡರ್ ಪ್ರಕಟಣೆ: -

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ ವಿಜಯನಗರ 2024-25 ಮತ್ತು 2025-26 ನೇ ಸಾಲಿನ ರಾಷ್ಟ್ರೀಯ ಅಂಧತ್ವ ಮತ್ತು ದೃಷ್ಟಿದೋಷ : 88. FMR CODE , 88.11 cataract surgeries through NGOs ಶೀರ್ಷಿಕೆ ಅಡಿ ಸರ್ಕಾರೇತರ ಸಂಸ್ಥೆಗಳ ಮೂಲಕ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಗಳನ್ನು ಮಾಡಲು (Expression Of Interest) ಆಸಕ್ತಿ ವ್ಯಕ್ತಪಡಿಸುವಿಕೆಗೆ ಇ-ಟೆಂಡರ್ ಆಹ್ವಾನಿಸುವ ಮೂಲಕ ಒಪ್ಪಂದ ಮಾಡಿಕೊಳ್ಳಲು ಕೆ.ಟಿ.ಪಿ.ಪಿ ಕಾಯ್ದೆಅನ್ವಯ ಇ-ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ಅರ್ಹ ಟೆಂಡರ ದಾರರು ದಿನಾಂಕ:31-03-2026ರಿಂದ ದಿನಾಂಕ:15-04-2026 ರ ಸಮಯ ಸಾಯಂಕಾಲ 05:00 ಗಂಟೆಯ ವರೆಗೆ ಟೆಂಡರನ್ನು ಅಪ್ ಲೋಡ್ ಮಾಡಬಹುದಾಗಿದೆ. ಸದರಿ ಟೆಂಡರಿನ ಅಂದಾಜು ಮೊತ್ತ ರೂ. 70.00 ಲಕ್ಷ ಇರುತ್ತದೆ. (DHFWS/2025-26/PREQUAL_TENDER_NUMBER_90)

ಹೆಚ್ಚಿನ ಮಾಹಿತಿಗಾಗಿ ಕಛೇರಿಯ ದೂರವಾಣಿ ಸಂಖ್ಯೆ: 9449842086 ಕಛೇರಿ ಅವಧಿಯಲ್ಲಿ ಸಂಪರ್ಕಿಸಬಹುದಾಗಿದೆ ಅಥವಾ ಮುದ್ರಾಂಪಡೆಯ ಬಹುದಾಗಿದೆ.

ಸಹಿ/-ಜಿಲ್ಲಾ ಅಂಧತ್ವ ನಿವಾರಣಾ ಅಧಿಕಾರಿಗಳು, ವಿಜಯನಗರ ಜಿಲ್ಲೆ.

ವಾ.ಸಾ.ಸಂ.ಇ/ವಿಜಯನಗರ/2025-26/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/03

ಕರ್ನಾಟಕ ಸರ್ಕಾರ
Government of Karnataka

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ, ಕಚೇರಿ ಗದಗ ವಿಭಾಗ, ಗದಗ ಬಿಂಕದಕಟ್ಟಿ-582103

ದೂರವಾಣಿ ಸಂಖ್ಯೆ: 08372-200978
ಇ-ಮೇಲ್: **dyconservatorgadag@gmail.com**

ಕ್ರ.ಸಂ:ಎ2/ಬಿಜೆಟಿ/ಹೊರಗುತ್ತಿಗೆ/ಸಿಆರ್-02/2026-27, ದಿನಾಂಕ:01-04-2026

ಇ-ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಟೆಂಡರ್ ಪ್ರಕಟಣೆ

ಗದಗ ವಿಭಾಗದಲ್ಲಿರುವ ವಿಭಾಗ, ಉಪ ವಿಭಾಗ ಮತ್ತು ವಲಯ ಕಚೇರಿಗಳಿಗೆ 2026-27 ನೇ ಸಾಲಿನಲ್ಲಿ ವಿವಿಧ ಯೋಜನೆ & ಲೆಕ್ಕ ಶೀರ್ಷಿಕೆಯಡಿ ಅರಣ್ಯ ರಕ್ಷಣಾ ಶಿಬಿರಗಳಿಗೆ ಕಾವಲುಗಾರ ಹಾಗೂ 'ಡಿ' ಗ್ರೂಪ್ ನೌಕರರನ್ನು ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆ ಪೂರೈಕೆ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಇ-ಪೋರ್ಟಲ್ ನೋಂದಾಯಿತ ಗುತ್ತಿಗೆದಾರರಿಂದ ಪಾರದರ್ಶಕತೆ ನಿಯಮ ಹಾಗೂ ಅಧಿನಿಯಮಗಳನ್ವಯ ದಿನಾಂಕ : 01-04-2026ರಿಂದ 31-03-2027ರ ಅವಧಿಯವರೆಗೆ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್-2.0 ಆವೃತ್ತಿ ಮೂಲಕ ಇ-ಟೆಂಡರ್‌ನ್ನು **https://kppp.karnataka.gov.in** ನಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ವೇಳಾಪಟ್ಟಿ ಈ ಕೆಳಗಿನಂತಿರುತ್ತದೆ..

ಕ್ರ ಸಂ	ವಿವರ	ವೇಳಾಪಟ್ಟಿ
1	ಇ-ಟೆಂಡರ್ ಪ್ರಕಟಣೆ ದಿನಾಂಕ	01-04-2026
2	ತಾಂತ್ರಿಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ	16-04-2026 ಅಪರಾಹ್ನ 4.00 ಗಂಟೆವರೆಗೆ
3	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಸಮಯ	18-04-2026 ಬೆಳಿಗ್ಗೆ 11.00 ಗಂಟೆವರೆಗೆ
4	ಟೆಂಡರ್ ಪರಿಶೀಲನೆ ದಿನಾಂಕ	18-04-2026
5	ಆರ್ಥಿಕ ಬಿಡ್ ತೆರೆಯುವ ದಿನಾಂಕ ಸಮಯ	21-04-2026 ಬೆಳಿಗ್ಗೆ 11.00 ಗಂಟೆಗೆ
6	ಯುನಿಟ್ ನಂ. 1 ಅಂದಾಜು ಮೊತ್ತ	ರೂ.48.192 ಲಕ್ಷ
7	ಇಎಂಡಿ ಠೇವಣಿ ಮೊತ್ತ	ರೂ.1.205 ಲಕ್ಷ
8	ಯುನಿಟ್ ನಂ. 2 ಅಂದಾಜು ಮೊತ್ತ	ರೂ.35.166 ಲಕ್ಷ
9	ಇಎಂಡಿ ಠೇವಣಿ ಮೊತ್ತ	ರೂ.0.879 ಲಕ್ಷ

ಮೇಲಿನ ದಿನಾಂಕಗಳಂದು ಸಾರ್ವತ್ರಿಕ ರಜೆಯಿದ್ದಲ್ಲಿ/ ಸಾರ್ವತ್ರಿಕ ರಜೆಯೆಂದು ಘೋಷಣೆಯಾದಲ್ಲಿ ಮುಂದಿನ ದಿನಾಂಕಗಳನ್ನು ಪರಿಗಣಿಸುವುದು. ಟೆಂಡರ್‌ಗೆ ಸಂಬಂಧಿಸಿದಂತೆ ಷರತ್ತು ಹಾಗೂ ಹೆಚ್ಚಿನ ಮಾಹಿತಿ, ವಿವರಗಳನ್ನು ಕರ್ನಾಟಕ ಸರ್ಕಾರದ **https://kppp.karnataka.gov.in** ಇ-ಪೋರ್ಟಲ್ ಮೂಲಕ ಪಡೆದುಕೊಳ್ಳತಕ್ಕದ್ದು.

ಸಹಿ/-ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ಗದಗ ಉಪ ವಿಭಾಗ, ಗದಗ

ವಾ.ಸಾ.ಇ/ಗದಗ/02/ದೇಶಪಾಂಡೆಪಬ್ಲಿಸಿಟಿ/2026-27

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಧನಲಕ್ಷ್ಮೀ (ನಂ.DL-46) ಡ್ರಾ ಏಪ್ರಿಲ್ 1ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
DZ 246443 (ERNAKULAM)

Consolation Prize Rs.5,000/-
DN 246443 DO 246443 DP 246443 DR 246443
DS 246443 DT 246443 DU 246443 DV 246443
DW 246443 DX 246443 DY 246443

2nd Prize Rs.30,00,000/- [30 Lakhs]
DU 885082 (MOOVATTUPUZHA)

3rd Prize Rs.5,00,000/- [5 Lakhs]
DY 167122 (ERNAKULAM)

FOR THE TICKETS ENDING WITH THE FOLLOWING NUMBERS

4th Prize Rs.5,000/-
1098 1541 2684 2708 2799 3158 3231 3406 4474 5094
5105 5149 7195 7304 7425 7575 7840 8261 9637

5th Prize Rs.2,000/-
1707 2211 4713 7479 8522 9505

6th Prize Rs.1,000/-
0024 0281 0860 1182 1201 1489 1531 2801 3116 3397
3548 3745 4234 4475 6734 6907 7167 7192 7421 7709
8145 9343 9350 9521 9868

7th Prize Rs.500/-
0225 0437 0502 0534 0767 0850 0910 1198 1743 1794
1855 2082 2162 2228 2395 2525 2558 2604 2676 2804
2935 3077 3194 3353 3434 3696 3721 3753 4076 4093
4211 4345 4432 4492 4583 4647 5131 5138 5249 5491
5720 5907 6152 6170 6320 6356 6560 6590 6723 6742
6806 6902 7061 7126 7245 7367 7413 7533 7624 7853
7873 7992 8249 8504 8579 8794 8802 8833 8881 9268
9283 9323 9363 9409 9660 9963

8th Prize Rs.200/-
0129 0134 0417 0490 0599 0888 0933 1067 1089 1146
1150 1282 1328 1396 1461 1523 1628 1646 1652 1746
1940 2000 2086 2167 2296 2348 2477 2829 2908 3132
3347 3645 3681 3689 3697 3866 3889 4063 4121 4124
4168 4231 4297 4420 4458 4500 4580 4792 4797 4858
4920 4921 5001 5010 5503 5690 5735 5925 6047 6115
6154 6206 6238 6243 6448 6608 6963 6988 7039 7059
7132 7246 7375 7527 7552 7559 7565 7599 7787 7797
7970 8026 8092 8141 8162 8379 8636 8666 8760 9099
9181 9423 9443 9709 9796 9813

9th Prize Rs.100/-
0026 0038 0047 0102 0125 0136 0299 0378 0576 0605
0631 0765 0787 0897 1113 1128 1231 1251 1271 1348
1500 1574 1590 1604 1673 1810 1826 1898 1916 2053
2074 2137 2193 2194 2432 2437 2447 2467 2515 2796
2855 3056 3090 3105 3128 3159 3187 3249 3329 3340
3351 3398 3640 3800 3834 3916 3958 3962 4013 4017
4139 4203 4513 4558 4755 4790 4817 4821 4923 5036
5053 5076 5101 5115 5346 5413 5487 5501 5698 5840
5955 5961 5966 5969 6072 6100 6163 6272 6377 6450
6540 6580 6636 6744 6840 6884 7016 7047 7070 7122
7128 7161 7208 7265 7344 7368 7414 7430 7452 7760
7919 8027 8082 8121 8237 8253 8327 8375 8515 8586
8597 8617 8631 8726 8776 8804 8820 8899 8927 9215
9229 9369 9406 9500 9747 9781 9825 9873

ಮಾಜಿ ಸೈನಿಕನಿಗೆ ಹಲ್ಲೆ: ಕ್ರಮಕ್ಕೆ ಆಗ್ರಹ



ಬಂಟ್ವಾಳ: ಮಾಜಿ ಸೈನಿಕರೋರ್ವರ ಮೇಲೆ ಗುಂಪೊಂದು ಹಲ್ಲೆಗೈದಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ದ.ಕ.ಜಿಲ್ಲಾ ಘಟಕದ ಅಧ್ಯಕ್ಷ ನೊರ್ಬರ್ಟ್ ರೊಡ್ರಿಗಸ್ ಒತ್ತಾಯಿಸಿದ್ದಾರೆ.

ಬುಧವಾರ ಬಂಟ್ವಾಳ ಪ್ರೆಸ್ ಕ್ಲಬ್‌ನಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀನಗರದಲ್ಲಿ ಕರ್ತವ್ಯಕ್ಕೆ ಹಾಜರಾಗಬೇಕಿದ್ದ ಸೈನಿಕ ವಸಂತ ಪೂಜಾರಿ ಅವರನ್ನು ವಿಮಾನ ನಿಲ್ದಾಣದಲ್ಲಿ ಬಿಟ್ಟು ಅವರ ಕೋರಿಕೆಯಂತೆ ಅದೇ ದಿನ ರಾತ್ರಿ ವಸಂತ ಪೂಜಾರಿ ಅವರ ಪತ್ನಿ ಸಂಧ್ಯಾ ಹಾಗೂ ಮಗನನ್ನು ವೇಣೂರು ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ರಾತ್ರಿ ಹಟ್ಟತಡ್ಕ ಮನೆಗೆ ವಾಪಸು ಬಿಟ್ಟು ಮಗ ಹಾಗೂ ಸ್ನೇಹಿತನ ಜೊತೆ ಮನೆಗೆ ಬರುತ್ತಿದ್ದಾಗ ಶಾಂತಪ್ಪ ಪೂಜಾರಿ ಹಾಗೂ ಶಿವಪ್ಪ ಪೂಜಾರಿ ಸಹಿತ 15 ಮಂದಿಯ ತಂಡ ಕಾರನ್ನು ಅಡ್ಡ ಗಟ್ಟಿ ಮಾರಣಾಂತಿಕವಾಗಿ ಹಲ್ಲೆಗೈದಿದಲ್ಲದೆ ಕೊಲೆ ಬೆದರಿಕೆಯನ್ನು ಒಡ್ಡಿದ್ದಾರೆ ಎಂದು ಅವರು ವಿವರಿಸಿದರು.

ಹಾಗೆಯೇ ಆರೋಪಿಗಳು ವಸಂತ ಪೂಜಾರಿ ಕುಟುಂಬಕ್ಕೆ ಯಾವುದೇ ಸಹಾಯ ಮಾಡಬಾರದು ಎಂದು ಕಂಬಳದ ಬೆತ್ತದಲ್ಲಿ ಹಲ್ಲೆ ನಡೆಸಿದ ತಂಡ, ಪೊಲೀಸ್ ಠಾಣೆಗೆ ದೂರು ನೀಡಿದರೆ ಕೊಲೆ ಮಾಡುವುದಾಗಿ ಬೆದರಿಕೆ ಒಡ್ಡಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಕುಟುಂಬಕ್ಕೆ ಭದ್ರತೆ ಇಲ್ಲ: ಪತ್ನಿ ಸಂಧ್ಯಾ

ವಸಂತ ಪೂಜಾರಿ ಅವರ ಪತ್ನಿ ಸಂಧ್ಯಾ ಮಾತನಾಡಿ, ತನ್ನ ಪತಿ ಶ್ರೀನಗರ ಗಡಿ ಕಾಯುವ ಕೆಲಸದಲ್ಲಿ ತೊಡಗಿಸಿಕೊಂಡಿದ್ದು, ಇಲ್ಲಿ ನಮಗೆ ಸೂಕ್ತ ಭದ್ರತೆ ಇಲ್ಲದ ಸ್ಥಿತಿ ನಿರ್ಮಾಣವಾಗಿದೆ. ನಾನು ಮತ್ತು ಆರು ವರ್ಷದ ಮಗ ಮಾತ್ರ ಮನೆಯಲ್ಲಿದ್ದು, ಆರೋಪಿಗಳ ವರ್ತನೆಯಿಂದ ನಮಗೆ ಜೀವ ಭಯ ಉಂಟಾಗಿದೆ. ಘಟನೆಯ ಬಗ್ಗೆ ಪೊಲೀಸರು ಸೂಕ್ತ ತನಿಖೆ ನಡೆಸಿ ನ್ಯಾಯ ಒದಗಿಸಬೇಕೆಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಗೌರವಾಧ್ಯಕ್ಷ ದಾಸಪ್ಪ ಪೂಜಾರಿ, ಕೋಶಾಧಿಕಾರಿ ಚಂದಪ್ಪ ಡಿ.ಎಸ್. ಸೈನಿಕ ವಸಂತ ಅವರ ಪತ್ನಿ ಸಂಧ್ಯಾ, ಹಲ್ಲೆಗೊಳಗಾದ ಮಾಜಿ ಸೈನಿಕ ಜಯಪ್ರಕಾಶ್ ಉಪಸ್ಥಿತರಿದ್ದರು.

ದಾಖಲುಪತ್ರಗಳಿಲ್ಲದೆ ಕಾರಿನಲ್ಲಿ ಸಾಗಿಸುತ್ತಿದ್ದ 11.40 ಲಕ್ಷ ರೂ. ಪತ್ತೆ: ಕಣ್ಣೂರು ನಿವಾಸಿ ವಶಕ್ಕೆ

ಕಾಸರಗೋಡು: ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಕಾಸರಗೋಡು ಪೊಲೀಸರು ಬುಧವಾರ ಮುಂಜಾನೆ ನಡೆಸಿದ ಕಾರ್ಯಾಚರಣೆಯಲ್ಲಿ ಕಾರಿನಲ್ಲಿ ಸಾಗಿಸುತ್ತಿದ್ದ 11,40,000 ರೂ. ನಗದು ಪತ್ತೆಹಚ್ಚಿ ವಶಪಡಿಸಿಕೊಂಡಿದ್ದಾರೆ. ಇದರಕ್ಕೆ ಸಂಬಂಧಿಸಿ ಕಣ್ಣೂರು ಆಲಿಕ್ಕಲ್ ಪಾದಿರಾಪರಮ ಬಿಲ್‌ಪಾರಯಿಲ್ ನಿವಾಸಿ ಅನೂಪ್ (37) ಎಂಬಾತನನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ. ನಗರದ ಶ್ರೀ ಮಲ್ಲಿಕಾರ್ಜುನ ಕ್ಷೇತ್ರ ಬಳಿಯ ಟ್ರಾಫಿಕ್ ಜಂಕ್ಷನ್‌ನಲ್ಲಿ ಕಾಸರಗೋಡು ಪೊಲೀಸರು ಬುಧವಾರ ಮುಂಜಾನೆ 2 ಗಂಟೆ ವೇಳೆ ವಾಹನ ತಪಾಸಣೆಯಲ್ಲಿ ತೊಡಗಿದ್ದಾಗ ಆ ದಾರಿಯಾಗಿ ಬರುತ್ತಿದ್ದ ಕಾರನ್ನು ತಡೆದು ನಿಲ್ಲಿಸಿ ತಪಾಸಣೆ ನಡೆಸಿದಾಗ ಅದರಲ್ಲಿ ಈ ನಗದನ್ನು ಪತ್ತೆಹಚ್ಚಿ ಅದನ್ನು ವಶಕ್ಕೆ ತೆಗೆದುಕೊಂಡಿದ್ದಾರೆ. ಇದಕ್ಕೆ ಸಂಬಂಧಿಸಿ ಆ ಕಾರಿನಲ್ಲಿದ್ದ ಅನೂಪ್‌ನನ್ನು ಪೊಲೀಸರು ಕಸ್ಟಡಿಗೆ ತೆಗೆದು ವಿಚಾರಿಸಿ ಆತನ ಹೇಳಿಕೆ ದಾಖಲಿಸಿಕೊಂಡಿದ್ದಾರೆ.

ವಶಪಡಿಸಿದ ಹಣವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದರು. ಇದಕ್ಕೆ ಸಂಬಂಧಿಸಿದ ಸರಿಯಾದ ದಾಖಲುಪತ್ರಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದಲ್ಲಿ ಈ ಹಣ ಅದರ ವಾರೀಸುದಾರನಿಗೆ ಲಭಿಸಲಿದೆ. ಇಲ್ಲವಾದರೆ ಸರಕಾರಿ ಖಜಾನೆಗೆ ಸೇರಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಾಲಕಿ ಗರ್ಭಿಣಿ: 82ರ ವೃದ್ಧ ಸೇರಿ 3 ಮಂದಿ ವಿರುದ್ಧ ಪ್ರಕರಣ: ತಂದೆ ಸೆರೆ

ಕಾಸರಗೋಡು: ವಿಭಿನ್ನ ಘಟನೆಗಳಲ್ಲಿ ಕಾಸರಗೋಡು ಜಿಲ್ಲೆಯಲ್ಲಿ ಮಂಗಳವಾರ ಪೊಲೀಸರು ಮೂರು ಪೋಕ್ಸೋ ಪ್ರಕರಣಗಳನ್ನು ನೋಂದಾಯಿಸಿದ್ದಾರೆ.

10ನೇ ತರಗತಿ ವಿದ್ಯಾರ್ಥಿನಿ ಗರ್ಭಿಣಿಯಾದ ಘಟನೆಯಲ್ಲಿ ಬೇಡಗಂ ಪೊಲೀಸರು ಪೋಕ್ಸೋ ಪ್ರಕಾರ ಕೇಸು ದಾಖಲಿಸಿದ್ದಾರೆ. ಹದಿನೈದರ ಹರೆಯದ ಬಾಲಕಿ ನೀಡಿದ ದೂರಿನಂತೆ ಕುತ್ತಿಕೋಲ್ ಪಂಚಾಯತ್‌ನಲ್ಲಿ ವಾಸಿಸುವ ಸಂಬಂಧಿಕನಾದ ಯುವಕನ ವಿರುದ್ಧ ಕೇಸು ದಾಖಲಿಸಲಾಗಿದೆ. ಬಾಲಕಿ ಗರ್ಭಿಣಿ ಎಂದು ಸ್ಪಷ್ಟವಾಗಿರುವುದರೊಂದಿಗೆ ದೌರ್ಜನ್ಯ ಘಟನೆ ಬಹಿರಂಗಗೊಂಡಿದೆ. ಆರೋಪಿಯನ್ನು ಪತ್ತೆಹಚ್ಚಲು ಬೇಡಗಂ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

8ನೇ ತರಗತಿ ಬಾಲಕಿಯನ್ನು ದೌರ್ಜನ್ಯಗೈದ ತಂದೆಯ ವಿರುದ್ಧ ಮೇಲ್ಪರಂಬ ಪೊಲೀಸರು ಪೋಕ್ಸೋ ಕೇಸು ದಾಖಲಿಸಿಕೊಂಡಿದ್ದಾರೆ. ತಿಂಗಳುಗಳಿಂದ ನಡೆದ ದೌರ್ಜನ್ಯ ಘಟನೆ ಬಗ್ಗೆ ತಾಯಿಗೆ ತಿಳಿದಿತ್ತೆನ್ನಲಾಗಿದೆ. ಅಪರಾಧ ಗೊತ್ತಿದ್ದೂ ಅದನ್ನು ಮರೆಮಾಚಿದ ತಾಯಿಯ ಹೆಸರಲ್ಲೂ ಕೇಸು ದಾಖಲಿಸಲಾಗಿದೆ. ತಂದೆಯನ್ನು ಪೊಲೀಸರು ಬಂಧಿಸಿದ್ದಾರೆ. ಚಂದೇರದಲ್ಲಿ ಆರರ ಹರೆಯದ ಬಾಲಕಿಯನ್ನು 82ರ ವೃದ್ಧ ದೌರ್ಜನ್ಯಗೈದ ಪ್ರಕರಣದಲ್ಲಿ ಚಂದೇರ ಪೊಲೀಸರು ಪೋಕ್ಸೋ ಪ್ರಕರಣ ದಾಖಲಿಸಿದ್ದಾರೆ.

ಕುದ್ರೋಳಿ ಶ್ರೀ ಭಗವತೀ ಕ್ಷೇತ್ರದಲ್ಲಿ ನಡಾವಳಿ

ಮಂಗಳೂರು: ಕುದ್ರೋಳಿ ಶ್ರೀ ಭಗವತೀ ಕ್ಷೇತ್ರದಲ್ಲಿ ನಡಾವಳಿ ಉತ್ಸವ ಏ. 3ರಿಂದ ಏ. 5ರವರೆಗೆ ಕುಂಟಾರು ರವೀಶ ತಂತ್ರಿ ನೇತೃತ್ವದಲ್ಲಿ ನಡೆಯಲಿದೆ. ಏ.2ರಂದು ಬೆಳಗ್ಗೆ 8.15 ರಿಂದ ಗಣಹೋಮ, ಮಧ್ಯಾಹ್ನ ಮಹಾಪೂಜೆ, ಸಂಜೆ 6ಕ್ಕೆ ಕೊಡಿಯಾಲ್‌ಬೈಲ್ ಕೆಳಗಿನ ಮನೆ ತರವಾಡಿನಿಂದ ಶ್ರೀ ತೊಂಡಚ್ಚಮಾರರ ಭಂಡಾರದ ಶೋಭಾಯಾತ್ರೆ ಆಗಮಿಸಲಿದೆ. ಏ.3ರಂದು ನಡಾವಳಿ ಉತ್ಸವ, ಬೆಳಗ್ಗೆ 9.45ಕ್ಕೆ ಭಂಡಾರ ಆರೋಹಣ, ಭಂಡಾರ ಮಂದಿರದಿಂದ ಶ್ರೀಮಾತೆಯರ ಪವಿತ್ರ ಭಂಡಾರ ಉತ್ಸವಕ್ಷೇತ್ರಗಳಿಗೆ ಆಗಮಿಸಲಿದೆ. ಮಧ್ಯಾಹ್ನ 12.30ಕ್ಕೆ ಶ್ರೀ ಚೀರುಂಭ ಭಗವತೀ ಮಾತೆಯ ಸನ್ನಿಧಿಯಲ್ಲಿ ವಿಶೇಷ ಮಹಾಪೂಜೆ, ರಾತ್ರಿ 10ರಿಂದ ಬಲಿ ಉತ್ಸವ, ಮೂರ್ತಿ ದರ್ಶನ ನಡೆಯಲಿದೆ. ಏ.4ರಂದು ಮಧ್ಯಾಹ್ನ 12.30ಕ್ಕೆ ಶ್ರೀ ಪಾಡಂಗರ ಭಗವತೀ ಮಾತೆಯ ಸನ್ನಿಧಿಯಲ್ಲಿ ವಿಶೇಷ ಮಹಾಪೂಜೆ, ರಾತ್ರಿ 10 ರಿಂದ ಭೇಟಿಕಳ, ಮೇಲೇರಿಗೆ ಅಗ್ನಿ ಸ್ಪರ್ಶ, ವೀರಸ್ತಂಭ ದರ್ಶನ, ರಾತ್ರಿ 1.30ಕ್ಕೆ ಶ್ರೀ ಭಗವತೀ ಮಾತೆಯರ ಭವ್ಯ ಶೋಭಾಯಾತ್ರೆ ಕರಂಗಲ್ಪಾಡಿಗೆ ತೆರಳಿ ಶ್ರೀ ಭಗವತೀ ಕಟ್ಟೆಯಲ್ಲಿ ಪೂಜೆ ಆಗಿ ಹಿಂದಿರುಗುವುದು, ಪ್ರಾತಃಕಾಲ 2.30ಕ್ಕೆ ಕೆಂಡ ಸೇವೆ, ಮೂರ್ತಿ ದರ್ಶನ ನಡೆಯಲಿದೆ. ಏ.5ರಂದು ಮಧ್ಯಾಹ್ನ 12.30ಕ್ಕೆ ಶ್ರೀ ಪುಲ್ಲೂರಾಳಿ ಭಗವತೀ ಮಾತೆಯ ಸನ್ನಿಧಿಯಲ್ಲಿ ವಿಶೇಷ ಮಹಾಪೂಜೆ ನಡೆಯಲಿದೆ. ರಾತ್ರಿ 10ಕ್ಕೆ ಶ್ರೀ ಕ್ಷೇತ್ರದಲ್ಲಿ ಕೆಂಡಸೇವೆ ನಡೆಯಲಿದೆ ಎಂದು ಕ್ಷೇತ್ರದ ಪ್ರಕಟಣೆ ತಿಳಿಸಿದೆ.

ಇಂದು ಪೊಲೀಸ್ ಧ್ವಜ ದಿನಾಚರಣೆ

ಮಂಗಳೂರು: ಮಂಗಳೂರು ನಗರ ಪೊಲೀಸ್, ದ.ಕ. ಜಿಲ್ಲಾ ಪೊಲೀಸ್, ವಿಶೇಷ ಕಾರ್ಯಪಡೆ ಘಟಕ ಮತ್ತು ಕೆ.ಎಸ್.ಆರ್.ಪಿ. 7ನೇ ಪಡೆ, ಮಂಗಳೂರು ಘಟಕಗಳ ಸಂಯುಕ್ತ ಆಶ್ರಯದಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ಧ್ವಜ ಹಾಗೂ ಕಲ್ಯಾಣ ದಿನಾಚರಣೆ ಏ. 2 ರಂದು ಬೆಳಿಗ್ಗೆ 8 ಗಂಟೆಗೆ ನಗರದ ಡಿ.ಎ.ಆರ್. ಪೊಲೀಸ್ ಕವಾಯತು ಮೈದಾನದಲ್ಲಿ ನಡೆಯಲಿದೆ.

ಕಿರುಸುದ್ದಿ

ಇಂದು ಸುರೇಶ್ ಗೋಪಿ ಕಾಸರಗೋಡಿಗೆ

ಕಾಸರಗೋಡು: ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಎಂ.ಎಲ್.ಅಶ್ವಿನಿ ಅವರ ಪರವಾಗಿ ಚುನಾವಣಾ ಪ್ರಚಾರ ನಡೆಸುವ ನಿಟ್ಟಿನಲ್ಲಿ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಖಾತೆ ರಾಜ್ಯ ಸಚಿವ ಸುರೇಶ್ ಗೋಪಿ ಅವರು ಏ.2ರಂದು ಸಂಜೆ 5.30ಕ್ಕೆ ಮುಳ್ಳೇರಿಯದಲ್ಲಿ ಚುನಾವಣಾ ಪ್ರಚಾರ ಕೈಗೊಳ್ಳುವರು. ಬಳಿಕ ರಾತ್ರಿ 7.30ಕ್ಕೆ ಕಾಸರಗೋಡು ಕಡಪ್ಪುರದಲ್ಲಿ ಚುನಾವಣಾ ಪ್ರಚಾರ ಕಾರ್ಯ ನಡೆಸಲಿದ್ದಾರೆ.

ವಿಧಾನಸಭಾ ಚುನಾವಣೆ: ನಿವೃತ್ತ ಸೈನಿಕರಿಗೆ ಅವಕಾಶ

ಕಾಸರಗೋಡು: ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಕಾಸರಗೋಡು ಜಿಲ್ಲೆಯಲ್ಲಿ ವಿಶೇಷ ಪೊಲೀಸ್ ಅಧಿಕಾರಿಗಳಾಗಿ ಸೇವೆ ಸಲ್ಲಿಸಲು ಆಸಕ್ತಿ ಹೊಂದಿರುವ ನಿವೃತ್ತ ಸೈನಿಕರು ತಮ್ಮ ವಾಸಸ್ಥಳದ ಹತ್ತಿರದ ಪೊಲೀಸ್ ಠಾಣೆಗೆ ಸಾಧ್ಯವಾದಷ್ಟು ಬೇಗ ಅರ್ಜಿಗಳನ್ನು ಸಲ್ಲಿಸಬೇಕೆಂದು ಕಾಸರಗೋಡು ಜಿಲ್ಲಾ ಸೈನಿಕ ಕಲ್ಯಾಣ ಅಧಿಕಾರಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ 04994 256860 ಕರೆ ಮಾಡಬಹುದು.

ವಿಧಾನಸಭಾ ಚುನಾವಣೆ: ಹಸಿರು ಸಂಹಿತೆ ಅಭಿಯಾನ

ಕಾಸರಗೋಡು: ವಿಧಾನಸಭಾ ಚುನಾವಣೆಯ ಪ್ರಚಾರದ ಅಂಗವಾಗಿ ಕಾಸರಗೋಡು ಜಿಲ್ಲಾ ಶುಚಿತ್ವಾ ಮಿಷನ್ ನೇತೃತ್ವದಲ್ಲಿ ಚೇಸ್ ದಿ ಗ್ರೀನ್ ಟ್ರ್ಯಾಕ್ ಸೈಕಲ್ ರ್‍ಯಾಲಿಯನ್ನು ಆಯೋಜಿಸಲಾಗಿದೆ. ಜಿಲ್ಲಾ ಚುನಾವಣಾಧಿಕಾರಿಯಾದ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಈ ರ್‍ಯಾಲಿಯನ್ನು ಉದ್ಘಾಟಿಸಿ ಮಾತನಾಡುವರು. ಏ.2ರಂದು ಬೆಳಗ್ಗೆ 6.30ಕ್ಕೆ ಕಾಞಂಗಾಡು ಹಳೆ ಬಸ್ ನಿಲ್ದಾಣದಿಂದ ಪ್ರಾರಂಭವಾಗುವ ಈ ರ್‍ಯಾಲಿಯು ಬೇಕಲಕೋಟೆ ಪರಿಸರದಲ್ಲಿ ಸಮಾರೋಪಗೊಳ್ಳಲಿದೆ.

ನಿಧನ ಸುದ್ದಿ

ಚಂದ್ರಶೇಖರ ಅತ್ತಾವರ



ಮಂಗಳೂರು: ಇಲ್ಲಿನ ಅತ್ತಾವರ ಬಾಬುಗುಡ್ಡೆ ನಿವಾಸಿ ಚಂದ್ರಶೇಖರ ಅವರು ಮಾ.30ರಂದು ನಿಧನರಾದರು. ಅವರಿಗೆ 78 ವರ್ಷ ವಯಸ್ಸಾಗಿತ್ತು. ಇವರು ಅನೇಕ ಕಾಲ ಪತ್ರಿಕಾ ವಿತರಕರಾಗಿ ಕೆಲಸ ನಿರ್ವಹಿಸಿದ್ದರು. ಮೃತರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆ ಸೇರಿದಂತೆ ಅಪಾರ ಬಂಧುವರ್ಗದವರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಬುಧವಾರ ನೆರವೇರಿತು.

ಅಶೋಕ್ ಕೋಟೆಕಾರ್



ಮಂಗಳೂರು: ಇಲ್ಲಿನ ದೇನಾ ಬ್ಯಾಂಕಿನ ನಿವೃತ್ತ ಅಧಿಕಾರಿನಗರದ ರಮಾಕಾಂತಿ ಟಾಕೀಸ್ ಸಮೀಪದ ವೆಂಕಟರಮಣ ಆರ್ಕೇಡ್ ನಿವಾಸಿ ಅಶೋಕ್ ಕೋಟೆಕಾರ್ ಅಲ್ಪಕಾಲದ ಅಸೌಖ್ಯದಿಂದ ಮಂಗಳವಾರ ರಾತ್ರಿ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ 74 ವರ್ಷ ವಯಸಾಗಿತ್ತು. ಅವರು ಸುಮಾರು 40 ವರ್ಷ ಕಾಲ ದೇನಾ ಬ್ಯಾಂಕಿನಲ್ಲಿ ಸೇವೆ ಸಲ್ಲಿಸಿದ್ದಲ್ಲದೆ ಸಾಮಾಜಿಕ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದರು. ಮೃತರು ಪತ್ನಿ, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಚಕ್ರಪಾಣಿ ಅಡಿಗ



ಕೋಟ: ವಾಣಿಜ್ಯತೆರಿಗೆ ಇಲಾಖೆಯಲ್ಲಿ ಮಾರಾಟ ತೆರಿಗೆ ಕಾಯ್ದೆ 1957 ರ ಅವಧಿಯಲ್ಲಿ ಗಣನೀಯ ಸೇವೆ ಸಲ್ಲಿಸಿದ್ದ ನಿವೃತ್ತ ವಾಣಿಜ್ಯ ತೆರಿಗೆ ಅಧಿಕಾರಿ ಚಕ್ರಪಾಣಿ ಅಡಿಗ (76) ಸ್ವಗೃಹದಲ್ಲಿ ಬುಧವಾರ ಹೃದಯಾಘಾತದಿಂದ ನಿಧನರಾದರು. ಇವರು ಲಕ್ಷ್ಮಿ ಜನಾರ್ದನ ದೇವಸ್ಥಾನದ ಮಾಜಿ ಮೊಕ್ತೇಸರರಾಗಿ ಕಾರ್ಯನಿರ್ವಹಿಸಿದ್ದಾರೆ. ಸಮಾಜಮುಖಿ ಕಾರ್ಯಗಳ ಮೂಲಕ ಜನಮನ ಗೆದ್ದವರು. ಮೃತರು ಪತ್ನಿ ಹಾಗೂ ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳನ್ನು ಅಗಲಿದ್ದಾರೆ.

ಶಂಕರನಾರಾಯಣ ಭಟ್



ಕಾಸರಗೋಡು: ಮಧೂರು ಬಳಿಯ ಅರ್ಜುನಗುಳಿ ನಿವಾಸಿ ಶಂಕರನಾರಾಯಣ ಭಟ್ (66) ಭಾನುವಾರ ನಿಧನ ಹೊಂದಿದರು. ಮೃತರು ಪತ್ನಿ ಸವಿತಾ, ಪುತ್ರ ಅನೀಶಕೃಷ್ಣ ಅವರನ್ನು ಅಗಲಿದ್ದಾರೆ. ಅವರು ಮುಜುಂಗಾವು ಶ್ರೀ ಭಾರತೀ ನೇತ್ರ ಚಿಕಿತ್ಸಾಲಯ ಮತ್ತು ಕಾಸರಗೋಡು ಹವ್ಯಕ ವಲಯದ ವಿವಿಧ ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸಿದ್ದರು.



ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ, ಬಿಜೆಪಿ ಕೇರಳ ರಾಜ್ಯ ಘಟಕದ ಮಾಜಿ ಅಧ್ಯಕ್ಷ ಕೆ.ಸುರೇಂದ್ರನ್ ಅವರು ಮಂಜೇಶ್ವರ ಮಂಡಲದ ವಿವಿಧೆಡೆಗೆ ತೆರಳಿ ಮತಯಾಚಿಸಿದರು.



ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕೆ. ಸುರೇಂದ್ರನ್‌ರವರ ಚುನಾವಣಾ ಪ್ರಚಾರಾರ್ಥ ಮಂಜೇಶ್ವರ ವಿಧಾನಸಭಾ ಕ್ಷೇತ್ರದ ವಿವಿಧ ಪಂಚಾಯತ್ ವ್ಯಾಪ್ತಿಯಲ್ಲಿ ಕುಟುಂಬ ಸಭೆಗಳು ನಡೆಯಿತು.



ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎಲ್‌ಡಿಎಫ್ ಅಭ್ಯರ್ಥಿ, ಸಿಪಿಎಂ ಮುಖಂಡ ಕೆ.ಆರ್.ಜಯಾನಂದ ಅವರು ಪೈವಳಿಕೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಕೊಮ್ಮಂಗಳ ಪ್ರದೇಶದಲ್ಲಿ ಮತಯಾಚಿಸಿದರು.

ಕುಂಬ್ಡಾಜೆ ಗಾಡಿಗುಡ್ಡೆಯಲ್ಲಿ ನಡೆದ ಕುಟುಂಬ ಸಂಗಮದಲ್ಲಿ ಎಂ.ಎಲ್.ಅಶ್ವಿನಿ

ವಿಕಸಿತ ಕೇರಳ ಸೃಷ್ಟಿಗೆ ಬಿಜೆಪಿ ಸಜ್ಜು



ಬದಿಯಡ್ಕ: ವಿಕಸಿತ ಕೇರಳ ಸೃಷ್ಟಿಗೆ ಬಿಜೆಪಿ ಸಂಪೂರ್ಣ ಸಜ್ಜಾಗಿದೆ ಎಂಬುದಕ್ಕೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಅವರು ಪ್ರಕಟಿಸಿದ ವಿಧಾನಸಭಾ ಚುನಾವಣಾ ಪ್ರಣಾಳಿಕೆಯೇ ಸಾಕ್ಷಿ ಎಂದು ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಎಂ.ಎಲ್.ಅಶ್ವಿನಿ ಹೇಳಿದ್ದಾರೆ.

ಕುಂಬ್ಡಾಜೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಗಾಡಿಗುಡ್ಡೆಯಲ್ಲಿ ನಡೆದ ಕುಟುಂಬ ಸಂಗಮ ಕಾರ್ಯಕ್ರಮವನ್ನುಉದ್ಘಾಟಿಸಿ ಅವರು ಮಾತನಾಡಿದರು.

ವಿಕಸಿತ ಕೇರಳ ಪ್ರಣಾಳಿಕೆಯಲ್ಲಿ ತಿಂಗಳಿಗೆ 3 ಸಾವಿರ ರೂಪಾಯಿ ಕ್ಷೇಮ ಪಿಂಚಣಿ, ಪ್ರತಿ ತಿಂಗಳು 2,500ರೂ. ಗಳ ಆರೋಗ್ಯ- ಭಕ್ಷ್ಯ ಸುರಕ್ಷಾ ಕಾರ್ಡ್ ಒದಗಿಸಲಾಗುವುದೆಂದೂ, ಎಲ್ಲಾ ಕೇರಳೀಯರಿಗೂ ಆಯುಷ್ಮಾನ್ ಭಾರತ್ ರಕ್ಷಣಾ ಸೌಲಭ್ಯ ಸಹಿತ ಬಡ ಕುಟುಂಬಗಳಿಗೆ ನೆಮ್ಮದಿಯ ಬದುಕಿಗೆ ಪೂರಕವಾದ ಭರವಸೆಗಳಿವೆ. ಆದ್ದರಿಂದ ಕೇರಳದ ಬದಲಾವಣೆಗೆ ಎನ್‌ಡಿಎ ಮೈತ್ರಿಕೂಟವನ್ನು ಗೆಲ್ಲಿಸಿ ಎಂದು ಎಂ.ಎಲ್.ಅಶ್ವಿನಿ ಮನವಿ ಮಾಡಿದರು.

ಬೂತ್ ಸಮಿತಿಯ ಅಧ್ಯಕ್ಷ ದಯಾನಂದ ರೈ ಅಧ್ಯಕ್ಷತೆ ವಹಿಸಿದರು. ಕುಂಬ್ಡಾಜೆ ಪಂಚಾಯತ್ ಬಿಜೆಪಿ ಸಮಿತಿ ಅಧ್ಯಕ್ಷ ಶಶಿಧರ ತೆಕ್ಕೆಮೂಲೆ, ಗ್ರಾಮ ಪಂಚಾಯತ್ ಅಧ್ಯಕ್ಷೆ ಎನ್.ಯಶೋಧಾ, ಉಪಾಧ್ಯಕ್ಷ ದಾಮೋದರ, ಕಾರಡ್ಕ ಗ್ರಾಮ ಪಂಚಾಯತ್ ಅಧ್ಯಕ್ಷೆ ಎಂ.ಜನನಿ, ಜನಪ್ರತಿನಿಧಿಗಳಾದ ರವೀಂದ್ರ ರೈ ಗೋಸಾಡ, ಕೊರಗಪ್ಪ, ಚಿದಾನಂದ ರೈ, ಬಿ. ರಾಜೇಶ ಶೆಟ್ಟಿ ಮೊದಲಾದವರು ಮಾತನಾಡಿದರು.

ಪೆರಡಾಲ ಕೊರಗ ಉನ್ನತಿಯಲ್ಲಿ ಮತ ಯಾಚನೆ



ಬದಿಯಡ್ಕ: ಕೇರಳ ರಾಜ್ಯ ವಿಧಾನಸಭಾ ಚುನಾವಣಾ ಪ್ರಚಾರದ ಕಾವು ಜೋರಾಗುತ್ತಿದೆ. ಅಭ್ಯರ್ಥಿಗಳು ಮತದಾರರನ್ನು ಭೇಟಿಯಾಗಲು ವಿವಿಧ ಕಡೆಗಳಿಗೆ ತೆರಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಎಂ.ಎಲ್.ಅಶ್ವಿನಿ ಅವರು ಬದಿಯಡ್ಕದ ಪೆರಡಾಲ ಎಸ್‌ಟಿ ಕೊರಗ ಉನ್ನತಿಗೆ ಭೇಟಿ ನೀಡಿ ಅವರ ಸಮಸ್ಯೆಗಳನ್ನು ಆಲಿಸಿದರು.

ಇದೇ ವೇಳೆ ಅವರು ಮಾತನಾಡಿ, ಕಾಡಿನಿಂದ ಸಿಗುವ ಸೀಮಿತ ವನ ಸಂಪನ್ಮೂಲಗಳನ್ನು ಬಳಸಿ ವಿವಿಧ ಉತ್ಪನ್ನಗಳನ್ನು ತಯಾರಿಸಿ ಆದರಿಂದ ಬರುವ ಅತ್ಯಲ್ಪ ಆದಾಯದಿಂದ ಜೀವನ ನಡೆಸುವವರು ಈ ಉನ್ನತಿಯ ಬಹುತೇಕ ಜನರು. ಪ್ರಧಾನಮಂತ್ರಿ ನರೇಂದ್ರ ಮೋದಿ ಅಧಿಕಾರಕ್ಕೆ ಬಂದ ನಂತರ ಯುವಕ – ಯುವತಿಯರಿಗೆ ಉದ್ಯಮಶೀಲತೆ ಮತ್ತು ಉದ್ಯೋಗ ತರಬೇತಿ ನೀಡುವ ಮೂಲಕ ಹಾಗೂ ಕಾಲನಿಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಮೂಲಕ ಅವರ ಜೀವನಮಟ್ಟವನ್ನು ಸುಧಾರಿಸಲು ಪ್ರಾಮಾಣಿಕ ಪ್ರಯತ್ನ ನಡೆಸಲಾಗುತ್ತಿದೆ ಎಂದು ಅವರು ತಿಳಿಸಿದರು.

ಇದೇ ವೇಳೆ ಎಂ.ಎಲ್.ಅಶ್ವಿನಿ ಅವರು ಕಾಲನಿ ನಿವಾಸಿಗಳೊಂದಿಗೆ ಬುಟ್ಟಿ ಹೆಣೆದು ಸಂಭ್ರಮಿಸಿದರು. ಬಿಜೆಪಿ ಪ್ರಮುಖರಾದ ಗೋಪಾಲಕೃಷ್ಣ ಮುಂಡೋಳುಮೂಲೆ, ಮಹೇಶ್ ವಳಕ್ಕುಂಜ, ಅಶ್ವಿನಿ ಕೆ.ಎಂ., ಸುಕುಮಾರ ಕುದ್ರೆಪ್ಪಾಡಿ ಹಾಗೂ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಕಾಸರಗೋಡಿಗೆ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಆಗಮನ



ಕಾಸರಗೋಡು: ವಿಧಾನಸಭಾ ಚುನಾವಣೆಯ ಅಂಗವಾಗಿ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹಾಗೂ ಕೇರಳ ರಾಜ್ಯ ಚುನಾವಣಾ ಪ್ರಭಾರಿ ಆಗಿರುವ ವಿನೋದ್ ತಾವಡೆ ಅವರು ಬುಧವಾರ ಬಿಜೆಪಿ ಕಾಸರಗೋಡು ಜಿಲ್ಲಾ ಕಚೇರಿಗೆ ಭೇಟಿ ನೀಡಿದರು. ಈ ಸಂದರ್ಭ ಪಕ್ಷದ ಜಿಲ್ಲಾಧ್ಯಕ್ಷೆ ಮತ್ತು ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಎಂ.ಎಲ್.ಅಶ್ವಿನಿ ಅವರು ವಿನೋದ್ ತಾವಡೆ ಅವರನ್ನು ಶಾಲು ಹೊದೆಸಿ ಬರಮಾಡಿಕೊಂಡರು.

ಮೊದಲ ಬಾರಿಗೆ ಕಾಸರಗೋಡು ಜಿಲ್ಲೆಗೆ ಆಗಮಿಸಿದ ವಿನೋದ್ ತಾವಡೆ ಅವರು ಕಾಸರಗೋಡು ವಿಧಾನಸಭಾ ಕ್ಷೇತ್ರದ ಚುನಾವಣಾ ಚಟುವಟಿಕೆಗಳ ಪುರೋಗತಿಯನ್ನು ಅವಲೋಕಿಸಿದರು. ಅಲ್ಲದೆ ಚುನಾವಣೆಗೆ ಸಂಬಂಧಿಸಿ ವಿವಿಧ ಸಲಹೆ ಸೂಚನೆಗಳನ್ನು ನೀಡಿದರು.

ಬೆಳ್ತಂಗಡಿ ಶಾಸಕ ಹರೀಶ್ ಪೂಂಜ, ಮಹಾರಾಷ್ಟ್ರದ ಪನ್ವೇಲ್ ಶಾಸಕ ಪ್ರಶಾಂತ್ ಠಾಕೂರ್, ಬಿಜೆಪಿ ಕಲ್ಲಿಕೋಟೆ ವಲಯ ಪ್ರಧಾನ ಕಾರ್ಯದರ್ಶಿ ಎಂ.ಸುಧಾಮ ಗೋಸಾಡ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಆರ್.ಸುನೀಲ್, ಜಿಲ್ಲಾ ಉಪಾಧ್ಯಕ್ಷ ಪಿ.ರಮೇಶ್, ಜಿಲ್ಲಾ ಸೆಲ್ ಕೋಓರ್ಡಿನೇಟರ್ ಸುಕುಮಾರ ಕುದ್ರೆಪ್ಪಾಡಿ, ಕಾಸರಗೋಡು ಮಂಡಲಾಧ್ಯಕ್ಷ ಕೆ.ಗುರುಪ್ರಸಾದ್ ಪ್ರಭು, ಪನ್ವೇಲ್ ಮುನ್ಸಿಪಲ್ ಕಾರ್ಪೋರೇಶನ್‌ನ ಕೌನ್ಸಿಲರ್ ಸಂತೋಷ್ ಶೆಟ್ಟಿ ಮುಂತಾದವರು ಭಾಗವಹಿಸಿದ್ದರು.



ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ.ಸುರೇಂದ್ರನ್‌ರವರ 30 ಅಡಿ ಎತ್ತರದ ಬೃಹತ್ ಕಟೌಟ್‌ನ್ನು ಸೋಂಕಾಲ್ ಜಂಕ್ಷನ್‌ನಲ್ಲಿ ಕಾರ್ಯಕರ್ತರು ಅಳವಡಿಸಿದ್ದಾರೆ. ಇಷ್ಟು ದೊಡ್ಡ ಕಟೌಟ್ ಮಂಜೇಶ್ವರ ಮಂಡಲದಲ್ಲೇ ಪ್ರಥಮ ಭಾರೀಯಾಗಿರುವುದಾಗಿ ಕಾರ್ಯಕರ್ತರು ತಿಳಿಸಿದ್ದಾರೆ. ಇದು ಸಾರ್ವಜನಿಕರ ಗಮನ ಸೆಳೆಯುತ್ತಿದೆ.

ಮನೆಯಲ್ಲೇ ಮತ: 1607 ಮಂದಿ ಮತ ಚಲಾವಣೆ



ಕಾಸರಗೋಡು: ವಿಧಾನಸಭಾ ಚುನಾವಣೆಯ ಅಂಗವಾಗಿ ಕಾಸರಗೋಡು ಜಿಲ್ಲೆಯಲ್ಲಿ ಬುಧವಾರ 1607 ಮಂದಿ ಮನೆಯಲ್ಲೇ ಮತ ಚಲಾಯಿಸಿ ಸೇವೆಯಡಿ ಮತ ಚಲಾಯಿಸಿದರು. ಮತದಾನಕ್ಕೆ ಸಂಬಂಧಿಸಿದ ಅಧಿಕಾರಿಗಳು ಮನೆ ಮನೆಗೆಭೇಟಿನೀಡಿಅರ್ಹರಮತಗಳನ್ನು ನೋಂದಾಯಿಸಿಕೊಳ್ಳುತ್ತಿದ್ದಾರೆ.

ಇಬ್ಬರು ಮತಗಟ್ಟೆ ಅಧಿಕಾರಿಗಳು, ಒಬ್ಬ ಮೈಕ್ರೋ ವೀಕ್ಷಕ , ಒಬ್ಬ ವಿಡಿಯೋಗ್ರಾಫರ್, ಒಬ್ಬ ಪೊಲೀಸ್ ಅಧಿಕಾರಿ ಮತ್ತು ಒಬ್ಬ ಬೂತ್ ಮಟ್ಟದ ಅಧಿಕಾರಿಯನ್ನು ಒಳಗೊಂಡ ತಂಡವು ಮನೆಯಲ್ಲೇ ಮತದಾನದ ಚಟುವಟಿಕೆಗಳ ಭಾಗವಾಗಿ ಮನೆ ಮನೆಗೆ ಭೇಟಿ ನೀಡುತ್ತಿದೆ.

ಕಾಞಂಗಾಡು ಮತ್ತು ತೃಕ್ಕರೀಪ್ಪುರ ಕ್ಷೇತ್ರಕ್ಕೆ ತಲಾ 30, ಉದುಮಕ್ಕೆ 28 ಮತ್ತು ಕಾಸರಗೋಡು ಹಾಗೂ ಮಂಜೇಶ್ವರ ಕ್ಷೇತ್ರಗಳಿಗೆ ತಲಾ 17 ಮತದಾನ ತಂಡಗಳನ್ನು ನಿಯೋಜಿಸಲಾಗಿದೆ. ಜಿಲ್ಲೆಯಲ್ಲಿ 85 ವರ್ಷಕ್ಕಿಂತ ಮೇಲ್ಪಟ್ಟ 3281 ಮಂದಿ ಮತ್ತು 3529 ದಿವ್ಯಾಂಗ ವಲಯದವರಿಗೆ ಮನೆಯಲ್ಲಿಯೇ ಮತ ಚಲಾಯಿಸಲು ಅವಕಾಶ ನೀಡಲಾಗಿದೆ.

ಮಂಜೇಶ್ವರ ಕ್ಷೇತ್ರದಲ್ಲಿ ಬುಧವಾರ 225 ಜನರು ಮತ ಚಲಾಯಿಸಿದರು. 85 ವರ್ಷಕ್ಕಿಂತ ಮೇಲ್ಪಟ್ಟ 81 ಮಂದಿ ಮತ್ತು ದಿವ್ಯಾಂಗ ವಲಯದ 144 ಜನರು ಮತ ಚಲಾಯಿಸಿದರು. ಕಾಸರಗೋಡು ಕ್ಷೇತ್ರದಲ್ಲಿ 170 ದಿವ್ಯಾಂಗರು ಮತ್ತು 85 ವರ್ಷಕ್ಕಿಂತ ಮೇಲ್ಪಟ್ಟ 110 ಜನರು ಸೇರಿದಂತೆ 250 ಮಂದಿ ಮತ ಚಲಾಯಿಸಿದರು.

ಉದುಮ ಕ್ಷೇತ್ರದಲ್ಲಿ ಒಟ್ಟು 325 ಜನರು ತಮ್ಮ ಮತಗಳನ್ನು ನೋಂದಾಯಿಸಿದ್ದಾರೆ. 85 ವರ್ಷಕ್ಕಿಂತ ಮೇಲ್ಪಟ್ಟ 120 ಮಂದಿ ಮತ್ತು ದಿವ್ಯಾಂಗ ವಲಯದ 205 ಜನರು ತಮ್ಮ ಮತಗಳನ್ನು ನೋಂದಾಯಿಸಿಕೊಂಡರು. ಕಾಞಂಗಾಡು ಕ್ಷೇತ್ರದಲ್ಲಿ 296 ಜನರು ತಮ್ಮ ಮತಗಳನ್ನು ಚಲಾಯಿಸಿದರು. 85 ವರ್ಷ ಮೇಲ್ಪಟ್ಟ 168 ಮಂದಿ ಮತ್ತು ದಿವ್ಯಾಂಗ ವಿಭಾಗದ 128 ಜನರು ಮತ ಚಲಾಯಿಸಿದರು. ಅಲ್ಲದೆ ತೃಕ್ಕರೀಪ್ಪುರ ಕ್ಷೇತ್ರದಲ್ಲಿ 481 ಜನರು ಮತ ಚಲಾಯಿಸಿದ್ದು, ಅದರಲ್ಲಿ 85 ವರ್ಷ ಮೇಲ್ಪಟ್ಟ 280 ಮಂದಿ ಮತ್ತು ದಿವ್ಯಾಂಗ ವಿಭಾಗದ 201 ಮಂದಿ ಒಳಗೊಂಡಿದ್ದಾರೆ.

ನೀತಿಸಂಹಿತೆ ಉಲ್ಲಂಘನೆ: 3,956 ಪ್ರಕರಣಗಳು ದಾಖಲು

ಕಾಸರಗೋಡು: ಬುಧವಾರ ಸಂಜೆಯ ವರೆಗೆ ಕಾಸರಗೋಡು ಜಿಲ್ಲೆಯಲ್ಲಿ ಮಾದರಿ ನೀತಿ ಸಂಹಿತೆ ಉಲ್ಲಂಘನೆಯ ಒಟ್ಟು 3,956 ಪ್ರಕರಣಗಳು ದಾಖಲಾಗಿವೆ.

ಸಾರ್ವಜನಿಕ ಸ್ಥಳಗಳು ಮತ್ತು ಖಾಸಗಿ ಸ್ಥಳಗಳಲ್ಲಿ ಚುನಾವಣಾ ಪ್ರಚಾರ ಸಾಮಗ್ರಿಗಳನ್ನು ಇರಿಸಿದ ಪ್ರಕರಣಗಳನ್ನು ತಡೆಗಟ್ಟುವ ಭಾಗವಾಗಿ ನಡೆಸಿದ ತಪಾಸಣೆಯಲ್ಲಿ ಹೆಚ್ಚಿನ ಸಂಖ್ಯೆಯ ಉಲ್ಲಂಘನೆಗಳು ಕಂಡುಬಂದಿವೆ. ಅಲ್ಲದೆ ಸಾರ್ವಜನಿಕ ಸ್ಥಳಗಳಲ್ಲಿ ಮಾತ್ರವಾಗಿ ಒಟ್ಟು 3,773 ಪ್ರಕರಣಗಳು ವರದಿಯಾಗಿವೆ. ಇದರಲ್ಲಿ 207 ಗೋಡೆ ಬರಹಗಳು, 1949 ಪೋಸ್ಟರ್‌ಗಳು, 302 ಬ್ಯಾನರ್‌ಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಅಕ್ರಮವಾಗಿ ಇರಿಸಲಾದ ಇತರ ಪ್ರಚಾರ ಸಾಮಗ್ರಿಗಳು ಸೇರಿವೆ. ಇವುಗಳಲ್ಲಿ 3,764 ಪ್ರಚಾರ ಸಾಮಗ್ರಿಗಳನ್ನು ಈಗಾಗಲೇ ತೆರವುಗೊಳಿಸಲಾಗಿದೆ.

ಅನುಮತಿಯಿಲ್ಲದೆ ಖಾಸಗಿ ವ್ಯಕ್ತಿಗಳ ಗೋಡೆಗಳು ಮತ್ತು ಕಟ್ಟಡಗಳ ಮೇಲೆ ಪ್ರಚಾರ ಸಾಮಗ್ರಿಗಳನ್ನು ಇರಿಸಿದ 183 ಪ್ರಕರಣಗಳು ದಾಖಲಾಗಿವೆ. ಇದರಲ್ಲಿ 17 ಗೋಡೆ ಬರಹಗಳು, 101 ಪೋಸ್ಟರ್‌ಗಳು ಮತ್ತು 24 ಬ್ಯಾನರ್‌ಗಳು ಒಳಗೊಂಡಿವೆ. ಇವುಗಳಲ್ಲಿ 175 ಪ್ರಚಾರ ವಸ್ತುಗಳನ್ನು ನಾಶಪಡಿಸುವ ಕ್ರಮಗಳು ಪೂರ್ಣಗೊಂಡಿವೆ.

ಇದೇ ವೇಳೆ ಬುಧವಾರ 183 ಹೊಸ ಪ್ರಕರಣಗಳು ವರದಿಯಾಗಿವೆ. ಇವುಗಳಲ್ಲಿ ಹೆಚ್ಚಿನವು (167) ಸಾರ್ವಜನಿಕ ಸ್ಥಳಗಳಲ್ಲಿ ಉಲ್ಲಂಘನೆಗಳಾಗಿವೆ. ಮಾದರಿ ಸಂಹಿತೆ ನೋಡಲ್ ಅಧಿಕಾರಿಯಾದ ಹೆಚ್ಚುವರಿ ಜಿಲ್ಲಾ ಮೆಜಿಸ್ಟ್ರೇಟ್ ಕೆ.ವಿ.ಶ್ರುತಿ ಅವರ ನೇತೃತ್ವದಲ್ಲಿ ತಂಡಗಳು ಕಾರ್ಯನಿರ್ವಹಿಸುತ್ತಿವೆ.

ಶಕ್ತಿ ವಸತಿ ಶಾಲೆಯಲ್ಲಿ 'ಶಕ್ತಿ ಕ್ಯಾನ್‌ಕ್ರಿಯೇಟ್ ಬೇಸಿಗೆ ಶಿಬಿರ'ಕ್ಕೆ ಚಾಲನೆ

ಮಕ್ಕಳಿಗೆ ಶ್ಲೋಕ, ಯೋಗಾಭ್ಯಾಸ



ಮಂಗಳೂರು: ಮಂಗಳೂರಿನಶಕ್ತಿನಗರದಲ್ಲಿರುವ ಶಕ್ತಿ ವಸತಿ ಶಾಲೆಯಲ್ಲಿ ಶಕ್ತಿ ಕ್ಯಾನ್‌ಕ್ರಿಯೇಟ್ ಬೇಸಿಗೆ ಶಿಬಿರವು ಏ. 1 ರಂದು ರೇಷ್ಮಾ ಮೆಮೋರಿಯಲ್ ಆಡಿಟೋರಿಯಂನಲ್ಲಿ ಉದ್ಘಾಟನೆಗೊಂಡಿತು. ಮುಖ್ಯ ಅತಿಥಿ ಪಿಲಿಕುಳದ ಪ್ರಾದೇಶಿಕ ವಿಜ್ಞಾನಕೇಂದ್ರದ ಸಂಯೋಜಕ ಜಗನ್ನಾಥ್‌ಅವರು ದೀಪ ಬೆಳಗಿಸಿ ಶಕ್ತಿ ಕ್ಯಾನ್‌ಕ್ರಿಯೇಟ್ ಮಹತ್ವವನ್ನು ಸಾರುವ ಫಲಕವನ್ನು ಪ್ರದರ್ಶಿಸಿ ಚಾಲನೆ ನೀಡಿದರು.

ಪ್ರಾಸ್ತಾವಿಕವಾಗಿ ಶಕ್ತಿ ವಿದ್ಯಾ ಸಂಸ್ಥೆಯ ಮುಖ್ಯ ಸಲಹೆಗಾರ ರಮೇಶ್ ಕೆ. ಅವರು ಮಾತನಾಡಿ, ಇಲ್ಲಿ ಮಕ್ಕಳ ಪ್ರತಿಭೆಗಳಿಗೆ ಅವಕಾಶ ನೀಡಲಾಗುತ್ತದೆ, ಆದರ ಜೊತೆಗೆ ಶ್ಲೋಕ, ಯೋಗಾಭ್ಯಾಸದಂತಹ ಒಳ್ಳೆಯ ದಿನಚರಿಯನ್ನು ಕೂಡ ಮಕ್ಕಳಿಗೆ ಕಲಿಸಿಕೊಡಲಾಗುವುದು, ಇದರಲ್ಲಿ ಮಕ್ಕಳು ತುಂಬಾಆಸಕ್ತಿಯಿಂದ ಭಾಗವಹಿಸುತ್ತಾರೆ ಎಂದು ಹೇಳಿದರು.

ಶಕ್ತಿ ವಿದ್ಯಾ ಸಂಸ್ಥೆಯ ಆಡಳಿತ ಅಧಿಕಾರಿ ಡಾ. ಕೆ. ಸಿ. ನ್ಯಾಕ್ ಅವರು ಅಧ್ಯಕ್ಷತೆ ವಹಿಸಿದ್ದು, ಶಕ್ತಿ ವಿದ್ಯಾ ಸಂಸ್ಥೆಯು ಪ್ರತಿ ವರ್ಷ ಇಂತಹ ಬೇಸಿಗೆ ಶಿಬಿರವನ್ನು ಆಯೋಜಿಸಿಕೊಂಡು ಬರುತ್ತಿದೆ. ಇದು ಮಕ್ಕಳ ಸರ್ವಾಂಗಿಣ ಅಭಿವೃದ್ಧಿಗೆ ಪೂರಕವಾದ ಕೆಲಸವಾಗಿದೆ. ಇಂತಹ ಶಿಬಿರವನ್ನು ಎಲ್ಲರೂ ಖುಷಿಯಿಂದ ಆನಂದಿಸಬೇಕೆಂದು ಹೇಳಿದರು.

ಶಕ್ತಿ ವಸತಿ ಶಾಲೆಯ 1 ಮತ್ತು 2ನೇ ತರಗತಿಯ ಸಂಯೋಜಕಿ ಪ್ರಿಯದರ್ಶಿನಿ ಅವರು ಏಪ್ರಿಲ್ 1 ರಿಂದ 11ರ ವರೆಗೆ ನಡೆಯಲಿರುವ ಈ ಬೇಸಿಗೆ ಶಿಬಿರವು ಹೊಂದಿರುವ ವಿವಿಧ ಚಟುವಟಿಕೆಗಳ ವಿವರಗಳನ್ನು ನೀಡಿದರು.

ವೇದಿಕೆಯಲ್ಲಿ ಪ್ರಾದೇಶಿಕ ವಿಜ್ಞಾನಕೇಂದ್ರ ಪಿಲಿಕುಳದ ಪ್ರಮುಖ ರುತ್ವಿಕ್ ಹಾಗೂ ವಿದ್ಯಾರ್ಥಿ ಕ್ಷೇಮ ಪಾಲಕ ಡಾ. ಎಲ್.ಬಿ. ಕಾಮತ್ ಉಪಸ್ಥಿತರಿದ್ದರು. ಶಕ್ತಿ ರೆಸಿಡೆನ್ಸಿಯಲ್ ಶಾಲೆಯ ಪ್ರಾಂಶುಪಾಲೆ ಬಬಿತಾ ಸೂರಜ್ ಸ್ವಾಗತಿಸಿ, ಶಕ್ತಿ ವಸತಿ ಶಾಲೆಯ 6 ಮತ್ತು 7ನೇ ತರಗತಿಯ ಸಂಯೋಜಕಿಯಾಗಿರುವ ಚೇತನಾ ತಲಪಾಡಿ ಅವರು ಕಾರ್ಯಕ್ರಮ ನಿರೂಪಿಸಿದರು.

ಚಿತ್ರಕಲೆ, ಕರಕುಶಲಕಲೆ, ಕುಣಿತ ಭಜನೆ, ಜಾನಪದ ನೃತ್ಯ, ಜುಂಭಾ ನೃತ್ಯ...

ಶಾರದಾ ವಿದ್ಯಾಲಯದಲ್ಲಿ 'ವಿಕಸನ'



ಮಂಗಳೂರು: ಮಹಾನಗರದ ಕೊಡಿಯಾಲ ಬೈಲಿನ ಶಾರದಾ ವಿದ್ಯಾಲಯದಲ್ಲಿ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ ಬೇಸಿಗೆ ಶಿಬಿರ 'ವಿಕಸನ-2026'ರ ಉದ್ಘಾಟನಾ ಸಮಾರಂಭವು ವಿದ್ಯಾಲಯದ ಸಭಾಂಗಣದಲ್ಲಿ ನೆರವೇರಿತು.

ಮುಖ್ಯಅತಿಥಿ ರೇಡಿಯೋ ಜಾಕಿ (ಆರ್. ಜೆ.) ನಯನಾ ಶೆಟ್ಟಿ ಮಾತನಾಡಿ, ಮಕ್ಕಳಲ್ಲಿರುವ ಕ್ರಿಯಾಶೀಲತೆಯ ಪ್ರಕಟನೆಗೆ, ಪ್ರತಿಭಾ ವಿಕಾಸಕ್ಕೆ ಬೇಸಿಗೆ ಶಿಬಿರಗಳು ನೆರವಾಗುತ್ತವೆ. ಮಕ್ಕಳಿಗೆ ಪಠ್ಯ ಚಟುವಟಿಕೆಗಳ ಹೊರತಾಗಿ ಉತ್ತಮ ಪುಸ್ತಕಗಳನ್ನು ಓದುವಂತೆ, ಆಸಕ್ತಿಕರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಮಾಡುವುದರಿಂದ ಅವರನ್ನು ಮೊಬೈಲ್ ಗೀಳಿನಿಂದ ದೂರವಿಡಬಹುದು, ಹೆತ್ತವರು ಕೂಡಾ ಮಕ್ಕಳ ಉತ್ತಮ ಹವ್ಯಾಸಗಳಿಗೆ ಪ್ರೋತ್ಸಾಹ ನೀಡಬೇಕು ಎಂದರು.

ಶಾರದಾ ಸಮೂಹ ಸಂಸ್ಥೆಗಳ ಅಧ್ಯಕ್ಷ ಡಾ. ಎಂ. ಬಿ. ಪುರಾಣಿಕರು ಅಧ್ಯಕ್ಷತೆ ವಹಿಸಿದ್ದು, ವಿಕಸನ ಎಂದರೆ ಅರಳುವುದು ಎಂದರ್ಥ. ಮಕ್ಕಳ ಸರ್ವಾಂಗೀಣ ವಿಕಾಸಕ್ಕೆ ನೆರವಾಗುವುದು ಮತ್ತು ಭಾರತೀಯ ಜೀವನ ಮೌಲ್ಯಗಳನ್ನು ಪರಿಚಯಿಸುವುದು ಈ ವಿಕಸನ ಶಿಬಿರದ ಉದ್ದೇಶವಾಗಿದೆ ಎಂದರು.

ಶಾರದಾ ಸಮೂಹ ಸಂಸ್ಥೆಗಳ ಆಡಳಿತ ಮಂಡಳಿಯ ಕಾರ್ಯದರ್ಶಿ ಪ್ರದೀಪ ಕುಮಾರ ಕಲ್ಕೂರ, ವಿಶ್ವಸ್ಥರಾದ ಸುಧಾಕರ ರಾವ್ ಪೇಜಾವರ, ನಿರ್ದೇಶಕ ಸಮೀರ್ ಪುರಾಣಿಕ್, ಶಾರದಾ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಪ್ರಕಾಶ್ ನಾಯ್ಕ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶಾರದಾ ವಿದ್ಯಾಲಯದ ಪ್ರಾಂಶುಪಾಲೆ ಚಂದ್ರಿಕಾ ಭಂಡಾರಿ ಸ್ವಾಗತಿಸಿದರು. ಪ್ರಾಂಶುಪಾಲ ದಯಾನಂದ ಕಟೀಲ್ ವಂದಿಸಿದರು. ವಿದ್ಯಾಲಯದ ಶಿಕ್ಷಕಿ ರಾಜಶ್ರೀ ಕಾರ್ಯಕ್ರಮ ನಿರೂಪಣೆಗೈದರು. ಹತ್ತು ದಿನಗಳ ಅವಧಿಯ ಈ ಶಿಬಿರವು ಎಪ್ರಿಲ್ 11 ರಂದು ಸಮಾರೋಪಗೊಳ್ಳಲಿದೆ. ಶಿಬಿರದಲ್ಲಿ ಚಿತ್ರಕಲೆ, ಕರಕುಶಲಕಲೆ, ಕುಣಿತ ಭಜನೆ, ಜಾನಪದ ನೃತ್ಯ, ಶಿಬಿರಗೀತೆ, ಜುಂಭಾ ನೃತ್ಯ, ಪ್ರಹಸನಇತ್ಯಾದಿ ಚಟುವಟಿಕೆಗಳನ್ನು ಆಯೋಜಿಸಲಾಗಿದೆ.

11
ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಗುರುವಾರ, 2 ಏಪ್ರಿಲ್ 2026
ಮಂಗಳೂರು



ಕಿರುಸುದ್ದಿ

ಜಿಂಬಾಬ್ವೆ ಸರಣಿಗೆ ವೇಳಾಪಟ್ಟಿ ಪ್ರಕಟ

ಮುಂಬೈ: ಇಂಡಿಯನ್ ಪ್ರೀಮಿಯರ್ ಲೀಗ್ ಮುಕ್ತಾಯಗೊಂಡ ನಂತರ ನಡೆಯಲಿರುವ ಭಾರತ ಹಾಗೂ ಜಿಂಬಾಬ್ವೆ ನಡುವಿನ ಟಿ20 ಸರಣಿಗೆ ವೇಳಾಪಟ್ಟಿ ಪ್ರಕಟಿಸಲಾಗಿದೆ. ವಿಶ್ವಚಾಂಪಿಯನ್‌ಗಳಾದ ಭಾರತ ತಂಡವು ಜುಲೈನಲ್ಲಿ ಜಿಂಬಾಬ್ವೆ ಪ್ರವಾಸ ಮಾಡುವ ಬಗ್ಗೆ ಈ ಹಿಂದೆ ಬಿಸಿಸಿಐ ಅಧಿಕೃತವಾಗಿ ಹೇಳಿತ್ತು. 2024ರಲ್ಲಿ ವಿಶ್ವಕಪ್ ಗೆದ್ದ ನಂತರವೂ ಭಾರತ ಜಿಂಬಾಬ್ವೆ ವಿರುದ್ಧವೇ ಸರಣಿಯನ್ನಾಡಿತ್ತು. ಇದೀಗ ಪಂದ್ಯಗಳ ಮಾಹಿತಿ ಬಿಸಿಸಿಐ ಪ್ರಕಟಿಸಿದ್ದು, ನಾಲ್ಕೇ ದಿನಗಳಲ್ಲಿ ಸರಣಿ ಮುಕ್ತಾಯಗೊಳ್ಳಲಿದೆ. ಎಲ್ಲಾ ಮೂರು ಪಂದ್ಯಗಳು ಹರಾರೆಯಲ್ಲಿ ನಡೆಯಲಿವೆ.

ಸರಣಿ ವೇಳಾಪಟ್ಟಿ

ಮೊದಲ ಪಂದ್ಯ ಜುಲೈ 23	ಹರಾರೆ
ಎರಡನೇ ಪಂದ್ಯ ಜುಲೈ 25	ಹರಾರೆ
ಮೂರನೇ ಪಂದ್ಯ ಜುಲೈ 26	ಹರಾರೆ

ಶ್ರೇಯಸ್ ಅಯ್ಯರ್‌ಗೆ ದಂಡ

ಮುಂಬೈ: ಪಂಜಾಬ್ ಕಿಂಗ್ಸ್ ತಂಡದ ನಾಯಕ ಶ್ರೇಯಸ್ ಅಯ್ಯರ್‌ಗೆ ಬಿಸಿಸಿಐ 12 ಲಕ್ಷ ರೂ. ದಂಡ ವಿಧಿಸಿದೆ. ಮಂಗಳವಾರ ನಡೆದ ಪಂಜಾಬ್ ಹಾಗೂ ಗುಜರಾತ್ ನಡುವಿನ ಪಂದ್ಯದಲ್ಲಿ ಗೆದ್ದ ನಂತರ ಕ್ರಮ ಕೈಗೊಳ್ಳಲಾಗಿದೆ. ನಿಧಾನಗತಿ ಓವರ್ ಮಾಡಿಸುವುದು ಐಪಿಎಲ್ ಮಾನದಂಡದಲ್ಲಿ ತಪ್ಪಾಗಿದ್ದು ನಾಯಕನಿಗೆ ದಂಡವೂ ವಿಧಿಸಲಾಗುತ್ತದೆ. ಮೊದಲನೇ ಪಂದ್ಯದಲ್ಲಿ 12 ಲಕ್ಷ ರೂ. ದಂಡ ವಿಧಿಸಲಾಗಿದೆ. ಇನ್ನೂ ಎರಡು ಪಂದ್ಯಗಳಲ್ಲಿ ಹೀಗೆ ಆದರೆ ಶ್ರೇಯಸ್ ಅಯ್ಯರ್ ಒಂದು ಪಂದ್ಯದಿಂದ ಹೊರಗೆ ಉಳಿಯಲೂ ಬಹುದು. ಕನಿಷ್ಠ ಓವರ್-ರೇಟ್ ಅಪರಾಧಗಳಿಗೆ ಸಂಬಂಧಿಸಿದ ಐಪಿಎಲ್ ನೀತಿ ಸಂಹಿತೆಯ ಆರ್ಟಿಕಲ್ 2.22 ರ ಅಡಿಯಲ್ಲಿ ಇದು ಅವರ ತಂಡದ ಮೊದಲ ಅಪರಾಧವಾಗಿರುವುದರಿಂದ, ಅಯ್ಯರ್ ಅವರಿಗೆ 12 ಲಕ್ಷ ರೂಪಾಯಿ ದಂಡ ವಿಧಿಸಲಾಗಿದೆ ಎಂದು ಬಿಸಿಸಿಐ ಮಾಧ್ಯಮ ಪ್ರಕಟಣೆ ತಿಳಿಸಿದೆ.

ಬಾಸ್ಕೆಟ್‌ಬಾಲ್: ಏಷ್ಯಾಕಪ್ ಅರ್ಹತಾ ಸುತ್ತಿಗೆ ಭಾರತ

ಹೊಸದಿಲ್ಲಿ: ಅರ್ಹತಾ ಸುತ್ತಿನ ಪಂದ್ಯಗಳಲ್ಲಿ ಮೊದಲನೇ ಸ್ಥಾನದಲ್ಲಿರುವ ಭಾರತ ಬಾಸ್ಕೆಟ್‌ಬಾಲ್ ತಂಡವು 3-3 ಫಿಬಾ ಏಷ್ಯಾಕಪ್ ಮುಖ್ಯ ಡ್ರಾಗೆ ಅರ್ಹತೆ ಪಡೆದುಕೊಂಡಿದೆ. ಅರ್ಹತಾ ಮಾನದಂಡಗಳಲ್ಲಿ ಬರುವ ಪ್ರಮುಖ ಸುತ್ತು ಅರ್ಹತಾ ಸುತ್ತಿನ ಪಂದ್ಯಗಳಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ಭಾರತ ತಂಡವು ಬುಧವಾರದ ಪಂದ್ಯದ ನಂತರ ಮೊದಲನೇ ಸ್ಥಾನದಲ್ಲೇ ಅರ್ಹತಾ ಸುತ್ತಿನ ಪಂದ್ಯಗಳನ್ನು ಮುಕ್ತಾಯಗೊಳಿಸಿತು. ಪಂದ್ಯಾವಳಿಯ ಮುಖ್ಯ ಡ್ರಾದಲ್ಲಿ ಭಾರತ ಸತತ ಎರಡನೇ ಬಾರಿ ಲಗ್ಗೆ ಹಾಕಿದೆ. ಪ್ರಣವ್, ಹರ್ಷ್, ಅರ್ವಿಂದ, ಕುಶಾಲ್ ಸಿಂಗ್ ಅವರಿದ್ದ ತಂಡವು ಪಂದ್ಯಾವಳಿಯಲ್ಲಿ ಡಿ ಗುಂಪಿನಲ್ಲಿತ್ತು. ಕಜಾಕಿಸ್ತಾನ, ಹಾಂಗ್‌ಕಾಂಗ್ ಹಾಗೂ ಬಹ್ರೇನ್ ತಂಡಗಳನ್ನು ಸೋಲಿಸಿತು. ಮೊದಲಿಗೆ ಕಜಾಕಿಸ್ತಾನದೊಂದಿಗೆ 20-18 ಅಂಕಗಳಿಂದ, ಹಾಂಗ್ ಕಾಂಗ್ ತಮಡವನ್ನು 19-18ರಿಂದ ಮತ್ತು ಬಹ್ರೇನ್ ತಂಡವನ್ನು 21-12ರಿಂದ ಸೋಲಿಸಿ ಗೆದ್ದಿದೆ.

ತಾರತಮ್ಯ ವಿರೋಧಿ ಕಾಯ್ದೆ ಮುಂದುವರಿಕೆ

ಮುಂಬೈ: ತಾರತಮ್ಯ ವಿರೋಧಿ ಕೋಡ್ ಈಗ ಐಪಿಎಲ್ ಮುಗಿದ ನಂತರವೂ ಆಟಗಾರರು, ಅಧಿಕಾರಿಗಳು ಮತ್ತು ಸಂಬಂಧಿತ ಎಲ್ಲಾ ಹಿತಾಸಕ್ತಿಪಕ್ಷಗಳಿಗೆ ಅನ್ವಯವಾಗುತ್ತದೆ ಎಂದು ಬಿಸಿಸಿಐ ಬುಧವಾರ ಸ್ಪಷ್ಟಪಡಿಸಿದೆ. ಫ್ರಾಂಚೈಸಿಗಳಿಗೆ ಇತ್ತೀಚೆಗೆ ಹಂಚಿದ 11 ಪುಟಗಳ ದಸ್ತಾವೇಜಿನ ಪ್ರಕಾರ, ಆಟಗಾರರು ಹಾಗೂ ತಂಡದ ಅಧಿಕಾರಿಗಳು ತಮ್ಮ ಒಪ್ಪಂದ ಮುಗಿದ ನಂತರವೂ ಮೂರು ತಿಂಗಳುಗಳ ಕಾಲ ಈ ನಿಯಮಕ್ಕೆ ಒಳಪಟ್ಟಿರುತ್ತಾರೆ. ಈ ಅವಧಿಯಯಾವುದೇ ಉಲ್ಲಂಘನೆಗಳ ಮೇಲೆ ಬಿಸಿಸಿಐಗೆ ಕ್ರಮ ಕೈಗೊಳ್ಳುವ ಅಧಿಕಾರ ಮುಂದುವರಿಯುತ್ತದೆ. ಮುಖ್ಯ ಉದ್ದೇಶ ಐಪಿಎಲ್‌ನ ಪ್ರತಿಷ್ಠೆ ಕಾಪಾಡುವುದು. ಜಾತಿ ಅಥವಾ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟುಮಾಡುವ ವರ್ತನೆ ತಡೆಯಲು ಇದು ಪರಿಣಾಮಕಾರಿಯಾಗಿದೆ.

ರಿಜ್ವಿ ಮಿಂಚಿನ ಆಟ | ಎನ್‌ಗಿಡಿ, ನಟರಾಜನ್ ಮಾರಕ ದಾಳಿ

ದಿಲ್ಲಿ ವೇಗಕ್ಕೆ ಲಖನೌ ತತ್ತರ

ಲಖನೌ: ಸಮೀರ್ ರಿಜ್ವಿ ಹಾಗೂ ಸ್ಟಬ್ಸ್ ಅವರ ತಾಳ್ಮೆಯಾಟದಿಂದಾಗಿ ಲಖನೌ ತಂಡವನ್ನು 6 ವಿಕೆಟ್‌ಗಳಿಂದ ಸೋಲಿಸಿದ ದಿಲ್ಲಿ ಕ್ಯಾಪಿಟಲ್ಸ್ ತಂಡವು ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಆರಂಭಿಕ ಪಂದ್ಯದಲ್ಲಿ ಗೆಲುವು ಸಾಧಿಸಿತು.

ಮೊದಲು ಬ್ಯಾಟಿಂಗ್ ಮಾಡಿದ ಲಖನೌ ಮೊದಲಿಗೆ ಬ್ಯಾಟಿಂಗ್‌ನಲ್ಲಿ ವೈಫಲ್ಯ ಎದುರಿಸಿದರೆ, ಉಳಿಸಿಕೊಳ್ಳುವ ಸಮಯದಲ್ಲಿ ಬೌಲಿಂಗ್‌ನಲ್ಲೂ ಹಿನ್ನಡೆ ಅನುಭವಿಸಿತು. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಲಖನೌ, ಎನ್‌ಗಿಡಿ (3), ನಟರಾಜನ್(3) ಅವರ ಮಾರಕ ಬೌಲಿಂಗ್ ದಾಳಿಯಿಗೆ ತತ್ತರಿಸಿ 18.4 ಓವರ್‌ಗಳಲ್ಲಿ 141 ರನ್ ಗಳಿಸಿ ಆಲೌಟ್ ಆಯಿತು. ಗುರಿ ಬೆನ್ನತ್ತಿದ ದಿಲ್ಲಿ 17.1 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 145 ರನ್ ಗಳಿಸಿ ಪಂದ್ಯವನ್ನು ಗೆದ್ದಿತು.

ಆರಂಭಿಕ ಕುಸಿತ: ಬ್ಯಾಟಿಂಗ್ ಆಹ್ವಾನ ಪಡೆದ ನಂತರ ಅಷ್ಟೊಂದು ಸ್ಫೋಟಕ ಬ್ಯಾಟಿಂಗ್‌ಗೆ ಮುಂದಾಗದೆ, ಪಂತ್ ಹಾಗೂ ಮಾರ್ಷ್ ಸೆಟ್ ಆಗುವ ಔಪಚಾರಿಕತೆಗೆ ಬಿದ್ದರು. 7 ರನ್‌ಗಳಿಸಿದ್ದ ಪಂತ್ ರನೌಟ್‌ಗೆ ಬಲಿಯಾದರು. ಮೂರನೇ ಕ್ರಮಾಂಕದಲ್ಲಿ ಬಂದ ಭರವಸೆಯ ಏಡನ್ ಮಾರ್ಕ್ರಂ 11 ರನ್‌ಗೆ ವಿಕೆಟ್ ಒಪ್ಪಿಸಿದರು. ಇನ್ನೊಂದು ಬದಿಯಲ್ಲಿ ನಿಂತಿದ್ದ ಮಾರ್ಷ್ ಒಂದೆರಡು ಕರಾರುವಾಕ್ ಬೌಂಡರಿಗಳನ್ನು ಬಾರಿಸಿ ಇನ್ನೇನು ಸೆಟ್ ಆದಂತೆ ಕಾಣುತ್ತಿದ್ದರು. ವಿಸ್ಫೋಟಕ ಬ್ಯಾಟರ್ ನಿಕೊಲಸ್ ಪೂರಣ್ 8 ರನ್ ಗಳಿಸಿರುವಾಗಲೇ ಎನ್‌ಗಿಡಿ ಅವರ ಸ್ಲೋವರ್‌ಗೆ ಔಟಾದರು. ಆಯುಷ್ ಬದೋನಿ ಕೂಡ ಹೆಚ್ಚು ಹೊತ್ತು ನಿಲ್ಲಲೇ ಇಲ್ಲ. ಇಷ್ಟೊತ್ತಿಗಾಗಲೇ 65 ರನ್ ಗಳಿಸಿ 4 ವಿಕೆಟ್ ಕಳೆದುಕೊಂಡಿತು. ಮಧ್ಯಮ ಓವರ್‌ಗಳಲ್ಲಿ ಅಲ್ಪ ಹೊತ್ತು ಆಸರೆಯಾದ ಸಮದ್ ಹಾಗೂ ಮಾರ್ಷ್ ಸಿಂಗಲ್‌ಗಳ ಮೂಲಕ ಒತ್ತಡ ನೀಗಿಸಲೆತ್ನಿಸಿದರು. ಆದರೆ 10ನೇ ಓವರ್‌ನಲ್ಲಿ ಮಾರ್ಷ್ ಔಟಾದರು. ತಂಡದ ಯುವ ಆಟಗಾರ, ಸ್ಫೋಟಕ ಬ್ಯಾಟರ್ ಮುಕುಲ್ ಚೌದರಿ ಮೊದಲೆರಡು ಎಸೆತದಲ್ಲಿ ಬೌಂಡರಿ ಬಾರಿಸಿ ಗಮನ ಸೆಳೆದರು. ಆದರೆ ಕುಲ್ದೀಪ್ ಅವರ ಸ್ಪಿನ್‌ಗೆ ವಿಕೆಟ್ ಒಪ್ಪಿಸಿದರು. ಸಮದ್ 36 ರನ್‌ಗಳಿಸಿ ತಮ್ಮ ಆಟ ನಿಲ್ಲಿಸಿದರು. ಸೆಹಬಾಜ್ ನಾನ್‌ಸ್ಟ್ರೈಕ್‌ನಲ್ಲಿ ನಿಂತರು ಅವರಿಗೆ ಸ್ಟ್ರೈಕ್ ಸಿಗಲೇ ಇಲ್ಲ ಇನ್ನಿಂಗ್ಸ್ 18.4 ಓವರ್‌ಗಳಿಗೆ ನಿಂತಿತು. ಲಖನೌ 141 ರನ್‌ಗಳಿಗೆ ಉರುಳಿತು.



ರಿಜ್ವಿ-ಸ್ಟಬ್ಸ್ ಗೆಲುವಿನಾಟ

ಗುರಿ ಬೆನ್ನತ್ತುವಾಗ ದಿಲ್ಲಿ ಕ್ಯಾಪಿಟಲ್ಸ್ ಭಾರೀ ಹಿನ್ನಡೆ ಅನುಭವಿಸಿತು. ಆರಂಭಿಕ ಐದು ಓವರ್‌ಗಳಲ್ಲಿ 26 ರನ್ ಮಾತ್ರ ಗಳಿಸಿದ್ದ ದಿಲ್ಲಿ ಪ್ರಮುಖ ನಾಲ್ಕು ವಿಕೆಟ್‌ಗಳನ್ನು ಕಳೆದುಕೊಂಡಿತ್ತು. ಪ್ರಿನ್ಸ್ ಯಾದವ್, ಮೊಹಮ್ಮದ್ ಶಮಿ ಹಾಗೂ ಮೋಹ್ಸಿನ್ ಖಾನ್ ಒತ್ತಡ ತಂದಿಟ್ಟರು. ದಿಲ್ಲಿ ಭಾರೀ ಆತಂಕದಲ್ಲಿ ಕಾಣಿಸಿಕೊಂಡಿತ್ತು. ಆದಾಗ್ಯೂ ಮಧ್ಯಮ ಕ್ರಮಾಂಕದಲ್ಲಿ ಒಂದಾದ ಸಮೀರ್ ರಿಜ್ವಿ ಹಾಗೂ ಟ್ರಿಸ್ಟನ್ ಸ್ಟಬ್ಸ್ 72 ಬಾಲ್‌ಗಳಲ್ಲಿ 100 ರನ್ ಜೊತೆಯಾಟವಾಡುವ ಮೂಲಕ ಪಂದ್ಯ ಗೆಲ್ಲಿಸಿದರು. ಯಾವುದೇ ಕ್ಷಣದಲ್ಲೂ ಆತುರಕ್ಕೆ ಬೀಳದೆ ಜವಾಬ್ದಾರಿಯುತ ಬ್ಯಾಟಿಂಗ್ ಮಾಡಿದ ಈ ಜೋಡಿ ಒತ್ತಡದ ಸಮಯದಿಂದ ಪಂದ್ಯವನ್ನು ಗೆಲ್ಲಿಸುವವರೆಗೆ ದಿಲ್ಲಿ ತಂಡದ ಆಶಾ ಕಿರಣವಾಗಿ ಜವಾಬ್ದಾರಿ ನಿಭಾಯಿಸಿದರು. ಸಮೀರ್ ರಿಜ್ವಿ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಜೇಯ 70 ರನ್ ಬಾರಿಸಿದರೆ, ಸ್ಟಬ್ಸ್ 38 ರನ್ ಗಳಿಸಿದರು. ದಿಲ್ಲಿ ಪಂದ್ಯವನ್ನು 6 ವಿಕೆಟ್‌ಗಳಿಂದ ಗೆದ್ದಿತು.

ಸಂಕ್ಷಿಪ್ತ ಸ್ಕೋರ್

ಲಖನೌ ಸೂಪರ್ ಜೈಂಟ್ಸ್ 141/10 (18.4)
ಮಾರ್ಷ್ 35(28), ಸಮದ್ 36(25)
ಎನ್‌ಗಿಡಿ 27ಕ್ಕೆ 3, ನಟರಾಜನ್ 29ಕ್ಕೆ 3, ಕುಲ್ದೀಪ್ 31ಕ್ಕೆ 2, ಅಕ್ಷರ್ 17ಕ್ಕೆ 1
ದಿಲ್ಲಿ ಕ್ಯಾಪಿಟಲ್ಸ್ 145/4 (17.1)
ರಿಜ್ವಿ ಅಜೇಯ 70(47), ಸ್ಟಬ್ಸ್ ಅಜೇಯ 38(32), ಪ್ರಿನ್ಸ್ 20ಕ್ಕೆ 2, ಶಮಿ 28ಕ್ಕೆ 1, ಮೊಹ್ಸಿನ್ 19ಕ್ಕೆ 1

ಕೋಲ್ಕತ್ತಾ ಸವಾಲಿಗೆ ಹೈದರಾಬಾದ್ ಸಿದ್ಧ

ಇಂದು ಸೋತವರ ಕಾಳಗ


ಕೋಲ್ಕತ್ತಾ: ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಎರಡನೇ ಸುತ್ತಿನ ಪಂದ್ಯಗಳ ಆರಂಭದಲ್ಲಿ ಸೋತವರ ಹಣಾಹಣಿ. ಸೋಲಿನಿಂದ ಹೊರಬಂದು ಪೈಪೋಟಿ ನಡೆಸುವ ಯೋಜನೆ ಹಾಕಿಕೊಂಡಿರುವ ಸನ್‌ರೈಸರ್ಸ್ ಹೈದರಾಬಾದ್ ಮತ್ತು ಕೋಲ್ಕತ್ತಾ ನೈಟ್ ರೈಡರ್ಸ್ ನಡುವೆ ಸೆಣಸಾಟ ಗುರುವಾರ ಈಡನ್ ಗಾರ್ಡನ್ಸ್‌ನಲ್ಲಿ ನಡೆಯಲಿದೆ. ರಹಾನೆ ಪಡೆ ಮತ್ತು ಹಂಗಾಮಿ ನಾಯಕ ಇಶಾನ್ ಕಿಶನ್ ಬಳಗದ ನಡುವೆ ಗೆಲುವಿನ ಹುಡುಕಾಟದ ಕಾಳಗ ನಡೆಯಲಿದೆ.

ಉದ್ಘಾಟನಾ ಪಂದ್ಯದಲ್ಲಿ ಆರ್‌ಸಿಬಿ ಹಾಗೂ ಹೈದರಾಬಾದ್ ನಡುವೆ ಪಂದ್ಯ ನಡೆಯಿತು. ಅಲ್ಲಿ ಬೆಂಗಳೂರು 6 ವಿಕೆಟ್ ಗೆಲುವು ಸಾಧಿಸಿತ್ತು. ಇತ್ತ ಎರಡನೇ ದಿನ ಮುಂಬೈ ಹಾಗೂ ಕೆಕೆಆರ್ ತಂಡಗಳು ಎದುರಾಗಿದ್ದವು. ಅಲ್ಲಿ ಮುಂಬೈ ಗೆಲುವು ಸಾಧಿಸಿತ್ತು. ಮೊದಲನೇ ಸುತ್ತಿನ ಹಿನ್ನಡೆಯೊಂದಿಗೆ ಕಣಕ್ಕಿಳಿಯುತ್ತಿರುವ ತಂಡಗಳು ಪುಟಿದೇಳುವ ಸವಾಲನ್ನು ಹೊಂದಿರುವುದು ಪಂದ್ಯದ ವಿಶೇಷತೆ. ಗೆಲುವಿಗಾಗಿ ನಡೆಯುವ ಪೈಪೋಟಿ ದಿನದ ಸ್ವಾರಸ್ಯ. ಮುಖ್ಯವಾಗಿ ಉಭಯ ತಂಡಗಳು ಬ್ಯಾಟಿಂಗ್‌ನಲ್ಲಿ ಮಿಂಚಿದ್ದರೂ ಬೌಲಿಂಗ್‌ನಲ್ಲಿ ಹಿನ್ನಡೆ ಅನುಭವಿಸಿವೆ.

ಹೈದರಾಬಾದ್‌ಗೆ ಗೆಲುವಿನ ಹಂಬಲ: ಪ್ಯಾಟ್ ಕಮ್ಮಿನ್ಸ್ ಇಲ್ಲದಿದ್ದರೂ, ಬಲಿಷ್ಠ ಯುವಕರಿಂದ ಕೂಡಿಕೊಂಡಿರುವ ಹೈದರಾಬಾದ್ ಕಳೆದ ಪಂದ್ಯದಲ್ಲಿ ಭಾರೀ ಸೋಲನುಭವಿಸಿದೆ. ತಂಡದಲ್ಲಿ ಅಭಿಷೇಕ್ ಶರ್ಮ ಹಾಗೂ ಟ್ರಾವಿಸ್ ಹೆಡ್ ಅಂತಹ ಟಿ20 ಕ್ರಿಕೆಟ್ ಲೋಕದ ಸ್ಫೋಟಕ ಬ್ಯಾಟಿಗರು ತಂಡದಲ್ಲಿದ್ದಾರೆ. ಹಂಗಾಮಿ ನಾಯಕ ಇಶಾನ್ ಕಿಶನ್ ವಿಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಮಿಂಚುತ್ತಿದ್ದಾರೆ. ಮೊದಲನೇ ಪಂದ್ಯದಲ್ಲೂ ಅವರು ಅಬ್ಬರಿಸಿದ್ದರು. ಮಧ್ಯಮ ಕ್ರಮಾಂಕದಲ್ಲಿ ಕ್ಲಾಸೆನ್ ಹಾಗೂ ಅನಿಕೇತ್ ವರ್ಮಾ ಭರವಸೆ ಹೆಚ್ಚಿಸಿದ್ದಾರೆ. ಆದರೆ ಇತ್ತಂಡಕ್ಕೆ ಬೌಲಿಂಗ್ ಅನುಭವದ ಕೊರತೆ ಆರ್‌ಸಿಬಿ ವಿರುದ್ಧದ ಪಂದ್ಯ ವೇಳೆ ಕಾಣಿಸಿಕೊಂಡಿತ್ತು. ಬಲಿಷ್ಠ ಬೌಲರ್‌ಗಳಿದ್ದರೂ ಅನುಭವಿಗಳಿಲ್ಲ. ಉನಾಡ್‌ಕಟ್ ಹೊರತುಪಡಿಸಿ ಇನ್ನುಳಿದ ಬೌಲರ್‌ಗಳು ಕಡಿಮೆ ಅನುಭವ ಉಳ್ಳವರಿದ್ದಾರೆ. ಹೀಗಾಗಿ ಬೌಲಿಂಗ್ ಸಮಸ್ಯೆಯಿಂದ ಹೊರಬರುವ ತವಕದಲ್ಲಿದೆ ಎಸ್‌ಆರ್‌ಎಚ್.

ಕೆಕೆಆರ್‌ಗೆ ತವಕ: ಇನ್ನು ಬಹುತೇಕ ಅಂಥದ್ದೇ ಸಮಸ್ಯೆ ಎದುರಿಸುತ್ತಿರುವ ಕೆಕೆಆರ್ ಕೂಡ ಪುಟಿದೇಳುವ ತವಕದೊಂದಿಗೆ ಸವಾಲನ್ನೂ ಹೊಂದಿದೆ. ಹರ್ಷಿತ್ ರಾಣಾ ಅಂಥವರು ಹೊರಬಿದ್ದಿರುವುದು ತಂಡಕ್ಕೆ ಪೆಟ್ಟು ಬಿದ್ದಿದೆ. ಸ್ಪಿನ್ ವಿಭಾಗದಲ್ಲಿರುವ ಸುನಿಲ್ ನರೈನ್ ಹಾಗೂ ವರುಣ್ ಚಕ್ರವರ್ತಿ ತಂಡದ ಅನುಭವಿ ಬೌಲರ್‌ಗಳು. ಬ್ಯಾಟಿಂಗ್ ವಿಭಾಗದಲ್ಲಿ ಎರಡನೇ ಮಾತೇ ಇಲ್ಲ. ಫಿನ್ ಅಲೆನ್, ಅಜಿಂಕ್ಯಾ ರಹಾನೆ, ರಿಂಕು ಸಿಂಗ್, ಅಂಗ್ರಿಶ್ ರಘುವಂಶಿ, ಕ್ಯಾಮರನ್ ಗ್ರೀನ್ ಅಂಥ ಬಲಿಷ್ಠ ಬ್ಯಾಟರ್ಸ್ ಇದ್ದಾರೆ. ಬೆಂಚ್‌ನಲ್ಲೂ ಸೈಫರ್ಟ್, ಮನಿಷ್ ಪಾಂಡೆ ಅಂಥವರಿದ್ದಾರೆ.

ಪಿಚ್: ಬ್ಯಾಟರ್‌ಗಳು ಮಿಂಚಬಲ್ಲ ಪಿಚ್ ಈಡನ್ ಗಾರ್ಡನ್ಸ್‌ನಲ್ಲಿದೆ. ಎರಡನೇ ಇನ್ನಿಂಗ್ಸ್‌ನಲ್ಲಿ ಸ್ವಲ್ಪ ಇಬ್ಬನಿ ಕಾಟ ಕಾಡಬಹುದು. ಸ್ಫೋಟಕ ಹೊಡೆತಗಳಿಗೆ ಹೇಳಿ ಮಾಡಿಸಿದ ಗ್ರೌಂಡ್ ಕೋಲ್ಕತ್ತಾದಲ್ಲಿದೆ. ಮೊದಲು ಬೌಲಿಂಗ್ ಮಾಡುವ ತಂಡಕ್ಕೆ ಲಾಭ ಸಿಗಲಿದೆ.



ಪಂದ್ಯದ ಮಾಹಿತಿ:
ಯಾವಾಗ?: ಗುರುವಾರ, ಎಲ್ಲಿ: ಈಡನ್ ಗಾರ್ಡನ್ಸ್, ಕೋಲ್ಕತ್ತಾ, ಸಮಯ: ಸಂಜೆ 7:30, ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಚೆಸ್: ಪ್ರಜ್ಞಾನಂದ ಪರಾಭವ

ಹೊಸದಿಲ್ಲಿ: ಭಾರತ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ಅವರು ಫಿಡೆ ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯ ಮೂರನೇ ಸುತ್ತಿನಲ್ಲಿ ಉಜ್ಬೆಕಿಸ್ತಾನದ ಜವೋಖಿರ್ ಸಿಂದಾರೋವ್ ವಿರುದ್ಧ ಸೋಲು ಒಪ್ಪಿಕೊಂಡರು. ಸೈಪ್ರಸ್‌ನಲ್ಲಿ ನಡೆಯುತ್ತಿರುವ ಈ ಟೂರ್ನಿಯಲ್ಲಿ ಸಿಂದಾರೋವ್ 2.5 ಅಂಕಗಳೊಂದಿಗೆ ಫ್ಯಾಬಿಯಾನೊ ಕಾರುವಾನಾ ಜೊತೆಗೆ ಸಂಯುಕ್ತ ಮುನ್ನಡೆಯಲ್ಲಿದ್ದಾರೆ.

ಕಾರುವಾನಾ ಕೂಡ ಮೂರನೇ ಸುತ್ತಿನಲ್ಲಿ ಚೀನಾದ ವೆಯ್ ಯಿ ಅವರನ್ನು ಸೋಲಿಸಿ ಎರಡು ಜಯಗಳೊಂದಿಗೆ ಉತ್ತಮ ಸ್ಥಿತಿಯಲ್ಲಿ ಮುಂದುವರಿದಿದ್ದಾರೆ. ಮುಂದಿನ ಸುತ್ತಿನಲ್ಲಿ ಅವರು ಸಿಂದಾರೋವ್ ವಿರುದ್ಧ ಎದುರಿಸಲಿದ್ದಾರೆ. ಇನ್ನು ಮಹಿಳಾ ವಿಭಾಗದಲ್ಲಿ ಮೊದಲ ಎರಡು ಸುತ್ತುಗಳಲ್ಲಿ ಎಲ್ಲಾ ಪಂದ್ಯಗಳು ಡ್ರಾಗಳಾಗಿದ್ದರೆ, ಮೂರನೇ ಸುತ್ತಿನಲ್ಲಿ ಬಿಬಿಸಾರಾ ಅಸ್ಸೌಬಯೇವಾ ಝು ಜಿನರ್ ವಿರುದ್ಧ ಗೆದ್ದು ಮೊದಲ ನಿರ್ಣಾಯಕ ಫಲಿತಾಂಶ ದಾಖಲಿಸಿದರು. ಇನ್ನೊಂದು ಪಂದ್ಯದಲ್ಲಿ ಕಟೆರಿನಾ ಲಾಗ್ನೋ ಚೀನಾದ ತಾನ್ ಝೋಂಗ್ ವಿರುದ್ಧ ಜಯ ಸಾಧಿಸಿದರು. ಪ್ರಜ್ಞಾನಂದ ಮಧ್ಯಭಾಗದ ಆಟದಲ್ಲಿ ಉತ್ತಮ ಸ್ಥಾನ ಹೊಂದಿದ್ದರೂ ಎಡವಿದರು. 35. ಕ್ಯೂಎಫ್-7 ನಡೆ ನಂತರ ಸಿಂದಾರೋವ್ ನಿಖರ ಆಟದಿಂದ ಪಂದ್ಯವನ್ನು ತಮ್ಮತ್ತ ತಿರುಗಿಸಿಕೊಂಡರು. ಆರ್. ವೈಶಾಲಿ ಮತ್ತು ಅನ್ನಾ ಮುಜಿಚುಕ್ ನಡುವಿನ ಪಂದ್ಯ ಡ್ರಾದಲ್ಲಿ ಅಂತ್ಯಗೊಂಡಿತು. ಇನ್ನೊಂದು ಪಂದ್ಯದಲ್ಲಿ ದಿವ್ಯ ದೇಶಮುಖ್, ಅಲೆಕ್ಸಾಂಡ್ರಾ ಗೋರ್ಯಾಚ್ಕಿನಾ ಮಾಡಿದ ತಪ್ಪನ್ನು ಪ್ರಯೋಜನಕ್ಕೆ ಬಳಸಿಕೊಂಡು ಸೋಲಿನಿಂದ ಪಾರಾಗಿ ಡ್ರಾ ಸಾಧಿಸಿದರು. ಇತರ ಪಂದ್ಯಗಳಲ್ಲಿ ಹಿಕಾರು ನಕಮುರಾ ಮತ್ತು ಅನಿಶ್ ಗಿರಿ ಕೇವಲ 19 ನಡೆಯಲ್ಲೇ ಡ್ರಾಗೆ ಒಪ್ಪಿಕೊಂಡರೆ, ಮಥಿಯಾಸ್ ಬ್ಲೂಬಾಮ್ ಮತ್ತು ಅಂಡ್ರೇ ಎಸಿಪೆಂಕೋ ಕೂಡ ಅಂಕ ಹಂಚಿಕೊಂಡರು.



ಕೊನೊಲಿ ಕ್ಲಾಸ್ ಆಟಕ್ಕೆ ಕರಗಿದ ಗುಜರಾತ್

ಚಂಡೀಗಢ: ಹಾಲಿ ರನ್ನರ್-ಅಪ್ ಪಂಜಾಬ್ ಕಿಂಗ್ಸ್ ತಂಡವು ಪ್ರತಿಷ್ಠಿತ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ತನ್ನ ಮೊದಲ ಪಂದ್ಯದಲ್ಲಿ ಗುಜರಾತ್ ಟೈಟಾನ್ಸ್ ತಂಡವನ್ನು 3 ವಿಕೆಟ್‌ಗಳಿಂದ ಮಣಿಸಿ ಗೆಲುವಿ ನಾರಂಭ ಮಾಡಿದೆ.

ವಿಜಯ್‌ಕುಮಾರ್ ವೈಶಾಖ್ ಅವರ ಕರಾರುವಾಕ್ ಬೌಲಿಂಗ್ ಮತ್ತು ಕೂಪರ್ ಕೋನೊಲಿ ಅವರ ಕ್ಲಾಸ್ ಬ್ಯಾಟಿಂಗ್‌ನೊಂದಿಗೆ ಪಂಜಾಬ್ ಕಿಂಗ್ಸ್ ಸುಲಭದ ಪಂದ್ಯವನ್ನು ಅಲ್ಪ ಪೈಪೋಟಿ ನಡೆಸಿ ಗೆದ್ದಿತು. ಕಳೆದ ಪಂದ್ಯಾವಳಿಯಲ್ಲಿ ಫೈನಲ್‌ಗೇರಿದ್ದ ತಂಡವು ಯಥಾ ಪ್ರಕಾರ ಗೆಲುವಿನಾಟ ಆಡಿತು. ಟಾಸ್ ಗೆದ್ದು ಬೌಲಿಂಗ್ ತೆಗೆದುಕೊಂಡ ನಂತರ ಗುಜರಾತ್ ಪಡೆಯನ್ನು 162 ರನ್‌ಗೆ ತಡೆಹಿಡಿಯಿತು. ವಿಜಯ್‌ಕುಮಾರ್ ವೈಶಾಖ್ 3 ವಿಕೆಟ್‌ಗಳನ್ನು ಕಿತ್ತರೆ, ಚಾಹಲ್ ಪ್ರಮುಖ ಬ್ಯಾಟಿಗರನ್ನು ಪೆವಿಲಿಯನಗಟ್ಟಿದರು. ತಂಡದ ಪರ ಶುಭಮನ್ ಗಿಲ್ 39, ಜಾಸ್ ಬಟ್ಲರ್ 38 ರನ್ ಗಳಿಸಿದರು.

ಗುರಿ ಬೆನ್ನತ್ತುವಾಗ ಮೊದಲಿನಿಂದಲೂ ಉತ್ತಮ ಬ್ಯಾಟಿಂಗ್ ಮಾಡಿದ ಪಂಜಾಬ್ ಪಂದ್ಯ ಮುಕ್ತಾಯದ ವೇಳೆ ಪ್ರಸಿದ್ಧ ಕೃಷ್ಣ ಅವರ ದಾಳಿಗೆ ತತ್ತರಿಸಿತು. ಆದಾಗ್ಯೂ ತಮ್ಮ ಮೊದಲ ಐಪಿಎಲ್ ಪಂದ್ಯದಲ್ಲಿ ಅದ್ಭುತ ಪ್ರದರ್ಶನ ನೀಡಿದ ಕೂಪರ್ ಕೊನೊಲಿ ಗೆಲುವಿನ ದಡ ಸೇರಿಸಿದರು. ಪಂಜಾಬ್ 7 ವಿಕೆಟ್ ಕಳೆದುಕೊಂಡು ಗುರಿ ಪೇರಿಸಿತು.

ಕೃಷ್ಣ ಕಡಿವಾಣ: ಲಯದಲ್ಲಿದ್ದ ಪಂಜಾಬ್‌ಗೆ ನಾಗಾಲೋಟ. ಸ್ಫೋಟಕ ಆರಂಭದಲ್ಲಿ ಪ್ರಭಸಿಮ್ರನ್ ಮಿಂಚಿದರು. ಆರಂಭಿಕ ಪ್ರಿಯಾಂಶ್ ಆರ್ಯ ಬೇಗನೆ ವಿಕೆಟ್ ಒಪ್ಪಿಸಿದ್ದಾದರೂ, ಮೊದಲ ಐಪಿಎಲ್ ಪಂದ್ಯವಾಡಿದ ಕೂಪರ್ ಕೊನೊಲಿ ಅಂಟಿ ಕೊಂಡು ನಿಂತರು. ಪ್ರಭಸಿಮ್ರನ್(37) ಬೇಕಾದ ಆರಂಭ ಒದಗಿಸಿದ್ದರು. ಕೊನೊಲಿ ಸೆಟ್ ಆಗಿದ್ದರು. ಶ್ರೇಯಸ್(18)ಕ್ಕೆ ವಿಕೆಟ್ ಒಪ್ಪಿಸಿದರು. ಆದಾಗ್ಯೂ, ಪಂಜಾಬ್‌ಗೆ ದೊಡ್ಡ ಸವಾಲೇನು ಇಲ್ಲ. ಗೆಲ್ಲಬಹುದಾದ ಪಂದ್ಯ, ಔಪಚಾರಿಕತೆ ಮುಗಿಸಿಕೊಂಡು ಬಿಟ್ಟರೆ ಸಾಕಿತ್ತು. ಮುಖ್ಯವಾಗಿ ಕೂಪರ್ ಅವರ ಆಟ ಗೆಲುವಿನತ್ತ ಸಾಗುತ್ತಿತ್ತು. ಮಧ್ಯಮ ಆಟದಲ್ಲಿ ಇಂಪ್ಯಾಕ್ಟ್ ಆಟಗಾರನಾಗಿ ಬಂದ ಪ್ರಸಿದ್ಧ ಕೃಷ್ಣ ಪಂಜಾಬ್‌ಗೆ ಕಾಟ ಕೊಟ್ಟರು. ಕರಾರುವಾಕ್ ಬೌಲಿಂಗ್ ದಾಳಿಯೊಂದಿಗೆ ಸರಸರನೇ ವಧೇರಾ, ಶಶಾಂಕ್ ಸಿಂಗ್ ಅವರ ವಿಕೆಟ್ ಕಿತ್ತರು. ಅಲ್ಲಿಂದ ಪಂದ್ಯ ಹೊಳ್ಳಿತು, ಒಂದು ಹೊತ್ತಲ್ಲಿ ಬಾಲ್-ಟು-ಬಾಲ್ ರನ್ ಇದ್ದ ಪಂದ್ಯವನ್ನು ಕೊನೆಯ ಎರಡು ಓವರ್‌ಗಳಲ್ಲಿ 16 ರನ್ ಬೇಕಾದ ಅನಿವಾರ್ಯತೆಗೆ ಕೃಷ್ಣ ಕೊಂಡೊಯ್ದರು. ಆದರೆ ಬಾರ್ಟ್‌ಲೆಟ್ 11, ರನ್ ಗಳಿಸಿದರೆ, ಬಿಡದ ಕೊನೊಲಿ ಅಜೇಯ 72 ರನ್ ಬಾರಿಸಿ ಪಂದ್ಯ ಗೆಲ್ಲಿಸಿದರು.

ಸಂಕ್ಷಿಪ್ತ ಸ್ಕೋರ್

ಗುಜರಾತ್: 20 ಓವರ್‌ಗಳಲ್ಲಿ 162/6, ಗಿಲ್ 39, ಬಟ್ಲರ್ 38; ವೈಶಾಖ್ 34/3, ಚಾಹಲ್ 28/2
ಪಂಜಾಬ್: 19.1 ಓವರ್‌ಗಳಲ್ಲಿ 165/7, ಕೊನೊಲಿ 72★, ಪ್ರಭಸಿಮ್ರನ್ 37; ಪ್ರಸಿದ್ಧ 29/3

ಆರ್‌ಸಿಬಿ ಕೀ ವಿಶುವಲ್ ಅನಾವರಣ: ಅಭಿಮಾನಿಗಳಿಗೆ ವಿಶೇಷ ಗೌರವ

ಬೆಂಗಳೂರು: ಟಾಟಾ ಐಪಿಎಲ್ 2026ಗಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ತನ್ನ ಕೀ ವಿಶುವಲ್ ಅನ್ನು ಅನಾವರಣಗೊಳಿಸಿದ್ದು, ಈ ಬಾರಿ ಅಭಿಮಾನಿಗಳನ್ನು ವಿಶೇಷವಾಗಿ 12ನೇ ಆಟಗಾರರ ಎಂದು ಬಣ್ಣಿಸಿ, ಅವರನ್ನು ಕೇಂದ್ರಬಿಂದುವಾಗಿ ಮಾಡಲಾಗಿದೆ. ಈ ಕ್ರಿಯೇಟಿವ್, ತಂಡ ಮತ್ತು ಅಭಿಮಾನಿಗಳ ನಡುವಿನ ಬಲವಾದ ಬಾಂಧವ್ಯವನ್ನು ಪ್ರತಿಬಿಂಬಿಸುತ್ತದೆ. ಆರ್‌ಸಿಬಿ ಕೇವಲ ಒಂದು ತಂಡವಲ್ಲ, ಅಭಿಮಾನಿಗಳ ಭಾವನೆ ಮತ್ತು ನಿಷ್ಠೆಯ ಸಂಕೇತವಾಗಿದೆ ಎಂಬ ಸಂದೇಶವನ್ನು ಇದು ಸಾರುತ್ತದೆ. ಈ ಕೀ ವಿಶುವಲ್ ಅಭಿಮಾನಿಯ ದೃಷ್ಟಿಕೋನ ವನ್ನು ಮುಖ್ಯವಾಗಿ ತೋರಿಸಲಾಗಿದ್ದು, ಅವರ ಅಚಲ ನಂಬಿಕೆ ಮತ್ತು ತಂಡದ ಮೇಲಿನ ಪ್ರೀತಿಯನ್ನು ಪ್ರತಿನಿಧಿಸುತ್ತದೆ. ತಂಡದ ಬಸ್ ಹಿನ್ನೆಲೆಯಾಗಿ ಬಳಸಿರುವ ಈ ವಿನ್ಯಾಸ, ಆಟಗಾರರು ಅಭಿಮಾನಿಗಳ ಆಶೆ- ಆಕಾಂಕ್ಷೆಗಳನ್ನು ಹೊತ್ತು ಸಾಗುವ ಪ್ರಯಾಣದ ಸಂಕೇತವಾಗಿಯೂ ಕಾಣಿಸುತ್ತದೆ. ಆರ್‌ಸಿಬಿ ಎಲ್ಲಿಗೆ ಹೋದರೂ ಅಭಿಮಾನಿಗಳ ಉತ್ಸಾಹ ಜೊತೆ ಸಾಗುತ್ತದೆ.



> 12ನೇ ಆಟಗಾರರೊಂದಿಗೆ ನಮ್ಮ ಬಾಂಧವ್ಯ ಅತ್ಯಂತ ವಿಶೇಷ. ನಮ್ಮ ಅಭಿಮಾನಿಗಳು ವಿಶ್ವದಲ್ಲೇ ಅತ್ಯುತ್ತಮರು. ಅವರ ನಂಬಿಕೆ ಮತ್ತು ಬೆಂಬಲ ನಮಗೆ ಪ್ರತಿ ಬಾರಿ ಮೈದಾನದಲ್ಲಿ ಶ್ರೇಷ್ಠ ಪ್ರದರ್ಶನ ನೀಡಲು ಪ್ರೇರಣೆ ನೀಡುತ್ತದೆ.
> ■ ರಜತ್ ಪಾಟಿದಾರ್, ಆರ್‌ಸಿಬಿ ನಾಯಕ

ಪದಬಂಧ

ರಾಜಾ ಸಂಗಮೇಶ ಹಿರೇಮಠ



5941

ಎಡದಿಂದ ಬಲಕ್ಕೆ
3. ತಾವರೆಯಂತಹ ಕಣ್ಣುಳ್ಳವನು-ವಿಷ್ಣು (5)
5. ನಮ್ಮ ಭಾಷೆಯಲ್ಲಿ ಆಡುವ ಮಾತು (5)
6. ವಿದೇಶಿ ತಳಿಗಳ ವಿರುದ್ಧವಾದದ್ದು (2)
7. ಗ್ರಾಮದ ಮುಖ್ಯಸ್ಥ-ಪಟೇಲ (2)
9. ಭ್ರಮರವಿಲ್ಲಿ ತಿರುಗಿ ಹಾರುತ್ತಿದೆ (4)
11. ನಾಟಕದ ಪರದೆ ಉಲ್ಟಾ ಕಾಣುತ್ತಿದೆ (4)
15. ಇದು ಜಮಾ ಖರ್ಚಿನ ಪುಸ್ತಕ (2)
16. ಪ್ರತಿಫಲವನ್ನು ನಿರೀಕ್ಷಿಸದೆ ನೀಡುವುದು (2)
17. ಧರ್ಮರಾಯ ನರಕಾಧಿಪತಿಯ ಸುತನಾಗಿ (5)
19. ಅಮರ ಒಳಗೊಂಡ ರಾಕ್ಷಸ ಗುಣ (5)

ಮೇಲಿನಿಂದ ಕೆಳಕ್ಕೆ
1. ಮೊಸಳೆಗಳ ವಾಸಸ್ಥಾನ-ಸಮುದ್ರ (5)
2. ಸಸಿಗಳನ್ನು ನೆಡುವ ಮಣ್ಣಿನ ಪಾತ್ರೆ (2)
3. ಹಳ್ಳಿಗಳಲ್ಲಿ ಹಗ್ಗ ತಯಾರಿಸಲು ಬಳಸುವಂಥಾದ್ದು (4)
4. ಇದು ಕೆಲಸದ ಮಹತ್ವ (5)
8. ನೆಂಟ-ಸಂಬಂಧಿಕನೀತ (2)
10. ತೀರ ಅಲ್ಪ ಬೆಲೆಯ ನಾಣ್ಯ (5)
12. ಪ್ರತಿದಿನದ ಸಮಾನಪದ (2)
13. ಗಂಗೆಯ ಒಂದು ಉಪ ನದಿ (5)
14. ಮುಕ್ಕಣ್ಣ-ಶಿವನೀತ (4)
18. ವಿಶ್ವಾಸವಿಡು (2)

5940 ಉತ್ತರ

ಎಡದಿಂದ ಬಲಕ್ಕೆ:
1.ಮೋರೆ 2.ಕಾಯಿಕಡುಬು
4.ಕಾಪಾಡು 5.ಮತದಾರ
7.ರಸಮಯ 9.ಪದಬಂಧ
13.ನನೆಕೊನೆ 15.ಬವರ
16.ಜಯಮಂಗಲ
17.ಕೇರಿ

ಮೇಲಿನಿಂದ ಕೆಳಕ್ಕೆ :
1.ಮೋಜಣಿದಾರ
2.ಕಾಡುಮನೆ 3.ಬುಡ
4.ಕಾವ್ಯನಾಮ 6.ಬಂಗಾರ
8.ಸಮಾನ 10.ದಫೇದಾರ
11.ಧವಳಗಿರಿ 12.ಆನೆಬಲ
14.ಬೀಜ

ಪ್ರಸ್ತುತ ನಾಯಕ ನಟರ ಧೋರಣೆ ಮತ್ತು ನಿರ್ಮಾಪಕರ ಬವಣೆ, ಇವರ ಮಧ್ಯೆ ಸಣ್ಣ-ಪುಟ್ಟ ಕಲಾವಿದರು ಹಾಗೂ ಸಿನಿಮಾ ತಂತ್ರಜ್ಞರು ಕೆಲಸವಿಲ್ಲದೆ ಪರದಾಡುತ್ತಿರುವುದರ ಬಗ್ಗೆ ಕೆ.ಜಿ. ಕುಮಾರ್ ಅವರು ತೀವ್ರ ವ್ಯಾಕುಲಗೊಳ್ಳುತ್ತಿದ್ದರು. ನಾಯಕ ನಟರು ದುಬಾರಿ ಸಂಭಾವನೆ ಕೈಬಿಟ್ಟು, ನಿರ್ಮಾಪಕ ಬದುಕುವಂಥ ಸಣ್ಣ ಬಜೆಟ್ಟಿನ ಉತ್ತಮ ಚಿತ್ರಗಳು ನಿರ್ಮಾಣವಾದರೆ ಕನ್ನಡ ಚಿತ್ರರಂಗ ಉಳಿಯುತ್ತೆ. ಕನ್ನಡದ ಜನಪ್ರಿಯ ನಟರು ವರ್ಷಕ್ಕೆ ಕನಿಷ್ಟ ಮೂರ್‍ನಾಲ್ಕು ಚಿತ್ರಗಳಲ್ಲಿ ಅಭಿನಯಿಸಿದರೆ, ಸಿನಿಮಾ ವೃತ್ತಿ ನಂಬಿ ಬದುಕುವ ಸಾವಿರಾರು ಜನ ನೆಮ್ಮದಿ ಕಾಣುತ್ತಾರೆ ಎಂದು ಅವರು ಭಾವಿಸಿದ್ದರು.

ಪ್ರಭಾವಿ-ಧೀಮಂತ ಪತ್ರಕರ್ತ ಕೆ.ಜೆ.ಕುಮಾರ್

ನಂದೀಶ್ ಪ್ರೀತಮ್ ಎಚ್.ಎಸ್.

ನನಗೆ ಅಣ್ಣನಂತೆ ಒಲವನ್ನು, ಗುರುವಿನಂತೆ ಮಾರ್ಗ ತೋರಿಸುತ್ತಿದ್ದ ಕೆ.ಜೆ.ಕುಮಾರ್ ನನ್ನ ತಂದೆ ಎಚ್.ಎಸ್. ಶಂಕರಲಿಂಗೇಗೌಡರೊಂದಿಗೂ ಆತ್ಮೀಯವಾಗಿದ್ದವರು. 2013ರ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಬಿಜೆಪಿ ಬಿಟ್ಟು ಜೆಡಿಎಸ್ ಸೇರುವಾಗ ನಾಲ್ಕು ಬಾರಿ ಶಾಸಕರಾಗಿ, ಸತತ ಐದನೇ ಬಾರಿ ಗೆಲ್ಲುವ ಅವಕಾಶವನ್ನು ಕಳೆದುಕೊಳ್ಳುತ್ತೀರಾ, ಪಕ್ಷ ಬದಲಾಯಿಸಬೇಡಿ ಎಂದು ನನ್ನ ತಂದೆಯನ್ನು ಮೊದಲಿಗೆ ಎಚ್ಚರಿಸಿದ್ದೇ ಕೆ.ಜೆ.ಕುಮಾರ್. ಆದರೆ ತಂದೆ ಅವರ ಮಾತನ್ನು ಕಡೆಗಣಿಸಿದರು. ವಿಧಾನಪರಿಷತ್ ಮಾಜಿ ಸದಸ್ಯರಾದ ಎ.ರಾಮಣ್ಣರ ಗರಡಿಯಲ್ಲಿ ಬೆಳೆದಿದ್ದರಿಂದ ರಾಜಕೀಯ ಒಳತೋಟಿ ಚೆನ್ನಾಗಿ ಕೆ.ಜೆ.ಕುಮಾರ್ ತಿಳಿದಿದ್ದರು. ಜನತಾ ಪರಿವಾರದಲ್ಲಿ ಪ್ರಭಾವಿಗಳಾಗಿದ್ದ ಎ.ರಾಮಣ್ಣ ಅವರನ್ನು ಕಾಣಲು ಮೈಸೂರಿನ ಯಾದವಗಿರಿ ಮನೆಗೆ ಮಾಜಿ ಪ್ರಧಾನಿ ಚಂದ್ರಶೇಖರ್, ಮಾಜಿ ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆ ಮತ್ತು ಎಸ್.ಎಂ.ಕೃಷ್ಣ ಬಂದರೂ ರಾಜಕೀಯವಾಗಿ ಲಾಭ ಮಾಡಿಕೊಳ್ಳಲು ಕೆ.ಜೆ.ಕುಮಾರ್ ಎಂದಿಗೂ ಯೋಚಿಸಲೇ ಇಲ್ಲ. ನಿಷ್ಠಾವಂತ ಪತ್ರಕರ್ತರಾಗಿ ತಮ್ಮ ವೃತ್ತಿ ಬದ್ಧತೆ ಕಾಪಾಡಿಕೊಳ್ಳುತ್ತಿದ್ದರು. ಶರಣರ ಗುಣವ ಮರಣದಲ್ಲಿ ಕಾಣು ಎಂಬ ಸಾರ್ವತ್ರಿಕ ಸತ್ಯ ನಿರೂಪಿಸುವಂತೆ ಪತ್ರಕರ್ತರಾಗಿ, ಪತ್ರಿಕಾ ವಿತರಕರಾಗಿ ಸುಮಾರು 60 ವರ್ಷ ಕಾಲ ಕೆ.ಜೆ.ಕುಮಾರ್ ನಡೆಸಿದ ಸೇವೆಯ ಸ್ಮರಿಸಿ ಸೂಪರ್ ಸ್ಟಾರ್ ರಜನಿಕಾಂತ್ ಸಹಿತ ಅನೇಕರು ಸಂತಾಪ ಸೂಚಿಸಿದ್ದರು.

ಇಂಥ ಪ್ರಭಾವಿ-ಧೀಮಂತ ಪತ್ರಕರ್ತ ಕೆ.ಜೆ.ಕುಮಾರ್ ಹುಟ್ಟಿದ್ದು 1952ರ ನವಂಬರ್ 6 ರಂದು ಉಡುಪಿ ಜಿಲ್ಲೆ ಕೊರಂಗ್ರಪಾಡಿ ಎಂಬ ಒಂದು ಕುಗ್ರಾಮದಲ್ಲಿ. ಬಾಲ್ಯದ ದಿನಗಳು ಸುಖವಾಗೇನೂ ಇರಲಿಲ್ಲ. ಕಡು ಕಷ್ಟದಲ್ಲೇ ಬೆಳೆದರು. ಅವರು ಮೈಸೂರಿಗೆ ಬಂದಿದ್ದು ದೈವ ಸಂಕಲ್ಪವಾಗಿದ್ದಿರಬೇಕು. ಹುಟ್ಟೂರಲ್ಲಿ ಬದುಕು ಕಟ್ಟಿಕೊಳ್ಳಲಾಗದೆ ಪರಿತಪಿಸುತ್ತಿದ್ದ ತಂದೆ ರಘುರಾಮ್ ಶೆಟ್ಟರಿಗೆ ಮಂತ್ರಾಲಯ ಮಠದವರು ನಂಜನಗೂಡು ಮುದ್ರಣಾಲಯವೊಂದರಲ್ಲಿ ಉದ್ಯೋಗ ಕೊಡಿಸಿಕೊಟ್ಟರು. ರಘುರಾಮ್ ಶೆಟ್ಟರನ್ನು ನಂಜನಗೂಡಿನಿಂದ ಮೈಸೂರಿಗೆ ಕರೆಸಿಕೊಂಡ ಎ.ರಾಮಣ್ಣ ತಮ್ಮ ದಿನಪತ್ರಿಕೆ, ಪ್ರಿಂಟಿಂಗ್ ಪ್ರೆಸ್ ನೋಡಿಕೊಳ್ಳುವ ಜವಾಬ್ದಾರಿ ನೀಡಿದರು. ಸ್ವತಂತ್ರ ಹೋರಾಟಗಾರರೂ, ಅಂದಿನ ಜನತಾಪಕ್ಷದ ರಾಜ್ಯ ಸಂಘಟನಾ ಕಾರ್ಯದರ್ಶಿಯಾಗಿದ್ದ ಎ.ರಾಮಣ್ಣ ಸಂಪಾದಕತ್ವದಲ್ಲಿ ಹೊರತರುತ್ತಿದ್ದ ವಿಜಯ ದಿನಪತ್ರಿಕೆಯನ್ನು ತಂದೆ ರಘುರಾಮ್‌ಶೆಟ್ಟರು ಮುದ್ರಿಸುತ್ತಿದ್ದರೆ, ಮಕ್ಕಳಾದ ಕುಮಾರ್ ಮತ್ತು ಸುರೇಶ್ ಪತ್ರಿಕೆ ವಿತರಣೆ ಮಾಡುತ್ತಿದ್ದರು. ಹೀಗೆ ಹನ್ನೆರಡು ವರ್ಷದ ಹುಡುಗನಾಗಿದ್ದಾಗಲೇ ಪತ್ರಿಕೆಯೊಂದಿಗೆ ಒಡನಾಟ ಬೆಳೆಸಿಕೊಂಡ ಕೆ.ಜೆ.ಕುಮಾರ್, ತಮ್ಮ ಕೊನೆ ಉಸಿರಿನವರೆಗೂ ಅದರೊಂದಿಗೆ ಒಡನಾಡಿದರು. ಹೀಗೆ ಪತ್ರಿಕೆಯನ್ನೇ ಉಸಿರಾಗಿಸಿಕೊಂಡ ಕೆಲವೇ ಕೆಲವು ಪತ್ರಕರ್ತರಲ್ಲಿ ಕೆ.ಜೆ.ಕುಮಾರ್ ಸಹ ಒಬ್ಬರು.



1977ರ ಏಪ್ರಿಲ್‌ನಲ್ಲಿ ಮಣಿಪಾಲದಿಂದ ಆರಂಭವಾದ ಸಿನಿ ಮಾಸಿಕವೊಂದರ ವರದಿಗಾರರಾದ ನಂತರ ಕೆ.ಜೆ.ಕುಮಾರ್ ಮತ್ತಷ್ಟು ಪ್ರವರ್ಧಮಾನಕ್ಕೆ ಬಂದರು. ಕೆ.ಜೆ.ಕುಮಾರ್ ಪತ್ರಿಕಾ ವಿತರಣೆಯಲ್ಲಿ ಮೈಸೂರಿಗೇ ಅಗ್ರಮಾನ್ಯ ವಿತರಕರಾಗಿಬಿಟ್ಟರು. ಪತ್ರಿಕಾ ವಿತರಣೆಯೊಂದಿಗೆ ಕೆ.ಜೆ.ಕುಮಾರ್ ಪ್ರಭಾವಿ ಪತ್ರಕರ್ತರಾಗಿ ಬೆಳೆದರು. ಇವರ ಬರಹದ ವೈಖರಿಯನ್ನು ಕಂಡೇ ಸೂಪರ್‌ಸ್ಟಾರ್ ರಜಿನಿಕಾಂತ್ ಬೆರಗಾಗಿದ್ದರು. 1975ರಲ್ಲಿ ಮೈಸೂರಿನ ಉತ್ತನಹಳ್ಳಿಯಲ್ಲಿ ನಡೆಯುತ್ತಿದ್ದ 'ಕಥಾ ಸಂಗಮ' ಚಿತ್ರದ ಚಿತ್ರೀಕರಣ ಸಂದರ್ಭದಲ್ಲಿ ತಮ್ಮ ಬಗ್ಗೆ ಬರೆದದ್ದನ್ನು ಯಾವತ್ತೂ ಮರೆಯಲಿಲ್ಲ. ಸುಮಾರು 50 ವರ್ಷಗಳ ಹಿಂದೆ ತಮ್ಮ ಬಗ್ಗೆ ಬರೆದ ಲೇಖನವನ್ನು ಸ್ಮರಿಸಿ ರಜಿನಿಕಾಂತ್ ತಮ್ಮ ಎಕ್ಸ್ ಖಾತೆಯಲ್ಲಿ ಕೆ.ಜೆ. ಕುಮಾರ್ ಬಗ್ಗೆ ಹೃದಯ ತುಂಬಿದ ಶ್ರದ್ಧಾಂಜಲಿ ಸಲ್ಲಿಸಿದ್ದರು.

ಕನ್ನಡ ಚಿತ್ರರಂಗ ಉಳಿದು ಬೆಳೆಯುವುದರ ಬಗ್ಗೆ ಸದಾ ಚಿಂತಿಸುತ್ತಿದ್ದ ಕೆ.ಜೆ.ಕುಮಾರ್ ಮೈಸೂರಿನ ಹೆಸರಾಂತ ಪ್ರೀಮಿಯರ್ ಸ್ಟುಡಿಯೋ ಉಳಿವಿಗಾಗಿ ಬಹಳಷ್ಟು ಹೋರಾಟ ನಡೆಸಿದರು. ಪ್ರೀಮಿಯರ್ ಸ್ಟುಡಿಯೋ ಮುಚ್ಚಿದರೆ, ಇದನ್ನೆ ನಂಬಿಕೊಂಡು ಬದುಕುತ್ತಿರುವ ಸ್ಥಳೀಯ ಸಹ ಕಲಾವಿದರು, ತಂತ್ರಜ್ಞರ ಬದುಕು ಸಂಕಷ್ಟಕ್ಕೆ ಸಿಲುಕುತ್ತೆ ಅಂತ ಸರ್ಕಾರಕ್ಕೂ ಮನವಿ ಮಾಡಿದ್ದರು. ಸಹಕಲಾವಿದರ ಸಂಘದ ಗೌರವ ಅಧ್ಯಕ್ಷರಾಗಿ ಅವರು ನಡೆಸಿದ ಹೋರಾಟ ನಿಷ್ಫಲವಾದಾಗ ಹತಾಶರಾಗಿದ್ದರು. ಅಂಬರೀಶ್ ಅವರನ್ನು ಯಾವ ಮಟ್ಟಿಗೆ ಪ್ರೋತ್ಸಾಹಿಸಿದರೆಂದರೆ, 1982ರಲ್ಲಿ ರಾಜೇಂದ್ರಸಿಂಗ್ ಬಾಬು ನಿರ್ದೇಶನದ ಹಿಂದಿ ಚಿತ್ರ 'ಶರಾರಾ' ಚಿತ್ರೀಕರಣ ಮೈಸೂರಿನಲ್ಲಿ ನಡೆಯುತ್ತಿದ್ದಾಗ ಆ ಚಿತ್ರದ ನಾಯಕ ಶತ್ರುಘ್ನಸಿನ್ಹರನ್ನು ಸಂದರ್ಶಿಸಿದ್ದರು. ಈ ಸಂದರ್ಭದಲ್ಲಿ ಅಂಬರೀಶ್ ಮತ್ತು ಶತ್ರುಘ್ನಸಿನ್ಹ ಮುಖ ಚಹರೆ ಒಂದೇ ರೀತಿ ಇರುವುದನ್ನು ಉಲ್ಲೇಖಿಸಿ ಬರೆದಿದ್ದರು.

1991ರ ದಸರಾ ಚಲನಚಿತ್ರೋತ್ಸವದ ಸಿನಿಮಾ ಆಯ್ಕೆ ಸಮಿತಿ ಅಧ್ಯಕ್ಷರಾಗಿ ಅತ್ಯುತ್ತಮ ಚಿತ್ರಗಳನ್ನು ಪ್ರದರ್ಶನಕ್ಕೆ ಸಿದ್ಧಪಡಿಸಿಕೊಟ್ಟಿದ್ದರು. ಹೀಗೆ ಪತ್ರಿಕಾ ವರದಿಗಾರರಾಗಿ, ವಿತರಕರಾಗಿ ಪ್ರಭಾವಿಯಾಗಿ ಬೆಳೆದಿದ್ದ ಕೆ.ಜೆ.ಕುಮಾರ್ 2004ರಲ್ಲಿ ಹೋಟೆಲ್ ಉದ್ಯಮಕ್ಕೆ ಕೈ ಹಾಕಿ ನಷ್ಟ ಅನುಭವಿಸಿದರು. 2012ರಲ್ಲಿ ಹೊಸ ದಿಗಂತ ದಿನಪತ್ರಿಕೆಗೆ ಸಿನಿಮಾ ವಿಭಾಗದ ಮುಖ್ಯಸ್ಥರಾಗಿ ಕೊನೆ ಉಸಿರೆಳೆಯುವವರೆಗೂ ಬದ್ಧತೆಯಿಂದ ಕೆಲಸ ಮಾಡುತ್ತಿದ್ದರು. ಕೊನೆಯ ದಿನಗಳಲ್ಲೂ ಕನ್ನಡ ಚಿತ್ರರಂಗದ ಕುರಿತು ಯೋಚಿಸುತ್ತಿದ್ದರೇ ಹೊರತು, ತಮ್ಮ ವೈಯಕ್ತಿಕ ಬದುಕಿನ ಕಡೆ ಚಿಂತಿಸುತ್ತಿರಲಿಲ್ಲ.

ಪ್ರಸ್ತುತ ನಾಯಕ ನಟರ ಧೋರಣೆ ಮತ್ತು ನಿರ್ಮಾಪಕರ ಬವಣೆ, ಇವರ ಮಧ್ಯೆ ಸಣ್ಣ-ಪುಟ್ಟ ಕಲಾವಿದರು ಹಾಗೂ ಸಿನಿಮಾ ತಂತ್ರಜ್ಞರು ಕೆಲಸವಿಲ್ಲದೆ ಪರದಾಡುತ್ತಿರುವುದರ ಬಗ್ಗೆ ತೀವ್ರ ವ್ಯಾಕುಲಗೊಳ್ಳುತ್ತಿದ್ದರು. ನಾಯಕ ನಟರು ದುಬಾರಿ ಸಂಭಾವನೆ ಕೈಬಿಟ್ಟು, ನಿರ್ಮಾಪಕ ಬದುಕುವಂಥ ಸಣ್ಣ ಬಜೆಟ್ಟಿನ ಉತ್ತಮ ಚಿತ್ರಗಳು ನಿರ್ಮಾಣವಾದರೆ ಕನ್ನಡ ಚಿತ್ರರಂಗ ಉಳಿಯುತ್ತೆ. ಕನ್ನಡದ ಜನಪ್ರಿಯ ನಟರು ವರ್ಷಕ್ಕೆ ಕನಿಷ್ಟ ಮೂರ್‍ನಾಲ್ಕು ಚಿತ್ರಗಳಲ್ಲಿ ಅಭಿನಯಿಸಿದರೆ, ಸಿನಿಮಾ ವೃತ್ತಿ ನಂಬಿ ಬದುಕುವ ಸಾವಿರಾರು ಜನ ನೆಮ್ಮದಿ ಕಾಣುತ್ತಾರೆ ಎಂದು ಭಾವಿಸಿದ್ದರು. ಹೀಗೆ ಕನ್ನಡ ಚಿತ್ರರಂಗದ ಪುನಶ್ಚೇತನದ ಬಗ್ಗೆ ಯೋಚಿಸುತ್ತಿದ್ದ ಕೆ.ಜೆ. ಕುಮಾರ್, ಕಳೆದ ಮಾರ್ಚ್ 11 ರಂದು ಬುಧವಾರ ಸಂಜೆ 5.10 ಗಂಟೆ ಸುಮಾರಿಗೆ ಕಾಮಾಕ್ಷಿ ಆಸ್ಪತ್ರೆಯಲ್ಲಿ ನನ್ನ ಕೈ ಹಿಡಿದುಕೊಂಡೇ ನನ್ನತ್ತ ನೋಡುತ್ತಾ ಪ್ರಾಣಬಿಟ್ಟರು. ಅವರ ನಿಸ್ತೇಜ ನೋಟದ ಹಿಂದೆ ಮಾಡಬೇಕಾದ ಬೆಟ್ಟದಷ್ಟು ಕೆಲಸ ಬಿಟ್ಟು ಹೋಗುತ್ತಿದ್ದೇನೆ ಎಂಬ ಅಸಹಾಯಕತೆ ಇತ್ತೆನಿಸುತ್ತೆ. ತಮಗಾಗಿ ಏನನ್ನೂ ಮಾಡಿಕೊಳ್ಳದೆ ಜೀವನ ನಡೆಸಿದ ಕೆ.ಜೆ.ಕುಮಾರ್ ನಮಗೆಲ್ಲಾ ಆದರ್ಶವಾಗಿದ್ದಾರೆ. ಅವರ ಕನಸಿನ ಆಸೆಗಳನ್ನು ಈಡೇರಿಸುವುದೇ ನಾವು ಅವರಿಗೆ ಸಲ್ಲಿಸುವ ನಿಜವಾದ ಶ್ರದ್ಧಾಂಜಲಿ ಅನ್ನಿಸುತ್ತೆ.

ಯುದ್ಧ ಭೀತಿ ನಡುವೆ ಸುದ್ದಿ ಮಾಡಿದೆ ಕುವೈಟ್ ವಿಮಾನ | ಇದೇ ಮೊದಲಿಗೆ ಮಂಗಳೂರಿಗೆ ಹಾರಾಟ

ಜಝೀರ ಸ್ವಾಗತಕ್ಕೆ ಏರ್‌ಪೋರ್ಟ್ ರೆಡಿ!

ದಿಗಂತ ವಿಶೇಷ


▸ ಐ.ಬಿ. ಸಂದೀಪ್ ಕುಮಾರ್

◆ **ಮಂಗಳೂರು:** ಇರಾನ್ ವಿರುದ್ಧ ಅಮೆರಿಕಾ–ಇಸ್ರೇಲ್ ಯುದ್ಧ ನಿರಂತರವಾಗಿ ನಡೆಯುತ್ತಿರುವ ಹಿನ್ನಲೆಯಲ್ಲಿ ಗಲ್ಫ್ ರಾಷ್ಟ್ರಗಳಲ್ಲಿರುವ ಭಾರತೀಯರ ಸ್ವದೇಶಕ್ಕೆ ಆಗಮಿಸಲು ಮತ್ತು ನಿರ್ಗಮಿಸಲು ಅನುಕೂಲಕರವಾಗುವ ಹಿನ್ನಲೆಯಲ್ಲಿ ಕುವೈಟ್‌ನ ಜಝೀರ ಏರ್ ವೇಸ್ ಸಂಸ್ಥೆಯ ವಿಮಾನ ಏ.9ರಂದು ಪ್ರಥಮ ಬಾರಿಗೆ ಮಂಗಳೂರಿಗೆ ಆಗಮಿಸಲಿದೆ.



ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನಗಳು ಗಲ್ಫ್ ರಾಷ್ಟ್ರಗಳಿಗೆ ಹಾರಾಟ ನಡೆಸುತ್ತಿದ್ದರೂ ಇದೀಗ ಗಲ್ಫ್ ರಾಷ್ಟ್ರದ ವಿಮಾನ ಮೊದಲ ಬಾರಿಗೆ ಮಂಗಳೂರಿಗೆ ಆಗಮಿಸುತ್ತಿದೆ. ಏ.8ರಂದು ಕುವೈಟ್‌ನಿಂದ ವಯಾ ಸೌದಿ ಅರೇಬಿಯಾದ ದಮ್ಮಾಮ್‌ನಿಂದ ಮಂಗಳೂರಿಗೆ ಹೊರಡಲಿದೆ. ದಮ್ಮಾಮ್‌ಗೆ ಬಸ್ ಟ್ರಾನ್ಸ್‌ಪೋರ್ಟ್ ಮತ್ತು ಸೌದಿ ಟ್ರಾನ್ಸಿಟ್ ವೀಸಾವನ್ನು ಜಝೀರ ಏರ್ ವೇಸ್ ನೋಡಿಕೊಳ್ಳುತ್ತದೆ. ಪ್ರಯಾಣಿಕರ ಟಿಕೇಟ್ ಬಸ್ ಟಿಕೇಟ್ ಮತ್ತು ಸೌದಿ ಟ್ರಾನ್ಸಿಟ್ ವೀಸಾದ ಶುಲ್ಕ ವಿಮಾನದ ಟಿಕೇಟ್ ದರದಲ್ಲೇ ಒಳಗೊಂಡಿರುತ್ತದೆ. ಏ.9ರಂದು ಮಂಗಳೂರಿನಿಂದ ಕುವೈಟ್‌ಗೆ ಈ ವಿಮಾನ ತೆರಳಲಿದೆ. ಏ.9ರಿಂದ ಕುವೈಟ್‌ನ ಜಝೀರ ಏರ್‌ವೇಸ್ ವಾರದಲ್ಲಿ ಎರಡು ಬಾರಿ ಕುವೈಟ್–ಮಂಗಳೂರು ನಡುವಣ ಹಾರಾಟ ನಡೆಸಲಿದೆ.

ಮಂಗಳೂರು ವಿಮಾನ ನಿಲ್ದಾಣ 'ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ' ಎಂದು ಕರೆಯಲ್ಪಡುತ್ತಿದ್ದರೂ ಇಲ್ಲಿಗೆ ವಿದೇಶಿ ಸಂಸ್ಥೆಗಳ ವಿಮಾನಗಳು ಹಾರಾಟ ನಡೆಸದೆ ಕೇವಲ ದೇಶೀಯ ಸಂಸ್ಥೆಗಳ ವಿಮಾನಗಳಷ್ಟೇ ವಿವಿಧ ದೇಶಗಳಿಗೆ ಇಲ್ಲಿಂದ ಸಂಚಾರ ನಡೆಸುತ್ತಿತ್ತು. ಈ ಹಿನ್ನಲೆಯಲ್ಲಿ ಜಝೀರ ಏರ್ ಲೈನ್ಸ್ ಸಂಸ್ಥೆಯ ವಿಮಾನ ಮಂಗಳೂರಿನಲ್ಲಿ ಬಂದಿಳಿಯುತ್ತಿರುವುದಕ್ಕೆ ಮಹತ್ವ ಕಲ್ಪಿಸಲಾಗಿದೆ. ಇರಾನ್ ಕುವೈಟ್ ಮೇಲೆ ದಾಳಿ ನಡೆಸುತ್ತಿರುವ ಹಿನ್ನಲೆಯಲ್ಲಿ ಇಲ್ಲಿಂದ ವಿಮಾನ ಹಾರಾಟವನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿದ್ದು, ಸೌದಿಯ ದಮ್ಮಾಮ್ ವಿಮಾನ ನಿಲ್ದಾಣದವರೆಗೆ ರಸ್ತೆ ಮೂಲಕ ಸಂಚರಿಸಿ ಅಲ್ಲಿಂದ ವಿಮಾನದ ಮೂಲಕ ಇತರ ದೇಶಗಳಿಗೆ ಸಂಚರಿಸಬೇಕಾದ ಅನಿವಾರ್ಯತೆ ಎದುರಾಗಿದೆ. ಜಝೀರ ಏರ್‌ವೇಸ್ ಸಂಸ್ಥೆಯ ವಿಮಾನ ಚಾರ್ಟರ್ಡ್ ಯಾನವಾಗಿದ್ದು, ಏಪ್ರಿಲ್ ತಿಂಗಳಲ್ಲಿ ಮಂಗಳೂರಿಗೆ ಹಾರಾಟದ ದಿನಾಂಕಗಳನ್ನು ನಿಗದಿಪಡಿಸಿದೆ. ಆದರೆ, ಇದು ನಿರಂತರವಾದ ವಿಮಾನ ಹಾರಾಟವಲ್ಲ. ಯುದ್ಧದ ಹಿನ್ನಲೆಯಲ್ಲಿ ತಾತ್ಕಾಲಿಕವಾಗಿ ಜಝೀರ ವಿಮಾನ ಹಾರಾಟ ನಡೆಸಲಿದೆ. ಇದು ಎಷ್ಟು ಸಮಯದವರೆಗೆ ಹಾರಾಟ ನಡೆಸಲಿದೆ ಎಂಬುದನ್ನು ಈಗಲೇ ಹೇಳುವಂತಿಲ್ಲ ಎನ್ನುತ್ತಾರೆ ಕುವೈಟ್‌ನ ಅಕ್ಬರ್ ಟ್ರಾವೆಲ್ಸ್ ಸಂಸ್ಥೆಯ ಮುಖ್ಯಸ್ಥ ಶೇಖ್ ಭಾ್ಯ.



ಪ್ರಯಾಣಿಕರ ಹೆಚ್ಚಳ

ಮಂಗಳೂರು ವಿಮಾನ ನಿಲ್ದಾಣವು 2025–26ನೇ ಆರ್ಥಿಕ ವರ್ಷದ ಮೊದಲಾರ್ಧದಲ್ಲಿ ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗೆ 12.4 ಲಕ್ಷಕ್ಕೂ ಅಧಿಕ ಪ್ರಯಾಣಿಕರಿಗೆ ಸೇವೆ ನೀಡಿ ಗಮನಾರ್ಹ ಸಾಧನೆ ಮಾಡಿದೆ. ಕಳೆದ ಏ.12ರಂದು 8,103 ಪ್ರಯಾಣಿಕರ ಸಂಚಾರದೊಂದಿಗೆ 2ನೇ ಅತೀ ಹೆಚ್ಚು ಒಂದು ದಿನದ ದಾಖಲೆ ನಿರ್ಮಿಸಿದ್ದು, ಅ.1ರಂದು ಅದನ್ನು ಮೀರಿ 8,168 ಪ್ರಯಾಣಿಕರು ಪ್ರಯಾಣಿಸುವ ಮೂಲಕ ಹೊಸ ದಾಖಲೆ ಬರೆದಿದೆ. ಈ ಮೂಲಕ ಕರ್ನಾಟಕದಲ್ಲಿ ಬೆಂಗಳೂರಿನ ನಂತರ 2ನೇ ಅತೀ ಬಿಡುವಿಲ್ಲದ ವಿಮಾನ ನಿಲ್ದಾಣ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಹೆಸರು ಸಾರ್ಥಕವಾಗಲಿ

ಮಂಗಳೂರು ವಿಮಾನ ನಿಲ್ದಾಣ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವೆಂದು ಕರೆಸಿಕೊಳ್ಳುತ್ತಿದ್ದರೂ ಇಲ್ಲಿಗೆ ವಿದೇಶಿ ವಿಮಾನಗಳು ಹಾರಾಟ ನಡೆಸುತ್ತಿರಲಿಲ್ಲ. ಇದೀಗ ಜಝೀರ ಏರ್‌ಲೈನ್ಸ್ ಸಂಸ್ಥೆಯ ವಿಮಾನ ಮಂಗಳೂರಿಗೆ ಆಗಮಿಸುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ. ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಎಂಬ ಹೆಸರು ಸಾರ್ಥಕವಾಗಬೇಕಾದರೆ ಮತ್ತಷ್ಟು ವಿದೇಶಿ ಸಂಸ್ಥೆಗಳ ವಿಮಾನಗಳು ಇಲ್ಲಿಂದ ಕಾರ್ಯಾಚರಿಸಬೇಕಾಗಿದೆ.

■ **ಮೋಹನ್‌ದಾಸ್ ಕಾಮತ್,** ಖಾಸಗಿ ಸಂಸ್ಥೆಯ ಉದ್ಯೋಗಿ, ಕುವೈಟ್

ಕಿರುಸುದ್ದಿ

ಸೈಕಲ್‌ಗೆ ಪಿಕ್‌ಅಪ್ ಡಿಕ್ಕಿ : ಸವಾರ ಮೃತ್ಯು

◆ **ಬಂಟ್ವಾಳ:** ಬಿ.ಸಿ.ರೋಡಿನ ಕೈಕಂಬ ಸಮೀಪ ಪಿಕಪ್ ವಾಹನವೊಂದು ಸೈಕಲ್‌ಗೆ ಡಿಕ್ಕಿಯಾದ ಪರಿಣಾಮ ಸವಾರ ಸಾವನ್ನಪ್ಪಿದ ಘಟನೆ ನಡೆದಿದೆ. ಶಾಂತಿ ಅಂಗಡಿ ನಿವಾಸಿ ಗ್ವಾಲ್ವಿನ್ (45) ಎಂಬವರು ಮೃತಪಟ್ಟವರೆಂದು ಗುರುತಿಸಲಾಗಿದೆ. ವೃತ್ತಿಯಲ್ಲಿ ಪೈಂಟರ್ ಆಗಿರುವ ಅವರು ಮನೆಯಿಂದ ಸೈಕಲ್‌ನಲ್ಲಿ ಹೊರಟು ಹೆದ್ದಾರಿ ಬದಿಯಲ್ಲಿ ಸಂಚರಿಸುತ್ತಿದ್ದ ವೇಳೆ ಪಿಕಪ್ ವಾಹನ ಡಿಕ್ಕಿಯಾಗಿದೆ. ಪರಿಣಾಮ ಸೈಕಲ್ ಸಮೇತ ರಸ್ತೆಗೆ ಬಿದ್ದಿರುವ ಗ್ವಾಲ್ವಿನ್ ಅವರಿಗೆ ಗಂಭೀರ ಸ್ವರೂಪದ ಗಂಭೀರವಾಗಿ ಗಾಯವಾಗಿದ್ದು, ಸ್ಥಳದಲ್ಲೇ ದಾರುಣವಾಗಿ ಮೃತಪಟ್ಟಿದ್ದಾರೆ ಎಂದು ತಿಳಿದುಬಂದಿದೆ. ಘಟನಾ ಸ್ಥಳಕ್ಕೆ ಟ್ರಾಫಿಕ್ ಪೊಲೀಸರು ಭೇಟಿ ನೀಡಿ ಪ್ರಕರಣ ದಾಖಲಿಸಿ ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಮಡಿಕೇರಿ: ಗುಂಡು ಹಾರಿಸಿ ಆತ್ಮಹತ್ಯೆ ಯತ್ನ

◆ **ಮಡಿಕೇರಿ:** ವ್ಯಕ್ತಿಯೊಬ್ಬರು ಗುಂಡು ಹೊಡೆದುಕೊಂಡು ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ಮಡಿಕೇರಿ ಸಮೀಪದ ಕಾಟಕೇರಿ ಬಳಿ ನಡೆದಿದೆ. ಕಾಟಕೇರಿ ನಿವಾಸಿ ಅಪ್ಪಯ್ಯ (70) ಗುಂಡು ಹೊಡೆದುಕೊಂಡ ವ್ಯಕ್ತಿ. ಹೊಟ್ಟೆಭಾಗಕ್ಕೆ ಗುಂಡು ತಗುಲಿದ ಅವರನ್ನು ಮಡಿಕೇರಿಯ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಮಗನ ಜೊತೆ ನಡೆದ ಜಗಳದ ಹಿನ್ನಲೆಯಲ್ಲಿ ಅಪ್ಪಯ್ಯ ಅವರು ಮನೆಯಲ್ಲಿದ್ದ ಬಂದೂಕಿನಿಂದ ಹೊಟ್ಟೆಗೆ ಗುಂಡು ಹೊಡೆದುಕೊಂಡಿರುವ ಶಂಕೆ ವ್ಯಕ್ತವಾಗಿದ್ದು, ಸ್ಥಳಕ್ಕೆ ಮಡಿಕೇರಿ ಗ್ರಾಮಾಂತರ ಪೊಲೀಸರು ಭೇಟಿ ಪರಿಶೀಲನೆ ನಡೆಸಿದ್ದಾರೆ. ಅದೃಷ್ಟವಶಾತ್ ಅಪ್ಪಯ್ಯ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ನಿಲ್ಲಿಸಲಾಗಿದ್ದ ಪಿಕ್‌ಅಪ್‌ನ ಹಿಂಬದಿಗೆ ಬೈಕ್ ಡಿಕ್ಕಿ: ವ್ಯಕ್ತಿ ಮೃತ್ಯು

◆ **ಕುಂಬಳೆ:** ದುರಸ್ತಿ ಕೆಲಸದ ಹಿನ್ನೆಲೆಯಲ್ಲಿ ರಾಷ್ಟ್ರೀಯ ಹೆದ್ದಾರಿಯಲ್ಲಿ ನಿಲ್ಲಿಸಲಾಗಿದ್ದ ಪಿಕ್‌ಅಪ್ ವಾಹನದ ಹಿಂಬದಿಗೆ ಬೈಕ್ ಡಿಕ್ಕಿ ಹೊಡೆದು ಯುವಕನೋರ್ವ ಮೃತಪಟ್ಟ ಘಟನೆ ಮಂಗಳವಾರ ಬೆಳಗ್ಗೆ ರಾಷ್ಟ್ರೀಯ ಹೆದ್ದಾರಿ ಬಂದ್ಯೋಡಿನಲ್ಲಿ ನಡೆದಿದೆ. ತಲಪಾಡಿ ಕೆ.ಸಿ.ರೋಡ್ ನಿವಾಸಿ ಮುಹಿಯುದ್ದೀನ್ ಸಿನಾನ್ (28) ಮೃತಪಟ್ಟ ದುರ್ದೈವಿಯಾಗಿದ್ದಾರೆ. ಅಪಘಾತದಲ್ಲಿ ಗಂಭೀರ ಗಾಯಗೊಂಡ ಮುಹಿಯುದ್ದೀನ್ ಸಿನಾನ್‌ರನ್ನು ಕೂಡಲೇ ಮಂಗಳೂರಿನ ಆಸ್ಪತ್ರೆಗೆ ತಲುಪಿಸಿದರೂ ಜೀವ ಉಳಿಸಲು ಸಾಧ್ಯವಾಗಲಿಲ್ಲ. ಸಿನಾನ್ ಅವರು ಉಪ್ಪಳ ಭಾಗದಿಂದ ಕುಂಬಳೆ ಭಾಗಕ್ಕೆ ಬೈಕ್‌ನಲ್ಲಿ ಬರುತ್ತಿದ್ದ ವೇಳೆ ಈ ಅಪಘಾತ ಸಂಭವಿಸಿದೆ. ಕಳೆದ ಕೆಲವು ದಿನಗಳಿಂದ ಇದೇ ರೀತಿಯಲ್ಲಿ ಸಂಭವಿಸಿದ ಎರಡನೇ ಅಪಘಾತ ಇದಾಗಿದೆ. ಕೆಲವು ದಿನಗಳ ಹಿಂದೆ ಕರಂದಕ್ಕಾಡ್ ಅಗ್ನಿಶಾಮಕ ದಳ ಸಮೀಪ ರಸ್ತೆಯಲ್ಲಿ ನಿಲ್ಲಿಸಲಾಗಿದ್ದ ಲಾರಿಯ ಹಿಂಬದಿಗೆ ಬೇರೊಂದು ಲಾರಿ ಡಿಕ್ಕಿ ಹೊಡೆದು ಅಪಘಾತ ಸಂಭವಿಸಿತ್ತು. ಅದು ಗಂಟೆಗಳ ಕಾಲ ನಡೆಸಿದ ರಕ್ಷಣಾ ಕಾರ್ಯಾಚರಣೆಯಲ್ಲಿ ಲಾರಿಯೊಳಗೆ ಸಿಲುಕಿದ ಕ್ಲೀನರ್‌ನನ್ನು ಅಗ್ನಿಶಾಮಕ ದಳ ಹಾಗೂ ನಾಗರಿಕರು ರಕ್ಷಿಸಿದ್ದರು.

ಮಾದಕ ವಸ್ತು ಸೇವನೆ: ಮೂವರ ಬಂಧನ

◆ **ಬಂಟ್ವಾಳ :** ತಾಲೂಕಿನ ನರಿಕೊಂಬು ಗ್ರಾಮದ ರಾಷ್ಟ್ರೀಯ ಹೆದ್ದಾರಿ ಬಳಿರುವ ಅಂಡರ್ ಪಾಸ್ ಬಳಿ ಮಾದಕ ವಸ್ತುವನ್ನು ಸೇವಿಸಿ ನಶೆಯಿಂದ ಸಾರ್ವಜನಿಕರಿಗೆ ತೊಂದರೆಯಾಗುವ ರೀತಿಯಲ್ಲಿ ವರ್ತಿಸುತ್ತಿದ್ದ ಆರೋಪದಲ್ಲಿ ಬಂಟ್ವಾಳ ನಗರ ಪೊಲೀಸರು ಮೂವರನ್ನು ಬಂಧಿಸಿದ್ದಾರೆ. ನರಿಕೊಂಬು ನಿವಾಸಿ ಮೊಹಮ್ಮದ ಶಹಜ್ (21), ವಿಟ್ಲ ಕಸ್ಬಾ ನಿವಾಸಿ ಮಹಮ್ಮದ್ ಆರೀಫ್ (30) ಹಾಗೂ ಬಿ ಮೂಡ ಗ್ರಾಮದ ನಿವಾಸಿ ಮೊಹಮ್ಮದ್ ಆಶೀಕ್ (21) ಬಂಧಿತ ಆರೋಪಿಗಳಾಗಿದ್ದಾರೆ. ಖಚಿತ ವರ್ತಮಾನದಂತೆ ಬಂಟ್ವಾಳ ನಗರ ಪೊಲೀಸ್ ಠಾಣಾ ಪೊಲೀಸರು ಸ್ಥಳಕ್ಕಾಗಮಿಸಿದಾಗ ಅಮಲು ಪದಾರ್ಥ ಸೇವನೆಗೈದು ಮೂವರು ಯುವಕರು ಅಸಭ್ಯವಾಗಿ ವರ್ತಿಸುತ್ತಿದ್ದರು. ಇವರನ್ನು ವಶಪಡಿಸಿ ವಿಚಾರಣೆಗೊಳಪಡಿಸಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ ನಿಷೇಧಿತ ಮನೋ ದ್ರೇಕಕಾರಿ ಮಾದಕವಸ್ತುವನ್ನು ಸೇವಿಸಿರುವುದು ದೃಢಪಟ್ಟಿದೆ. ಈ ಬಗ್ಗೆ ಬಂಟ್ವಾಳ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಕಳವಿಗೆ ವಿಫಲ ಯತ್ನ

◆ **ಬಂಟ್ವಾಳ :** ಕೆನರಾ ಬ್ಯಾಂಕಿನ ಫರಂಗೀಪೇಟೆ ಶಾಖೆಯ ಎಟಿಎಂ ಕೇಂದ್ರಕ್ಕೆ ನುಗ್ಗಿ ಕಳವಿಗೆ ವಿಫಲ ಯತ್ನ ನಡೆಸಿ, ಬಳಿಕ ಯಂತ್ರಕ್ಕೆ ಹಾನಿಗೈದ ಘಟನೆ ಫರಂಗಿಪೇಟೆ ಎಂಬಲ್ಲಿ ನಡೆದಿದೆ. ಈ ಬಗ್ಗೆ ಫರಂಗಿಪೇಟೆ ಕೆನರಾ ಬ್ಯಾಂಕ್ ಶಾಖಾ ಮ್ಯಾನೇಜರ್ ರಾಜೇಶ್ ಅವರು ಬಂಟ್ವಾಳ ಗ್ರಾಮಾಂತರ ಠಾಣೆಗೆ ದೂರು ದಾಖಲಿಸಿದ್ದಾರೆ. ಪುದು ಗ್ರಾಮದ ಫರಂಗಿಪೇಟೆಯಲ್ಲಿರುವ ಕೆನರಾ ಬ್ಯಾಂಕ್ ಶಾಖೆಯ ಪಕ್ಕದಲ್ಲಿರುವ ಎಟಿಎಂ ಕೇಂದ್ರ ಜಖಂಗೊಂಡಿದ್ದು, ಯಾರೋ ಕಳ್ಳತನಕ್ಕೆ ಯತ್ನಿಸಿರುವುದಾಗಿದೆ. ಎಟಿಎಂ ಜಖಂನಿಂದಾಗಿ ಸುಮಾರು 5 ಸಾವಿರ ರೂಪಾಯಿ ನಷ್ಟವಾಗಿದೆ. ಯಾರೋ ಕಳ್ಳರು ಹಣ ಕಳವಿಗೆ ಯತ್ನಿಸಿರುವಂತೆ ಕಂಡು ಬಂದಿದೆ ಎಂದು ನೀಡಿದ ದೂರಿನಲ್ಲಿ ತಿಳಿಸಲಾಗಿದೆ. ಈ ಬಗ್ಗೆ ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಸ್ತೆ ದಾಟುತ್ತಿದ್ದಾಗ ಕಾರು ಡಿಕ್ಕಿ: ಮಹಿಳೆ ಗಂಭೀರ

◆ **ಬಂಟ್ವಾಳ:** ರಸ್ತೆ ದಾಟುತ್ತಿದ್ದ ಮಹಿಳೆಯೋರ್ವರಿಗೆ ಕಾರು ಡಿಕ್ಕಿಯಾದ ಘಟನೆ ಸಜಿಪಮುನ್ನೂರು ಗ್ರಾಮದ ದಾಸರಗುಡ್ಡೆ ಎಂಬಲ್ಲಿ ನಡೆದಿದೆ. ಉಳ್ಳಾಲ ತಾಲೂಕಿನ ಬೋಳಿಯಾರು ಗ್ರಾಮದ ಭಾರತಿ (48) ಎಂಬವರು ಗಾಯಗೊಂಡಿದ್ದು, ಮಂಗಳೂರಿನ ಖಾಸಗಿ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸಜಿಪಮುನ್ನೂರು ಗ್ರಾಮದ ದಾಸರಗುಡ್ಡೆ ಎಂಬಲ್ಲಿರುವ ಗುಳಿಗಜ್ಜ ಕಟ್ಟೆಗೆ ತನ್ನ ಪುತ್ರಿಯೊಂದಿಗೆ ಬಂದಿದ್ದರು. ಮೆಲ್ಕಾರ್–ಮುಡಿಪು ರಾಜ್ಯ ಹೆದ್ದಾರಿ ರಸ್ತೆಯನ್ನು ದಾಟಿ ರಸ್ತೆಯ ಅಂಚಿಗೆ ತಲುಪಿದಾಗ ಮೆಲ್ಕಾರ್ ಕಡೆಯಿಂದ ಮುಡಿಪುವಿನತ್ತ ಅತೀವೇಗ ಹಾಗೂ ಅಜಾಗರುಕತೆಯಿಂದ ಧಾವಿಸಿ ಬಂದ ಕಾರು ಡಿಕ್ಕಿ ಹೊಡೆದು ಈ ಅಪಘಾತ ಸಂಭವಿಸಿದೆ. ಪರಿಣಾಮ ತೀವ್ರ ಸ್ವರೂಪದ ಗಾಯಗೊಂಡಿರುವ ಭಾರತಿ ಅವರು ಮಂಗಳೂರು ಖಾಸಗಿ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಬಂಟ್ವಾಳ ಟ್ರಾಫಿಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಪತ್ತೆಯಾಗಿದ್ದ ಸಕಲೇಶಪುರದ ವ್ಯಕ್ತಿ ಕೊಲೆಯಾಗಿ ಪತ್ತೆ

ಮೂವರು ಕೊಡಗು ಪೊಲೀಸ್ ವಶ

◆ **ಮಡಿಕೇರಿ:** ಸಕಲೇಶಪುರ ತಾಲೂಕಿನ ವ್ಯಕ್ತಿಯೊಬ್ಬರನ್ನು ಕೊಲೆ ಮಾಡಿದ ಆರೋಪದಡಿ ಕೊಡಗು ಪೊಲೀಸರು ಮೂವರನ್ನು ಬಂಧಿಸಿದ್ದಾರೆ. ಬಂಧಿತರನ್ನು ಸಕಲೇಶಪುರ ತಾಲೂಕಿನ ಬಾಳೆಕೆರೆ ನಿವಾಸಿ ರತ್ನ, (30), ಪ್ರವೀಣ್ (35) ಹಾಗೂ ಹೆಮ್ಮನೆ ಗ್ರಾಮದ ಪಾರ್ವತಮ್ಮ (58) ಎಂದು ಗುರುತಿಸಲಾಗಿದೆ.

ಸಕಲೇಶಪುರ ತಾಲೂಕಿನ ಬಾಳೆಕೆರೆ ನಿವಾಸಿಯಾದ ಪುನೀತ್ ಎಂಬವರು ನಾಪತ್ತೆಯಾಗಿರುವ ಕುರಿತು ಶನಿವಾರಸಂತೆ ಪೊಲೀಸ್ ಠಾಣೆಯಲ್ಲಿ ಮಾ.29ರಂದು ದೂರು ದಾಖಲಾಗಿತ್ತು. ಕಾಣೆಯಾದ ವ್ಯಕ್ತಿಯ ಪತ್ತೆ ಕುರಿತು ತನಿಖೆ ಕೈಗೊಳ್ಳುವ ಸಂದರ್ಭ ಪುನೀತ್ ಕೊಲೆಯಾಗಿರುವುದಾಗಿಬೆಳಕಿಗೆಬಂದಿತ್ತು. ಕೃತ್ಯ ನಡೆದ ಸ್ಥಳಕ್ಕೆ ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ ಆರ್.ಎನ್., ಸೋಮವಾರಪೇಟೆ ಉಪ ವಿಭಾಗ ಡಿವೈಎಸ್ಪಿ ಚಂದ್ರಶೇಖರ್.ಪಿ, ಶನಿವಾರಸಂತೆ ವೃತ್ತ ನಿರೀಕ್ಷಕ ಕೃಷ್ಣರಾಜು, ಶನಿವಾರಂತೆ ಪೊಲೀಸ್ ಠಾಣೆ ಪಿಎಸ್‌ಐಗಳಾದ ಗೋವಿಂದರಾಜು ಮತ್ತು ಚಂದ್ರು, ಠಾಣಾ ಅಪರಾಧ ಪತ್ತೆ ಸಿಬ್ಬಂದಿಗಳು, ಅಪರಾಧ ಕೃತ್ಯ ಪರಿಶೀಲನಾ ತಜ್ಞರ ತಂಡ ಭೇಟಿ ನೀಡಿ ಅಪರಾಧಕೃತ್ಯಕ್ಕೆ ಸಂಬಂಧಿಸಿದ ಮಾಹಿತಿ ಹಾಗೂ ಸಾಕ್ಷ್ಯಾಧಾರಗಳನ್ನು ಕಲೆ ಹಾಕಿ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ.

ಪ್ರಕರಣದ ಆರೋಪಿಗಳನ್ನು ಪತ್ತೆ ಮಾಡುವಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ಬಿಂದುಮಣಿ ಅವರು ಶ್ಲಾಘಿಸಿದ್ದಾರೆ.

» ಪುನೀತ್ ಎಂಬವರು ನಾಪತ್ತೆಯಾಗಿರುವ ಕುರಿತು ಶನಿವಾರಸಂತೆ ಪೊಲೀಸ್ ಠಾಣೆಯಲ್ಲಿ ಮಾ.29ರಂದು ದೂರು ದಾಖಲಾಗಿತ್ತು.

ಸಾಸ್ತಾನ ಕಿಡ್ನಾಪ್ ಪ್ರಕರಣಕ್ಕೆ 'ಕೋಕಾ' ಬಿಸಿ

7 ಮಂದಿ ಅರೆಸ್ಟ್, ಕಿಂಗ್‌ಪಿನ್‌ಗಳ ಪತ್ತೆಗೆ ಬಹುಮಾನ ಘೋಷಣೆ

◆ **ಉಡುಪಿ:** ಸಾಸ್ತಾನದ ಹೊಟೇಲ್ ಎದುರು ನಡೆದಿದ್ದ ತೇಜಸ್ ಎಂಬ ಯುವಕನ ಅಪಹರಣ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ಚುರುಕುಗೊಳಿಸಿರುವ ಕೋಟ ಪೊಲೀಸರು, ಆರೋಪಿಗಳ ವಿರುದ್ಧ ಕರ್ನಾಟಕ ಸಂಘಟಿತ ಅಪರಾಧ ನಿಯಂತ್ರಣ ಕಾಯ್ದೆ ಅಳವಡಿಸಿದ್ದಾರೆ.



ಸಿದ್ಧಾಪುರ ಗ್ರಾಮದ ಮೋಹನ ದಾಸ್ ಶೆಟ್ಟಿ ಅವರ ಪುತ್ರ ತೇಜಸ್ ಅವರನ್ನು ಸಾಸ್ತಾನದ ಕೋಸ್ಟಲ್ ಪ್ಯಾರಡೈಸ್ ಹೊಟೇಲ್ ಎದುರು ಅವರದ್ದೇ ಫಾರ್ಚೂನ್ ಕಾರಿನಲ್ಲಿ ಅಪಹರಿಸಲಾಗಿತ್ತು. ಈ ಕೃತ್ಯವು ಸಂಘಟಿತವಾಗಿ ನಡೆದಿರುವುದು ತನಿಖೆಯಲ್ಲಿ ದೃಢಪಟ್ಟ ಹಿನ್ನೆಲೆಯಲ್ಲಿ ಪೊಲೀಸರು ಈ ಕಠಿಣ ಕಾನೂನನ್ನು ಪ್ರಯೋಗಿಸಿದ್ದಾರೆ.

ಬಂಧಿತ ಆರೋಪಿಗಳಾದ ಮಂಗಳೂರಿನ ದೇವಿ ಪ್ರಸಾದ್ ಶೆಟ್ಟಿ ಅಲಿಯಾಸ್ ದೀಕ್ಷಿತ್, ಹಿರಿಯಡ್ಕದ ಸುಜಿತ್, ಕಾಟಿಪಳ್ಳದ ಸುದೀಪ, ಶ್ರೀಷಾ ಆನಂದ ಶೆಟ್ಟಿ, ಮಿಥುನ್ ಅಲಿಯಾಸ್ ಮಿಥುನ್ ಕೈಕಂಬ, ಕೆಮ್ಮಣ್ಣುವಿನ ಸುಹಾಸ್ ಮತ್ತು ಹೂಡೆಯ ಮನೋಜ್ ವಿ. ಕೊಟ್ಯಾನ್ ಅವರನ್ನು ಈಗಾಗಲೇ ನ್ಯಾಯಾಲಯಕ್ಕೆಹಾಜರುಪಡಿಸಲಾಗಿದ್ದು, ನ್ಯಾಯಾಂಗ ಬಂಧನ ವಿಧಿಸಲಾಗಿದೆ.

ಅಪಹರಣಕಾರರು ತೇಜಸ್ ಅವರ ವಾಟ್ಸ್‌ಆಪ್ ಮೂಲಕ ಕರೆ ಮಾಡಿ ಮೊದಲು 50 ಲಕ್ಷ ರೂಪಾಯಿ ಹಾಗೂ ನಂತರ 3 ಕೋಟಿ ರೂಪಾಯಿ ಹಣಕ್ಕೆ ಬೇಡಿಕೆಯೊಡ್ಡಿ ಕೊಲೆ ಬೆದರಿಕೆ ಹಾಕಿದ್ದರು ಎಂದು ದೂರಿನಲ್ಲಿ ವಿವರಿಸಲಾಗಿದೆ.

ಪ್ರಕರಣದ ಪ್ರಮುಖ ಆರೋಪಿಗಳಾದ ಮನೋಜ ಕೋಡಿಕೆರೆ ಮತ್ತು ಚೇತನ್ ಪಡೀಲ್ ಅಲಿಯಾಸ್ ಚೇತನ್ ಕುಲಾಲ್ ಸದ್ಯ ತಲೆಮರೆಸಿಕೊಂಡಿದ್ದಾರೆ. ಮನೋಜ ಕೋಡಿಕೆರೆ ವಿರುದ್ಧ ಮಂಗಳೂರು ಮತ್ತು ಉಡುಪಿ ಜಿಲ್ಲೆಗಳಲ್ಲಿ ಒಟ್ಟು 20 ಪ್ರಕರಣಗಳಿದ್ದರೆ, ಚೇತನ್ ಪಡೀಲ್ ವಿರುದ್ಧ 13 ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ. ಕುಂದಾಪುರ ಉಪವಿಭಾಗದ ಡಿವೈಎಸ್ಪಿ ಹೆಚ್.ಡಿ. ಕುಲಕರ್ಣಿ ಅವರು ಪ್ರಕರಣದ ಮುಂದಿನ ತನಿಖೆ ಕೈಗೊಂಡಿದ್ದಾರೆ. ತಲೆಮರೆಸಿಕೊಂಡಿರುವ ಈ ಇಬ್ಬರು ಪ್ರಮುಖ ಆರೋಪಿಗಳ ಬಗ್ಗೆ ನಿಖರ ಮಾಹಿತಿ ನೀಡಿದವರಿಗೆ ಪೊಲೀಸರು 50,000 ರೂಪಾಯಿ ನಗದು ಬಹುಮಾನ ಘೋಷಿಸಿದ್ದು, ಮಾಹಿತಿದಾರರ ವಿವರವನ್ನು ಗೌಪ್ಯವಾಗಿಡಲಾಗುವುದು ಎಂದು ತಿಳಿಸಿದ್ದಾರೆ.

ಅಧಿಕಾರಿಗಳಿಗೆ ಉಡುಪಿ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ.ಸೂಚನೆ

ಯುವಜನರನ್ನು ಡ್ರಗ್ಸ್‌ನಿಂದ ದೂರ ಮಾಡಿ, ಅರಿವು ಮೂಡಿಸಿ

◆ **ಉಡುಪಿ:** ಯುವಜನರಲ್ಲಿ ಮಾದಕ ದ್ರವ್ಯ ಸೇವನೆಯಿಂದ ಭವಿಷ್ಯದಲ್ಲಿ ಆಗುವ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸುವುದರೊಂದಿಗೆ ಅವುಗಳಿಂದ ದೂರ ಉಳಿಯುವಂತೆ ನೋಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ. ಸೂಚನೆ ನೀಡಿದರು.



ನಗರದ ಮಣಿಪಾಲ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಎನ್.ಸಿ.ಓ.ಆರ್.ಡಿ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆ ಹಾಗೂ ಜಿಲ್ಲಾ ತಂಬಾಕು ನಿಯಂತ್ರಣ ಘಟಕದ ನಾಲ್ಕನೇ ತ್ರೈಮಾಸಿಕ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಮಾದಕ ದ್ರವ್ಯಗಳ ಸೇವನೆಯಿಂದ ಮನುಷ್ಯನಲ್ಲಿ ದೈಹಿಕ, ಮಾನಸಿಕ, ಸಾಮಾಜಿಕ ಹಾಗೂ ಆರ್ಥಿಕವಾಗಿ ನಷ್ಟವಾಗುವುದಲ್ಲದೇ ಹಲವಾರು ರೀತಿಯ ಗಂಭೀರ ಕಾಯಿಲೆಗಳು ಉಂಟಾಗುವುದರ ಜೊತೆಗೆ ಮನುಷ್ಯನ ಶಾರೀರಿಕ ಆರೋಗ್ಯದ ಜೊತೆಗೆ ಮಾನಸಿಕ ಅಸಮತೋಲನ ಉಂಟಾಗಿ ಆರೋಗ್ಯ ಹದಗೆಡುತ್ತದೆ. ಮಾದಕ ವ್ಯಸನಗಳಿಂದ ಉಂಟಾಗುವ ದುಷ್ಪರಿಣಾಮದ ಬಗ್ಗೆ ಯುವಜನರಿಗೆ ಅರಿವು ಮೂಡಿಸಬೇಕು. ಶಾಲಾ ಮತ್ತು ಕಾಲೇಜುಗಳಲ್ಲಿ ಮಾದಕ ದ್ರವ್ಯ ಮುಕ್ತ ವಾತಾವರಣವನ್ನು ಸೃಷ್ಟಿಸಲು ಒತ್ತು ನೀಡಬೇಕು ಎಂದರು.

ವೈದ್ಯರ ಆದೇಶವಿಲ್ಲದೇ ಔಷಧ ಕೊಡಬಾರದು

ಜಿಲ್ಲೆಯ ಪ್ರತೀಯೊಂದು ಔಷಧ ಅಂಗಡಿಗಳಲ್ಲಿ ವೈದ್ಯರು ಶಿಫಾರಸ್ಸು ಮಾಡುವ ಔಷಧಿಗಳನ್ನು ಮಾತ್ರ ರೋಗಿಗಳಿಗೆ ನೀಡಬೇಕು. ವೈದ್ಯರ ನಿರ್ದೇಶನವಿಲ್ಲದೇ ಔಷಧ ಮಾರಾಟ ನಿಷೇಧ ಎಂಬ ಫಲಕವನ್ನು ಕಡ್ಡಾಯವಾಗಿ ಔಷಧ ಅಂಗಡಿಗಳಲ್ಲಿ ಸೂಚನಾ ಫಲಕಗಳನ್ನು ಅಳವಡಿಸಬೇಕು. ಜಿಲ್ಲೆಯ ಎಲ್ಲಾ ಮೆಡಿಕಲ್ ಸ್ಟೋರ್‌ಗಳಲ್ಲಿ ಸಿ.ಸಿ.ಟಿ.ವಿ ಯನ್ನು ಕಡ್ಡಾಯವಾಗಿ ಅಳವಡಿಸಿರುವ ಬಗ್ಗೆ ನಿಯಮಿತವಾಗಿ ಪರಿಶೀಲನೆ ನಡೆಸಬೇಕು ಎಂದರು.

ಕೆಲವು ಕೈಗಾರಿಕಾ ಘಟಕಗಳಲ್ಲಿ ಅಕ್ರಮವಾಗಿ ಮಾದಕ ವಸ್ತುಗಳ ತಯಾರಿಕೆಯನ್ನು ಮಾಡುವ ಸಾಧ್ಯತೆಗಳು ಇರುತ್ತವೆ. ಈ ಬಗ್ಗೆ ಕಾರ್ಮಿಕ ಇಲಾಖೆ, ಕೈಗಾರಿಕಾ ಇಲಾಖೆ ಅಧಿಕಾರಿಗಳು ಆಗಿಂದಾಗ್ಗೆ ತಪಾಸಣೆಗಳನ್ನು ಕೈಗೊಳ್ಳಬೇಕೆಂದು ಸೂಚನೆ ನೀಡಿದರು.

ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಿ

ಮಾದಕ ದ್ರವ್ಯಗಳ ಸೇವನೆಗೆ ಒಳಗಾದಲ್ಲಿ ಅದರಿಂದ ಹೊರ ಬರುವುದು ಕಷ್ಟಸಾಧ್ಯ. ಈ ನಿಟ್ಟಿನಲ್ಲಿ ಮಾದಕ ವ್ಯಸನಗಳಿಂದ ದೂರ ಉಳಿಯುವಂತೆ ಮಾಡಲು ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಮಾದಕ ವ್ಯಸನದ ದುಷ್ಪರಿಣಾಮದ ಕುರಿತು ಪ್ರಬಂಧ, ಭಾಷಣ, ಚರ್ಚಾಕೂಟ, ಕಿರುನಾಟಕ ಸ್ಪರ್ಧೆಗಳನ್ನು ಪ್ರತೀ ತಿಂಗಳು ಆಯೋಜಿಸಬೇಕು ಎಂದರು.

17 ಶಾಲೆಗಳ ದೃಢೀಕರಣ ಬಾಕಿ

ಜಿಲ್ಲಾ ವ್ಯಾಪ್ತಿಯಲ್ಲಿ ಸಾರ್ವಜನಿಕ ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆಗಳು ಜಂಟಿಯಾಗಿ ಪ್ರತೀ ಶಾಲಾ– ಕಾಲೇಜುಗಳನ್ನು ಭೇಟಿ ಮಾಡಿ, ತಂಬಾಕು ಮುಕ್ತ ಶೈಕ್ಷಣಿಕ ಸಂಸ್ಥೆಯ ಮಾನದಂಡಗಳಿಗೆ ಬದ್ಧವಾಗಿರುವುದರ ಕುರಿತು ಪರಿಶೀಲಿಸಿ, ವರದಿ ನೀಡುವಂತೆ ಸೂಚಿಸಲಾಗಿತ್ತು. ಅದರಂತೆ ಜಿಲ್ಲೆಯಲ್ಲಿ ಒಟ್ಟು 1058 ಶಾಲೆಗಳಲ್ಲಿ 17 ಶಾಲೆಗಳು ತಂಬಾಕು ಮುಕ್ತ ಶೈಕ್ಷಣಿಕ ಸಂಸ್ಥೆ ಎಂದು ದೃಢೀಕರಿಸಿ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲು ಬಾಕಿ ಇದ್ದು, ಇದು ಪೂರ್ಣಪ್ರಮಾಣದಲ್ಲಿ ಆಗಬೇಕೆಂದರು.

ಜಿಲ್ಲಾ ಆಸ್ಪತ್ರೆ, ಸಾರ್ವಜನಿಕ ಆಸ್ಪತ್ರೆ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಡ್ರಗ್ಸ್ ಟೆಸ್ಟ್ ಕಿಟ್‌ಗಳನ್ನು ಕಡ್ಡಾಯವಾಗಿ ದಾಸ್ತಾನು ಇರಿಸಿಕೊಳ್ಳಬೇಕು. ವಸತಿ ನಿಲಯಗಳ ವಿದ್ಯಾರ್ಥಿಗಳಿಗೆ ಡ್ರಗ್ ಟೆಸ್ಟಿಂಗ್ ಕಿಟ್‌ಗಳ ಮೂಲಕ ಪರೀಕ್ಷೆ ನಡೆಸಬೇಕು ಎಂದ ಅವರು, ಮಾದಕ ವಸ್ತುಗಳ ಬಳಕೆಯ ಪ್ರಕರಣಗಳು ಪತ್ತೆಯಾದಲ್ಲಿ ಸಂಬಂಧಪಟ್ಟ ಹಾಸ್ಟೆಲ್ ವಾರ್ಡನ್ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

ಜಿಲ್ಲೆಯ ಕೆಲವು ಗ್ರಾಮ ಪಂಚಾಯತ್‌ಗಳ ಗ್ರಾಮಗಳನ್ನು ಈಗಾಗಲೇ ತಂಬಾಕು ಮುಕ್ತ ಗ್ರಾಮವನ್ನಾಗಿ ಘೋಷಿಸಲಾಗಿದೆ. ಉಳಿದ ಗ್ರಾಮಗಳನ್ನು ಸಹ ತಂಬಾಕು ಮುಕ್ತ ಗ್ರಾಮಗಳನ್ನಾಗಿಸಲು ಅಲ್ಲಿನ ಸ್ಥಳೀಯ ಸಂಸ್ಥೆಗಳು, ಗ್ರಾಮ ಪಂಚಾಯತ್‌ನ ಜನಪ್ರತಿನಿಧಿಗಳು ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಸಹಕಾರ ಪಡೆಯಬೇಕು ಎಂದರು.

104 ಕಡೆ ದಾಳಿ

ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ 104 ಕ್ಕೂ ಹೆಚ್ಚು ದಿಢೀರ್ ದಾಳಿಗಳನ್ನು ನಡೆಸಿ, ಸೆಕ್ಷನ್ 4, ಸೆಕ್ಷನ್ 6(ಎ) ಹಾಗೂ 6(ಬಿ) ಅಡಿಯಲ್ಲಿ ಒಟ್ಟು 1249 ಕ್ಕೂ ಹೆಚ್ಚು ಪ್ರಕರಣವನ್ನು ದಾಖಲಿಸಿಕೊಂಡು 2,18,050 ರೂ ದಂಡ ವಸೂಲಿ ಮಾಡಲಾಗಿದೆ. ಜಿಲ್ಲಾ ಆಸ್ಪತ್ರೆಯ ಆವರಣದಲ್ಲಿಯೂ ಸಹ ಕೋಟ್ಪಾ ಕಾಯಿದೆಯನ್ನು ಉಲ್ಲಂಘಿಸಿದ 173 ಪ್ರಕರಣಗಳಿಂದ 20,250 ರೂ. ದಂಡ ವಸೂಲಿ ಮಾಡಲಾಗಿದೆ ಎಂದ ಅವರು, ಜಿಲ್ಲೆಯಾದ್ಯಂತ ದಿಢೀರ್ ದಾಳಿಗಳ್ನು ಹೆಚ್ಚು ನಡೆಸುವುದರೊಂದಿಗೆ ಕೋಟ್ಪಾ ಕಾಯಿದೆಯ ಉಲ್ಲಂಘನೆಯಾಗದಂತೆ ನೋಡಿಕೊಳ್ಳಬೇಕು ಎಂದರು.

ಸಭೆಯಲ್ಲಿ ಪೊಲೀಸ್ ಅಧೀಕ್ಷಕ ಹರಿರಾಮ್ ಶಂಕರ್, ಎ.ಎಸ್.ಪಿ ಸುಧಾಕರ ನಾಯಕ್, ಡಿ.ಹೆಚ್.ಓ ಡಾ. ಬಸವರಾಜ ಹುಬ್ಬಳ್ಳಿ, ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ. ರಾಮರಾವ್, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ನಾರಾಯಣ ಸ್ವಾಮಿ, ವಿವಿಧ ಜಿಲ್ಲಾ ಮಟ್ಟದ ಅನುಷ್ಠಾನ ಅಧಿಕಾರಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ನವ ಮಂಗಳೂರು ಬಂದರು ಪ್ರಾಧಿಕಾರ ವತಿಯಿಂದ 'ಕಡಲ ಪ್ರತಿಕೂಲತೆಗಳು ಮತ್ತು ಪಾಲುದಾರರ ಪಾತ್ರ' ವಿಚಾರಸಂಕಿರಣ

ಎಂಆರ್‌ಪಿಎಲ್‌ನಲ್ಲಿ ಎಲ್‌ಪಿಜಿ ಉತ್ಪಾದನೆ ಶೇ.30ರಷ್ಟು ಹೆಚ್ಚಳ: ಪಿಳ್ಳೈ

◆ **ಮಂಗಳೂರು:** ಎಂಆರ್‌ಪಿಎಲ್‌ನಲ್ಲಿ ಎಲ್‌ಪಿಜಿ ಉತ್ಪಾದನೆಯನ್ನು ಶೇಕಡಾ 30ರಷ್ಟು ಏರಿಕೆ ಮಾಡಲಾಗಿದೆ ಎಂದು ಎಂಆರ್‌ಪಿಎಲ್ ನಿರ್ದೇಶಕ ನಂದಕುಮಾರ್ ವಿ. ಪಿಳ್ಳೈ ತಿಳಿಸಿದ್ದಾರೆ.



ನವ ಮಂಗಳೂರು ಬಂದರು ಪ್ರಾಧಿಕಾರ ವತಿಯಿಂದ ಮಂಗಳೂರಿನಲ್ಲಿ ಬುಧವಾರ ಆಯೋಜಿಸಿದ್ದ 'ಕಡಲ ಪ್ರತಿಕೂಲತೆಗಳು ಮತ್ತು ಪಾಲುದಾರರ ಪಾತ್ರ' ಎಂಬ ವಿಚಾರಸಂಕಿರಣದಲ್ಲಿ ಮಾತನಾಡಿದ ಅವರು, ಮಧ್ಯಪ್ರಾಚ್ಯ ದೇಶಗಳ ಯುದ್ಧ ಆರಂಭವಾದ ಬಳಿಕ ಇದೀಗ ಎಂಆರ್‌ಪಿಎಲ್ ತನ್ನ ಸಂಸ್ಕರಣಾಗಾರದ ಸಾಮರ್ಥ್ಯಕ್ಕಿಂತ ಶೇಕಡಾ 120ರಷ್ಟು ಹೆಚ್ಚು ಉತ್ಪಾದನೆ ನಡೆಸುತ್ತಿದೆ ಎಂದರು.

ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆ ಏರಿಕೆಯಾಗುತ್ತಿರುವುದು ಕಳವಳಕ್ಕೆ ಕಾರಣವಾಗಿದೆ. ಫೆಬ್ರವರಿಯಲ್ಲಿ ಕಚ್ಚಾತೈಲ ಬೆಲೆ ಬ್ಯಾರೆಲ್‌ಗೆ ಸುಮಾರು 69 ಯುಎಸ್ ಡಾಲರ್‌ಗಳಷ್ಟಿತ್ತು. ಈಗ 128 ಯುಎಸ್ ಡಾಲರ್‌ಗೆ ಏರಿದೆ. ಪರಿಣಾಮವಾಗಿ ಡೀಸೆಲ್ ಇಂದು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅತ್ಯಂತ ದುಬಾರಿ ಸರಕಾಗಿ ಮಾರ್ಪಟ್ಟಿದೆ. ದೇಶದ ಇಂಧನ ಬೇಡಿಕೆ ನೀಗಿಸುವ ನಿಟ್ಟಿನಲ್ಲಿ ಎಂಆರ್‌ಪಿಎಲ್ ಸಾಧ್ಯವಾದ ಎಲ್ಲ ಕಡೆಗಳಿಂದಲೂ ಕಚ್ಚಾ ತೈಲವನ್ನು ಪಡೆಯುತ್ತಿದೆ ಎಂದು ಅವರು ಹೇಳಿದರು.

10 ಲಕ್ಷ ಸಿಲಿಂಡರ್ ಹೆಚ್ಚಳ

ಇರಾನ್– ಇಸ್ರೇಲ್ ಯುದ್ಧಕ್ಕಿಂತ ಮೊದಲು ಎಂಆರ್‌ಪಿಎಲ್ ದಿನಕ್ಕೆ 35 ಲಕ್ಷ ಕೆ.ಜಿ. ಎಲ್‌ಪಿಜಿ ಉತ್ಪಾದನೆ ಮಾಡುತ್ತಿದ್ದರೆ, ಈಗ ದಿನಕ್ಕೆ 45 ಲಕ್ಷ ಕೆ.ಜಿ. ಅಂದರೆ 10 ಲಕ್ಷ ಸಿಲಿಂಡರ್‌ಗಳಷ್ಟು ಎಲ್‌ಪಿಜಿ ಉತ್ಪಾದಿಸುತ್ತಿದೆ.

■ **ನಂದಕುಮಾರ್ ವಿ. ಪಿಳ್ಳೈ,** ಎಂಆರ್‌ಪಿಎಲ್ ರಿಫೈನರಿಶ್ರಿ, ನಿರ್ದೇಶಕ

2025–26ನೇ ಅವಧಿಯಲ್ಲಿ ಎಂಆರ್‌ಪಿಎಲ್‌ಗಾಗಿ ಎನ್‌ಎಂಪಿಎ 346 ಹಡಗುಗಳನ್ನು ನಿರ್ವಹಿಸಿದ್ದು, ಮಾರ್ಚ್ 31ರ ಮಧ್ಯರಾತ್ರಿವರೆಗೆ 23.4 ಮಿಲಿಯನ್ ಟನ್ ಸರಕು ನಿರ್ವಹಿಸಿದೆ ಎಂದು ಅವರು ಹೇಳಿದರು.

ಮಧ್ಯಪ್ರಾಚ್ಯದ ಹಾರ್ಮುಜ್ ಜಲಸಂಧಿಯಲ್ಲಿ ಸುಮಾರು 3,000ದಷ್ಟು ಹಡಗುಗಳು ಅನುಮತಿಗಾಗಿ ಕಾಯುತ್ತಿವೆ.

ಅಲ್ಲಿನ ಬಂದರುಗಳಲ್ಲಿ ತೈಲ ಲಭ್ಯವಿದ್ದರೂ ಸಾಗಿಸಲು ಸಾಧ್ಯವಿಲ್ಲದ ಪರಿಸ್ಥಿತಿಯಿದೆ ಎಂದ ಅವರು, ಇದೀಗ ಕೆಂಪು ಸಮುದ್ರದಂತಹ ಪರ್ಯಾಯ ಮಾರ್ಗಗಳು ಕೂಡ ಬೆದರಿಕೆಗಳನ್ನು ಎದುರಿಸುತ್ತಿವೆ ಎಂದು ತಿಳಿಸಿದರು.

ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ಮಾತನಾಡಿ, ಮಾನವ ನಿರ್ಮಿತ ವಿಪತ್ತುಗಳು ಜಾಗತಿಕ ಪರಿಣಾಮಗಳನ್ನು ಬೀರುತ್ತವೆ ಎನ್ನುವುದಕ್ಕೆ ಈ ಯುದ್ಧ ಸಾಕ್ಷಿ ನೀಡಿದೆ. ಇಂಥ ಪರಿಸ್ಥಿತಿ ನಿಭಾಯಿಸಲು ಸಿದ್ಧತೆಗಳು ಅತ್ಯಗತ್ಯ ಎಂದು ಹೇಳಿದರು.

ಎನ್‌ಎಂಪಿಎ ಡೆಪ್ಯುಟಿ ಚೇರ್ಮನ್ ಎಸ್.ಶಾಂತಿ ಮತ್ತಿತರರು ಉಪಸ್ಥಿತರಿದ್ದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 32° 34° | ಉಡುಪಿ 31° 26°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಗುರುವಾರ 02, ಏಪ್ರಿಲ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU


ಪುಟ 2
ಶರವೂರು ಶ್ರೀ ಕ್ಷೇತ್ರಕ್ಕೆ ಪುಷ್ಪ ರಥ, ಪಲ್ಲಕ್ಕಿ ಸಮರ್ಪಣೆ


ಪುಟ 5
ಕುಂಬಳೆ ರೈಲು ನಿಲ್ದಾಣದ ಕ್ಯಾಂಟೀನ್ ಬಂದ್ ! ವಿದ್ಯಾರ್ಥಿಗಳಿಗೆ ಸಮಸ್ಯೆ

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ, ಶ್ರೀಕ್ಷೇತ್ರ ಶರವೂರು

ಅಂಚೆ:ಶರವೂರು,
ಆಲಂಕಾರು ಗ್ರಾಮ,
ಕಡಬ ತಾಲೂಕು.
ದ.ಕ. 574285



ಶರವೂರು ದೇವಾಲಯದಲ್ಲಿ ಇದೀಗ ಇರುವ ದೇವಿಯ ಮೂರ್ತಿಯು ಒಂದು ಸಾವಿರ ವರ್ಷಗಳ ಹಳೆಯದಾದ ಮೂರ್ತಿಯಾಗಿದೆ ಎಂದು ತಜ್ಞರ ಅಭಿಪ್ರಾಯವಾಗಿದೆ. 2007ರಲ್ಲಿ ಬ್ರಹ್ಮಕಲಶೋತ್ಸವ ನಡೆದಿತ್ತು. 19 ವರ್ಷಗಳ ಬಳಿಕ ಇದೀಗ ಸಂಪೂರ್ಣ ಶಿಲಾಮಯ ದೇವಾಲಯದ ಬ್ರಹ್ಮಕಲಶೋತ್ಸವ ನಡೆಯುತ್ತಿದೆ. ಸುಮಾರು 400 ವರ್ಷಗಳ ಹಿಂದೆ ನಿರ್ಮಾಣವಾದ ಗರ್ಭಗುಡಿಯನ್ನು ಸೀಮೆಯ ಭಕ್ತರ ಆಶಯದಂತೆ ಮತ್ತು ಸಂಪೂರ್ಣ ಸಹಕಾರದೊಂದಿಗೆ ನವೀಕರಿಸಿ ಗರ್ಭಗುಡಿಯನ್ನು ನಿರ್ಮಿಸಲಾಗಿದೆ. ದೇವಾಲಯದ ಕಾಮಗಾರಿಗಳು ಅಂತಿಮ ಹಂತದಲಿದ್ದು ಮಾ.25ರಿಂದ ಧಾರ್ಮಿಕ ವಿಧಿವಿಧಾನಗಳು ನಡೆದು ಇಂದು ಬ್ರಹ್ಮಕಲಶೋತ್ಸವ ನಡೆಯಲಿದೆ. ಏ.3ರಿಂದ ಏ.13 ವರೆಗೆ ಕ್ಷೇತ್ರದ ವಾರ್ಷಿಕ ಜಾತ್ರಾಮಹೋತ್ಸವ ನಡೆಯಲಿದೆ.





▸ ಸಾಕ್ಷಿ ಆಲಂಕಾರು

ಕಡಬ ತಾಲೂಕು ಆಲಂಕಾರು ಗ್ರಾಮದ ಅತೀ ಪುರಾತನವಾದ ಶರವೂರು ಶ್ರೀ ದುರ್ಗಾಪರಮೇಶ್ವರೀ ದೇವಾಲಯವು ಸಂಪೂರ್ಣ ಶಿಲಾಮಯವಾಗಿ ನವೀಕರಣಗೊಂಡು ಪುನಃ ಪ್ರತಿಷ್ಠಾಷ್ಟಬಂಧ ಬ್ರಹ್ಮಕಲಶೋತ್ಸವದ ಸಂಭ್ರಮದಲ್ಲಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಕಡಬ ತಾಲೂಕು ಆಲಂಕಾರು ಗ್ರಾಮದ ಕೇಂದ್ರದ ದಕ್ಷಿಣಕ್ಕಿರುವ ಶರವೂರು ದುರ್ಗಾಪರಮೇಶ್ವರೀ ಶ್ರೀ ದೇವಾಲಯ ಆಲಂಕಾರು. ಕುಂತೂರು, ಪೆರಾಬೆ, ಹಳೆನೇರಂಕಿ, ಬಲ್ಯ ಗ್ರಾಮಗಳನ್ನು ಒಳಗೊಂಡ ಈ ಸೀಮೆಯ ದೇವಾಲಯ. ಕುಮಾರಧಾರ ನದಿಯ ತಟದಿಂದ ಎರಡು ಕಿ.ಮೀ ಅಂತರದಲ್ಲಿ ಸುತ್ತಲು ವನಗಳಿಂದ ಆವೃತ್ತವಾದ ಈ ದೇವಾಲಯದಲ್ಲಿ ಭಕ್ತರ ಅಭೀಷ್ಟವನ್ನು ಈಡೇರಿಸುವ ಶೂಲಿನಿಯಾಗಿ ನೆಲೆಯಾಗಿ ನಿಂತಿರುವ ದೇವಿಯಾಗಿದೆ.

ಪಾಂಡವರ ವನವಾಸದ ಅಂತ್ಯದಲ್ಲಿ ಈ ಸ್ಥಳಕ್ಕೆ ಬಂದಿದ್ದರು. ಆ ಸಮಯಲ್ಲಿ ಪಾಂಡವರ ಪುರೋಹಿತರಾದ ಧೌಮ್ಯ ಮಹರ್ಷಿಗಳಿಗೆ ಇಲ್ಲಿನ ಸರೋವರದಲ್ಲಿ ದೇವಿಯ ಸಾಕ್ಷಾತ್ಕಾರವಾಗಿ ದೇವಿಯನ್ನು ಸರೋವರದಲ್ಲಿ ಪ್ರತಿಷ್ಠಿಸಿ ಆರಾಧನೆ ಮಾಡಿದರ ಪರಿಣಾಮ ಈ ಸ್ಥಳಕ್ಕೆ ಶರವೂರು ಎಂಬ ಹೆಸರು ಬಂದಿದೆ ಎಂಬ ನಂಬಿಕೆ. ಇನ್ನೊಂದು ಮೂಲದ ಪ್ರಕಾರ ಸದಾ ನೀರಿನ ಬುಗ್ಗೆ ಇರುವ ಪ್ರದೇಶದಲ್ಲಿ ದೇವಿಯ ಪ್ರತಿಷ್ಠೆಯಾಗಿರುವುದರಿಂದ ಈ ಸ್ಥಳಕ್ಕೆ ಸುರಃಪುರ, ಸರೋವರ –ಶರವೂರು ಎಂಬ ಹೆಸರು ಬಂದಿದೆ ಎನ್ನಲಾಗಿದೆ.



ದಕ್ಷಿಣ ಕನ್ನಡ ಜಿಲ್ಲೆಯಲ್ಲೆ ವಿರಳ ಹಾಗೂ ವಿಶಿಷ್ಟವಾದ ದ್ವಿಬಾಹುಯುಕ್ತ ಶೂಲಿ, ಪ್ರಧಾನ ಆಯುಧವಾಗಿ ಬಲಗೈಯಲ್ಲಿ ಶೂಲವನ್ನು, ಎಡ ಕೈಯಲ್ಲಿ ಪದ್ಮವನ್ನು, ಶಿರೋಭೂಷಣವನ್ನೂ ಧರಿಸಿರುವ ದೇವಿಯ ಕ್ಷೇತ್ರವಾಗಿದೆ. ಶಿಲ್ಪಕಲೆ ದೃಷ್ಟಿಯಿಂದಲೂ ಜೀವಂತಿಕೆಯಿಂದ ಕೂಡಿದ್ದು ಕ್ಷಣಕ್ಷಣಕ್ಕೂ ಭ್ರಮೆ ಹುಟ್ಟಿಸುವ ಮುಖಚರ್ಯ ಇಲ್ಲಿನ ಶಿಲಾ ಮೂರ್ತಿಯ ವೈಶಿಷ್ಟ. ಪುರಾಣ ದೇವತಾಖ್ಯಾನದ ಮೇಲೆ ವಿಶ್ಲೇಷಿಸಿದ್ದರೆ ಈ ಮೂರ್ತಿ ಸಪ್ತ ಮಾತೃಕೆಯರಲ್ಲಿ ಒಬ್ಬಳಾದ ಕೌಮಾರಿಯ ಅಧಿಕಾಂಶವನ್ನು ವ್ಯಕ್ತಪಡಿಸುವ ಶೂಲಿನಿ ಎನ್ನ ಬೇಕಾಗುತ್ತದೆ, ಕ್ರಿ. ಶ 12ನೇ ಶತಮಾನದಲ್ಲಿ ಶರವೂರು ದೇವಾಲಯದ ಕೌಮಾರಿ ಸ್ವರೂಪಿ ಶೂಲಿನಿಯು ಪ್ರತಿಷ್ಠೆಯಾಗಿದೆ ಎನ್ನಬಹುದಾಗಿದೆ. ಈ ವಿಚಾರವನ್ನು ಸಮರ್ಥಿಸಲು ಸಿಗುವ ಕೆಲವೊಂದು ನಿದರ್ಶನಗಳಿವೆ. ಸುಳ್ಯ ತಾಲೂಕು ಬೆಳ್ಳಾರೆ ಸಮೀಪ ಇರುವ ಪೆರುವಾಜೆ ಶ್ರೀ ಜಲದುರ್ಗಾ ದೇವಿ ಹಾಗೂ ಎಡಮಂಗಲ ಸಮೀಪ ಇರುವ ಕೇರ್ಪಟ ಶ್ರೀ ವನದುರ್ಗಾ ದೇವಿ ಮತ್ತು ಶರವೂರು ಶೂಲಿನಿ ಅಕ್ಕತಂಗಿಯರು ಎಂಬ ಪ್ರತೀತಿ ಇತಿಹಾಸಗಳಿಂದ ತಿಳಿದು ಬರುತ್ತದೆ. ಶರವೂರು ದೇವಿಯ ಜಾತ್ರೆ ಹಾಗೂ ಪೆರುವಾಜೆ ಮತ್ತು ಕೇರ್ಪಡ ದೇವಿಯ ಜಾತ್ರೆಯು ಏಕಕಾಲದಲ್ಲಿ ಮೀನ ಸಂಕ್ರಮಣದಂದು ಆರಂಭವಾಗುತ್ತಿತ್ತು. ಹಾಗೂ ಶಾಂತಿಮೊಗರು ಕುಮಾರಧಾರ ನದಿಯಲ್ಲಿ ಅವಭೃತ ದಿನ ಒಟ್ಟು ಸೇರುತ್ತಿದ್ದರು ಎಂಬ ಅಂಬೋಣವಾಗಿದೆ.

ಕ್ಷೇತ್ರದ ಸಾನಿಧ್ಯಗಳು ಹಾಗೂ ಸೇವೆಗಳು

ಕ್ಷೇತ್ರದಲ್ಲಿ ದುರ್ಗಾಪರಮೇಶ್ವರೀ ದೇವಿ ಮೂಲ ಆರಾಧನಾ ದೇವಿಯಾಗಿದ್ದು ಇದರೊಂದಿಗೆ ಮಹಾಗಣಪತಿ, ಲಕ್ಷ್ಮೀನಾರಾಯಣ, ಚಾಮುಂಡಿ, ಗಂಗಾದೇವಿ, ನಾಗಸಾನಿಧ್ಯ, ಭದ್ರಕಾಳಿ, ಗುಳಿಗ, ಅರಸು ಉಳ್ಳಾಯ, ರಕ್ತೇಶ್ವರೀ, ಧೂಮಾವತಿ, ಧೂಮಾವತಿ ಬಂಟ, ಕೊಡಮಣಿತ್ತಾಯ, ಮಹಿಷಂತಾಯ ಮುಂತಾದ ಸಾನಿಧ್ಯಗಳಿದ್ದು, ಮಕರ ಸಂಕ್ರಾತಿಗೆ ದೊಡ್ಡ ರಂಗಪೂಜೆ, ಸತ್ಯನಾರಾಯಣ ಪೂಜೆ, ಮೀನ ಸಂಕ್ರಮಣದಂದು(ಮಾ.14ರಂದು) ವಾರ್ಷಿಕ ಜಾತ್ರೋತ್ಸವದ ಧ್ವಜಾರೋಹಣ, ಮಾ.21 ದರ್ಶನ ಬಲಿ, ಮಾ. 22.ರಂದು ಮಹಾರಥೋತ್ಸವ ಮಾ.24 ಭದ್ರಕಾಳಿ ಅಮ್ಮನ ಪೂಜೆ, ವಿಷು ಹಾಗೂ ಪತ್ತನಾಜೆ ದಿನದಂದು ವಸಂತ ಪೂಜೆ, ನವರಾತ್ರಿ ಪೂಜೆಗಳು ಹಾಗೂ ದೀಪಾವಳಿಯ ದಿನದಂದು ರಂಗ ಪೂಜೆ ಮತ್ತು ಸಂಕ್ರಾತಿ ವಿಶೇಷ ಪೂಜಾ ಸೇವೆಗಳು ಕ್ಷೇತ್ರದಲ್ಲಿ ನಡೆಯುತ್ತದೆ.

ನಾನು ನನ್ನದು ನನ್ನಿಂದಾದುದು ಇಲ್ಲಿ ನಡೆಯೋಲ್ಲ !

ಶೂಲ ಮತ್ತು ಪದ್ಮವನ್ನು ಧರಿಸಿದ ಎರಡು ಕೈಗಳ ದುರ್ಗೆ ಇರುವುದು ಈ ಕ್ಷೇತ್ರದ ವಿಶೇಷತೆಯಾಗಿದೆ. ಒಂದು ಕೈಯಲ್ಲಿ ಶೂಲವನ್ನು ಹಿಡಿದುಕೊಂಡು ದುಷ್ಟರಿಗೆ ತಾನು ಶೂಲದಲ್ಲಿ ಉತ್ತರಿಸುವೆ ಸಜ್ಜನರನ್ನು ಪದ್ಮದಂತೆ ಕೋಮಲವಾಗಿ ಇರುತ್ತೇನೆ ಎಂಬುವುದನ್ನು ಸೂಚಿಸುತ್ತದೆ. ನಾನು ನನ್ನದು ನನ್ನಿಂದಾದು ಎಂದು ಅಹಂಕಾರದಿಂದ ಮೆರೆದಾಡಿದವರನ್ನು ಸುದ್ದಿಯಿಲ್ಲದೆ ಸದ್ದಡಗಿಸಿದ ಹಲವು ನಿದರ್ಶನಗಳು ದೇವಿಯ ಸೀಮೆಯಲ್ಲಿ ಘಟಿಸಿವೆ. ಕ್ಷೇತ್ರದಲ್ಲಿ ಬಂದು ನೀರಿಗಾಗಿ ಗಂಗಾ ದೇವಿ ರಂಗ ಪೂಜೆ ಅಥವಾ ತಂಬಿಲ ಸೇವೆಯನ್ನು ನೀಡುವುದಾಗಿ ಪ್ರಾರ್ಥಿಸಿದರೆನೀರು ಪ್ರಾಪ್ತಿಯಾಗುವುದು. ಕಂಕಣ ಭಾಗ್ಯಕ್ಕಾಗಿ ದೇವಿಗೆ ಸೇವೆಯನ್ನು ನೀಡುವುದಾಗಿ ಸಂತಾನ ಪ್ರಾಪ್ತಿಗೆ ತೊಟ್ಟಿಲ ಮಗು (ಬೆಳ್ಳಿಯ ತೊಟ್ಟಿಲು ಚಿನ್ನದ ಮಗು) ಸೇವೆಯನು ನೀಡುವುದಾಗಿ ಪ್ರಾರ್ಥಿಸಿದರೆ ವರುಷ ಕಳೆಯುವುದರೋಳಗೆ ತಾಯಿ ಕರುಣಿಸುವುದು ಕ್ಷೇತ್ರದ ವಿಶೇಷತೆಯಾಗಿದೆ.



• **ಡಾ. ಹೇಮಂತ್ ರೈ ಮನವಳಿಕೆಗುತ್ತು**
ಅಧ್ಯಕ್ಷರು ಅಭಿವೃದ್ಧಿ ಸಮಿತಿ

ಅಷ್ಟಮಂಗಲ ಪ್ರಶ್ನೆಯಲ್ಲಿ ಶರವೂರು ದೇವಿಯ ಕ್ಷೇತ್ರವನ್ನು ನವೀಕರಣಗೊಂಡು ಪುನರ್ ಪ್ರತಿಷ್ಟಾಬಂಧ ಬ್ರಹ್ಮಕಲಶೋತ್ಸವ ನಡೆಸಬೇಕೆಂದು ತಿಳಿದು ಬಂದ ಹಿನ್ನೆಲೆಯಲ್ಲಿ ಈ ಮಹತ್ವದ ಕಾರ್ಯಕ್ಕೆ ಇಳಿದಿದ್ದೇವೆ. ಇದರೊಂದಿಗೆ ಗಂಗಾ ದೇವಿ, ಮೊಗೇರ ದೈವ, ಕೊರಗಜ್ಜನ ಕಟ್ಟೆ ಸೇರಿದಂತೆ ಅತಿಥಿ ಗೃಹ ರಾಜಗೋಪುರ, ಸ್ವಾಗತ ಗೋಪುರ ನಿರ್ಮಾಣದ ಜೊತೆಗೆ ಇನ್ನಿತರ ಮೂಲಭೂತ ಸೌಕರ್ಯಗಳ ಕಾಮಗಾರಿಗಳು ನಡೆಯುತ್ತಿವೆ. ಕೇವಲ ಎರಡು ವರ್ಷಗಳ ಅಂತರದಲ್ಲಿ ಸುಮಾರು 10ಕೋಟಿ ವೆಚ್ಚದಲ್ಲಿ ಸಂಪೂರ್ಣ ಶಿಲಾಮಯ ದೇವಾಲಯವಾಗಿ ನಿರ್ಮಾಣವಾಗಿದೆ. ಅಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲೇ ಎರಡನೇ ಏಕಶಿಲಾ ಧ್ವಜಸ್ತಂಭದ ದೇವಾಲಯ ಇದಾಗಿದ್ದು ಇದೀಗ ಬ್ರಹ್ಮಕಲಶೋತ್ಸವಕ್ಕೆ ಸಿದ್ಧವಾಗಿ ನಿಂತಿದೆ.



• **ಯಂ. ಗೋಪಾಲಕೃಷ್ಣ ಪಡ್ಡಿಲ್ಲಾಯ**
ಅಧ್ಯಕ್ಷರು, ಬ್ರಹ್ಮಕಲಶೋತ್ಸವ ಸಮಿತಿ






ಸುತ್ತ ಮುತ್ತ

ಇಂದು ದಡ್ಡಲಕಾಡಿನಲ್ಲಿ ಬ್ರಹ್ಮಕಲಶ, ಸುಧರ್ಮಸಭೆ

ಬಂಟ್ವಾಳ: ತಾಲೂಕಿನ ಮೊಡನಡುಗೋಡು ಗ್ರಾಮದ ದಡ್ಡಲಕಾಡು-ದೇವಿನಗರ ಶ್ರೀ ಜಗದಂಬಿಕಾ ಶ್ರೀ ಮಹಮ್ಮಾಯಿ ಗುಳಿಗ ಅಣ್ಣಪ್ಪ ಕ್ಷೇತ್ರದ ನವೀಕರಣ ಪುನರ್ ಪ್ರತಿಷ್ಠಾ ಬ್ರಹ್ಮಕಲಶೋತ್ಸವ, ಶ್ರೀ ಚಂಡಿಕಾಯಾಗ ಹಾಗೂ ಸಪರಿವಾರ ದೇವರ ಬಿಂಬ ಪ್ರತಿಷ್ಠೆ ಮತ್ತು ಬ್ರಹ್ಮಕಲಶೋತ್ಸವ ಇಂದು (ಏ.2) ನಡೆಯಲಿದೆ. ಮಧ್ಯಾಹ್ನ 12.30ಕ್ಕೆ ಬಿಜೆಪಿ ನಾಯಕಿ ಸುಲೋಚನಾ ಜಿ.ಕೆ. ಭಟ್ ಅಧ್ಯಕ್ಷತೆಯಲ್ಲಿ ನಡೆಯುವ 'ಸುಧರ್ಮ ಸಭೆ'ಯಲ್ಲಿ ಬ್ರಹ್ಮಶ್ರೀ ಆನಂದ ಸಿದ್ಧಿ ಪೀಠಂನ ಮಹರ್ಷಿ ಆನಂದ ಗುರೂಜಿ, ಆರ್‌ಎಸ್‌ಎಸ್‌ನ ಹಿರಿಯ ಮುಖಂಡ ಡಾ.ಕೆ. ಪ್ರಭಾಕರ ಭಟ್, ಹೊಸದಿಗಂತ ಪತ್ರಿಕೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪಿ.ಎಸ್. ಪ್ರಕಾಶ್, ಸಂಸದ ಕ್ಯಾ. ಬ್ರಿಜೇಶ್ ಚೌಟ, ಮಾಜಿ ಸಂಸದ ನಳಿನ್ ಕುಮಾರ್ ಕಟೀಲು, ಶಾಸಕ ರಾಜೇಶ್ ನ್ಯಾಕ್ ಮತ್ತಿತರ ಗಣ್ಯರು ಭಾಗವಹಿಸುವರು. ಅಂದು ಸಂಜೆ ತಾಂಬೂಲ ಕಲಾವಿದರಿಂದ ತುಳು ನಾಟಕ ಪ್ರದರ್ಶನಗೊಳ್ಳಲಿದೆ.

ಬಪ್ಪನಾಡು ದೇವಳ: ಶ್ರೀ ದೇವರ ಬಲಿ ಉತ್ಸವ

ಮುಲ್ಕಿ: ಸೀಮೆಯ ಒಂಬತ್ತು ಮಾಗಣೆಯ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ಜಾತ್ರಾ ಮಹೋತ್ಸವದ ಅಂಗವಾಗಿ ಶ್ರೀ ದೇವರ ಬಲಿ ಉತ್ಸವ ಹಾಗೂ ಸಣ್ಣ ರಥೋತ್ಸವ, ಪಲ್ಲಕ್ಕಿ ಉತ್ಸವ ನಡೆಯಿತು. ಈ ಸಂದರ್ಭ ದೇವಸ್ಥಾನದ



ತಂತ್ರಿಗಳಾದ ಶಿಬರೂರು ಗೋಪಾಲಕೃಷ್ಣ ತಂತ್ರಿ, ಅರ್ಚಕ ಶ್ರೀಪತಿ ಉಪಾಧ್ಯಾಯ, ನರಸಿಂಹ ಭಟ್, ದೇವಸ್ಥಾನದ ಅನುವಂಶಿಕ ಮೊಕ್ತೇಸರ ದುಗ್ಗಣ್ಣ ಸಾವಂತ ಅರಸರು ಕಾರ್ಯನಿರ್ವಹಣಾಧಿಕಾರಿ ಶ್ವೇತಾ ಪಳ್ಳಿ, ಡಾ. ಹರಿಕೃಷ್ಣ ಪುನರೂರು, ಗೋಪಾಲಕೃಷ್ಣ ಭಟ್ ಹಾಗೂ ಪ್ರಸಾದ್ ಭಟ್, ಚಂದ್ರಶೇಖರ ಕಾಸಪ್ಪಯ್ಯನವರ ಮನೆ, ಕಿರಣ್ ಶೆಟ್ಟಿ ಕೋಲ್ನಾಡು ಗುತ್ತು ,ಅಶ್ವಿನ್ ಆಳ್ವ ಕುಬೆವೂರು,ಡಾ. ಹರಿಶ್ಚಂದ್ರ ಪಿ. ಸಾಲ್ಯಾನ್,ಸುಜಿತ್ ಸಾಲ್ಯಾನ್, ಚಂದ್ರಶೇಖರ ಸುವರ್ಣ, ರಮೇಶ್ ಅಮೀನ್ ಕೊಕ್ಕರಕಲ್, ದಿನೇಶ್ ಹೆಗ್ಡೆ ಮಾನಂಪಾಡಿ, ಸತೀಶ್ ಶೆಟ್ಟಿ ಪೇಟೆ ಮನೆ, ನಾಗೇಶ್ ಬಪ್ಪನಾಡು, ಅಕೌಂಟೆಂಟ್ ಶಿವಶಂಕರ್, ಕಾರ್ತಿಕ್ ಕೋಟ್ಯಾನ್ ಮತ್ತಿತರರು ಉಪಸ್ಥಿತರಿದ್ದರು

ಗ್ಯಾಸ್ ದರ ಹೆಚ್ಚಳ: ರಿಕ್ಷಾ ಚಾಲಕರಿಂದ ಪ್ರತಿಭಟನೆ

ಬಂಟ್ವಾಳ: ಬಿ.ಸಿ.ರೋಡಿಗೆ ಸಮೀಪ ಆಟೋ ಗ್ಯಾಸ್ ಪಂಪ್‌ವೊಂದರಲ್ಲಿ ನಿಗದಿತ ದರಕ್ಕಿಂತ ಹೆಚ್ಚುವರಿ ಹಣ ವಸೂಲಿ ಮಾಡಲಾಗುತ್ತಿದೆ ಎಂದು ಆರೋಪಿಸಿ ರಿಕ್ಷಾ ಚಾಲಕರು ಹಠಾತ್ ಪ್ರತಿಭಟನೆ ನಡೆಸಿದರು. ಇದೇ ಗ್ಯಾಸ್ ಪಂಪ್ ಮುಂದೆ ರಿಕ್ಷಾ ಚಾಲಕರು 2ನೇ ಬಾರಿಗೆ ಪ್ರತಿಭಟನೆ ನಡೆಸುವುದಾಗಿದೆ. ಈ ಆಟೋ ಗ್ಯಾಸ್ ಪಂಪ್‌ನಲ್ಲಿ ಸರಕಾರ ನಿಗದಿ ಪಡಿಸಿರುವ ದರಕ್ಕಿಂತ ದುಪ್ಪಟ್ಟು ಹಣ ಪಡೆಯುವುದಲ್ಲದೇ, ಚಾಲಕರೊಂದಿಗೆ ಅಲ್ಲಿನ ಸಿಬ್ಬಂದಿಗಳ ದರ್ಪದಿಂದ ವರ್ತಿಸುತ್ತಿದ್ದಾರೆಂದು ಚಾಲಕರು ಆರೋಪಿಸಿದ್ದಾರೆ. ವಾರದ ಹಿಂದೆಯಷ್ಟೇ ಹೆಚ್ಚುವರಿ ಹಣ ಪಡೆಯುತ್ತಿರುವ ಹಿನ್ನಲೆಯಲ್ಲಿ ರಿಕ್ಷಾ ಚಾಲಕರು ಪ್ರತಿಭಟನೆ ನಡೆಸಿದ್ದು ಪೊಲೀಸರ ಮಧ್ಯಪ್ರವೇಶದಿಂದ ಪರಿಸ್ಥಿತಿ ತಿಳಿಯಾಗಿತ್ತು. ಬುಧವಾರ ಮತ್ತೆ ಗ್ಯಾಸ್ ದರದಲ್ಲಿ ಗೊಂದಲಗಳು ಮೂಡಿದ್ದು, ಚಾಲಕರು ಪಂಪ್‌ನ ಮುಂದೆ ಸರತಿ ಸಾಲಿನಲ್ಲಿ ರಿಕ್ಷಾಗಳನ್ನು ನಿಲ್ಲಿಸಿ ಪ್ರತಿಭಟಿಸಿದರು. ಸುದ್ದಿ ತಿಳಿದ ಬಂಟ್ವಾಳ ನಗರ ಪೊಲೀಸರು ಸ್ಥಳಕ್ಕಾಗಮಿಸಿ ದರದ ವಿಚಾರಕ್ಕೆ ಸಂಬಂಧಿಸಿ ಅಧಿಕಾರಿಗಳನ್ನು ಸ್ಥಳಕ್ಕೆ ಕರೆಯಿಸಿ ಮಾತುಕತೆ ಮೂಲಕ ಸಮಸ್ಯೆ ಪರಿಹರಿಸುವ ಬಗ್ಗೆ ಭರವಸೆ ನೀಡಿದರು.ಬಳಿಕ ಪ್ರತಿಭಟನೆ ಹಿಂತೆಗೆದುಕೊಂಡರು.

ಶರವೂರು ಶ್ರೀ ಕ್ಷೇತ್ರಕ್ಕೆ ಪುಷ್ಪ ರಥ, ಪಲ್ಲಕ್ಕಿ ಸಮರ್ಪಣೆ | ವಿಶ್ವಪ್ರಸನ್ನತೀರ್ಥ ಶ್ರೀ ಸಂದೇಶ

ಧಾರ್ಮಿಕ ಕಾರ್ಯಗಳಿಂದ ಹಿಂದುಗಳಲ್ಲಿ ಒಗ್ಗಟ್ಟು



ಆಲಂಕಾರು: ಸನಾತನ ಹಿಂದೂ ಧರ್ಮದ ಪ್ರೇರಣೆಯಂತೆ ಪರಸ್ಪರ ಹೊಂದಾಣಿಕೆ ಪ್ರೀತಿ ವಿಶ್ವಾಸಗಳೊಂದಿಗೆ ಸಮಾಜ ಮುಖಿ ಕಾರ್ಯಗಳನ್ನು ನಡೆಸಲು ಧಾರ್ಮಿಕ ಶ್ರದ್ಧಾ ಕೇಂದ್ರಗಳು ಪ್ರೇರೇಪಿಸುತ್ತದೆ ಎಂದು ಜಗದ್ಗುರು ಶ್ರೀ ಮಧ್ವಾಚಾರ್ಯ ಮೂಲ ಮಹಾಸಂಸ್ಥಾನಂ ಪೇಜಾವರ ಅಧೋಕ್ಷಜ ತೀರ್ಥ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರು ಹೇಳಿದರು.

ಅವರು ಬುಧವಾರ ಬ್ರಹ್ಮಕಲಶೋತ್ಸವ ಸಂಭ್ರಮದಲ್ಲಿರುವ ಶರವೂರು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನಕ್ಕೆ ದೇವಾಡಿಗ ಸುಧಾರಕರ ಸಂಘ ಆಲಂಕಾರು ಕಡಬ ವಲಯ ಹಾಗೂ ಸಮಸ್ತ ದೇವಾಡಿಗ ಬಂಧುಗಳಿಂದ ಸಮರ್ಪಿಸಿದ ಪುಷ್ಪ ರಥ ಹಾಗೂ ಪಲ್ಲಕ್ಕಿಯನ್ನು ಶ್ರೀ ಕ್ಷೇತ್ರಕ್ಕೆ ಸಮರ್ಪಿಸಿ ಬಳಿಕ ನಡೆದ ಧಾರ್ಮಿಕ ಸಭೆಯನ್ನುದ್ದೇಶಿಸಿ ಆಶೀರ್ವಚನ ನೀಡಿ, ಗ್ರಾಮದ ದೇವಾಲಯಗಳು ಅಭಿವೃದ್ಧಿಯಾದರೆ ಇಡೀ ಗ್ರಾಮವೇ ಉದ್ಧಾರವಾದಂತೆ. ನಾಡಿನ ಜನತೆ ಹಾಗೂ ಹಿಂದೂ ಧರ್ಮವನ್ನು ಒಂದುಗೂಡಿಸುವ ಮಹತ್ತರ ಕಾರ್ಯ ದೇವಾಲಯಗಳಿಂದ ಮಾತ್ರ ಸಾಧ್ಯ ಎಂದು ಶ್ರೀಗಳು ಸಂದೇಶ ನೀಡಿದರು.



ಕಾಣಿಯೂರು ಮಠದ ಶ್ರೀ ವಿದ್ಯಾವಲ್ಲಭತೀರ್ಥ ಶ್ರೀಗಳು ಆಶೀರ್ವಚನ ನೀಡಿದರು.

ಮುಖ್ಯ ಅತಿಥಿ ಪುತ್ತೂರು ಕೊಂಬೆಟ್ಟಿನ ರಾಮಕೃಷ್ಣ ಪ್ರೌಢ ಶಾಲಾ ಸಂಚಾಲಕ ಕಾವು ಹೇಮನಾಥ ಶೆಟ್ಟಿ ಮಾತನಾಡಿ, ಶುಭ ಹಾರೈಸಿದರು.

ಹೃದಯ ಶ್ರೀಮಂತಿಕೆಗೆ ಸಾಕ್ಷಿ

ಮುಂಬೈ ದೇವಾಡಿಗ ಸಂಘದ ಅಧ್ಯಕ್ಷ ರವಿ ದೇವಾಡಿಗ ಮಾತನಾಡಿ, ದೇವಾಡಿಗ ಸಂಘದ ಮೂಲಕ ಪೊಳಲಿ, ನಂದಾವರ ಮತ್ತು ಇದೀಗ ಶರವೂರು ದೇವಾಲಯಗಳಿಗೆ ರಥವನ್ನು ಕೊಡುಗೆಯಾಗಿ ನಮ್ಮ ಸಂಘ ನೀಡಿದೆ. ಇದು ನಮ್ಮ ಸಮಾಜದ ಬಂಧುಗಳ ಹೃದಯ ಶ್ರೀಮಂತಿಕೆ ತೋರ್ಪಡಿಸುತ್ತದೆ ಎಂದರು.

ದೇವಾಲಯದ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಡಾ. ಹೇಮಂತ್ ರೈ ಮನವಳಿಕೆಗುತ್ತು ಅಧ್ಯಕ್ಷತೆ ವಹಿಸಿದ್ದರು. ದೇವಾಲಯದ ಪವಿತ್ರಪಾಣಿ ಎನ್. ಹರೀಶ ಆಚಾರ್ಯ ನಗ್ರಿಗುತ್ತು ಶುಭ ಹಾರೈಸಿದರು. ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ಎಂ. ಗೋಪಾಲಕೃಷ್ಣ ಪಡ್ಡಿಲ್ಲಾಯ, ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಕೆ. ಸುಬ್ರಹ್ಮಣ್ಯ ರಾವ್, ಮಾಜಿ ಶಾಸಕಿ ಶಕುಂತಳಾ ಟಿ. ಶೆಟ್ಟಿ ದೇವಾಡಿಗ ಸುಧಾರಕರ ಸಂಘ ಆಲಂಕಾರು ಕಡಬ ವಲಯದ ಅಧ್ಯಕ್ಷ ಆದ್ಯಕ ಎನ್. ರಾಮಚಂದ್ರ ದೇವಾಡಿಗ ನಗ್ರಿ, ಕೆಯ್ಯೂರು ಶ್ರೀ ಮಹಿಷಮರ್ದಿನಿ ದುರ್ಗಾಪರಮೇಶ್ವರೀ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಎ.ಕೆ. ಜಯರಾಜ್ ರೈ, ಆಲಂಕಾರು ಶ್ರೀ ದುರ್ಗಾಂಬ ಅಲಂಕಾರ ಸಮಿತಿ ಅಧ್ಯಕ್ಷ ಗಣರಾಜ್ ಕೆ., ದೇವಾಡಿಗ, ನಿವೃತ್ತ ಅಧ್ಯಾಪಕ ನಾಗಪ್ಪ ಗೌಡ ಮರುವಂತಿಲ, ನಾಟಿ ವೈದ್ಯ ಪ್ರಶಾಂತ ದೇವಾಡಿಗ ಅಳದಂಗಡಿ, ಕರ್ನಾಟಕ ರಾಜ್ಯ ದೇವಾಡಿಗರ ಸಂಘದ ಅಧ್ಯಕ್ಷ ಅಶೋಕ್ ಮ್ಯೊಲಿ, ಶ್ರೀ ದುರ್ಗಾಂಬ ಕಲಾ ಸಂಗಮದ ಅಧ್ಯಕ್ಷ ಚಂದ್ರ ದೇವಾಡಿಗ, ರಾಮಕುಂಜೇಶ್ವರ ವಿದ್ಯಾ ಸಂಸ್ಥೆಯ ರಾಮಕುಂಜ ಕಾರ್ಯದರ್ಶಿ ರಾಧಾಕೃಷ್ಣ ಕುವೆಚ್ಚಾರು, ದೇವಾಲಯದ ಅಭಿವೃದ್ಧಿ ಸಮಿತಿ ಸದಸ್ಯ ಭಾಸ್ಕರ ಗೌಡ ಇಡಾಲ, ಪುರಂದರ ರೈ ಸಬಲೂರು ಇದ್ದರು.

ರಾಜ್ಯ ಪ್ರಶಸ್ತಿ ವಿಜೇತ ಅಣ್ಣು ದೇವಾಡಿಗ ಧರ್ಮಸ್ಥಳ ಹಾಗೂ ಪ್ರಶಾಂತ್ ದೇವಾಡಿಗ ಅವರನ್ನು ಸನ್ಮಾನಿಸಲಾಯಿತು. ಉಪನ್ಯಾಸಕ ಗಣರಾಜ ಕುಂಬ್ಳೆ ಸ್ವಾಗತಿಸಿ, ಶಿಕ್ಷಕ ನಾರಾಯಣ ಭಟ್ ವಂದಿಸಿದರು. ಗಣೇಶ್ ಹಿರಿಂಜ ನಿರ್ವಹಿಸಿದರು. ಸಂಘದ ಕಾರ್ಯದರ್ಶಿ ಚಂದ್ರಶೇಖರ ದೇವಾಡಿಗ ಬಿ., ಕೋಶಾಧಿಕಾರಿ ಶಿವಾನಂದ ದೇವಾಡಿಗ, ಜೊತೆ ಕಾರ್ಯದರ್ಶಿ ಉಮೇಶ್ ದೇವಾಡಿಗ, ಉಪ ಕಾರ್ಯದರ್ಶಿ ಪ್ರೀತಮ್ ದೇವಾಡಿಗ, ಸಂಘಟನಾ ಕಾರ್ಯದರ್ಶಿ ಹರಿಶ್ಚಂದ್ರ ದೇವಾಡಿಗ, ಸಂಚಾಲಕ ಅಶೋಕ್ ಕುಮಾರ್ ಎನ್. ಸಹಕರಿಸಿದರು.

> ಕ್ಷೇತ್ರದ ಸಾನಿಧ್ಯ ಕಡಿಮೆಯಾದಾಗ ಬ್ರಹ್ಮಕಲಶ ನಡೆಸಿ ಮತ್ತೆ ಕ್ಷೇತ್ರದಲ್ಲಿ ಸಾನಿಧ್ಯ ಮರುಸ್ಥಾಪಿಸುವುದು ಬ್ರಹ್ಮಕಲಶದ ಮೂಲ ಉದ್ದೇಶ. ಬ್ರಹ್ಮಕಲಶ ಸೀಮೆಯ ಭಕ್ತರನ್ನು ಒಂದು ಗೂಡಿಸುವ ಜೊತೆಗೆ ಕ್ಷೇತ್ರದ ಮೇಲಿನ ಭಯ ಭಕ್ತಿಯನ್ನು ಇಮ್ಮಡಿಗೊಳಿಸುತ್ತದೆ.
> ● ಶ್ರೀ ವಿದ್ಯಾವಲ್ಲಭ ತೀರ್ಥ ಶ್ರೀ

ಕರ್ಮ ಶುದ್ಧದಲ್ಲಿ ಬದುಕು ಅಡಕ: ಕನ್ಯಾಡಿಯ ಬ್ರಹ್ಮಾನಂದ ಸರಸ್ವತಿ ಜೀ ಆಶೀರ್ವಚನ

ಆಲಂಕಾರು: ಧಾರ್ಮಿಕ ಶ್ರದ್ಧಾ ಕೇಂದ್ರಗಳು ಮತ್ತು ವಿದ್ಯಾಕೇಂದ್ರಗಳು ಗ್ರಾಮಗಳಲ್ಲಿ ರಾಜಕೀಯ ರಹಿತವಾಗಿ ಸಮರ್ಪಕವಾಗಿ ಕಾರ್ಯ ನಿರ್ವಹಿಸಿದರೆ ಗ್ರಾಮ ಸುಭಿಕ್ಷೆಯಿಂದ ಕೂಡಿರುತ್ತದೆ ಎಂದು ಧರ್ಮಸ್ಥಳದ ಕನ್ಯಾಡಿಯ ಶ್ರೀ ರಾಮ ಕ್ಷೇತ್ರ ಮಹಾಸಂಸ್ಥಾನಮ್‌ನ ಶ್ರೀ ಸ್ವಾಮಿ ಸದ್ಗುರು ಬ್ರಹ್ಮಾನಂದ ಸರಸ್ವತಿ ಜೀ ಮಹಾರಾಜ್ ಹೇಳಿದರು.



ಅವರು ಸೋಮವಾರ ಸಂಜೆ ಶರವೂರು ಶ್ರೀ ದುರ್ಗಾಪರಮೇಶ್ವರೀ ದೇವಾಲಯದ ಬ್ರಹ್ಮಕಲಶೋತ್ಸವ ಸಮಾರಂಭದ ಧಾರ್ಮಿಕ ಸಭೆಯಲ್ಲಿ ಆಶೀರ್ವಚನ ನೀಡಿದರು.

ಸನಾತನ ಹಿಂದೂ ಧರ್ಮವನ್ನು ವಿಶ್ವವೇ ಒಪ್ಪಿಕೊಂಡಿದೆ. ಇಂತಹ ಧರ್ಮದಲ್ಲಿ ಹುಟ್ಟಿದಕ್ಕೆ ನಾವು ಹೆಮ್ಮೆ ಪಡಬೇಕು. ಕರ್ಮ ಶುದ್ಧದಲ್ಲಿ ಬದುಕು ಅಡಕವಾಗಿದೆ. ಆತ್ಮ ಮತ್ತು ಪರಮಾತ್ಮನನ್ನು ಸೇರಿಸುವುದೇ ಯೋಗ, ಧ್ಯಾನವೇ ಖಾಯಿಲೆಗೆ ಔಷಧಿಯಾಗಿದೆ. ಭಗವತ್ ಚಿಂತನೆಯಿಂದ ಮಾತ್ರ ಜೀವನದಲ್ಲಿ ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ. ಭಗವಂತನಿಗೆ ಸಮರ್ಪಣಾ ಭಾವದಿಂದ, ನಿಷ್ಕಲ್ಮಶ ಮನಸ್ಸಿನಿಂದ ಸೇವೆ ಮಾಡಬೇಕು ಎಂದರು.

ದೀಪ ಪ್ರಜ್ವಲನೆ ನಡೆಸಿ ಸಭೆಯನ್ನು ಉದ್ಘಾಟಿಸಿದ ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಕಲ್ಲಡ್ಕ ಪ್ರಭಾಕರ ಭಟ್, ದೇವಸ್ಥಾನಗಳು ಸಮಾಜದ ಪರಿವರ್ತನೆಯ ಕೇಂದ್ರವಾಗಿದೆ. ಸಮಾಜದಲ್ಲಿ ಸಮಸ್ಯೆ ಬಂದಾಗ ದೇವಸ್ಥಾನ ಸಮಸ್ಯೆಗಳನ್ನು ಪರಿಹರಿಸುವ ಕೇಂದ್ರವಾಗಬೇಕು ಮತ್ತು ಧರ್ಮ ಜಾಗೃತಿಯಾಗಬೇಕು. ದೇವಸ್ಥಾನದಲ್ಲಿ ಧರ್ಮ ಗ್ರಂಥಗಳನ್ನು ಹೇಳಿ ಕೊಡುವ ಕೆಲಸ ಮಾಡಬೇಕು. ಸಶಕ್ತ ಹಿಂದೂ ಸಮಾಜ ನಿರ್ಮಾಣ ಮಾಡಬೇಕೆಂದರು.

ಅಧ್ಯಕ್ಷತೆ ವಹಿಸಿದ್ದ ಸುಳ್ಯ ಕ್ಷೇತ್ರದ ಶಾಸಕಿ ಭಾಗೀರಥಿ ಮುರುಳ್ಯ, ಒಂದು ಊರಿಗೆ ದೇವಸ್ಥಾನ ಮತ್ತು ಶಾಲೆ ಕಣ್ಣುಗಳಿದ್ದಂತೆ. ಶ್ರೀ ದೇವಿಗೆ ಭಕ್ತರೆಲ್ಲಾರೂ ಸಮಾನರು. ನಮ್ಮ ಶ್ರದ್ಧಾಕೇಂದ್ರಗಳು ರಾಜಕೀಯ ರಹಿತವಾಗಿ ಅಭಿವೃದ್ಧಿಯಾಗಬೇಕೆಂದರು. ಶ್ರೀ ಕ್ಷೇತ್ರ ಶರವೂರು ದುರ್ಗಾಪರಮೇಶ್ವರಿ ದೇವಸ್ಥಾನದ ಅಭಿವೃದ್ಧಿಗಾಗಿ ಶಾಸಕರ ಅನುದಾನದಲ್ಲಿ ರೂ.20 ಲಕ್ಷ ಅನುದಾನ, ಸಂಸದರ ವತಿಯಿಂದ ರೂ.10 ಲಕ್ಷ ಅನುದಾನ ನೀಡಿರುವುದಾಗಿ ತಿಳಿಸಿದರು.

ರೋಹಿತ್ ಚಕ್ರವರ್ತಿ ಅವರು ಭಾರತೀಯ ಬೌದ್ಧಿಕ ಪರಂಪರೆಯ ಕುರಿತು ಧಾರ್ಮಿಕ ಉಪನ್ಯಾಸ ನೀಡಿದರು. ವೆಂಕಟ್ ವಳಲಂಬೆ ಸುಳ್ಯ, ಆಲಂಕಾರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ರಮೇಶ ಭಟ್ ಉಪ್ಪಂಗಳ ಶುಭ ಹಾರೈಸಿದರು. ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಸುಬ್ರಹ್ಮಣ್ಯ ರಾವ್ ನಗ್ರಿ, ಶ್ರೀ ರಾಮಕುಂಜೇಶ್ವರ ದೇವಸ್ಥಾನದ ಉತ್ಸವ ಸಮಿತಿಯ ಅಧ್ಯಕ್ಷ ಮಾಧವ ಆಚಾರ್ಯ ಇಜ್ಜಾವು, ಆಲಂಕಾರು ಮೂರ್ತೆದಾರ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಮತ್ತು ಬ್ರಹ್ಮಕಲಶೋತ್ಸವದ ಸಮಿತಿಯ ಪ್ರಧಾನ ಕಾರ್ಯದರ್ಶಿ ಮುತ್ತಪ್ಪ ಪೂಜಾರಿ ನೈಯ್ಯಲ್ಗ, ನವಮಂಗಳೂರು ಪ್ರಾಧಿಕಾರದ ರಕ್ಷಿತ್ ಕೆ.ಎ. ಪೂಜಾರಿ, ನಿವೃತ್ತ ಯೋಧ ಶೀನಪ್ಪ ಕುಂಬಾರ, ಸೌತಡ್ಕ ಮಹಾಗಣಪತಿ ದೇವಸ್ಥಾನದ ಅಧ್ಯಕ್ಷ ಸುಬ್ರಹ್ಮಣ್ಯ ಶಬರಾಯ, ಮರ್ದಾಳ ಮಹಾತೋಬಾರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ರಾಧಾಕೃಷ್ಣ ಭಟ್ ಪಿಲಿಮಜಲು, ಪದಾಳ ಸುಬ್ರಹ್ಮಣ್ಯ ದೇವಸ್ಥಾನದ ಅಧ್ಯಕ್ಷ ನಡುಸಾರು ಉದಯಶಂಕರ ಭಟ್, ಶ್ರೀ ಕ್ಷೇತ್ರ ಶರವೂರು ವ್ಯವಸ್ಥಾಪನಾ ಸಮಿತಿಯ ಸದಸ್ಯ ವಾಸಪ್ಪ ಕೆದ್ದೊಟ್ಟೆ ಸ್ವಯಂಸೇವಾ ಸಮಿತಿಯ ಅಧ್ಯಕ್ಷ ಚೆನ್ನಪ್ಪ ಗೌಡ ಶರವೂರು, ಅಭಿವೃದ್ಧಿ ಸಮಿತಿ ಸದಸ್ಯ ಸದಾನಂದ ಕುಮಾರ್ ಮಡ್ಕೊಟ್ಟು ಮತ್ತಿತರರು ಉಪಸ್ಥಿತರಿದ್ದರು. ಹರ್ಷಿತಾ ನೈಯ್ಯಲ್ಗ ಪ್ರಾರ್ಥಿಸಿದರು. ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ಗೋಪಾಲಕೃಷ್ಣ ಪಡ್ಡಿಲ್ಲಾಯ ಸ್ವಾಗತಿಸಿ, ಅಭಿವೃದ್ಧಿ ಸಮಿತಿ ಅಧ್ಯಕ್ಷ ಡಾ. ಹೇಮಂತ್ ರೈ ಮನವಳಿಕೆಗುತ್ತು ವಂದಿಸಿ, ಗಣರಾಜ್ ಕುಂಬ್ಳೆ ಸರಿತಾ ಜನಾರ್ದನ್ ನಿರ್ವಹಿಸಿದರು.

ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ಕ್ಷೇತ್ರದ ಜಾತ್ರೆ

ಶ್ರೀದೇವಿ, ಶ್ರೀ ಭಗವತಿಯರ ಭೇಟಿ



ಮುಲ್ಕಿ: ಸೀಮೆಯ ಒಂಬತ್ತು ಮಾಗಣೆಯ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಜಾತ್ರಾ ಮಹೋತ್ಸವದ ಅಂಗವಾಗಿ ದೇವಸ್ಥಾನದ ತಂತ್ರಿ ಶಿಬರೂರು ಗೋಪಾಲಕೃಷ್ಣ ತಂತ್ರಿ, ಆತ್ತೂರು ಬೈಲು ರಾಘವೇಂದ್ರ ಉಡುಪ, ಅರ್ಚಕ ಶ್ರೀಪತಿ ಉಪಾಧ್ಯಾಯ, ನರಸಿಂಹ ಭಟ್ ನೇತೃತ್ವದಲ್ಲಿ ವಿಶೇಷ ಪ್ರಾರ್ಥನೆ ನಡೆದು ಶ್ರೀ ದೇವರ ಧ್ವಜಾರೋಹಣ ಹಾಗೂ ಶ್ರೀದೇವಿ ಮತ್ತು ಶ್ರೀ ಭಗವತಿಯರ ಭೇಟಿ, ಮಧ್ಯಾಹ್ನ ಮಹಾ ಅನ್ನಸಂತರ್ಪಣೆ ನಡೆಯಿತು.

ದೇವಸ್ಥಾನದ ಅನುವಂಶಿಕ ಮೊಕ್ತೇಸರ ದುಗ್ಗಣ್ಣ ಸಾವಂತ ಅರಸರು, ಮಾಜಿ ಸಚಿವ ಅಭಯ ಚಂದ್ರ ಜೈನ್,ಕಾರ್ಯನಿರ್ವಹಣಾಧಿಕಾರಿ ಶ್ವೇತಾ ಪಳ್ಳಿ ಸಸಿಹಿತ್ಲು, ಶ್ರೀ ಭಗವತಿ ದೇವಸ್ಥಾನದ ಅರ್ಚಕ ಅಪ್ಪು ಯಾನೆ ಶ್ರೀನಿವಾಸ ಪೂಜಾರಿ, ಡಾ. ಹರಿಕೃಷ್ಣ ಪುನರೂರು, ಜಾಗತಿಕ ಬಂಟರ ಸಂಘದ ಅಧ್ಯಕ್ಷ ಐಕಳ ಹರೀಶ್ ಶೆಟ್ಟಿ ಗೋಪಾಲಕೃಷ್ಣ ಭಟ್ ಹಾಗೂ ಪ್ರಸಾದ್ ಭಟ್, ಅಭಿವೃದ್ಧಿ ಸಮಿತಿಯ ಸುನಿಲ್ ಆಳ್ವ, ರಾಮಚಂದ್ರ ನಾಯಕ್ ಕೊಲ್ನಾಡುಗುತ್ತು,ಕಿರಣ್ ಶೆಟ್ಟಿ ಕೋಲ್ನಾಡು ಗುತ್ತು ,ಅಶ್ವಿನ್ ಆಳ್ವ ಕುಬೆವೂರು,ಡಾ. ಹರಿಶ್ಚಂದ್ರ ಪಿ ಸಾಲ್ಯಾನ್,ಸುಜಿತ್ ಸಾಲ್ಯಾನ್, ಚಂದ್ರಶೇಖರ ಸುವರ್ಣ, ರಮೇಶ್ ಅಮೀನ್ ಕೊಕ್ಕರಕಲ್ ,ದಿನೇಶ್ ಹೆಗ್ಡೆ ಮಾನಂಪಾಡಿ , ಸತೀಶ್ ಶೆಟ್ಟಿ ಪೇಟೆ ಮನೆ, ನಾಗೇಶ್ ಬಪ್ಪನಾಡು, ಅಕೌಂಟೆಂಟ್ ಶಿವಶಂಕರ್ , ಕಾರ್ತಿಕ್ ಕೋಟ್ಯಾನ್ ಮತ್ತಿತರರು ಉಪಸ್ಥಿತರಿದ್ದರು. ಜಾತ್ರೆ ಅಂಗವಾಗಿ ಏ.7.ರಂದು ಶ್ರೀದೇವರ ಹಗಲು ರಥೋತ್ಸವ, ರಾತ್ರಿ ಶಯನೋತ್ಸವ, ಏ.8ಕ್ಕೆ ಬೆಳಿಗ್ಗೆ ಕವಾಟೋದ್ಘಾಟನೆ, ರಾತ್ರಿ ಮಹಾರಥೋತ್ಸವ ನಡೆಯಲಿದೆ.

ರಜತ ಮಹೋತ್ಸವದ ಸಂಭ್ರಮದಲ್ಲಿ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ

ಪ್ರಸ್ತಕ ಸಾಲಿನಲ್ಲಿ ಒಟ್ಟು 7.27 ಕೋ.ರೂ. ನಿವ್ವಳ ಲಾಭ

ಪುತ್ತೂರು: 2001ರಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ಪ್ರಾರಂಭವಾದ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘವು 2025-26ರ ಆರ್ಥಿಕ ವರ್ಷಾಂತ್ಯಕ್ಕೆ ರೂ.7.27 ಕೋಟಿ ನಿವ್ವಳ ಲಾಭ ಗಳಿಸಿದೆ.

ಸಹಕಾರಿಯು ಆರ್ಥಿಕ ವರ್ಷಾಂತ್ಯಕ್ಕೆ ಸದಸ್ಯರಿಂದ ರೂ.10.29 ಕೋಟಿ ಪಾಲು ಬಂಡವಾಳ ಸಂಗ್ರಹಿಸಿದ್ದು, ರೂ.414 ಕೋಟಿ ಠೇವಣಾತಿಯನ್ನು ಸಂಗ್ರಹಿಸಿ ಶೇ.15.55 ಹಾಗೂ ರೂ.387 ಕೋಟಿ ಸಾಲವನ್ನು ವಿತರಿಸಿ ಶೇ.17.58 ಪ್ರಗತಿಯನ್ನು ದಾಖಲಿಸಿರುತ್ತದೆ. ಸಹಕಾರಿಯ ಒಟ್ಟು ವ್ಯವಹಾರ ರೂ.801 ಕೋಟಿ ಆಗಿದ್ದು, ಶೇ.16.50 ಪ್ರಗತಿಯಾಗಿರುತ್ತದೆ. ಸಾಲ ವಸೂಲಾತಿಯಲ್ಲಿ ಕೂಡ ಈ ವರ್ಷ ಗಣನೀಯ ಪ್ರಗತಿಯಾಗಿದ್ದು ನಿವ್ವಳ ಶೇ.0 ಎನ್‌ಪಿಎ ದಾಖಲಿಸಿದೆ. ಪ್ರಸ್ತುತ 52,431 ಸದಸ್ಯರನ್ನು ಹೊಂದಿರುವ ಸಹಕಾರಿಯು 20 ಶಾಖೆಗಳನ್ನು ಹೊಂದಿದ್ದು, ರೂ.42.16 ಕೋಟಿ ಸ್ವಂತ ನಿಧಿಯನ್ನು ಹೊಂದಿದೆ. ಮುಂದಿನ ದಿನಗಳಲ್ಲಿ ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ಶಾಖೆಗಳನ್ನು ವಿಸ್ತರಿಸುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ಸಹಕಾರಿಯ ಪೂರಕ ಸಂಸ್ಥೆಯಾದ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ ಮೂಲಕ ಅಶಕ್ತರಿಗೆ ನೆರವು, ಆರೋಗ್ಯ ಶಿಬಿರಗಳು, ಸಾವಯವ ಕೃಷಿ ತರಬೇತಿ, ಮಹಿಳಾ ಸಬಲೀಕರಣಕ್ಕಾಗಿ ವಿವಿಧ ಕಾರ್ಯಕ್ರಮ, ವಿದ್ಯಾರ್ಥಿಗಳಿಗೆ ಸ್ಕಾಲರ್ ಶಿಪ್ ಮುಂತಾದ ಸಾಮಾಜಿಕ ಸೇವಾ ಕಾರ್ಯಗಳನ್ನು ಮಾಡುತ್ತಿದ್ದು ಇದನ್ನು ಇನ್ನಷ್ಟು ಹೆಚ್ಚಿಸುವ ಯೋಜನೆಗಳನ್ನು ಹಮ್ಮಿಕೊಂಡಿರುತ್ತದೆ ಹಾಗೂ ಸಹಕಾರಿಯ ರಜತ ಮಹೋತ್ಸವವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಲು ಯೋಜನೆ ರೂಪಿಸಲಾಗಿದೆ.

ಸಹಕಾರಿ ಸಂಘದಲ್ಲಿ ಸದಸ್ಯರಿಗೆ ತ್ವರಿತ ಸೇವೆಯನ್ನು ನೀಡುವ ಸಲುವಾಗಿ ಸಿಬಿಎಸ್ ತಂತ್ರಜ್ಞಾನವನ್ನು ಅಳವಡಿಸಲಾಗಿದೆ. ಆಕರ್ಷಕ ಬಡ್ಡಿದರದಲ್ಲಿ ಠೇವಣಿಗಳ ಸ್ವೀಕಾರ, ವಿವಿಧ ಉದ್ದೇಶದ ಸಾಲಗಳು, ಜೀವವಿಮೆ ಹಾಗೂ ಸಾಮಾನ್ಯ ವಿಮೆಗಳು, ಪಾನ್ ಕಾರ್ಡ್, ಆಯ್ದ ಶಾಖೆಗಳಲ್ಲಿ ಸೇಫ್ ಲಾಕರ್ ಮುಂತಾದ ಸೌಲಭ್ಯವನ್ನು ಸದಸ್ಯರಿಗೆ ನೀಡಲಾಗುತ್ತಿದೆ, ಪ್ರಸ್ತುತ 400 ದಿನಗಳ ಸಾಮಾನ್ಯ ಸದಸ್ಯರ ಠೇವಣಿಗೆ ಶೇ.9.60 ಮತ್ತು ವಿಶೇಷ ಠೇವಣಿಗಳಿಗೆ ಶೇ.10 ಬಡ್ಡಿದರ ನೀಡಲಾಗುತ್ತಿದೆ. ಇದರ ಸದುಪಯೋಗ ಪಡೆದುಕೊಂಡು ಸಹಕಾರಿ ಪ್ರಗತಿಯಲ್ಲಿ ಕೈ ಜೋಡಿಸುವಂತೆ ಸಹಕಾರಿಯ ಅಧ್ಯಕ್ಷ ಎಸ್.ಆರ್. ಸತೀಶ್ಚಂದ್ರ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಸಂತ ನಾಯಕ್ ಎ. ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸದಸ್ಯರ ಆಶೀರ್ವಾದ



> ರಜತ ಮಹೋತ್ಸವ ಆಚರಿಸುತ್ತಿರುವ ಸಹಕಾರಿಗೆ ರೂ.800 ಕೋ. ವ್ಯವಹಾರ ದಾಖಲಿಸಿದ ಗರಿಮೆ, ರೂ.7.27 ಕೋ. ನಿವ್ವಳ ಲಾಭ ಗಳಿಸಿರುವುದು ಸದಸ್ಯರ ಆಶೀರ್ವಾದದ ಫಲ.
> ● ಎಸ್.ಆರ್. ಸತೀಶ್ಚಂದ್ರ, ಅಧ್ಯಕ್ಷರು

ಸಮಗ್ರ ಅಭಿವೃದ್ಧಿ



> ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ ಅಭಿವೃದ್ಧಿಗೆ ವೃತ್ತಿಪರ ಆಡಳಿತ ಮಂಡಲಿ, ಸಕ್ರಿಯ ಸದಸ್ಯರು ಮತ್ತು ದಕ್ಷ ಸಿಬ್ಬಂದಿ ವರ್ಗವೇ ಕಾರಣ.
> ● ವಸಂತ ನಾಯಕ್ ಎ, ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ

ದರ್ಶನ ಬಲಿ, ಬಟ್ಟಲು ಕಾಣಿಕೆ, ಪೇಟೆ ಸವಾರಿ ಸಂಪನ್ನ

ಆತೂರು ಶ್ರೀಕ್ಷೇತ್ರದ ಜಾತ್ರಾ ಗೌಜಿ



ಕಡಬ: ಕೊೖಲ ಗ್ರಾಮದ ಆತೂರು ಶ್ರೀ ಸದಾಶಿವ ಮಹಾಗಣಪತಿ ದೇವಸ್ಥಾನದ ವಾರ್ಷಿಕ ಜಾತ್ರೆ ಪ್ರಯುಕ್ತ ದೇವಸ್ಥಾನದಲ್ಲಿ ದೇವರ ದರ್ಶನ ಬಲಿ ಉತ್ಸವ ನಡೆಯಿತು.

ಬ್ರಹ್ಮಶ್ರೀ ಕೆಮ್ಮಿಂಜೆ ನಾಗೇಶ್ ತಂತ್ರಿಯವರ ನೇತೃತ್ವದಲ್ಲಿ ಧಾರ್ಮಿಕ ವಿಧಿ ವಿಧಾನಗಳು ನೆರವೇರಿದವು. ಬೆಳಗ್ಗೆ ಉತ್ಸವ ಆರಂಭ, ಮಧ್ಯಾಹ್ನ ದರ್ಶನ ಬಲಿ, ಬಟ್ಟಲು ಕಾಣಿಕೆ. ಮಹಾಪೂಜೆ, ಅನ್ನ ಸಂತರ್ಪಣೆ ನಡೆಯಿತು. ರಾತ್ರಿ ಬಲಿ ಹೊರಟು ಉತ್ಸವ, ಆನೆಗುಂಡಿಯವರೆಗೆ ಪೇಟೆ ಸವಾರಿ, ಆನೆಗುಂಡಿಯಲ್ಲಿ ಕೆರೆ ಉತ್ಸವ, ಕಟ್ಟೆ ಪೂಜೆ, ಆನೆಗುಂಡಿ ಬೂಡಿನಿಂದ ದುಗಲಾಯಿ ದೈವದ ಭಂಡಾರ ತಂದು ಬಳಿಕ ದೇವಸ್ಥಾನದಲ್ಲಿ ರಂಗಪೂಜೆ ನೆರವೇರಿತು.

ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ನೀರಜ್ ಕುಮಾರ್ ರೈ ಆರುವಾರ ಬಾಳಿಕೆ, ಸದಸ್ಯ ವಿಷ್ಣುಮೂರ್ತಿ ಬಡಕಿಲ್ಲಾಯ, ಸುನೀತ್ ರಾಜ್ ಶೆಟ್ಟಿ ಆರುವಾರ ಬಾಳಿಕೆ, ಯತೀಶ್ ಗುಂಡಿಜೆ, ಶ್ರೀಧರ ಪೂಜಾರಿ ತುಂಬೆತಡ್ಕ, ಸಂಜೀವ ಸುದೆಂಗಳ, ಗೋಪಾಲ ನಾಯ್ಕ ಸೀಗೆತ್ತಡಿ, ಸುಜಾತ ಜೆ. ಶೆಟ್ಟಿ ಬಡಿಲ, ಮೀನಾಕ್ಷಿ ಕೆ. ಮುಂಡೈಮಾರ್, ಮಾಜಿ ಅಧ್ಯಕ್ಷ ಯದುಶ್ರೀ ಆನೆಗುಂಡಿ, ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಶೀನಪ್ಪ ಗೌಡ ವಳಕಡಮ, ಉತ್ಸವ ಸಮಿತಿಯ ಅಧ್ಯಕ್ಷ ಧರ್ಣಪ್ಪ ಗೌಡ ಕೊರಿಕ್ಕಾರ್, ಮಾಜಿ ಅಧ್ಯಕ್ಷ ಚಂದ್ರಹಾಸ ರೈ ಪಾಂಡೇಲುಗುತ್ತು, ಉಪಾಧ್ಯಕ್ಷ ಮೋಹನ್‌ದಾಸ ಶೆಟ್ಟಿ ಬಡಿಲ, ಸಂಜೀವ ಗೌಡ ಪರಂಗಾಜೆ, ಶ್ರೀನಿವಾಸ ಗೌಡ ಪಲ್ಲಡ್ಕಪಟ್ಟೆ ರಾಜೀವ ಗೌಡ ಪೊಸಲಕ್ಕೆ ಗಣೇಶ್ ಏರ್ಮಡ್ಕ ಪ್ರಧಾನ ಕಾರ್ಯದರ್ಶಿ ಕೊರಗಪ್ಪ ಗೌಡ ಮುಂಡೈಮಾರ್, ಜೊತೆ ಕಾರ್ಯದರ್ಶಿ ಶಶಿಕುಮಾರ್ ಶೆಟ್ಟಿ ಅಂಬಾಬೀಡು, ಶಾಂತಾರಾಮ ಗೌಡ ಬೇಂಗದಪಡ್ಪು ಜೋತಿ ಕಲ್ಲಾಡಿ, ರಘುನಾಥ ಶೆಟ್ಟಿ ಕಲ್ಲಂಪಾಡಿ, ಉತ್ಸವ ಸಮಿತಿಯ ಸದಸ್ಯರಾದ ರವೀಂದ್ರ ಗೌಡ ಸಂಕೇಶ, ಉಮೇಶ್ ಬುಡಲ್ಲೂರು, ಪರಮೇಶ್ವರ ಗೌಡ ಸಬಳೂರು, ತಿಮ್ಮಪ್ಪ ಗೌಡ ಸಂಕೇಶ, ಗಂಗಾಧರ ಪರಂಗಾಜೆ, ಯತೀಶ್ ಮತ್ತೆ, ವಸಂತ ಪೊಸಲಕ್ಕೆ ರಮೇಶ್‌ದಾಸ್ ಕಲಾಯಿ, ಸುಧೀಶ್ ಪಟ್ಟೆ ಮೋಹನಚಂದ್ರ ಪಲ್ಲಡ್ಕ ನಾಗೇಶ್ ನೀಲಮೆ, ವಿಶ್ವನಾಥ ಪುತ್ಯೆ, ಜನಾರ್ಧನ ನಡುಗುಡ್ಡೆ ಪ್ರಕಾಶ್ ಕೆಮ್ಮಾರ, ಲಕ್ಷ್ಮಣ ಗೌಡ ಆನೆಗುಂಡಿ, ಕೃಷ್ಣಪ್ಪ ಗೌಡ ಕಾಯರಟ್ಟ ರುಕ್ಮಯ್ಯ ಗೌಡ ಕಾಯರಟ್ಟ ಮತ್ತಿತರರು ಉಪಸ್ಥಿತರಿದ್ದರು.

ಏ.12ರಂದು ಕದ್ರಿ ಶ್ರೀಕ್ಷೇತ್ರದಿಂದ ಕುತ್ತಾರು ಶ್ರೀಕ್ಷೇತ್ರಕ್ಕೆ 'ಪಾದಯಾತ್ರೆ'

ಉಳ್ಳಾಲ: ವಿಶ್ವ ಹಿಂದೂ ಪರಿಷತ್ ಉಳ್ಳಾಲ ಪ್ರಖಂಡ ವತಿಯಿಂದ ಹಿಂದೂ ಸಮಾಜದ ಐಕ್ಯತೆ ಮತ್ತು ಲೋಕ ಕಲ್ಯಾಣಾರ್ಥವಾಗಿ 6ನೇ ವರ್ಷದ ಕೊರಗಜ್ಜನ ಆದಿಕ್ಷೇತ್ರಕ್ಕೆ ನಮ್ಮ ನಡೆ ಪಾದಯಾತ್ರೆಯು ಏ.12ರಂದು ಕದ್ರಿ ಶ್ರೀ ಮಂಜುನಾಥೇಶ್ವರ ದೇವಸ್ಥಾನದಿಂದ ಕುತ್ತಾರು ದೆಕ್ಕಾಡು ಕೊರಗಜ್ಜನ ಕಟ್ಟೆಯವರೆಗೆ ನಡೆಯಲಿದೆ ಎಂದು ನಮ್ಮ ನಡೆ ಆಯೋಜನಾ ಸಮಿತಿ ಅಧ್ಯಕ್ಷ ಪ್ರವೀಣ್ ಕುತ್ತಾರ್ ಹೇಳಿದರು.

ತೊಕ್ಕೊಟ್ಟುವಿನ ಉಳ್ಳಾಲ ಪ್ರೆಸ್‌ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ಧಕ್ಕೆಯುಂಟು ಮಾಡುವಂತಹ ಪ್ರಕರಣಗಳು ನಿರಂತರವಾಗಿ ನಡೆಯುತ್ತಿತ್ತು. ಐದು ವರ್ಷಗಳ ಹಿಂದೆ ಜಿಲ್ಲೆಯ ವಿವಿಧೆಡೆ ಪ್ರತಿಭಟನೆ ನಡೆಸಿ ಬಳಿಕ ಹಿಂದೂ ಐಕ್ಯತೆಗಾಗಿ ಹಾಗೂ ಹಿಂದೂ ಧಾರ್ಮಿಕ ಶ್ರದ್ಧಾ ಕೇಂದ್ರಗಳಲ್ಲಿ ಅನ್ಯಾಯ ಎಸಗಿದವರಿಗೆ ತಕ್ಕ ಶಿಕ್ಷೆಯಾಗುವಂತೆ ಒತ್ತಾಯಿಸಿ, ಪಾದಯಾತ್ರೆಯನ್ನು ಆರಂಭಿಸಲಾಯಿತು. ಈ ಪಾದಯಾತ್ರೆಯು ಇದೀಗ ಆರನೇ ವರ್ಷಕ್ಕೆ ಪಾದಾರ್ಪಣೆಗೊಳ್ಳುತ್ತಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಭಾಗವಹಿಸುವ ನಿರೀಕ್ಷೆಯಿದೆ. ಬೆಳಿಗ್ಗೆ 6.30ರ ಸುಮಾರಿಗೆ ವಿ.ಹಿಂ.ಪ ಮುಖಂಡರು ಚಾಲನೆ ನೀಡಲಿರುವ ಪಾದಯಾತ್ರೆಯು ಕದ್ರಿ ಮಲ್ಲಿಕಟ್ಟೆ, ಪಂಪ್‌ವೆಲ್, ನೇತ್ರಾವತಿ ಸೇತುವೆ, ತೊಕ್ಕೊಟ್ಟು ಆಗಿ ಕುತ್ತಾರು ತಲುಪಲಿದೆ. ಸಮಾರೋಪ ಸಮಾರಂಭದಲ್ಲಿ ಕದ್ರಿ ಕ್ಷೇತ್ರದ ಅರ್ಚಕ ಕೃಷ್ಣ ಅಡಿಗ ಅವರು ಭಾಗವಹಿಸಲಿದ್ದಾರೆ ಎಂದರು.

ವಿಶ್ವ ಹಿಂದೂ ಪರಿಷತ್ ಉಳ್ಳಾಲ ನಗರ ಪ್ರಖಂಡದ ಅಧ್ಯಕ್ಷ ನಾರಾಯಣ ಕುಂಪಲ ಮಾತನಾಡಿ, ಕಳೆದ 6 ವರ್ಷದ ಹಿಂದೆ ಮಂಗಳೂರು ಸುತ್ತಮುತ್ತ ಧಾರ್ಮಿಕ ಕ್ಷೇತ್ರಗಳನ್ನು ಅಪವಿತ್ರಗೊಳಿಸಲು ಯತ್ನಿಸಿದಾಗ ಹಿರಿಯರು, ವಿಶ್ವ ಹಿಂದೂ ಪರಿಷತ್ ಕಾರ್ಯಕರ್ತರು ತಪ್ಪಿತಸ್ಥರಿಗೆ ಕಾನೂನಿನ ಪ್ರಕಾರ ಶಿಕ್ಷೆಯಾಗಬೇಕೆಂದು ಪ್ರತಿಜ್ಞೆ ಮಾಡಿ ಪಾದಯಾತ್ರೆ ಹಮ್ಮಿಕೊಂಡಿತ್ತು. ಈಗ ಪ್ರತೀ ವರ್ಷ ನಡೆಯುತ್ತಾ ಬಂದಿದೆ ಎಂದರು. ವಿಶ್ವಹಿಂದೂ ಪರಿಷತ್ ಮಂಗಳೂರು ಜಿಲ್ಲಾ ಸಹಕಾರ್ಯದರ್ಶಿ ಗುರುಪ್ರಸಾದ್ ಉಳ್ಳಾಲ್, ಉಳ್ಳಾಲ ನಗರ ಪ್ರಖಂಡದ ಉಪಾಧ್ಯಕ್ಷ ಪ್ರಭಾಕರ್ ಮಾಡೂರು, ಪ್ರಮುಖರಾದ ಆಶಿಕ್ ಗೋಪಾಲಕೃಷ್ಣ ಇದ್ದರು.

ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ ಶ್ರೀ ಕ್ಷೇತ್ರ ಶರವೂರು



ಅಂಚೆ: ಶರವೂರು, ಆಲಂಕಾರು ಗ್ರಾಮ, ಕಡಬ ತಾಲೂಕು, ದ.ಕ.– 574285

ದಿನಾಂಕ: 25.03.2026 ಬುಧವಾರದಿಂದ 02.04.2026 ಗುರುವಾರದ ತನಕ

ಶರವೂರು ಇಂದು ಬ್ರಹ್ಮಕಲಶೋತ್ಸವ

ಕಾರ್ಯಕ್ರಮಗಳು

ದಿನಾಂಕ: 02.04.2026 ಗುರುವಾರ

ಪ್ರಾತಃಕಾಲ 4.30: ಶ್ರೀ ದೇವರ ಗರ್ಭಗೃಹದ ಕವಾಟ ಉದ್ಘಾಟನೆ, ನಿರ್ಮಾಲ್ಯದರ್ಶನ, ತೈಲಾಭಿಷೇಕ ಪ್ರಾಯಶ್ಚಿತ್ತ ಶಾಂತಿಹೋಮಗಳ, ಕಲಶಾಭಿಷೇಕ, ತತ್ವಕಲಶಾಭಿಷೇಕ. ಪ್ರಾತಃಕಾಲ 6.00: ಪರಿಕಲಶಾಭಿಷೇಕ ಪ್ರಾರಂಭ ಪೂರ್ವಾಹ್ನ 9.00–9.30ರ ಸಮಯ ನಡೆಯುವ ವೃಷಭ ಲಗ್ನ ಸುಮುಹೂರ್ತದಲ್ಲಿ– ಶ್ರೀ ದೇವರಿಗೆ ಬ್ರಹ್ಮಕಲಶಾಭಿಷೇಕ, ಪ್ರಸನ್ನಪೂಜೆ, ಅವಸ್ರುತೋಕ್ಷಾ ಬಲಿ, ಪ್ರಸಾದ ವಿತರಣೆ. ಮಧ್ಯಾಹ್ನ 11.30: ಶ್ರೀ ದೇವರಿಗೆ ಮಹಾಪೂಜೆ, ಪಲ್ಲಪೂಜೆ. ಮಧ್ಯಾಹ್ನ 12.30: ಮಹಾಅನ್ನಸಂತರ್ಪಣೆ, ವೈದಿಕ ಮಂತ್ರಾಕ್ಷತೆ. ಸಾಯಂಕಾಲ 7.00: ಶ್ರೀ ದೇವರಿಗೆ ಮಹಾಪೂಜೆ, ಭೂತಬಲಿ ಉತ್ಸವ, ಪುಷ್ಪರಥೋತ್ಸವ, ವಸಂತಕಟ್ಟೆ ಪೂಜೆ ನೂತನ ಬ್ರಹ್ಮರಥಕ್ಕೆ ಶುದ್ಧಿ ಪ್ರಕ್ರಿಯೆ ರಥಾಧಿವಾಸ

ಪೂರ್ವಾಹ್ನ 11.30–1.00: ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ವಯೋಲಿನ್ ವಾದನ/ ಹಾಡುಗಾರಿಕೆ : ಕು। ತನ್ಮಯಿ ಉಪ್ಪಂಗಳ (ಯುವ ಕಲಾರತ್ನ ಕನಕ ಪ್ರಶಸ್ತಿ ವಿಜೇತೆ)

ಅಪರಾಹ್ನ 2.00–3.00: ಭಕ್ತಿ ರಸಮಂಜರಿ ಕಾರ್ಯಕ್ರಮ. ಅಪರಾಹ್ನ 3.00–6.00: ಭಾಗವತರು: ಶ್ರೀ ಸತೀಶ ಶೆಟ್ಟಿ ಪಟ್ಲ, ಶ್ರೀ ಶಿವಶಂಕರ ಬಲಿಪ, ಶ್ರೀ ರವಿಚಂದ್ರ ಕನ್ನಡಿಕಟ್ಟೆ, ಶ್ರೀ ಗಿರೀಶ ರೈ ಕಕ್ಕೆಪದವು, ಶ್ರೀಮತಿ ಕಾವ್ಯಶ್ರೀ ಆಜೇರು ಇವರಿಂದ ಯಕ್ಷ ಗಾನ ವೈಭವ

ಸಂಜೆ 6.00–8.00: ಸಭಾ ಕಾರ್ಯಕ್ರಮ

ಅಧ್ಯಕ್ಷತೆ: ಡಾ. ಕೊಳೂರು ಕಣ್ಯಾನ ಸದಾಶಿವ ಶೆಟ್ಟಿ ಗೌರವಾಧ್ಯಕ್ಷರು, ಬ್ರಹ್ಮಕಲಶೋತ್ಸವ ಸಮಿತಿ, ಶ್ರೀ ಕ್ಷೇತ್ರ ಶರವೂರು. ದೀಪ ಪ್ರಜ್ವಲನೆ: ಡಾ. ಕೆ. ಪ್ರಕಾಶ್ ಶೆಟ್ಟಿ ಛೇರ್ಮ್ಯಾನ್ ಅಂಡ್ ಮೇನೆಜಿಂಗ್ ಡೈರೆಕ್ಟರ್ MRG ಗ್ರೂಪ್ . ರಾತ್ರಿ 8.00: ಕು। ಮೇಧಾ ವಿದ್ಯಾಭೂಷಣ ಬೆಂಗಳೂರು ಇವರಿಂದ "ಭಕ್ತಿ ಸಂಗೀತ ಕಾರ್ಯಕ್ರಮ"

ದಿನಾಂಕ: 03.04.2026 ಶುಕ್ರವಾರ

ಪ್ರಾತಃಕಾಲ 8.00: ನೂತನ ಬ್ರಹ್ಮರಥಕ್ಕೆ ಕಲಶಪೂರಣ, ಕಲಶಾಭಿಷೇಕ, ರಥಬಲಿ, ಶ್ರೀ ದೇವರಿಗೆ ಬ್ರಹ್ಮರಥ ಸಮರ್ಪಣೆ. ಪೂರ್ವಾಹ್ನ 11.30: ಜಾತ್ರೋತ್ಸವಕ್ಕೆ ಗೊನೆ ಮುಹೂರ್ತ, ಮಹಾಪೂಜೆ, ಅನ್ನಸಂತರ್ಪಣೆ. ರಾತ್ರಿ 7.00: ಧ್ವಜಾರೋಹಣ, ಮಹಾಪೂಜೆ, ಭೂತಬಲಿ ಪ್ರಸಾದ ವಿತರಣೆ, ಅನ್ನಸಂತರ್ಪಣೆ

ದಿನಾಂಕ: 04.04.2026 ಶನಿವಾರ

ಮಧ್ಯಾಹ್ನ 12.00: ಮಹಾಪೂಜೆ, ನಿತ್ಯಬಲಿ, ಪ್ರಸಾದ ವಿತರಣೆ
ರಾತ್ರಿ 7.00: ಮಹಾಪೂಜೆ, ಭೂತಬಲಿ, ಪ್ರಸಾದ ವಿತರಣೆ

ದಿನಾಂಕ: 05.04.2026 ಆದಿತ್ಯವಾರ

ಮಧ್ಯಾಹ್ನ 12.00: ಮಹಾಪೂಜೆ, ನಿತ್ಯಬಲಿ, ಪ್ರಸಾದ ವಿತರಣೆ ಸಾಯಂಕಾಲ 7.00: ಮಹಾಪೂಜೆ, ಭೂತಬಲಿ ಪ್ರಸಾದವಿತರಣೆ ಅನ್ನಸಂತರ್ಪಣೆ. ರಾತ್ರಿ 8.30: ಅರಸು ಉಳ್ಳಾಯ ಮಹಿಷಂತಾಯ ಮತ್ತು ರಕ್ತೇಶ್ವರೀ ದೈವಗಳ ನರ್ತನೋತ್ಸವ

ದಿನಾಂಕ: 06.04.2026 ಸೋಮವಾರ

ಮಧ್ಯಾಹ್ನ 12.00: ಮಹಾಪೂಜೆ, ನಿತ್ಯಬಲಿ, ಪ್ರಸಾದ ವಿತರಣೆ. ಸಾಯಂಕಾಲ 6.00: ಉಗ್ರಾಣ ಮುಹೂರ್ತ, ಬಲಿ ಹೊರಟು ಉತ್ಸವ, ವಸಂತ ಕಟ್ಟೆಪೂಜೆ, ಮಹಾಪೂಜೆ, ಭೂತಬಲಿ, ಪ್ರಸಾದ ವಿತರಣೆ, ಅನ್ನಸಂತರ್ಪಣೆ. ರಾತ್ರಿ 9.00: ಚಾಮುಂಡಿ, ಧೂಮಾವತಿ, ಬಂಟ ಮತ್ತು ಕೊಡಮಣಿತ್ತಾಯ ದೈವಗಳ ನರ್ತನೋತ್ಸವ

ಕಾರ್ಯಕ್ರಮಗಳು

ದಿನಾಂಕ: 07.04.2026 ಮಂಗಳವಾರ

ಪೂರ್ವಾಹ್ನ 7.00: ಬಲಿಹೊರಟು ಉತ್ಸವ. ಮಧ್ಯಾಹ್ನ 12.00: ಮಹಾಪೂಜೆ ನಿತ್ಯಬಲಿ ಪ್ರಸಾದ ವಿತರಣೆ. ಸಂಜೆ 6.30: ಬಲಿಹೊರಟು ಉತ್ಸವ, ವಸಂತಕಟ್ಟೆ ಪೂಜೆ, ಮಹಾಪೂಜೆ, ಭೂತಬಲಿ, ಪ್ರಸಾದ ವಿತರಣೆ

ದಿನಾಂಕ: 08.04.2026 ಬುಧವಾರ

ಪೂರ್ವಾಹ್ನ 7.00: ಬಲಿಹೊರಟು ಉತ್ಸವ. ಮಧ್ಯಾಹ್ನ 12.00: ಮಹಾಪೂಜೆ ನಿತ್ಯಬಲಿ, ಪ್ರಸಾದ ವಿತರಣೆ. ಸಾಯಂಕಾಲ 4.30: ಬಲಿಹೊರಟು ಉತ್ಸವ, ಆಲಂಕಾರು ಪೇಟೆ ಸವಾರಿ ಆಲಂಕಾರು ಸಾರ್ವಜನಿಕ ಕಟ್ಟೆಪೂಜೆ ಮಹಾಪೂಜೆ, ಭೂತಬಲಿ ಪ್ರಸಾದ ವಿತರಣೆ. ರಾತ್ರಿ 7.00: ತುಳು ಹಾಸ್ಯಮಯ ನಾಟಕ "ಎಲ್ಲೆ ದಾದ ಏರೆಗ್ ಗೊತ್ತು"

ದಿನಾಂಕ: 09.04.2026 ಗುರುವಾರ

ಪೂರ್ವಾಹ್ನ 7.00: ಬಲಿ ಹೊರಟು ಉತ್ಸವ. ಮಧ್ಯಾಹ್ನ 12.00: ಮಹಾಪೂಜೆ, ನಿತ್ಯಬಲಿ, ಪ್ರಸಾದ ವಿತರಣೆ. ಸಾಯಂಕಾಲ 6.30: ಬಲಿಹೊರಟು ಉತ್ಸವ, ವಸಂತಕಟ್ಟೆಪೂಜೆ, ಮಹಾಪೂಜೆ, ಭೂತಬಲಿ, ಪ್ರಸಾದ ವಿತರಣೆ

ದಿನಾಂಕ: 10.04.2026 ಶುಕ್ರವಾರ

ಪೂರ್ವಾಹ್ನ 830: ಬಲಿಹೊರಟು ಉತ್ಸವ, ದರ್ಶನಬಲಿ, ಬಟ್ಟಲು ಕಾಣಿಕೆ, ಮಹಾಪೂಜೆ, ನಿತ್ಯಬಲಿ, ಪ್ರಸಾದ ವಿತರಣೆ. ಮಧ್ಯಾಹ್ನ 1.00: ಮಹಾಅನ್ನಸಂತರ್ಪಣೆ. ಸಾಯಂಕಾಲ 6.30: ಸವಾರಿ ಮಂಟಪ ಕಟ್ಟೆಪೂಜೆಗಳು, ಕೆರೆಉತ್ಸವ, ಉತ್ಸವ, ವಸಂತಕಟ್ಟೆ ಪೂಜೆ, ಮಹಾಪೂಜೆ, ಭೂತಬಲಿ ಪ್ರಸಾದ ವಿತರಣೆ

ದಿನಾಂಕ: 11.04.2026 ಶನಿವಾರ

ಪೂರ್ವಾಹ್ನ 6.00: ಬಲಿಹೊರಟು ಉತ್ಸವ. ಪೂರ್ವಾಹ್ನ 10.00: ನಾಗಬನದಲ್ಲಿ ಆಶ್ಲೇಷಬಲಿ. ಮಧ್ಯಾಹ್ನ 12.00: ಮಹಾಪೂಜೆ, ನಿತ್ಯಬಲಿ, ಪ್ರಸಾದವಿತರಣೆ, ಅನ್ನಸಂತರ್ಪಣೆ. ರಾತ್ರಿ 9.00: ಶ್ರೀ ಮಹಾರಥೋತ್ಸವ, ವಸಂತಕಟ್ಟೆಪೂಜೆ, ಮಹಾಪೂಜೆ, ಶ್ರೀ ಭೂತ ಬಲಿ, ಕವಾಟಬಂಧನ

ದಿನಾಂಕ: 12.04.2026 ಆದಿತ್ಯವಾರ

ಪೂರ್ವಾಹ್ನ 8.00: ಕವಾಟೋದ್ಘಾಟನೆ, ಪ್ರಸನ್ನಪೂಜೆ, ಶಯನ ಪ್ರಸಾದ ವಿತರಣೆ. ಪೂರ್ವಾಹ್ನ 10:00: ಯಾತ್ರಾಹೋಮ. ಮಧ್ಯಾಹ್ನ 12.00: ಮಹಾಪೂಜೆ, ಪ್ರಸಾದ ವಿತರಣೆ. ಸಂಜೆ 5.00: ಅವಭೃತ ಮೆರವಣಿಗೆ, ಕಟ್ಟೆಪೂಜೆಗಳು, ಶಾಂತಿಮೊಗರು ಕುಮಾರಧಾರೆಯಲ್ಲಿ ಅವಭೃತ ಧ್ವಜಾವರೋಹಣ ಮಹಾಪೂಜೆ, ಪ್ರಸಾದ ವಿತರಣೆ

ದಿನಾಂಕ: 13.04.2026 ಸೋಮವಾರ

ಪೂರ್ವಾಹ್ನ 9.00: ಭದ್ರಕಾಳಿ ಅಮ್ಮನವರ ಗುಡಿಯಲ್ಲಿ ವಿಶೇಷಪೂಜೆ–ಶಿರಾಡಿ ಮತ್ತು ಗುಳಿಗ ದೈವಗಳ ನೇಮ

ಕಾರ್ಯಕ್ರಮಕ್ಕೆ ಪ್ರೀತಿಪೂರ್ವಕವಾಗಿ ಆಮಂತ್ರಿಸುವ



ಡಾ. ಕೊಳೂರು ಕಣ್ಯಾನ ಸದಾಶಿವ ಶೆಟ್ಟಿ
ಗೌರವಾಧ್ಯಕ್ಷರು, ಬ್ರಹ್ಮಕಲಶೋತ್ಸವ ಸಮಿತಿ



ಕೆ. ಸುಬ್ರಹ್ಮಣ್ಯ ರಾವ್ ನಗ್ರಿ
ಅಧ್ಯಕ್ಷರು ಮತ್ತು ಸದಸ್ಯರು, ವ್ಯವಸ್ಥಾಪನಾ ಸಮಿತಿ



ಯನ್. ಹರೀಶ್ ಆಚಾರ್ಯ ನಗ್ರಿಗುತ್ತು
ಪವಿತ್ರಪಾಣಿ ಅರ್ಚಕರು



ಯಂ. ಗೋಪಾಲಕೃಷ್ಣ ಪಡ್ಡಿಲ್ಲಾಯ
ಅಧ್ಯಕ್ಷರು ಮತ್ತು ಸದಸ್ಯರು, ಬ್ರಹ್ಮಕಲಶೋತ್ಸವ ಸಮಿತಿ



ಡಾ. ಹೇಮಂತ ರೈ ಮನವಳಿಕೆಗುತ್ತು
ಅಧ್ಯಕ್ಷರು ಮತ್ತು ಸದಸ್ಯರು, ಜೀರ್ಣೋದ್ಧಾರ/ಅಭಿವೃದ್ಧಿ ಸಮಿತಿ

ಸಿಬ್ಬಂದಿ ವರ್ಗ ಮತ್ತು ಸೀಮೆಯ ಹತ್ತು ಸಮಸ್ತರು

ಶ್ರೀ ಕ್ಷೇತ್ರ ಶರವೂರು ಶ್ರೀ ದುರ್ಗಾಪರಮೇಶ್ವರೀ ದೇವಿಯ ಪಾದ ಚರಣಕಮಲಗಳಿಗೆ ಭಕ್ತಿಪೂರ್ವಕ ಪ್ರಣಾಮಗಳು

ಬಳ್ಳಮಂಜ ಶ್ರೀ ಮಹತೋಭಾರ ಅನಂತೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಬ್ರಹ್ಮಕಲಶೋತ್ಸವದ ಸಂಭ್ರಮ

ನೂರಾರು ವಾಹನಗಳಲ್ಲಿ ಹರಿದುಬಂದ ಹೊರೆಕಾಣಿಕೆ

ಬೆಳ್ತಂಗಡಿ: ಇತಿಹಾಸ ಪ್ರಸಿದ್ಧ ಬಳ್ಳಮಂಜ ಶ್ರೀ ಮಹತೋಭಾರ ಅನಂತೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಬ್ರಹ್ಮಕಲಶೋತ್ಸವದ ಸಂಭ್ರಮ ಕಳೆಕಟ್ಟಿದೆ. ಅಕ್ಕಿ, ಬೆಲ್ಲ, ಬೇಳೆ, ಬಾಳೆಹಣ್ಣು, ಬೂದುಗುಂಬಳ, ಬದನೆ, ತೊಂಡೆಕಾಯಿ, ತೆಂಗಿನ ಕಾಯಿ, ಸೀಯಾಳ, ಅಡಿಕೆ, ಹಿಂಗಾರ, ಹಲಸು, ಸೌತೆ, ಅಲಸಂಡೆ, ಸುವರ್ಣಗಡ್ಡೆ, ಅಕ್ಕಿ ಮುಡಿ ಹೀಗೆ ರಾಶಿ ರಾಶಿ ಆಹಾರ ಪದಾರ್ಥಗಳನ್ನು ಹೊತ್ತ ವಾಹನಗಳು ಬಳ್ಳಮಂಜದಲ್ಲಿ ಸಾಗುತ್ತಿದ್ದರೆ, ಭಕ್ತರು ಅನಂತೇಶನ ಸ್ಮರಣೆ ಮಾಡಿದರು.

ಬಳ್ಳಮಂಜ ಶ್ರೀ ಮಹತೋಭಾರ ಅನಂತೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಶ್ರೀ ಈಶ್ವರ ದೇವರ ಲಿಂಗ ಪುನರ್ ಪ್ರತಿಷ್ಠೆ ಅಷ್ಟಬಂಧ ಬ್ರಹ್ಮಕಲಶೋತ್ಸವ ಹಾಗೂ ನೂತನ ಬ್ರಹ್ಮರಥದಲ್ಲಿ ಪ್ರಥಮ ಬ್ರಹ್ಮರಥೋತ್ಸವ ಅಂಗವಾಗಿ ಮಾ.31ರಂದು ಅನಂತೇಶ್ವರ ಸ್ವಾಮಿಗೆ ಹಸಿರು ಹೊರೆ ಕಾಣಿಕೆ ಸಲ್ಲಿಸಲಾಯಿತು. ಮಚ್ಚಿನ ಗ್ರಾಮಸ್ಥರಿಂದ ಭವ್ಯ ಮೆರವಣಿಗೆ ಮೂಲಕ ಹಸಿರುವಾಣಿ ಹೊರೆಕಾಣಿಕೆ ಸಮರ್ಪಣೆಗೊಂಡಿತು. ಮಚ್ಚಿನ ಗ್ರಾಮದ ನಾನಾ ಭಾಗಗಳಿಂದ ಅಸಂಖ್ಯಾತ ಮಂದಿ ಭಾಗವಹಿಸಿ ಹೊರೆ ಕಾಣಿಕೆ ಸಲ್ಲಿಸಿದರು.

ಟಾಂಗದಿಂದ ಹಸಿರುವಾಣಿ ಸಮರ್ಪಣೆ

ಮಚ್ಚಿನ ಗ್ರಾಮಸ್ಥರು ಸಮರ್ಪಿಸಿದ ಹಸಿರು ಹೊರೆಕಾಣಿಕೆ ಮೆರವಣಿಗೆಯಲ್ಲಿ ತಾರೆಮಾರು ಎಂಬಲ್ಲಿನಿಂದ ಒಂಟಿ ಕುದುರೆಯ ಟಾಂಗ ಗಾಡಿ ಅಕ್ಕಿ ಮುಡಿ, ಸೀಯಾಳ ಇನ್ನಿತರ ಹಸಿರು ಹೊರೆಕಾಣಿಕೆಯನ್ನು ಹೊತ್ತು ಮೆರವಣಿಯಲ್ಲಿ ಸಾಗಿ ಕ್ಷೇತ್ರಕ್ಕೆ ತಲುಪಿದ್ದು, ಎಲ್ಲರ ಕಣ್ಮನ ಸೆಳೆಯಿತು. ಕಳೆದ ಮೂರು ದಿವಸಗಳಿಂದ ಹಸಿರು ಹೊರೆಕಾಣಿಕೆ ಕ್ಷೇತ್ರಕ್ಕೆ ಸಮರ್ಪಣೆಗೊಂಡಿತು.

ಆಕರ್ಷಕ ಮೆರವಣಿಗೆ

ಪಿಕಪ್ ವಾಹನದಲ್ಲಿ ಗಣಪತಿಯನ್ನು ಇರಿಸಿ, ಅಕ್ಕಿ ಮುಡಿ ಹೊತ್ತ ಸಾರಥ್ಯದ ವಾಹನ, ಹೊರೆ ಕಾಣಿಕೆ ಮೆರವಣಿಗೆಯಲ್ಲಿ ಚಂಡೆವಾದನ, ಭಜನಾ ತಂಡಗಳ ಭಜನೆ, ಬ್ಯಾಂಡ್, ಓಲಗ, ಸಿಡಿಮದ್ದು ಪ್ರದರ್ಶನ, ಮಹಿಳೆಯರು ಕಲಶ ಹಿಡಿದುಕೊಂಡು ಹೆಜ್ಜೆ ಹಾಕಿ ಮೆರವಣಿಗೆಯ ಕಳೆಗಟ್ಟಿಸಿತು. ಹೊರಕಾಣಿಕೆಯನ್ನು ಹೊತ್ತ ವಾಹನಗಳು ಒಂದಾದ ಮೇಲೊಂದರಂತೆ ಸಾಗುತ್ತಾ ಕಣ್ಣಿಗೆ ಹಬ್ಬವನ್ನುಂಟು ಮಾಡಿದವು. ಅನೇಕ ಮಂದಿ ಮೆರವಣಿಗೆಯಲ್ಲಿ ಹೆಜ್ಜೆ ಹಾಕುತ್ತ ದೇಗುಲ ತಲುಪಿದರು. ಈ ಸುಂದರ ಮೆರವಣಿಗೆ ಎಲ್ಲರ ಗಮನ ಸೆಳೆಯಿತು.

ಹೊರೆಕಾಣಿಕೆ ಸಮರ್ಪಣೆ ಸಂದರ್ಭ ಶಾಸಕ ಹರೀಶ್ ಪೂಂಜರು ಮಹಿಳೆಯರಿಗೆ 1500 ಸಾವಿರ ಸೀರೆ ಹಾಗೂ ಪುರುಷರಿಗೆ 500 ಶಾಲು ವಿತರಿಸಿದರು.

ಅನುವಂಶೀಯ ಆಡಳಿತ ಮೊಕ್ತೇಸರ ಡಾ.ಯಂ. ಹರ್ಷ ಸಂಪಿಗೆತ್ತಾಯ, ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ನ್ಯಾಯವಾದಿ ವಸಂತ ಗೌಡ ಮರಕಡ, ಬೆಳ್ತಂಗಡಿ ಸುವರ್ಣ ಸಾಂಸ್ಕೃತಿಕ ಪ್ರತಿಷ್ಠಾನ ಅಧ್ಯಕ್ಷ ಸಂಪತ್ ಬಿ.ಸುವರ್ಣ, ಹೊರೆಕಾಣಿಕೆ ಸಮಿತಿ ಸಂಚಾಲಕ ಚಂದ್ರಕಾಂತ ನಿಡ್ಡಾಜೆ, ಕೊರೊಟ್ಟು ಗುತ್ತಿನ ಮನೆಯ ಸುಧೀರ್ ಕುಮಾರ್ ಶೆಟ್ಟಿ ಬ್ರಹ್ಮಕಲಶೋತ್ಸವ ಸಮಿತಿ ಉಪಾಧ್ಯಕ್ಷರಾದ ಪಿ.ದುಗ್ಗಪ್ಪ ಗೌಡ ಪೊಸಂದೋಡಿ, ಜಯಪ್ರಕಾಶ್ ಸಂಪಿಗೆತ್ತಾಯ ಬಳ್ಳಮಂಜ, ಪ್ರಮೋದ್ ಕುಮಾರ್ ಬಳ್ಳಮಂಜ, ಪದ್ಮನಾಭ ಸುವರ್ಣ ಬೆರ್ಬಲಾಜೆ, ವಸಂತಿ ಲಕ್ಷ್ಮಣ ಸಾಲಿಯಾನ್, ಸಂಚಾಲಕ ಸತೀಶ್ ಕಾರಂದೂರು, ಯತೀಶ್ ಕೈಲ, ಹೊನ್ನಪ್ಪ ಕುಲಾಲ್ ಮಾಣೂರು, ಗೌರವ ಸಲಹೆಗಾರ ಡಾ.ಪಿ. ಅನಂತಕೃಷ್ಣ ಭಟ್ ಮಂಗಳೂರು, ಯುವರಾಜ್ ಜೈನ್ ಮಾಯಿಲೋಡಿ ಬೀಡು, ಕೆ.ಎ.ದಾಮೋದರ ಆಚಾರ್ಯ ಮಡಂತ್ಯಾರು, ಪದ್ಮನಾಭ ಸಾಲಿಯಾನ್ ವಡ್ಡ, ಮಚ್ಚಿನ ಗ್ರಾ.ಪಂ. ಮಾಜಿ ಅಧ್ಯಕ್ಷೆ ರುಕ್ಮಿಣಿ, ಮಾಹಿತಿ ಮತ್ತು ಪ್ರಚಾರ ಸಮಿತಿಯ ಗೋಪಾಲ ಪೂಜಾರಿ ಕೊಲಾಜೆ, ಅರ್ಚಕ ಲಕ್ಷ್ಮೀಶ ಶಗ್ರಿತ್ತಾಯ ಎಲಿಕುಡೆ, ಹೊರೆ ಕಾಣಿಕೆ ಸಮಿತಿಯ ಸಹ ಸಂಚಾಲಕ ಚಿತ್ತರಂಜನ್ ಸಹಿತ ಮತ್ತಿತರರು ಉಪಸ್ಥಿತರಿದ್ದರು.



ತುಂಬಿದ ಉಗ್ರಾಣ

ಮೂರು ದಿನಗಳಿಂದ ಕ್ಷೇತ್ರಕ್ಕೆ ಸಮರ್ಪಣೆಗೊಂಡ ಹೊರೆಕಾಣಿಕೆಯಿಂದ ಉಗ್ರಾಣ ತುಂಬಿದೆ. 70 ಕಿಂಟ್ವಾಲ್‌ಕ್ಕಿಂತ ಹೆಚ್ಚು ಅಕ್ಕಿ ಸಂಗ್ರಹಣೆಗೊಂಡಿದೆ. ಅಲ್ಲದೇ ಬ್ರಹ್ಮಕಲಶದ ಸಂಭ್ರಮ ಬಳ್ಳಮಂಜದಲ್ಲಿ ಮನೆ ಮಾಡಿದೆ. ನಗರದಲ್ಲಿ ಮಾಡಿರುವ ವಿದ್ಯುತ್ ದೀಪಗಳಿಂದ ಕೂಡಿದ ಬೆಳಕಿನ ಅಲಂಕಾರವು ನಗರದ ಸೌಂದರ್ಯವನ್ನು ಹೆಚ್ಚಿಸಿ, ಜನರಲ್ಲಿ ಹಬ್ಬದ ವಾತಾವರಣವನ್ನು ಮೂಡಿಸಿದೆ. ಮಡಂತ್ಯಾರು, ಪಣಕಜೆ, ಕಲ್ಲೇರಿ, ಜಾಂಗೆಬೈಲು, ಕಾರಂದೂರು, ಪಿಲಿಗೂಡು ಮೂಲಕ ಕ್ಷೇತ್ರಕ್ಕೆ ಸಾಗುವ ದಾರಿಗಳಲ್ಲಿ ಪ್ರವೇಶ ದ್ವಾರ ಮಾಡಲಾಗಿದೆ. ಕೇಸರಿ ಪತಾಕೆಗಳಿಂದ ನಗರ ಅಲಂಕರಗೊಂಡಿದ್ದು ಭಕ್ತರನ್ನು ಬರಸೆಳೆಯುತ್ತಿದೆ. ಮಡಂತ್ಯಾರಿನಿಂದ ಕುದ್ರಡ್ಕದವರೆಗೂ ರಸ್ತೆ ಬದಿ ಕೇಸರಿ ಪತಾಕೆಗಳಿಂದ ಕಂಗೊಳಿಸುತ್ತಿದೆ. ಪೆಂಡಾಲ್ ಹಾಕಿ ಉತ್ತಮ ಅನ್ನಚತ್ರದ ವ್ಯವಸ್ಥೆ ಮಾಡಲಾಗಿದೆ.

ಸುತ್ತ ಮುತ್ತ

ಇಂದು ಕೊಡಗಿನಲ್ಲಿ ಮದ್ಯ ಮಾರಾಟ ನಿಷೇಧ

ಮಡಿಕೇರಿ: ಕೊಡಗು ಜಿಲ್ಲೆಯ ವೀರಾಜಪೇಟೆಯಲ್ಲಿ ನಡೆಯುವ ಹನುಮ ಜಯಂತಿ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಏ.2ರಂದು ಬೆಳಗ್ಗೆ 6 ಗಂಟೆಯಿಂದ ಮಧ್ಯ ರಾತ್ರಿ 12 ಗಂಟೆಯವರೆಗೆ ವೀರಾಜಪೇಟೆ ನಗರ ಮತ್ತು ಸುತ್ತಮುತ್ತಲಿನ 1 ಕಿ.ಮೀ. ವ್ಯಾಪ್ತಿಯಲ್ಲಿ ಎಲ್ಲಾ ರೀತಿಯ ಮದ್ಯದ ಅಂಗಡಿ, ಬಾರ್, ಹೋಟೆಲ್ ಮತ್ತು ಕ್ಲಬ್‌ಗಳಲ್ಲಿ ಎಲ್ಲಾ ವಿಧದ ಮದ್ಯ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಎಸ್. ಜೆ.ಸೋಮಶೇಖರ್ ಅವರು ಆದೇಶಿಸಿದ್ದಾರೆ.

ಏ.6ರವರೆಗೆ ವೈದಿಕ ಕಾರ್ಯಕ್ರಮ

ಬೆಳ್ತಂಗಡಿ: ಇತಿಹಾಸ ಪ್ರಸಿದ್ಧ ಬಳ್ಳಮಂಜ ಶ್ರೀ ಮಹತೋಭಾರ ಅನಂತೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಬ್ರಹ್ಮಕಲಶೋತ್ಸವ ಅಂಗವಾಗಿ ಮಾ.31ರಂದು ಪುಣ್ಯಾಹ ಪಂಚಗವ್ಯ ಬ್ರಹ್ಮಕೂರ್ಚ ಹೋಮ, ದೇವನಾಂದೀ, ಕಂಕಣಬಂಧ, ಧಾರಂತ ಬಿಂಬಶುದ್ಧಿ ಪ್ರಕ್ರಿಯೆ, ಅಥರ್ವಶೀರ್ಷ ಮಹಾಗಣಪತಿಯಾಗ, ಶ್ರೀ ಗಣಪತಿ ದೇವರಿಗೆ ಕಲಶಾಭಿಷೇಕ, ರಾಕ್ಷೋಘ್ನಹೋಮ, ವಾಸ್ತುಹೋಮ, ವಾಸ್ತುಪೂಜೆ, ವಾಸ್ತುಬಲಿ, ಪ್ರಾಕಾರಬಲಿ, ರಸ್ತೆ, ಕಲಶಮಂಟಪ ಸಂಸ್ಕಾರ ಅಂಕುರಪೂಜೆ ಅನ್ನಸಂತರ್ಪಣೆ ನಡೆಯಿತು. ಏ.1ರಂದು ಶ್ರೀ ದೇವರಿಗೆ ಅವಗಾಹ, ಸೇಕಬಿಂಬಶುದ್ಧಿ ಪ್ರಕ್ರಿಯೆ, ಸಾಮಾನ್ಯ ಶಾಂತಿ ಹೋಮ, ಸಾಮಾನ್ಯ ಪ್ರಾಯಶ್ಚಿತ ಹೋಮ, ಪೂರ್ಣ ನವಗ್ರಹಯಾಗ, ಶ್ರೀ ಈಶ್ವರ ದೇವರಿಗೆ ಬಿಂಬ ಶುದ್ಧಿ ಕಲಶಾಭಿಷೇಕ, ಶಯ್ಯಕಲ್ಪನೆ, ಶಯ್ಯಪೂಜೆ, ಶ್ರೀ ಈಶ್ವರ ದೇವರ ಲಿಂಗದ ಶಯ್ಯಾಧಿವಾಸ, ಶಿರಸ್ತತ್ವ ಹೋಮ, ಪಂಚಕುಂಡಗಳಲ್ಲಿ ಅಧಿವಾಸ ಹೋಮಗಳು, ನವಶಕ್ತಿ ಹೋಮ, ರತ್ನಾಧಿವಾಸ, ಅಷ್ಟಬಂಧಾಧಿವಾಸ, ಪೀಠಾಧಿವಾಸ, ಪ್ರಾಸಾದಾಧಿವಾಸ, ಶಿಖರಾಧಿವಾಸ, ಅನ್ನಸಂತರ್ಪಣೆ ನಡೆಯಿತು. ಮಾ.29ರಂದು ಮೊದಲುಗೊಂಡು ಉತ್ಸವ ಏ.6ರ ವರೆಗೆ ನೆರವೇರಲಿದೆ.

ನಂದನಹಿತ್ಲು ದೈವಸ್ಥಾನ: ಪುನರ್ ಕಲಶಾಭಿಷೇಕ



ಬಂಟ್ವಾಳ: ಇಲ್ಲಿನ ಪೇಟೆಯಲ್ಲಿರುವ ನಂದನಹಿತ್ಲು ಶ್ರೀ ವೈದ್ಯನಾಥ ಅರಸು ಜುಮಾದಿ ಬಂಟ ದೈವಸ್ಥಾನದಲ್ಲಿ ಬುಧವಾರ ಪುನರ್ ಕಲಶಾಭಿಷೇಕವು ಪೊಳಲಿ ಗಿರಿಪ್ರಕಾಶ್ ತಂತ್ರಿಯವರ ನೇತೃತ್ವದಲ್ಲಿ ನೆರವೇರಿತು. ಬೆಳಿಗ್ಗೆ ಗಣ ಹೋಮ, ಕಲಶ ಪ್ರತಿಷ್ಠೆ ಪ್ರಧಾನ ಹೋಮ ನಡೆದು ಶ್ರೀ ದೈವಗಳಿಗೆ ಪುನರ್ ಕಲಶಾಭಿಷೇಕ, ನಾಗದೇವರಿಗೆ ತಂಬಿಲ ಸೇವೆ,ಮಧ್ಯಾಹ್ನ ಮಹಾಪೂಜೆಯ ಬಳಿಕ ಅನ್ನಸಂಪರ್ಪಣೆ ನಡೆಯಿತು. ದೈವಸ್ಥಾನದ ಆಡಳಿತ ಸಮಿತಿ ಅಧ್ಯಕ್ಷ ಗಣೇಶ್ ಸುವರ್ಣ ತುಂಬೆ, ನಾಲ್ಕು ಮನೆತನದವರಾದ ವಿಶ್ವನಾಥ ಪೊಣ್ಣಂಗಿಲಗುತ್ತು,ಲೋಕೇಶ್ ಬಂಗೇರ ಗಾಣದಪಡ್ಪು, ಲೋಕನಾಥ ಬಡಕೊಟ್ಟು, ಸಂಜೀವ ಪೆಲತ್ತಿಮಾರು, ಪ್ರಮುಖರು ಇದ್ದರು. ಸಂಜೆ 6ರಿಂದ ಭಜನಾ ಸಂಕೀರ್ತನೆ ನಡೆಯಿತು. ರಾತ್ರಿ 9ಕ್ಕೆ ಶ್ರೀ ಪೊನ್ನಂಗಿಲ ಗುತ್ತುವಿನಿಂದ ಶ್ರೀ ಅರಸು ದೈವದ ಭಂಡಾರವು ದೈವಸ್ಥಾನಕ್ಕೆ ಆಗಮಿಸಿ ಭಂಡಾರ ಏರಿದ ಬಳಿಕ ಶ್ರೀ ಅರಸು ದೈವದ ನೇಮವು ನಡೆಯಿತು.

ರೆಂಜಿಲಾಡಿ: ನೂಜಿ ಶ್ರೀ ಉಳ್ಳಾಲ್ತಿ ಅಮ್ಮನವರ ಜಾತ್ರೆಗೆ ಧ್ವಜಾರೋಹಣ

ಕಡಬ: ಕಡಬ ತಾಲೂಕಿನ ರೆಂಜಿಲಾಡಿ ಗ್ರಾಮದ ನೂಜಿಬೈಲ್ ನೂಜಿ ಶ್ರೀ ಉಳ್ಳಾಲ್ತಿ ಅಮ್ಮನವರ ಜಾತ್ರೆಗೆ ಬುಧವಾರ ಧ್ವಜಾರೋಹಣ ನೆರವೇರಿಸಲಾಯಿತು. ಬೆಳಗ್ಗೆ ಕ್ಷೇತ್ರದಲ್ಲಿ ಸಂಪ್ರದಾಯದಂತೆ ಪೂಜಾ ವಿಧಿ ವಿಧಾನ ನೆರವೇರಿಸಲಾಯಿತು. ಬಳಿಕ ಅಕ್ಷತ ಪೂಜೆ ನಡೆಯಿತು. ಮಧ್ಯಾಹ್ನ ಮಹಾಪೂಜೆ ನಡೆದು, ಪ್ರಸಾದ ವಿತರಿಸಲಾಯಿತು.

ಇಂದಿನಿಂದ ನೇಮ

ಏ.2ರಂದು ಸಂಜೆ 6ಕ್ಕೆ ಸುಬ್ರಹ್ಮಣ್ಯ ಮಾಗಣೆ ರೆಂಜಿಲಾಡಿ ಬೀಡಿನ ಯಶೋಧರ ಯಾನೆ ತಮ್ಮಯ್ಯ ಬಳ್ಳಾಲ್ ಅವರನ್ನು ಸ್ವಾಗತಿಸುವುದು, ರಾತ್ರಿ 7ಕ್ಕೆ ಸಾಮೂಹಿಕ ರಂಗಪೂಜೆ ಪ್ರಸಾದ ವಿತರಣೆ, 8.30ಕ್ಕೆ ಅಲ್ಲತ್ತಾಯ ಮತ್ತು ಪಂಜುರ್ಲಿ ದೈವಗಳ ಭಂಡಾರ ತೆಗೆದು ನೇಮ, ಏ.3ರಂದು ಬೆಳಗ್ಗೆ 9.15ಕ್ಕೆ ಶ್ರೀ ಉಳ್ಳಾಲ್ತಿ ಅಮ್ಮನವರ ಭಂಡಾರ ತೆಗೆದು ನೇಮ, ಮಧ್ಯಾಹ್ನ ಅನ್ನ ಸಂತರ್ಪಣೆ, 3ಕ್ಕೆ ಧ್ವಜಾವರೋಹಣ, ಸಂಜೆ 6.11ಕ್ಕೆ ಗುಳಿಗ ದೈವದ ಭಂಡಾರ ತೆಗೆದು ನೇಮ, ಬಳಿಕ ಅನ್ನ ಸಂತರ್ಪಣೆ ನಡೆಯಲಿದೆ.

ಮರಳು ಸಾಗಾಟ ಪತ್ತೆ

ಬಂಟ್ವಾಳ: ಇರಾ ಗ್ರಾಮದ ಕುಕ್ಕಾಜೆಯ ಮಂಚಿಕಟ್ಟೆ ಬಳಿ ಅಕ್ರಮವಾಗಿ ಮರಳು ಸಾಗಾಟ ಮಾಡುತ್ತಿರುವುದನ್ನು ಬಂಟ್ವಾಳ ಗ್ರಾಮಾಂತರ ಪೊಲೀಸರು ಪತ್ತೆಹಚ್ಚಿದ್ದಾರೆ. ಮಂಗಳವಾರ ರಾತ್ರಿ ಖಚಿತ ಮಾಹಿತಿ ಆಧಾರದಲ್ಲಿ ಮಂಚಿ ಕಟ್ಟೆ ಬಳಿ ಗ್ರಾಮಾಂತರ ಠಾಣಾ ಪೊಲೀಸರು ಅನುಮಾನಾಸ್ಪದವಾಗಿ ಬರುತ್ತಿದ್ದ ಪಿಕಪ್ ವಾಹನ ತಡೆದು ನಿಲ್ಲಿಸಿ ಚಾಲಕ ಸಜೀಪ ಮೂಡ ನಿವಾಸಿ ಅಬ್ದುಲ್ ರಜಾಕ್ (30)ನನ್ನು ವಿಚಾರಿಸಿದಾಗ ಸಜೀಪಮೂಡ ಗ್ರಾಮದ ಕಾರಾಜೆ ಬಳಿರುವ ಹಳ್ಳದಿಂದ ಮರಳು ಕಳವುಗೈದು ಪಿಕಪ್ ವಾಹನದಲ್ಲಿ ತುಂಬಿಸಿ ಸಾಗಾಟ ಮಾಡಲಾಗುತ್ತಿದ್ದು,ಯಾವುದೇ ಪರವಾನಿಗೆ ಇಲ್ಲದಿರುವುದಾಗಿ ಬಾಯಿಬಿಟ್ಟಿದ್ದಾನೆ. ತಕ್ಷಣ ಮರಳು ತುಂಬಿದ ಪಿಕಪ್ ವಾಹನವನ್ನು ವಶಪಡಿಸಿರುವ ಬಂಟ್ವಾಳ ಗ್ರಾಮಾಂತರ ಠಾಣಾ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಅರ್ಧ ಶತಮಾನದ ಹಿಂದಿನ ಫಿಲೋಮಿನಾ ಕಾಲೇಜ್ ಜೀವನದ ಮೆಲುಕು

1976 ಬಿ.ಎ. ಬ್ಯಾಚ್ ವಿದ್ಯಾರ್ಥಿಗಳ ಸಮಾಗಮ

ಪುತ್ತೂರು: ನಗರದ ಸಂತ ಫಿಲೋಮಿನಾ (ಸ್ವಾಯತ್ತ) ಕಾಲೇಜಿನ 1976ರ ಬಿ.ಎ. ಫೈನಲ್ ಬ್ಯಾಚ್‌ನ ಹಿರಿಯ ವಿದ್ಯಾರ್ಥಿಗಳು ತಮ್ಮ ಪದವಿ ಶಿಕ್ಷಣ ಮುಗಿಸಿ 50 ವರ್ಷಗಳು ಪೂರೈಸಿದ ಸವಿನೆನಪಿಗಾಗಿ ಹಮ್ಮಿಕೊಂಡಿದ್ದ 'ಸುವರ್ಣ ಸಂಭ್ರಮ- ಪುನರ್‌ಮಿಲನ್' ಕಾರ್ಯಕ್ರಮವು ಕಾಲೇಜಿನ ಆವರಣದಲ್ಲಿ ಸಂಭ್ರಮದಿಂದ ಜರುಗಿತು.

ಅರ್ಧ ಶತಮಾನದ ಹಿಂದಿನ ಕಾಲೇಜ್ ಜೀವನದ ಸವಿನೆನಪುಗಳನ್ನು ಹಂಚಿಕೊಂಡ ಹಿರಿಯ ವಿದ್ಯಾರ್ಥಿಗಳು, ಅಂದಿನ ಪ್ರಾಂಶುಪಾಲರಾದ ರೆ.ಫಾ. ಸೆರಾವೊ, ವಂ. ಫಾ. ಹೆನ್ರಿ ಕಾಸ್ಟಲಿನೊ ಹಾಗೂ ಅಂದಿನ ಹಾಸ್ಟೆಲ್ ವಾರ್ಡನ್ ರೆ.ಫಾ. ಲಾರೆನ್ಸ್ ಮೆಂಡೋನ್ಸಾ ಅವರ ಶಿಸ್ತುಬದ್ಧ ಮಾರ್ಗದರ್ಶನವನ್ನು ಹೆಮ್ಮೆಯಿಂದ ಸ್ಮರಿಸಿದರು. ಇದೇ ಸಂದರ್ಭ ಕಾಲೇಜಿನ ನಿವೃತ್ತ ಹಿಂದಿ ಪ್ರಾಧ್ಯಾಪಕಿ ವಾಸಂತಿ ಸೀತಾರಾಮ ಗೌಡ ಹಾಗೂ ಅಂದು ಗ್ರಂಥಾಲಯದಲ್ಲಿ ಸೇವೆ ಸಲ್ಲಿಸಿದ್ದ ನಿವೃತ್ತ ಸಿಬ್ಬಂದಿ ನಾರ್ಬರ್ಟ್ ಕೊರೆಯಾ ಅವರನ್ನು ಹಿರಿಯ ವಿದ್ಯಾರ್ಥಿಗಳು ಸನ್ಮಾನಿಸಿದರು.

ಕಾಲೇಜಿನ ಸಂಚಾಲಕ ರೆ.ಫಾ. ಲಾರೆನ್ಸ್ ಮಸ್ಕರೇನ್ಹಸ್, ಹಳೆಯ ವಿದ್ಯಾರ್ಥಿಗಳು 50 ವರ್ಷಗಳ ನಂತರವೂ ತಮ್ಮ ವಿದ್ಯಾ ಸಂಸ್ಥೆಯನ್ನು ನೆನಪಿಟ್ಟುಕೊಂಡು ಒಂದೆಡೆ ಸೇರಿರುವುದು ಶ್ಲಾಘನೀಯ ಎಂದರು. ಪ್ರಾಂಶುಪಾಲ ಫಾ.ಡಾ. ಆಂಟನಿ ಪ್ರಕಾಶ್ ಮೊಂತೇರೊ ಮತ್ತು ಉಪ ಪ್ರಾಂಶುಪಾಲ ಡಾ. ವಿಜಯ ಕುಮಾರ್ ಎಂ. ಶುಭ ಹಾರೈಸಿದರು. ಚಿದಾನಂದ ನಾಯಕ್ ಮತ್ತು ವಾಮನ್ ಉಬಾರ್ ಕಾರ್ಯಕ್ರಮ ಸಂಘಟಿಸಿದರು. ಹಿರಿಯ ವಿದ್ಯಾರ್ಥಿ ಡಾ.ಕೆ.ಎನ್. ಅಡಿಗ ಮತ್ತು ರೀಟಾ ಮಿನೇಜಸ್ ನಿರೂಪಿಸಿದರು. ಮೇರಿ ಲೋಬೊ, ಎನ್ನಿ ಡಿಮೆಲ್ಲೊ ಹಾಗೂ ರೀಟಾ ಮಿನೇಜಸ್ ಪ್ರಾರ್ಥಿಸಿದರು. ಚಿದಾನಂದ ನಾಯಕ್ ಪ್ರಸ್ತಾವನೆಗೈದರು. ಶಾಂತಕುಮಾರಿ ಅಗಲಿದ ಸಹಪಾಠಿಗಳು ಹಾಗೂಗುರುಗಳಿಗೆಶ್ರದ್ಧಾಂಜಲಿಸಲ್ಲಿಸಿದರು. ನ್ಯಾಯವಾದಿ ಕೇಶವ ಭಟ್ ಸ್ವಾಗತಿಸಿ, ಸಂಪತ್ ಕುಮಾರ್ ವಂದಿಸಿದರು.



ಹಿರಿಯ ವಿದ್ಯಾರ್ಥಿಗಳಿಗೆ ಅದ್ದೂರಿ ಸ್ವಾಗತ

ಕಾರ್ಯಕ್ರಮದ ಆರಂಭದಲ್ಲಿ ಕಾಲೇಜಿನ ಚೆಂಡೆ ಮೇಳದ ವಿದ್ಯಾರ್ಥಿಗಳು ಅತಿಥಿಗಳನ್ನು ಹಾಗೂ ಹಿರಿಯ ವಿದ್ಯಾರ್ಥಿಗಳನ್ನು ವಾದ್ಯ ಘೋಷಗಳೊಂದಿಗೆ ಭವ್ಯವಾಗಿ ಸಭಾಂಗಣಕ್ಕೆ ಬರಮಾಡಿಕೊಂಡರು. ಈ ಸುವರ್ಣ ಸಂಭ್ರಮವು ಹಳೆಯ ಗೆಳೆಯರ ಮಿಲನಕ್ಕೆ ಸಾಕ್ಷಿಯಾಗಿದ್ದಲ್ಲದೆ, ಗುರು-ಶಿಷ್ಯರ ಸಂಬಂಧದ ಪಾವಿತ್ರ್ಯತೆಯನ್ನು ಎತ್ತಿ ಹಿಡಿಯುವಂತಿತ್ತು.

ಪುತ್ತೂರು ಅಕ್ಷಯ ಕಾಲೇಜಿನಲ್ಲಿ ಪ್ರಿಸಮ್-2ಕೆ26 ಇಂಟರ್‌ಕ್ಲಾಸ್ ಫೆಸ್ಟ್

ಪ್ರತಿಭೆಗಳಿಗೆ ಉತ್ತೇಜನ: ಜಯಂತ ನಡುಬೈಲ್

ಪುತ್ತೂರು: ಅಕ್ಷಯ ಕಾಲೇಜಿನಲ್ಲಿ ಕಂಪ್ಯೂಟರ್ ಸೈನ್ಸ್ ವಿಭಾಗದ ಬೈಟ್‌ಬ್ಲಿಟ್ಜ್ ಐಟಿ ಕ್ಲಬ್ ಹಾಗೂ ಐಕ್ಯುಎಸಿ ಸಂಯುಕ್ತ ಆಶ್ರಯದಲ್ಲಿ 'ಪ್ರಿಸಮ್-2ಕೆ26 ಇಂಟರ್ ಕ್ಲಾಸ್ ಫೆಸ್ಟ್ ಆಯೋಜಿಸಲಾಯಿತು. ವಿದ್ಯಾರ್ಥಿಗಳ ಸೃಜನಶೀಲತೆ, ಕೌಶಲ್ಯ ಹಾಗೂ ತಂಡದ ಮನೋಭಾವ ಉತ್ತೇಜಿಸುವ ಉದ್ದೇಶದಿಂದ ಆಯೋಜಿಸಿದ ಕಾರ್ಯಕ್ರಮವನ್ನು ಅಕ್ಷಯ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕಿ ಕಲಾವತಿ ಜಯಂತ್ ಉದ್ಘಾಟಿಸಿ ವಿದ್ಯಾರ್ಥಿಗಳಿಗೆ ಶುಭಾಶಯ ಕೋರಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಸಂಸ್ಥೆಯ ಅಧ್ಯಕ್ಷ ಜಯಂತ ನಡುಬೈಲ್ ಮಾತನಾಡಿ, ಇಂತಹ ವೇದಿಕೆಗಳು ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸಿ ಉತ್ತೇಜಿಸಲು ಉತ್ತಮ ಅವಕಾಶವಾಗಿದೆ. ಪರಿಶ್ರಮ ಮತ್ತು ಆತ್ಮವಿಶ್ವಾಸದಿಂದ ಭವಿಷ್ಯವನ್ನು ರೂಪಿಸಬಹುದು ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ ವಿವೇಕಾನಂದ ಇಂಜಿನಿಯರಿಂಗ್ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ರಾಧಿಕಾ ಶೆಟ್ಟಿ ಡಿ.ಎಸ್. ಮಾತನಾಡಿ, ತಂತ್ರಜ್ಞಾನ ಕ್ಷೇತ್ರದಲ್ಲಿ ಮುನ್ನಡೆಯಲು ನಿರಂತರ ಅಭ್ಯಾಸ, ನೈಜ ಅನುಭವ ಹಾಗೂ ಉತ್ತಮ ಸಂವಹನ ಕೌಶಲ್ಯಗಳ ಅಗತ್ಯವನ್ನು ವಿವರಿಸಿದರು. ಸಂಸ್ಥೆಯ ಆಡಳಿತಾಧಿಕಾರಿ ಅರ್ಪಿತ್ ಟಿ.ಎ., ಮಾತನಾಡಿ, ಶ್ರಮ, ದೃಢ ನಿಶ್ಚಯ ಮತ್ತು ಅನುಭವವೇ ಯಶಸ್ಸಿನ ಮೂಲ ಎಂದು ತಿಳಿಸಿದರು.

ಅಕ್ಷಯ ಪಿ.ಯು. ಕಾಲೇಜು ಪ್ರಾಂಶುಪಾಲೆ ಗಂಗಾರತ್ನ ಮಾತನಾಡಿ, ಪ್ರತಿಭೆಯನ್ನು ಪ್ರದರ್ಶಿಸಲು ಇಂತಹ ವೇದಿಕೆಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಹಾಗೂ ಸ್ಪರ್ಧೆಗಳ ಮೂಲಕ ಆತ್ಮವಿಶ್ವಾಸವನ್ನು ವೃದ್ಧಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಮಾರೋಪ ಸಮಾರಂಭದ ಮುಖ್ಯ ಅತಿಥಿಯಾಗಿ ಬೇಲಿಯೂರುಕಟ್ಟೆ ಸರಕಾರಿ ಪ್ರಾಥಮಿಕ ಶಾಲೆಯ ಮುಖ್ಯಗುರು ಗಣೇಶ್ ಎಸ್., ಬಿಸಿಎ ವಿಭಾಗದ ಮುಖ್ಯಸ್ಥೆ ದೀಕ್ಷಾ ರೈ ಹಾಗೂ ಎಲ್ಲಾ ಉಪನ್ಯಾಸಕರು ಉಪಸ್ಥಿತರಿದ್ದರು. ವಿದ್ಯಾರ್ಥಿನಿ ಸಾನಿಧ್ಯ ಪ್ರಾರ್ಥನೆಗೈದರು. ಐಟಿ ಕ್ಲಬ್ ಸಂಯೋಜಕಿ ಸೌಜನ್ಯ ಎಚ್. ಸ್ವಾಗತಿಸಿ, ವಿದ್ಯಾರ್ಥಿ ಸಂಯೋಜಕ ಕಾರ್ತಿಕ್ ಪಿ. ರೈ ವಂದಿಸಿದರು. ಮಾನ್ಯ ಕಾರ್ಯಕ್ರಮ ನಿರ್ವಹಿಸಿದರು. ನಂತರ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆಗಳು ಹಾಗೂ ಚಟುವಟಿಕೆಗಳು ನಡೆದವು.



ದ್ವಿತೀಯ ಬಿಸಿಎ ವಿಭಾಗ ಚಾಂಪಿಯನ್

ಕಾರ್ಯಕ್ರಮದ ಅಂತ್ಯದಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ದ್ವಿತೀಯ ಬಿಸಿಎ ವಿಭಾಗ ಚಾಂಪಿಯನ್ ಆಗಿ ಹೊರಹೊಮ್ಮಿದರೆ, ದ್ವಿತೀಯ ಫ್ಯಾಷನ್ ಡಿಸೈನ್ ವಿಭಾಗ ರನ್ನರ್ ಅಪ್ ಸ್ಥಾನ ಪಡೆದರು.

ಶೌಚಾಲಯ ಕಟ್ಟಡಕ್ಕೆ ಗುದ್ದಲಿಪೂಜೆ



ಸುಳ್ಯ: ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಇಡ್ಯಡ್ಕ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಎಂಆರ್‌ಪಿಎಲ್ ವತಿಯಿಂದ ಕೊಡಲ್ಪಡುವ ಅನುದಾನದಲ್ಲಿ ನೂತನ ಶೌಚಾಲಯ ಕಟ್ಟಡದ ಗುದ್ದಲಿಪೂಜೆ ಕಾರ್ಯಕ್ರಮ ಬುಧವಾರ ನಡೆಯಿತು.

ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಗುದ್ದಲಿಪೂಜೆ ನೆರವೇರಿಸಿ ಶುಭ ಹಾರೈಸಿದರು. ಈ ಸಂದರ್ಭ ಸುಳ್ಯ ಕ್ಷೇತ್ರ ಶಿಕ್ಷಣಾಧಿಕಾರಿ ವೈ.ಎಸ್. ಹರಗಿ, ಆಲೆಟ್ಟಿ ಗ್ರಾ.ಪಂ. ಆಡಳಿತ ಅಧಿಕಾರಿ ಶೀತಲ್ ಯು.ಕೆ., ಹೇಮಂತ್ ಕಾಮತ್, ಪ್ರಭಾಕರ್ ನಾಯರ್, ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ಯೂಸುಫ್ ಅಂಜಿಕ್ಕಾರ್, ಸ್ಥಳೀಯರಾದ ಜಗದೀಶ್ ಸರಳಿಕುಂಜ, ಶ್ರೀಪತಿ ಭಟ್, ಗ್ರಾ.ಪಂ. ಮಾಜಿ ಸದಸ್ಯೆ ಅನಿತಾ, ವೇದಾವತಿ, ಪುಷ್ಪಾವತಿ ಕುಡೆಕಲ್ಲು ಸುದೇಶ್ ಮತ್ತಿತರರಿದ್ದರು. ಶಾಲಾ ಮುಖ್ಯ ಶಿಕ್ಷಕಿ ವಿಜಯಲಕ್ಷ್ಮಿ ಸ್ವಾಗತಿಸಿ, ಸ್ಥಳೀಯ ಮುಖಂಡ ಅಶೋಕ್ ಪೀಚೆ ವಂದಿಸಿದರು.

ಮುಡಿಪು: ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ

ಕೊಣಾಜೆ: ಮುಡಿಪು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ನಿಟ್ಟೆ ಉಷಾ ಇನ್‌ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸಸ್‌ನ ಮೆಡಿಕಲ್ ಸರ್ಜಿಕಲ್ ನರ್ಸಿಂಗ್ ವಿಭಾಗದಿಂದ 'ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ ಮುಡಿಪುವಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆಯಿತು.

ಕಾಲೇಜಿನ ಪ್ರಾಂಶುಪಾಲ ಡಾ. ಶೇಷಪ್ಪ ಕೆ. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಮಾತನಾಡಿದರು. ಯೂತ್ ರೆಡ್ ಕ್ರಾಸ್ ಸಂಯೋಜಕರಾದ ಹೈದರಾಲಿ ಮಾತನಾಡಿದರು. ವಿವಿಧ ಕ್ಯಾನ್ಸರ್‌ಗಳ ಬಗ್ಗೆ ಮಾಹಿತಿ ನೀಡಲಾಯಿತು. ಮೆಡಿಕಲ್ ಸರ್ಜಿಕಲ್ ನರ್ಸಿಂಗ್ ವಿಭಾಗದ ವೀರೇಶ್ ಕಡೆಮಣಿ ಅವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ, ಮಾಹಿತಿ ನೀಡಿದರು.

ಕ್ರಿಕೆಟ್ ಪಂದ್ಯಾಟ: ಜೆಕೆಸಿ ಕಲಾಯಿ ಮುಡಿಗೆ 'ಎಜು ಕಾರುಣ್ಯ ಟ್ರೋಫಿ'

ಮಂಗಳೂರು: ಎಜುಕಾರುಣ್ಯ ಎಜುಕೇಶನಲ್ ಮತ್ತು ಚಾರಿಟೇಬಲ್ ಟ್ರಸ್ಟ್ ಮಂಗಳೂರು ವತಿಯಿಂದ ಉದಯ ಯುವಕ ಮಂಡಲ ಅಬ್ಬೆಟ್ಟು ಸಹಯೋಗದಲ್ಲಿ ಅಬ್ಬೆಟ್ಟಿನಲ್ಲಿ ಭಾನುವಾರ ಆಯೋಜಿಸಿದ ದಿ.ಶರತ್ ಶೆಟ್ಟಿ ಸ್ಮರಣಾರ್ಥ ಕಾರುಣ್ಯ ಟ್ರೋಫಿ 2026 ಕ್ರಿಕೆಟ್ ಟೂರ್ನಿಯಲ್ಲಿ ಜೆಕೆಸಿ ಕಲಾಯಿ ತಂಡ ಚಾಂಪಿಯನ್ ಆಗಿ ಹೊರಹೊಮ್ಮಿದೆ.

ಅಬ್ಬೆಟ್ಟು ಬಾಕಿಮಾರು ಗದ್ದೆಯಲ್ಲಿ ನಡೆದ ಟೂರ್ನಿಯ ಫೈನಲ್ ಪಂದ್ಯದಲ್ಲಿ ಜೆಕೆಸಿ ಕಲಾಯಿ ತಂಡ ಆತಿಥೇಯ ಉದಯ ಕ್ರಿಕೆಟರ್ಸ್ ಅಬ್ಬೆಟ್ಟು ತಂಡವನ್ನು ಸೋಲಿಸಿ ಪ್ರಶಸ್ತಿ ಪಡೆಯಿತು. ಉದಯ ಅಬ್ಬೆಟ್ಟು ರನ್ನರ್‌ಅಪ್ ಆದರೆ, ಸನ್ನಿ ಪಂಜಿಮೊಗರು ತಂಡ ತೃತೀಯ ಸ್ಥಾನ, ಉದಯ ಅಬ್ಬೆಟ್ಟು ಬಿ ನಾಲ್ಕನೇ ಸ್ಥಾನ ಪಡೆಯಿತು.

ಟ್ರೋಫಿ ಅನಾವರಣ

ಉದ್ಘಾಟನಾ ಸಮಾರಂಭದಲ್ಲಿ ಉದಯ ಯುವಕ ಮಂಡಲದ ಗೌರವಾಧ್ಯಕ್ಷ ಗಂಗಾಧರ ಪೂಜಾರಿ ಪಂದ್ಯಾಟ ಉದ್ಘಾಟಿಸಿದರು. ಬಿಜೆಪಿ ದ.ಕ. ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಸಂತೋಷ್ ತುಪ್ಪೆಕಲ್ಲು ಟ್ರೋಫಿ ಅನಾವರಣ ಮಾಡಿದರು. ಅಂತಾರಾಷ್ಟ್ರೀಯ ಕ್ರೀಡಾಪಟು ತಾರಾನಾಥ ಶೆಟ್ಟಿ ಅಬ್ಬೆಟ್ಟು, ಹಿರಿಯರಾದ ಗಣಪ ಪೂಜಾರಿ ಅಬ್ಬೆಟ್ಟು, ಫರಂಗಿಪೇಟೆ ಕೃಷಿ ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷ ಪವನ್ ಹೊಸಮನೆ, ಉದಯ ಯುವಕ ಮಂಡಲದ ಗೌರವಾಧ್ಯಕ್ಷ ಗೋಪಿನಾಥ್ ಶೆಟ್ಟಿ, ಶೇಖರ್ ಪೂಜಾರಿ, ಅಬ್ಬೆಟ್ಟುಗೋಳಿ ಮಹಾಮಾಯಿ ಕಟ್ಟೆ ಜೀರ್ಣೋದ್ಧಾರ ಸಮಿತಿಯ ಪ್ರಧಾನ ಕಾರ್ಯದರ್ಶಿ ಬಿನುತ್ ಕುಮಾರ್ ಮತ್ತಿತರರಿದ್ದರು. ಸಮಾರೋಪದಲ್ಲಿ ಕೋಟಿ ಚೆನ್ನಯ ಬ್ರಿಗೇಡ್ ಅಧ್ಯಕ್ಷ ಕಿರಣ್ ಕುಮಾರ್ ಕೋಡಿಕಲ್, ಯತಾರ್ಥ ಫೌಂಡೇಶನ್ ಸ್ಥಾಪಕ ಈಶ್ವರ್ ಪ್ರಸಾದ್ ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು. ಪವನ್ ಕುಮಾರ್ ಹೊಸಮನೆ ಮತ್ತು ದಯಾನಂದ ಪೂಜಾರಿ ಅಬ್ಬೆಟ್ಟು ನಿರೂಪಿಸಿದರು. ಎಜುಕಾರುಣ್ಯ ಚಾರಿಟೇಬಲ್ ಟ್ರಸ್ಟ್‌ನ ಅಧ್ಯಕ್ಷ ಮೋಹನ್ ದಾಸ್ ಮರಕಡ ವಂದಿಸಿದರು.





ಮುಲ್ಕಿ ಒಳಲಂಕೆ ಶ್ರೀ ವೆಂಕಟರಮಣ ದೇವಸ್ಥಾನದ ಸಮಗ್ರ ಜೀರ್ಣೋದ್ಧಾರ ಅಂಗವಾಗಿ ಕಾಶಿ ಮಠದ ಶ್ರೀಮತ್ ಸಂಯಮೀಂದ್ರ ತೀರ್ಥ ಸ್ವಾಮೀಜಿ ಆದೇಶ ಅನುಸಾರ ಮಾ.31ಕ್ಕೆ ಶ್ರೀ ವೆಂಕಟರಮಣ ದೇವಸ್ಥಾನದಿಂದ ಕಾಪು ಶ್ರೀ ವೆಂಕಟರಮಣ ದೇವಸ್ಥಾನದ ಮೂಲಕ ಕಾಪು ಹಳೆ ಮಾರಿಗುಡಿವರೆಗೆ 'ಭಜನಾ ಸಂಕೀರ್ತನಾ ಪಾದಯಾತ್ರೆ' ನಡೆಯಿತು.



ಹಳೆಯಂಗಡಿ ಸಮೀಪದ ಸಸಿಹಿತ್ಲು ಶ್ರೀ ಭಗವತೀ ದೇವಸ್ಥಾನದಲ್ಲಿ ಏ.10ರಂದು ನಡೆಯಲಿರುವ ಸಡಾವಳಿ ಉತ್ಸವದ ಪೂರ್ವ ಭಾವಿಯಾಗಿ ಕದಿಕೆ ಭಂಡಾರ ಮಂದಿರದಲ್ಲಿ ಗೊನೆ ಮುಹೂರ್ತ ಕಾರ್ಯಕ್ರಮ ನಡೆಯಿತು. ಸಸಿಹಿತ್ಲು ಶ್ರೀ ಭಗವತೀ ದೇವಸ್ಥಾನದ ಅನುವಂಶಿಕ ಮೊಕ್ತೇಸರ ಹಾಗೂ ಪ್ರಧಾನ ಅರ್ಚಕ ಶ್ರೀನಿವಾಸ ಯಾನೆ ಅಪ್ಪು ಪೂಜಾರಿ ವಿಶೇಷ ಪ್ರಾರ್ಥನೆ ನಡೆಸಿ ಗೊನೆ ಮುಹೂರ್ತಕ್ಕೆ ಚಾಲನೆ ನೀಡಿದರು. ದೇವಸ್ಥಾನದ ಆಡಳಿತ ಸಮಿತಿಯ ಸದಸ್ಯರು, ಭಂಡಾರ ಮನೆಯವರು ಉಪಸ್ಥಿತರಿದ್ದರು. ಏ.11ರಿಂದ 16ರವರೆಗೆ ಭರಣಿ ಮಹೋತ್ಸವ ಹಾಗೂ ಏ.19ರಂದು ದ್ವಾದಶಾಕ್ಷರೀ ಮಂತ್ರೋಚ್ಚಾರ ನಡೆಯಲಿದೆ.

ನಂದನಹಿತ್ಲು ಶ್ರೀ ವೈದ್ಯನಾಥ, ಅರಸು, ಜುಮಾದಿ ಬಂಟ ದೈವಸ್ಥಾನದ ನೂತನ ಮಹಾದ್ವಾರ ಲೋಕಾರ್ಪಣೆ

ದೈವ, ದೇವಸ್ಥಾನದ ಮಹಾದ್ವಾರ 'ಧರ್ಮದ್ವಾರ'ದ ಸಂಕೇತ: ಗಿರಿಪ್ರಕಾಶ್ ತಂತ್ರಿ

ಬಂಟ್ವಾಳ: ಇಲ್ಲಿನ ನಂದನಹಿತ್ಲು ಶ್ರೀ ವೈದ್ಯನಾಥ, ಅರಸು, ಜುಮಾದಿ ಬಂಟ ದೈವಸ್ಥಾನಕ್ಕೆ ಸಂಚರಿಸುವ ಮುಖ್ಯರಸ್ತೆ ಟೂರಿಸ್ಟ್ ಕಾರು ಪಾರ್ಕಿಂಗ್ ಬಳಿ ಹಿಂದೂ ಯುವ ಸೇನೆ ಬಂಟ್ವಾಳ ತಾಲೂಕು ಘಟಕ ಹಾಗೂ ದೈವಸ್ಥಾನದ ಆಡಳಿತ ಸಮಿತಿ ವತಿಯಿಂದ ನಿರ್ಮಿಸಲಾದ ನೂತನ ಮಹಾದ್ವಾರದ ಲೋಕಾರ್ಪಣೆಯು ಮಂಗಳವಾರ ನೆರವೇರಿಸಲಾಯಿತು.

ದೈವಸ್ಥಾನದ ತಂತ್ರಿಗಳಾದ ಪೊಳಲಿ ಗಿರಿಪ್ರಕಾಶ್ ತಂತ್ರಿ ಮಹಾದ್ವಾರದ ಉದ್ಘಾಟನೆ ನೆರವೇರಿಸಿ ಮಾತನಾಡಿ, ಮಹಾದ್ವಾರಕ್ಕೆ ವಿಶೇಷ ಮಹತ್ವ ಇದೆ. ಧರ್ಮ ದೈವಗಳ ಕ್ಷೇತ್ರಕ್ಕೆ ಬರುವಾಗ ಅಧರ್ಮವನ್ನು ಮೆಟ್ಟಿ ಧರ್ಮದ್ವಾರದ ಮೂಲಕ ಬರಬೇಕು. ಸತ್ ಚಿಂತನೆಯಿಂದ ಹಿಂದೂ ಯುವ ಸೇನೆ ಇಲ್ಲಿ ದ್ವಾರ ನಿರ್ಮಿಸಿದೆ. ಇಲ್ಲಿಗೆ ಬರುವ ಭಕ್ತರ ಕಷ್ಟಗಳು ದೂರವಾಗಿ ಸುಖ ಸಂತೋಷ ಮೆರೆಯಲಿ ಎಂದು ಆಶಿಸಿದರು.

ಹಿಂದೂ ಯುವ ಸೇನೆಯ ಕೇಂದ್ರೀಯ ಮಂಡಳಿಯ ಗೌರವಾಧ್ಯಕ್ಷ ಭಾಸ್ಕರಚಂದ್ರ ಶೆಟ್ಟಿ ಮಾತನಾಡಿ, ಹಿಂದೂ ಧಾರ್ಮಿಕ ಕೇಂದ್ರಗಳಲ್ಲಿ ಇಂತಹ ಅನೇಕ ಕೊಡುಗೆಗಳನ್ನು ಹಿಂದೂ ಯುವ ಸೇನೆ ನೀಡುತ್ತಾ ಬಂದಿದೆ. ಹಿಂದೂಗಳು ಸಂಘಟಿತರಾಗಬೇಕೆನ್ನುವುದೇ ಯುವ ಸೇನೆಯ ಆಶಯ ಎಂದರು.

ಜಿ.ಪಂ. ಮಾಜಿ ಸದಸ್ಯ ಚಂದ್ರಪ್ರಕಾಶ್ ಶೆಟ್ಟಿ ಶುಭ ಹಾರೈಸಿದರು. ದೈವಸ್ಥಾನದ ಆಡಳಿತ ಸಮಿತಿ ಅಧ್ಯಕ್ಷ ಗಣೇಶ್ ಸುವರ್ಣ ತುಂಬೆ, ನಾಲ್ಕು ಮನೆತನದವರಾದ ವಿಶ್ವನಾಥ ಪೊಣ್ಣಂಗಿಲಗುತ್ತು, ಲೋಕೇಶ್ ಬಂಗೇರ ಗಾಣದಪಡ್ಪು, ಲೋಕನಾಥ ಬಡಕೊಟ್ಟು, ಸಂಜೀವ ಪೆಲತ್ತಿಮಾರು, ಹಿಂದೂ ಯುವ ಸೇನೆಯ ಕೇಂದ್ರೀಯ ಮಂಡಳಿಯ ಯಶೋಧರ ಚೌಟ, ಬಂಟ್ವಾಳ ಪುಷ್ಪಜ್ಯೋತಿ ಗ್ರೂಪ್‌ನ ಮಾಲಕ ರವಿಚಂದ್ರ, ಉದ್ಯಮಿ ಶಶಿಕಿರಣ್ ತುಂಬೆ ಬಂಟ್ವಾಳ, ಹಿಂದೂ ಯುವ ಸೇನೆ ತಾಲೂಕು ಅಧ್ಯಕ್ಷ ವಸಂತ ಕುಮಾರ್ ಮಣಿಹಳ್ಳ, ಸ್ಥಳೀಯ ಪ್ರಮುಖರಾದ ಮಹಾಬಲ ಬಂಗೇರ, ಪ್ರದೀಪ್ ಶ್ರೀಹರಿ, ಹಿಂದೂ ಯುವ ಸೇನೆ ಪ್ರಮುಖರಾದ ಶಿವಪ್ರಸಾದ್ ಬಂಟ್ವಾಳ, ಸುರೇಶ್ ಕೆಮ್ಮಟೆ, ಸಂತೋಷ್ ಕಬ್ಬಿನಹಿತ್ಲು, ನವೀನ್ ಕುಮಾರ್ ಮಣಿಹಳ್ಳ, ಮನೋಜ್ ಕಬ್ಬಿನ ಹಿತ್ಲು,ವಿಶ್ವನಾಥ ಕಬ್ಬಿನಹಿತ್ಲು,ಅಕ್ಷಿತ್ ಮುಗ್ದಾಲ್ ಗುಡ್ಡೆ, ಋಷಿಕೇಶ್ ಮಣಿಹಳ್ಳ, ತಾರನಾಥ ಗೌಡ ಮಣಿ, ಕಿರಣ್ ಕುಮಾರ್,ಅನಿಲ್ ಕುಮಾರ್ ಮಂಡಾಡಿ, ಪ್ರೀತಂ ಮಂಡಾಡಿ ಮೊದಲಾದವರಿದ್ದರು.

ಉಮಾಶಂಕರ ದಡ್ಡಲಕಾಡು ಸ್ವಾಗತಿಸಿ, ವಂದಿಸಿದರು. ಇದಕ್ಕೂ ಮುನ್ನ ಬಂಟ್ವಾಳ ದೈವಸ್ಥಾನದ ವರ್ಷಾವಧಿ ಉತ್ಸವದ ಪ್ರಯುಕ್ತ ಕೊಡಿಮರ ನಿಲ್ಲಿಸುವ ಕಾರ್ಯ ನಡೆಯಿತು. ಏ.1ರಿಂದ ದೈವಗಳಿಗೆ ಪುನರ್ ಕಲಶಾಭಿಷೇಕ ಕಾರ್ಯಕ್ರಮಗಳು ಆರಂಭಗೊಂಡಿದ್ದು, ಬಳಿಕ ನಾಗ ತಂಬಿಲ ಸೇವೆ ಮಧ್ಯಾಹ್ನ ಅನ್ನಸಂತರ್ಪಣೆ ನಡೆದು ಏ.3ರ ವರೆಗೆ ವರ್ಷಾವಧಿ ನೇಮ ಜರುಗಲಿದೆ.



ಸುತ್ತ ಮುತ್ತ

ಇಂದು ಕಂಗುಮೆಯಲ್ಲಿ ಶ್ರೀ ಹನುಮಾನ್ ಜಯಂತಿ

ಮಂಜೇಶ್ವರ: ಮೀಂಜ ಸಮೀಪದ ಮೂಡಂಬೈಲು ಕಂಗುಮೆಯಲ್ಲಿ ನಡೆಸಿದ ಜ್ಯೋತಿಷ್ಯ ಪ್ರಶ್ನೆ ಚಿಂತನೆಯಲ್ಲಿ ಕಂಡು ಬಂದ ನೂತನ ಶ್ರೀ ವೀರಾಂಜನೇಯ ಮಂದಿರ ನಿರ್ಮಾಣಗೊಳ್ಳುವ ಸ್ಥಳದಲ್ಲಿ ಏ.2ರಂದು ಶ್ರೀ ಹನುಮಾನ್ ಜಯಂತಿ ಪ್ರಯುಕ್ತ ವಿವಿಧ ಕಾರ್ಯಕ್ರಮಗಳು ಜರಗಲಿವೆ. ಸಂಜೆ 6.30ಕ್ಕೆ ಉಪ್ಪಳ ಕೊಂಡೆವೂರು ಶ್ರೀ ನಿತ್ಯಾನಂದ ಯೋಗಾಶ್ರಮದ ಮಠದ ಶ್ರೀ ಯೋಗಾನಂದ ಸರಸ್ವತೀ ಸ್ವಾಮೀಜಿ ದೀಪ ಪ್ರಜ್ವಲನೆಗೊಳಿಸಿ ಆಶೀರ್ವಚನ ನೀಡುವರು. ಬಳಿಕ ಹನುಮಾನ್ ಚಾಲೀಸ್ ಪಠಣ, ಭಜನೆ ಇತ್ಯಾದಿ ಕಾರ್ಯಕ್ರಮ ನೆರವೇರಲಿದೆ.

ನಾಳೆ ಬಿಎಂಎಸ್ ಜಿಲ್ಲಾ ಕಾರ್ಯಾಲಯಕ್ಕೆ ಶಿಲಾನ್ಯಾಸ ಕಾರ್ಯಕ್ರಮ

ಕಾಸರಗೋಡು: ಭಾರತೀಯ ಮಜ್ದೂರ್ ಸಂಘದ ಕಾಸರಗೋಡು ಜಿಲ್ಲಾ ಕಾರ್ಯಾಲಯಕ್ಕೆ ಕರಂದಕ್ಕಾಡು ಶಿವಾಜಿನಗರದಲ್ಲಿ ಏ.3ರಂದು ಭೂಮಿಪೂಜೆ ಹಾಗೂ ಶಿಲಾನ್ಯಾಸ ನಡೆಸಲಾಗುವುದು. ಬೆಳಿಗ್ಗೆ 9.30ಕ್ಕೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ದಕ್ಷಿಣ ಕ್ಷೇತ್ರ ಪ್ರಚಾರಕ್ ಪಿ.ಎನ್.ಹರಿಕೃಷ್ಣ ಕುಮಾರ್ ಶಿಲಾನ್ಯಾಸ ನೆರವೇರಿಸುವರು. ಬಿಎಂಎಸ್ ಅಖಿಲ ಭಾರತ ಉಪಾಧ್ಯಕ್ಷ ಸಿ.ಉಣ್ಣಿಕೃಷ್ಣನ್ ಉಣ್ಣಿತ್ತಾನ್, ದಕ್ಷಿಣ ಕ್ಷೇತ್ರ ಸಂಘಟನಾ ಕಾರ್ಯದರ್ಶಿ ಎಂ.ಪಿ.ರಾಜೀವನ್, ರಾಜ್ಯಾಧ್ಯಕ್ಷ ಬಿ.ಶಿವಜಿ ಸುದರ್ಶನನ್, ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಕೆ.ಅಜಿತ್, ಸಂಘಟನಾ ಕಾರ್ಯದರ್ಶಿ ಕೆ.ಮಹೇಶ್‌ಕುಮಾರ್, ಸಿ.ಬಾಲಚಂದ್ರನ್, ಪಿ.ಮುರಳೀಧರನ್ ಸಹಿತ ವಿವಿಧ ಸಂಘಟನೆಗಳ ಪದಾಧಿಕಾರಿಗಳು, ನೇತಾರರು, ಕಾರ್ಯಕರ್ತರು ಭಾಗವಹಿಸುವರು.

ಕೇಂದ್ರೀಯ ವಿದ್ಯಾಲಯ: ನೋಂದಣಿ ಪ್ರಾರಂಭ

ಕಾಸರಗೋಡು: ಕಾಸರಗೋಡು ಪಿಎಂಶ್ರೀ ಕೇಂದ್ರೀಯ ವಿದ್ಯಾಲಯ ಸಂಖ್ಯೆ 2ರಲ್ಲಿ 2, 5, 6, 8,10ನೇ ತರಗತಿಗಳು, ಪ್ಲಸ್ ಟು (ವಿಜ್ಞಾನ) ಮತ್ತು ಪ್ಲಸ್ ಟು (ವಾಣಿಜ್ಯ) ತರಗತಿಗಳಲ್ಲಿ ಖಾಲಿ ಯಿರುವ ಸೀಟುಗಳಿಗೆ ಪ್ರವೇಶಕ್ಕಾಗಿ ಆಫ್‌ಲೈನ್ ನೋಂದಣಿ ಏ.2ರಿಂದ ಬೆಳಿಗ್ಗೆ 8 ರಿಂದ ಸಂಜೆ 4ರ ವರೆಗೆ ನಡೆಯಲಿದೆ. ವಿವರಗಳಿಗೆ 9605789843, 9447003356, 04994256788 ಕರೆ ಮಾಡಬಹುದು.

ಶಾಲಾ ತರಗತಿಗಳಿಗೆ ಪ್ರವೇಶ

ಕಾಸರಗೋಡು: ಕಾಞಂಗಾಡಿನ ಮೀನಾಪೀಸ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಬಾಲಕಿಯರ ಸರಕಾರಿ ಪ್ರಾದೇಶಿಕ ಮೀನುಗಾರಿಕೆ ತಾಂತ್ರಿಕ ಪ್ರೌಢಶಾಲೆಯಲ್ಲಿ 8, 9 ಮತ್ತು 10ನೇ ತರಗತಿಗಳಿಗೆ ಪ್ರವೇಶಗಳು ಪ್ರಾರಂಭವಾಗಿವೆ. ಅನುಮೋದಿತ ಮೀನುಗಾರ ಸದಸ್ಯರ ಮಕ್ಕಳಾದ ಬಾಲಕಿಯರಿಗೆ ಪ್ರವೇಶಾತಿ ಲಭ್ಯವಿದೆ. ಮಾಹಿತಿಗೆ 8304836946 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಏ.4: ಮುಂಡೋಳು ಕ್ಷೇತ್ರದಲ್ಲಿ ಪ್ರತಿಷ್ಠಾ ದಿನ

ಮುಳ್ಳೇರಿಯ: ಕಾರಡ್ಕ ಮುಂಡೋಳು ಶ್ರೀ ಮಹಾವಿಷ್ಣು ದುರ್ಗಾಪರಮೇಶ್ವರಿ ಶಾಸ್ತಾರ ದೇವಾಲಯದಲ್ಲಿ ಪ್ರತಿಷ್ಠಾ ದಿನ ಮಹೋತ್ಸವವು ಏ.4ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ. ತಂತ್ರಿವರ್ಯ ಬ್ರಹ್ಮಶ್ರೀ ದೇಲಂಪಾಡಿ ಗಣೇಶ ತಂತ್ರಿಗಳ ಪೌರೋಹಿತ್ಯದಲ್ಲಿ ಕಲಶ, ವಿಶೇಷ ಪೂಜೆ, ದೈವಗಳಿಗೆ ತಂಬಿಲ ಸಹಿತ ವಿವಿಧ ಧಾರ್ಮಿಕ ವಿಧಿ ವಿಧಾನಗಳನ್ನು ಹಮ್ಮಿಕೊಳ್ಳಲಾಗಿದೆ.

ಶಂಕರನಾರಾಯಣ ಭಟ್ ನಿಧನಕ್ಕೆ ಸಂತಾಪ

ಕಾಸರಗೋಡು: ಮಧೂರು ಸಮೀಪದ ಅರ್ಜುನಗುಳಿ ನಿವಾಸಿ ಶಂಕರನಾರಾಯಣ ಭಟ್ ಅವರ ನಿಧನಕ್ಕೆ ಕಾಸರಗೋಡು ಬ್ರಾಹ್ಮಣ ಮಹಾಸಭಾ ಮತ್ತು ಕಾಸರಗೋಡಿನ ಕನ್ನಡಿಗರು ವಾಟ್ಸ್‌ಆ್ಯಪ್ ಗ್ರೂಪ್ ಸಂತಾಪ ವ್ಯಕ್ತಪಡಿಸಿದೆ. ಕಾಸರಗೋಡು ಹವ್ಯಕ ವಲಯದ ಮಾಜಿ ಅಧ್ಯಕ್ಷರಾಗಿದ್ದ ಶಂಕರನಾರಾಯಣ ಭಟ್ ಶ್ರೀ ರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳ ಹಾಗೂ ಶ್ರೀ ಮಠದ ಶಿಷ್ಯರಾಗಿದ್ದರು. ಹವ್ಯಕ ಸಮಾಜದ ಮುಂದಾಳು, ಕುಮಾರಮಂಗಲ, ಮಧೂರು, ಪೆರಡಾಲ ಮೊದಲಾದ ಕ್ಷೇತ್ರಗಳ ಕಾರ್ಯಕ್ರಮಗಳಲ್ಲಿ ಸಕ್ರಿಯ ರಾಗಿ ತೊಡಗಿಸಿಕೊಂಡಿದ್ದರು. ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಕಾರ್ಯಕ್ರಮ ಗಳಲ್ಲಿ ನಿರಂತರ ಪಾಲ್ಗೊಳ್ಳುತ್ತಿದ್ದ ಭಟ್ ಅವರ ಅಗಲುವಿಕೆ ತುಂಬಲಾರದ ನಷ್ಟವೆಂದು ಕಾಸರಗೋಡು ಬ್ರಾಹ್ಮಣ ಮಹಾಸಭಾ ಹಾಗೂ ಕಾಸರಗೋಡಿನ ಕನ್ನಡಿಗರು ಸಂಘಟನೆಯ ಸಂಚಾಲಕ ಡಿ.ಜಯನಾರಾಯಣ ತಾಯನ್ನೂರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಸರಗೋಡು ಜಿಲ್ಲೆಯಲ್ಲಿ ಬಿರುಸಿನಿಂದ ನಡೆಯುತ್ತಿದೆ ವಿಧಾನಸಭಾ ಚುನಾವಣೆಗೆ ಸಿದ್ಧತೆ

ಉದುಮ-ಮಂಜೇಶ್ವರ ಕ್ಷೇತ್ರಗಳ ಮತಯಂತ್ರ ಕಾರ್ಯಾರಂಭ

ಕಾಸರಗೋಡು: ಕಾಸರಗೋಡು ಜಿಲ್ಲೆಯಲ್ಲಿ ವಿಧಾನ ಸಭಾ ಚುನಾವಣೆಗೆ ಬಿರುಸಿನಿಂದ ಸಿದ್ಧತೆಗಳು ನಡೆಯುತ್ತಿವೆ. ಜಿಲ್ಲೆಯ 5 ವಿಧಾನಸಭಾ ಕ್ಷೇತ್ರಗಳಲ್ಲಿ ಮತದಾನ ಆರಂಭವಾಗುವ ಮುನ್ನ ಮತಯಂತ್ರಗಳ ಕಾರ್ಯಾರಂಭವಾಗಿದ್ದು, ಮೊದಲ ಹಂತದಲ್ಲಿ ಉದುಮ , ಮಂಜೇಶ್ವರ ಕ್ಷೇತ್ರಗಳ ಮತಯಂತ್ರಗಳ ಕಾರ್ಯಾರಂಭ ಬುಧವಾರ ಜರಗಿತು.



ಮಂಜೇಶ್ವರ ಕ್ಷೇತ್ರದ ವಿತರಣಾ ಕೇಂದ್ರವಾದ ಕಾಸರಗೋಡು ಸರಕಾರಿ ಕಾಲೇಜಿನಲ್ಲಿ ಮತ್ತು ಉದುಮ ಕ್ಷೇತ್ರದ ವಿತರಣಾ ಕೇಂದ್ರವಾದ ನಾಯನ್ಮಾರಮೂಲೆ ಟಿಐಎಚ್‌ಎಸ್ ಶಾಲೆಯಲ್ಲಿ ಮತಯಂತ್ರಗಳ ಕಾರ್ಯಾರಂಭ ಮಾಡಲಾಯಿತು. ಈ ಕಾರ್ಯವು ಮತಯಂತ್ರಗಳಲ್ಲಿ ಅಭ್ಯರ್ಥಿಗಳ ಹೆಸರುಗಳು ಮತ್ತು ಚಿಹ್ನೆಗಳನ್ನು ಹೊಂದಿಸುವುದನ್ನು ಒಳಗೊಂಡಿದೆ. ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಮ್ಮುಖದಲ್ಲಿ ಚಟುವಟಿಕೆ ನಡೆಸಲಾಯಿತು.

ಯಂತ್ರಗಳ ನಿಖರತೆ ಪರಿಶೀಲಿಸಲು, ಶೇ.5ರಷ್ಟು ಇವಿಎಂಗಳ ಮೇಲೆ ಅಣಕು ಸಮೀಕ್ಷೆ ಏರ್ಪಡಿಸಲಾಯಿತು. ಏ.8ರಂದು ಮತಗಟ್ಟೆ ಅಧಿಕಾರಿಗಳಿಗೆ ನಿಯೋಜಿಸಲಾದ ಇವಿಎಂಗಳು, ವಿವಿಪ್ಯಾಟ್ ಯಂತ್ರಗಳನ್ನು ವಿತರಿಸಲು ಮಾತ್ರ ಸ್ಟ್ರಾಂಗ್ ರೂಮ್ ತೆರೆಯಲಾಗುತ್ತದೆ. ಏ.9 ರಂದು ಮತದಾನ ನಡೆಯಲಿದೆ.

ಜಿಲ್ಲಾ ಚುನಾವಣಾ ಅಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಇವಿಎಂ ಕಾರ್ಯಾರಂಭದ ನೇತೃತ್ವ ವಹಿಸಿದ್ದರು. ಕ್ಷೇತ್ರ ಮಟ್ಟದಲ್ಲಿ ಮಂಜೇಶ್ವರ ಕ್ಷೇತ್ರದ ಚುನಾವಣಾಧಿಕಾರಿ, ಎಲ್‌ಆರ್ ಉಪ ಕಲೆಕ್ಟರ್ ವಿ.ಪಿ.ರಘುಮಣಿ ಮತ್ತು ಉದುಮ ಕ್ಷೇತ್ರದ ಚುನಾವಣಾಧಿಕಾರಿ, ಎಲ್‌ಎ ಉಪ ಕಲೆಕ್ಟರ್ ಲಿಪು ಎಸ್. ಲಾರೆನ್ಸ್ ಅವರು ಇವಿಎಂ ಕಾರ್ಯಾರಂಭದಲ್ಲಿ ಭಾಗವಹಿಸಿದ್ದರು. ಕಾಸರಗೋಡು, ಕಾಞಂಗಾಡು ಮತ್ತು ತೃಕ್ಕರೀಪ್ಪುರ ಕ್ಷೇತ್ರಗಳ ಇವಿಎಂ ಮೆಷಿನ್‌ಗಳ ಕಾರ್ಯಾರಂಭ ಏ.2ರಂದು ಕಾಸರಗೋಡು ಸರಕಾರಿ ಕಾಲೇಜು ಮತ್ತು ಕಾಞಂಗಾಡು ದುರ್ಗಾ ಹೈಯರ್ ಸೆಕೆಂಡರಿ ಶಾಲೆಯಲ್ಲಿ ನಡೆಯಲಿದೆ.

ಮತಗಟ್ಟೆ ಅಧಿಕಾರಿಗಳಿಗೆ ಕೇರಳ ರಾಜ್ಯ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಕಾಸರಗೋಡು ಜಿಲ್ಲೆ ವಿವಿಧ ಕ್ಷೇತ್ರಗಳಲ್ಲಿ ಸ್ಥಾಪಿಸಲಾದ ಅಂಚೆ ಮತದಾನ ಕೇಂದ್ರಗಳ ಮೂಲಕ ಬುಧವಾರ ಅಂಚೆ ಮತಪತ್ರ ವ್ಯವಸ್ಥೆಮುಖೇನ 107 ಜನರು ಮತ ಚಲಾಯಿಸಿದ್ದಾರೆ. ಅಂಚೆ ಮತದಾನ ನಡೆಸಲು ಮತಗಟ್ಟೆ ಅಧಿಕಾರಿಗಳಿಗೆ ಸೌಲಭ್ಯ ಒದಗಿಸಲಾಗುವುದೆಂದು ಜಿಲ್ಲಾಧಿಕಾರಿ

ಸಿಸಿ ಕ್ಯಾಮರಾ ಕಣ್ಗಾವಲು

ಮತಗಳನ್ನು ದಾಖಲಿಸಿದ ಇವಿಎಂ ಯಂತ್ರಗಳ ವಿತರಿಸಿದ ಕೇಂದ್ರಗಳಲ್ಲಿ ಭದ್ರವಾಗಿ ಇರಿಸಲಾಗುತ್ತದೆ. ವಿಶೇಷವಾಗಿ ಸ್ಟ್ರಾಂಗ್ ರೂಮ್‌ಗಳನ್ನು ಹೊಂದಿರುವ ಎಣಿಕೆ ಕೇಂದ್ರಗಳಲ್ಲಿ ಇವಿಎಂ ಯಂತ್ರಗಳಲ್ಲಿ ಸಂಗ್ರಹಿಸಿಡಲಾಗುವುದು. ಏ.9 ರಿಂದ ಮೇ 4ರವರೆಗೆ ಈ ಮತಯಂತ್ರಗಳಿಗೆ ಕೇಂದ್ರ ಸೇನೆ ಮತ್ತು ಕೇರಳ ಸಶಸ್ತ್ರ ಪೊಲೀಸರ ಭಾರೀ ಭದ್ರತೆ ಏರ್ಪಡಿಸಲಾಗುವುದು. ಮತ ಯಂತ್ರಗಳಿರುವ ಪ್ರದೇಶ ಸಂಪೂರ್ಣ ಸಿಸಿಟಿವಿ ಕ್ಯಾಮರಾಗಳ ಕಣ್ಗಾವಲಿನಲ್ಲಿರುತ್ತದೆ ಎಂದು ಜಿಲ್ಲಾ ಚುನಾವಣಾ ವಿಭಾಗವು ತಿಳಿಸಿದೆ.

ತಿಳಿಸಿದ್ದಾರೆ. ಅಂಚೆ ಮತಪತ್ರಗಳನ್ನು ಬಳಸಿಕೊಂಡು ಮತ ಚಲಾಯಿಸುವ ಮತಗಟ್ಟೆ ಅಧಿಕಾರಿಗಳಿಗೆ ಮತಗಟ್ಟೆ ವಿತರಣಾ ಕೇಂದ್ರಗಳು ಮತ್ತು ಚುನಾವಣಾ ತರಬೇತಿ ಕೇಂದ್ರಗಳಲ್ಲಿ ಮತದಾರರ ಸೌಲಭ್ಯ ಕೇಂದ್ರ (ವಿಎಫ್‌ಸಿ) ಸ್ಥಾಪಿಸಲಾಗಿದೆ. ಏ.4ರಿಂದ ವಿಎಫ್‌ಸಿಗಳು ಸಂಪೂರ್ಣ ಕಾರ್ಯನಿರ್ವಹಿಸಲಿವೆ. ಜಿಲ್ಲೆಯ ಅಧಿಕಾರಿಗಳು ತಮಗೆ ಮತದಾನದ ಕರ್ತವ್ಯ ನಿಯೋಜಿಸಲಾದ ವಿಧಾನಸಭಾ ಕ್ಷೇತ್ರಗಳಲ್ಲಿನ ತರಬೇತಿ ಕೇಂದ್ರಗಳಲ್ಲಿ ಸ್ಥಾಪಿಸಲಾದ ಮತದಾರರ ಸೌಲಭ್ಯ ಕೇಂದ್ರಗಳ ಮೂಲಕ ಮತನೋಂದಾಯಿಸಬಹುದು. ಇತರ ಜಿಲ್ಲೆಗಳಲ್ಲಿ ಮತಗಳ ಹೊಂದಿರುವ ಕಾಸರಗೋಡು ಜಿಲ್ಲೆಯ ಮತಗಟ್ಟೆ ಅಧಿಕಾರಿಗಳು ವಿಎಫ್‌ಸಿಯಲ್ಲಿ ಮತದಾನದ ಹಕ್ಕನ್ನು ಚಲಾಯಿಸಬಹುದು ಎಂದು ಡೀಸಿ ಹೇಳಿದ್ದಾರೆ.

ವಿಎಫ್‌ಸಿಗಳು ಏ.7ರವರೆಗೆ ತರಬೇತಿ ಕೇಂದ್ರಗಳಿಗೆ ಸಂಬಂಧಿಸಿದಂತೆ ಕಾರ್ಯನಿರ್ವಹಿಸುತ್ತವೆ. ಕಾಸರಗೋಡು ಸರಕಾರಿ ಕಾಲೇಜು, ನಾಯನ್ಮಾರ್‌ಮೂಲೆ ಟಿಐಎಚ್‌ಎಸ್ ಶಾಲೆ, ಕಾಞಂಗಾಡ್ ದುರ್ಗಾ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಹೆಚ್ಚಿನ ವಿಎಫ್‌ಸಿ ಕೌಂಟರ್‌ಗಳ ಕಾರ್ಯನಿರ್ವಹಿಸುವ ನಿಟ್ಟಿನಲ್ಲಿ ಚುನಾವಣಾ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಏ.8ರಂದು ಮತದಾನ ಸಾಮಗ್ರಿಗಳನ್ನು ವಿತರಿಸಲಾಗುತ್ತದೆ. ಹೆಚ್ಚಿನ ಕೌಂಟರ್‌ಗಳ ಮೂಲಕ ಅರ್ಜಿ ಸಲ್ಲಿಸಿದ ಮತಗಟ್ಟೆ ಅಧಿಕಾರಿಗಳಿಗೆ ಅಂಚೆ ಮತಪತ್ರ ಬಳಸಿಕೊಂಡು ಮತ ಚಲಾಯಿಸಲು ಸೌಲಭ್ಯ ಒದಗಿಸಲಾಗುವುದೆಂದು ಜಿಲ್ಲಾಧಿಕಾರಿ ಮಾಹಿತಿ ನೀಡಿದ್ದಾರೆ.

ಮನಸ್ಸಿನಲ್ಲಿ ನಿರ್ದಿಷ್ಟ ಗುರಿ ಇಟ್ಟುಕೊಂಡರೆ ಸಾಧನೆ ಸುಲಭ ಸಾಧ್ಯ: ಒಡಿಯೂರು ಶ್ರೀ



ಪೆರ್ಲ: ಮಾನವನ ಸಂಕಲ್ಪಕ್ಕಿಂತ ಮಿಗಿಲಾದ ಶಕ್ತಿ ಬೇರೊಂದಿಲ್ಲ, ಮನಸ್ಸಿನಲ್ಲಿ ದೃಢವಾದ ಉದ್ದೇಶ, ಗುರಿ ಇಟ್ಟುಕೊಂಡರೆ ಏನನ್ನೂ ಸಾಧಿಸಬಹುದು. ಇಚ್ಛಾಶಕ್ತಿ ಯಶಸ್ಸಿನ ಮೂಲವಾಗಿದ್ದು, ಸಕಾರಾತ್ಮಕ ಬದಲಾವಣೆಗೆ ದಾರಿ ಮಾಡಿಕೊಡುವುದು. ದೇವಳ ಜೀರ್ಣೋದ್ಧಾರ ಮಾನವನ ಆತ್ಮೋದ್ಧಾರಕ್ಕೆ ಪ್ರೇರಣೆಯಾಗುವುದು ಎಂದು ಒಡಿಯೂರು ಶ್ರೀ ಗುರುದೇವಾನಂದ ಸ್ವಾಮೀಜಿ ಹೇಳಿದ್ದಾರೆ.

ಅವರು ನೆಲ್ಲಿಕುಂಜೆ ಶ್ರೀ ವಿಷ್ಣುಮೂರ್ತಿ ದೇವಳ ನವೀಕರಣ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶದಂಗವಾಗಿ ನಡೆದ ಧಾರ್ಮಿಕ ಸಭೆಯಲ್ಲಿ ಆಶೀರ್ವಚನ ನೀಡಿದರು.

ಮಾಣಿಲ ಶ್ರೀಧಾಮದ ಶ್ರೀ ಮೋಹನದಾಸ ಸ್ವಾಮೀಜಿ ಆಶೀರ್ವಚನ ನೀಡಿದರು. ಬ್ರಹ್ಮಕಲಶ ಸಮಿತಿ ಅಧ್ಯಕ್ಷ ರಮಾನಾಥ ರೈ ಮೇಗಿನಕಡಾರು ಅಧ್ಯಕ್ಷತೆ ವಹಿಸಿದ್ದರು.

ಪ್ರವಚನಕಾರ ನಟರಾಜ ವರ್ಕಳ ಮಾತನಾಡಿ, ಕ್ಷೇತ್ರಗಳು ಸಮಾಜದ ಕೇಂದ್ರಬಿಂದು. ಸನಾತನ ಧರ್ಮದ ರಕ್ಷಣೆಯಲ್ಲಿ ದೇವಸ್ಥಾನಗಳು ಪ್ರಧಾನ ಪಾತ್ರ ವಹಿಸುತ್ತಿವೆ. ಒಗ್ಗಟ್ಟು, ಸಾಮಾಜಿಕ ಕಳಕಳಿಯಿಂದ ದೇಶ ರಕ್ಷಿಸಬೇಕು. ಧರ್ಮ ಎನ್ನುವುದು ಗುರುತರ ಜವಾಬ್ದಾರಿ. ಧರ್ಮದಿಂದ ಸಂಪಾದನೆ ಮಾಡಿ ದೈವಿಕ ಕಾರ್ಯದಲ್ಲಿ ವಿನಿಯೋಗಿಸಬೇಕು ಎಂದರು.

ಬದಿಯಡ್ಕ ಗ್ರಾ.ಪಂ. ಅಧ್ಯಕ್ಷ ಶಂಕರ ಡಿ., ಸದಸ್ಯ ಮಧುಸೂದನ ಕಂಗಿಲ, ನೀರ್ಚಾಲು, ಮಹಾಜನ ಸಂಸ್ಕೃತ ಕಾಲೇಜು ಹೈಸ್ಕೂಲು ಅಧ್ಯಕ್ಷ ಜಯದೇವ ಖಂಡಿಗೆ, ಡಾ.ಶ್ರೀಪತಿ ಕಜಂಪಾಡಿ, ಇಡಿಯಡ್ಕ ಕ್ಷೇತ್ರದ ಕಾರ್ಯದರ್ಶಿ ಸದಾನಂದ ಶೆಟ್ಟಿ ಕುದ್ದ, ರಾಜ್ಯ ಕಿರು ಕೈಗಾರಿಕಾ ಸಂಘಟನೆ ಕಾಸರಗೋಡು ಜಿಲ್ಲಾಧ್ಯಕ್ಷ ರಾಜಾರಾಮ ಪೆರ್ಲ, ಡಾ. ಜಯದೇವ ಕಂಗಿಲ, ಡಾ.ಜಯ ಗೋವಿಂದ ಉಕ್ಕಿನಡ್ಕ ಮಾತನಾಡಿದರು. ಚೇರ್ಕಬೆ ಕ್ಷೇತ್ರದ ಮೊಕ್ತೇಸರ ಕಾಯದರ್ಶಿ ಕೃಷ್ಣ ಭಟ್ ಕೋಟೆ, ಬ್ರಹ್ಮಕಲಶ ಸಮಿತಿ ಕಾರ್ಯಾಧ್ಯಕ್ಷ ಬಾಲಸುಬ್ರಹ್ಮಣ್ಯ ಸರ್ವಮಲೆ ಇದ್ದರು. ಬ್ರಹ್ಮಕಲಶ ಸಮಿತಿ ಕಾರ್ಯದರ್ಶಿ ಮಹೇಶ ಗುತ್ತು ಸ್ವಾಗತಿಸಿ, ಗೋಪಾಲಕೃಷ್ಣ ಶರ್ಮ ಸರವು ವಂದಿಸಿ, ಸುರೇಶ ನೆಲ್ಲಿಕುಂಜೆ ನಿರೂಪಿಸಿದರು.

ದೇವಳ ಕಾರ್ಯದಲ್ಲಿ ತೊಡಗಿಸಿಕೊಳ್ಳಿ

ಧೀಶಕ್ತಿಯಿಂದ ಪರಿಣಾಮಕಾರಿಯಾಗಿ ಕೆಲಸ ಮಾಡಬಹುದು. ಒಗ್ಗಟ್ಟು, ಸಮಭಾವ, ತ್ಯಾಗ , ಸಹನೆ, ಸನಾತನ ಧರ್ಮದ ಮೂಲತತ್ವ ಪ್ರಕೃತಿಯಲ್ಲಿ ದೈವಿಕತೆ ಕಾಣಬೇಕು. ಮುಗ್ಧ ಭಕ್ತಿಗೆ ದೇವರು ಒಲಿಯುತ್ತಾನೆ. ದೇವಸ್ಥಾನ ಕಟ್ಟುವುದು ಮಹಾತ್ಕಾರ್ಯ ವಲ್ಲ, ದೇವಸ್ಥಾನ ಬೆಳೆಸುವುದು, ಪಾವಿತ್ರ್ಯತೆ ಉಳಿಸುವುದು ಮುಖ್ಯ.. ದೇವಳದ ಪ್ರತಿಯೊಂದು ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು.

● ಮಾಣಿಲ ಶ್ರೀ

ಇಂದಿನಿಂದ ಬ್ರಹ್ಮಶ್ರೀ ಮುಗೇರ ಮಹಾಕಾಳಿ, ಪರಿವಾರ ದೈವಗಳ ಪುನರ್ ಪ್ರತಿಷ್ಠೆ, ಬ್ರಹ್ಮಕಲಶ

ಮಂಜೇಶ್ವರ: ಕುಂಜತ್ತೂರು ತೂಮಿನಾಡು ಬ್ರಹ್ಮಶ್ರೀ ಮುಗೇರ ಮಹಾಕಾಳಿ ಹಾಗೂ ಪರಿವಾರ ದೈವಗಳ ಪುನರ್ ಪ್ರತಿಷ್ಠೆ ಹಾಗೂ ಬ್ರಹ್ಮಕಲಶೋತ್ಸವ ಮತ್ತು ನೇಮ ಏ.2ರಿಂದ 6ರ ವರೆಗೆ ಶ್ರೀ ಕ್ಷೇತ್ರದ ತಂತ್ರಿವರ್ಯರಾದ ವೇದಮೂರ್ತಿ ಕೆ.ಮರಿ ಭಟ್ ಅವರ ನೇತೃತ್ವದಲ್ಲಿ ಜರಗಲಿದೆ.

ಏ.2ರಂದು ಅಪರಾಹ್ನ 3 ಗಂಟೆಗೆ ಹಸಿರುವಾಣಿ ಹೊರೆಕಾಣಿಕೆ ಮೆರವಣಿಗೆ, ಸಂಜೆ 4 ಗಂಟೆಗೆ ಧಾರ್ಮಿಕ ಸಭೆ, ಕೊಂಡೆವೂರು ಶ್ರೀ ನಿತ್ಯಾನಂದ ಯೋಗಾಶ್ರಮ ಮಠದ ಶ್ರೀ ಯೋಗಾನಂದ ಸರಸ್ವತಿ ಸ್ವಾಮಿಜಿಯವರಿಂದ ಆಶೀರ್ವಚನ, 6 ಗಂಟೆಗೆ ತಂತ್ರಿವರ್ಯರಿಗೆ ಪೂರ್ಣಕುಂಭ ಸ್ವಾಗತ ಜರಗಲಿದೆ.

ಏ.3ರಂದು ಬೆಳಗ್ಗೆ 9.20ರ ವೃಷಭ ಲಗ್ನ ಶುಭಮುಹೂರ್ತದಲ್ಲಿ ಶ್ರೀ ಮುಗೇರ ತನ್ನಿಮಾನಿಗ ಮಹಾಕಾಳಿ, ಕೊಡಮಣಿತ್ತಾಯ, ಪಂಜುರ್ಲಿ, ಗುಳಿಗ ಬೈರವಾದಿ ದೈವಗಳ ಪುನರ್ ಪ್ರತಿಷ್ಠೆ ಹಾಗೂ ಬ್ರಹ್ಮಕಲಶಾಭಿಷೇಕ, ರಾತ್ರಿ 7 ಗಂಟೆಗೆ ಧಾರ್ಮಿಕ ಸಭೆ, ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನಮ್‌ನ ಶ್ರೀ ಗುರುದೇವಾನಂದ ಸ್ವಾಮೀಜಿಯವರಿಂದ ಆಶೀರ್ವಚನ, ರಾತ್ರಿ 9ರಿಂದ ಶಾರದಾ ಆರ್ಟ್ಸ್ ಕಲಾವಿದರು ಮಂಜೇಶ್ವರ ಇವರಿಂದ 'ಒಂತೆ ಲೇಟಾಂಡ್' ಎಂಬ ತುಳು ನಾಟಕ ನಡೆಯಲಿದೆ.

ಏ.4ರಂದು ರಾತ್ರಿ 9ರಿಂದ ಕೊಡಮಣಿತ್ತಾಯ ದೈವದ ನೇಮ, ರಾತ್ರಿ 12 ಗಂಟೆಗೆ ಮಹಾಕಾಳಿ ದೈವದ ನೇಮೋತ್ಸವ, ಏ.5ರಂದು ಸಂಜೆ 6ರಿಂದ ಧರ್ಮದೈವ ಗುಳಿಗ ನೇಮ, 9 ಗಂಟೆಗೆ ಧರ್ಮದೈವ ಪಂಜುರ್ಲಿ ನೇಮ, 12 ಗಂಟೆಗೆ ಬ್ರಹ್ಮ ಮುಗೇರ ಹಾಗೂ ತನ್ನಿಮಾನಿಗ ದೈವಗಳ ನೇಮ, ಏ.6ರಂದು ಬೆಳಗ್ಗೆ ಸೂರ್ಯೋದಯಕ್ಕೆ ಬ್ರಹ್ಮಶ್ರೀ ಮುಗೇರ ಹಾಗೂ ತನ್ನಿಮಾನಿಗ ದೈವಗಳ ಗಂಧಪ್ರಸಾದ, ಭಂಡಾರ ಇಳಿಯುವುದು, ಮಧ್ಯಾಹ್ನ 1 ಗಂಟೆಗೆ ಕುರಿ ತಂಬಿಲ ಪ್ರಸಾದ ವಿತರಣೆ ನಡೆಯಲಿದೆ.

ಹಸಿರುವಾಣಿ ಹೊರೆಕಾಣಿಕೆ

ಏ.2ರಂದು ಅಪರಾಹ್ನ 3 ಗಂಟೆಗೆ ಹಸಿರುವಾಣಿ ಹೊರೆಕಾಣಿಕೆ ಮೆರವಣಿಗೆ ಉದ್ಯಾವರ ಮಾಡ ಅರಸು ಮಂಜಿಷ್ಣಾರ್ ಕ್ಷೇತ್ರದಲ್ಲಿ ಪ್ರಾರ್ಥನೆ ಮಾಡಿದ ಬಳಿಕ ಮೇಲಿನ ತಲಪಾಡಿಯಿಂದ ಭಜನೆ, ಕುಣಿತ ಭಜನೆ, ಮುತ್ತುಕೊಡೆ, ಚೆಂಡೆ ವಾದ್ಯಘೋಷಗಳೊಂದಿಗೆ ವಿಜೃಂಭಣೆಯಿಂದ ಹೊರಡಲಿದೆ.

ಬಂದಡ್ಕ ಶಾಲೆಯ ಪ್ಲಾಟಿನಂ ಜ್ಯುಬಿಲಿ ಆಚರಣೆ ಉದ್ಘಾಟನೆ



ಕಾಸರಗೋಡು: ಮೂರು ತಲೆಮಾರುಗಳ ಅಕ್ಷರ ಜ್ಯೋತಿಯಾಗಿ ರುವ ಬಂದಡ್ಕ ಜಿಎಚ್‌ಎಸ್‌ಎಸ್ ಶಾಲೆಯ 74ನೇ ವಾರ್ಷಿಕೋತ್ಸವ ಒಂದು ವರ್ಷ ಕಾಲ ನಡೆಯಲಿರುವ 'ಪ್ಲಾಟಿನಂ ಜ್ಯುಬಿಲಿ' ಆಚರಣೆಯ ಉದ್ಘಾಟನೆ ಮತ್ತು ಲೋಗೋ ಬಿಡುಗಡೆಯನ್ನು ಖ್ಯಾತ ಸಾಹಿತಿ ಅಂಬಿಕಾಸುತನ್ ಮಾಂಗಾಡ್ ನೆರವೇರಿಸಿದರು.

1952ರಲ್ಲಿ ಸಣ್ಣಯ ಮಾಸ್ಟರ್ ಅವರು ಬಂದಡ್ಕದಲ್ಲಿ ಏಕೋಪಾಧ್ಯಾಯ ಶಾಲೆ ಆರಂಭಿಸುವ ಮೂಲಕ ನೆರವೇರಿಸಿದರು ಎಂದು ಅವರು ಹೇಳಿದರು.

ಲೋಗೋ ಬಿಡುಗಡೆ

ಸ್ಟೆಫಿ ಪಿ.ಎ. ಎಂಬವರು ವಿನ್ಯಾಸಗೊಳಿಸಿದ ಲೋಗೋವನ್ನು ಈ ಸಂದರ್ಭ ಬಿಡುಗಡೆಗೊಳಿಸಲಾಯಿತು.

ಪ್ಲಾಟಿನಂ ಜ್ಯುಬಿಲಿ ಸಮಿತಿಯ ಕಾರ್ಯಾಧ್ಯಕ್ಷ ಸುರೇಶ್ ಪಿ.ವಿ. ಅಧ್ಯಕ್ಷತೆ ವಹಿಸಿದ್ದರು. ಶಾಲಾ ಮುಖ್ಯೋಪಾಧ್ಯಾಯ ರಾಘವ ಎಂ.ಎನ್. ವಾರ್ಷಿಕ ವರದಿ ಮಂಡಿಸಿದರು. ಎಸ್ಸೆಸ್ಸೆಲ್ಸಿ ಹಾಗೂ ಪ್ಲಸ್ ಟು ಪರೀಕ್ಷೆಗಳಲ್ಲಿ ಅತ್ಯುನ್ನತ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಅನ್ನಮ್ಮ ಜೋಯ್ ಮಟ್ಟತ್ತಿಲ್ ಮತ್ತು ವಿನೋದ್ ಟಿ.ವಿ. ಅವರು ದತ್ತಿನಿಧಿಗಳನ್ನು ವಿತರಿಸಿದರು.

ಇದೇ ಸಂದರ್ಭ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಸ್ಮರಣಿಕೆ ವಿತರಿಸಲಾಯಿತು.

ಸಂಘಟನಾ ಸಮಿತಿ ಪೋಷಕರಾದ ಶೋಭನಾ ಬಾಲಚಂದ್ರನ್, ಕೆ.ಎನ್. ರಾಜನ್, ಶ್ರೀಜಿತ್ ಎಂ.ಪಿ., ರಮ್ಯಾ ಆರ್., ಕೆ.ರಾಧಾಕೃಷ್ಣನ್ ನಂಬಿಯಾರ್, ಜೋಸ್ ಪಾರತ್ತಟ್ಟೇಲ್, ಕೆ.ಬಲರಾಮನ್ ನಂಬಿಯಾರ್, ಸಿಂಧು ಆಲಿಂಗಲ್, ಹರಿದಾಸ್ ಬಂದಡ್ಕ ಸಾಬು ಅಬ್ರಹಾಂ, ವಿ.ದಾಸ್ ಮಾಸ್ಟರ್, ಅಜಯ ಪಿ.ಎನ್., ಜ್ಯೋತಿಲಕ್ಷ್ಮಿ ಟೀಚರ್ ಶುಭ ಹಾರೈಸಿದರು.

ಪ್ರಚಾರ ಸಮಿತಿ ಸಂಚಾಲಕ ಸುಭಾಷ್, ಆಹಾರ ಸಮಿತಿ ಅಧ್ಯಕ್ಷ ಚರಣ್ ಕುಮಾರ್, ಬಾಬು ಮಾಸ್ಟರ್ ಮತ್ತಿತರರಿದ್ದರು. ಪ್ರಾಂಶುಪಾಲೆ ರೇಖಾದಾಸ್ ಕೆ.ಪಿ.. ಸ್ವಾಗತಿಸಿ, ವಿಜಯನ್ ಎಂ.ಎಚ್. ವಂದಿಸಿದರು. ಪ್ಲಾಟಿನಂ ಜ್ಯುಬಿಲಿ ಕಾರ್ಯಕ್ರಮದ ಸಂಚಾಲಕಿ ವಸಂತಕುಮಾರಿ ಟಿ.ಕೆ. ಜ್ಯುಬಿಲಿ ವರ್ಷದ ಕಾರ್ಯಕ್ರಮಗಳ ಕುರಿತು ವಿವರಿಸಿದರು. ಬಳಿಕ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆದವು. 50ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡ ನೃತ್ಯರೂಪಕದೊಂದಿಗೆ ಪ್ಲಾಟಿನಂ ಜುಬಿಲಿ ಆಚರಣೆಗಳಿಗೆ ಅಧಿಕೃತ ಚಾಲನೆ ನೀಡಲಾಯಿತು.

ದೀಪ ಪೂಜನ ಕಾರ್ಯಕ್ರಮ



ಉಪ್ಪಳ: ದುರ್ಗಾಶಕ್ತಿ ಮಾತೃಮಂಡಳಿ ಸಮಿತಿ ಮತ್ತು ಶ್ರೀರಾಮ ಬಾಲಗೋಕುಲ ಸಮಿತಿ ಛತ್ರಪತಿನಗರ ದರ್ಬೆತ್ತಡ್ಕ ಇದರ ನೇತೃತ್ವದಲ್ಲಿ ದೀಪ ಪೂಜನ ಕಾರ್ಯಕ್ರಮ ನಡೆಯಿತು. ಪುಂಡರೀಕಾಕ್ಷ ಬೆಳ್ಳೂರು ಯೋಗಾಚಾರ್ಯರು ಶ್ರೀ ಸಾಂದೀಪನಿ ಯೋಗಾಶ್ರಮ ಪಳ್ಳತ್ತಡ್ಕ ಕಾಸರಗೋಡು ಇದರ ಯೋಗಾಚಾರ್ಯರು ನಡೆಸಿಕೊಟ್ಟರು. ಬದಿಯಡ್ಕ ಗ್ರಾ.ಪಂ. ಅಧ್ಯಕ್ಷ ಶಂಕರ ಡಿ., ಗ್ರಾ.ಪಂ.ಸದಸ್ಯರಾದ ಹರೀಶ್ ಶುಭ ಹಾರೈಸಿದರು. ಶ್ರೀರಾಮ ಬಾಲಗೋಕುಲ ರಕ್ಷಾಧಿಕಾರಿ ಸೂರ್ಯಪ್ರಕಾಶ್ ಶೆಟ್ಟಿ , ಬಾಲಗೋಕುಲ ಅಧ್ಯಕ್ಷ ಶಶಿಕುಮಾರ್ ಪ್ರಧಾನ ಕಾರ್ಯದರ್ಶಿ ದೀಕ್ಷಿತ್, ದುರ್ಗಾ ಶಕ್ತಿ ಮಾತೃ ಸಮಿತಿ ಸದಸ್ಯರು ಉಪಸ್ಥಿತರಿದ್ದರು. ಹಿಂಜಾವೇ ವೇದಿಕೆ ಛತ್ರಪತಿನಗರ ದರ್ಬೆತ್ತಡ್ಕ , ದುರ್ಗಾಶಕ್ತಿ ಕುಣಿತ ಭಜನಾ ತಂಡ ಪರಂಬಳ ಕಯ್ಯಾರು ಇದರ ಸದಸ್ಯರು ಕಾರ್ಯಕ್ರಮಕ್ಕೆ ಸಹಕರಿಸಿದರು. ಮಾತೆಯರು, ಮಕ್ಕಳು ಭಾಗವಹಿಸಿದರು.

ಮಧೂರು ದೇವಸ್ಥಾನದ ಎಕ್ಸಿಕ್ಯೂಟಿವ್ ಆಫೀಸರ್‌ಗೆ ಬೀಳ್ಕೊಡುಗೆ ಸಮಾರಂಭ



ಕಾಸರಗೋಡು: ಮಧೂರು ಶ್ರೀ ಮದನಂತೇಶ್ವರ ಸಿದ್ಧಿವಿನಾಯಕ ದೇವಸ್ಥಾನದ ಎಕ್ಸಿಕ್ಯೂಟಿವ್ ಆಫೀಸರ್ ಆಗಿ ಕರ್ತವ್ಯ ನಿರ್ವಹಿಸಿ ಇದೀಗ ನಿವೃತ್ತ ಜೀವನಕ್ಕೆ ಕಾಲಿಡುತ್ತಿರುವ ಕೆ.ಜಗದೀಶ್ ಪ್ರಸಾದ್ ಕೂಡ್ಲು ಅವರಿಗೆ ಶ್ರೀ ಮಧೂರು ದೇವಸ್ಥಾನದ ಅರ್ಚಕ ವಿಭಾಗದವರು, ಸಿಬ್ಬಂದಿಗಳು ಹಾಗೂ ಹಿತೈಷಿಗಳು ಸೇರಿ ಮಧೂರು ದೇವಾಲಯದಲ್ಲಿ ಬೀಳ್ಕೊಡುಗೆ ಸಮಾರಂಭವನ್ನು ಏರ್ಪಡಿಸಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಿಯುಕ್ತ ಎಕ್ಸಿಕ್ಯೂಟಿವ್ ಆಫೀಸರ್ ರಾಜೇಶ್ ವಹಿಸಿದ್ದರು. ವೇದಿಕೆಯಲ್ಲಿ ಭಾಗವಹಿಸಿದ್ದ ಮಂಜುನಾಥ ಕಾಮತ್, ಜಯದೇವ ಖಂಡಿಗೆ, ಪಿ.ಕೆ.ಧನಂಜಯ ಮುಂತಾದವರು ಭಾಗವಹಿಸಿ ಶುಭಹಾರೈಸಿ ಮಾತನಾಡಿದರು.

ಈ ಸಂದರ್ಭ ಮಾತನಾಡಿದ ಪ್ರಭಾಶಂಕರ ಮಾಸ್ತರ್ ಮತ್ತು ಕೆ.ನಾರಾಯಣಯ್ಯ ಅವರು, ಕಳೆದ 8 ತಿಂಗಳಲ್ಲಿ ಮಧೂರು ಕ್ಷೇತ್ರದಲ್ಲಿ ನಿರ್ವಹಿಸಲಾದ ಅದ್ಭುತ ಅಭಿವೃದ್ಧಿ ಯೋಜನೆಗಳ ಕುರಿತು ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಬಿ.ಎನ್.ಸುಬ್ರಹ್ಮಣ್ಯ ಸ್ವಾಗತಿಸಿ, ವೇಣುಗೋಪಾಲ್ ವಂದಿಸಿದರು.

ದೇವಳದ ಪರ ಸ್ಮರಣಿಕೆ ನೀಡಿ ಗೌರವ

ದೇಗುಲದ ಪರವಾಗಿ ಸ್ಮರಣಿಕೆ ಶಾಲು ಹಣ್ಣು ಹಂಪಲು ನೀಡಿ ಗೌರವಿಸಲಾಯಿತು. ಕಳೆದ 4 ದಶಕಗಳ ಕೆಲಸದಲ್ಲಿ ದೊರೆತ ಅನುಭವಗಳನ್ನು ಜಗದೀಶ್ ಪ್ರಸಾದ್ ಕೂಡ್ಲು ಅವರು ಈ ಸಂದರ್ಭ ಮೆಲುಕು ಹಾಕಿದರು.

ಚಿಪ್ಪಾರು ನಾರ್ಣಕಟ್ಟೆ ದೈವಸ್ಥಾನದಲ್ಲಿ ಬ್ರಹ್ಮಕಲಶ: ಆಮಂತ್ರಣ ಬಿಡುಗಡೆ



ಉಪ್ಪಳ: ಚಿಪ್ಪಾರು ನಾರ್ಣಕಟ್ಟೆ ದೈವಸ್ಥಾನ ಹಾಗೂ ಮಾಡದ ಬ್ರಹ್ಮಕಲಶದ ಆಮಂತ್ರಣ ಪತ್ರಿಕೆ ಬಿಡುಗಡೆ ಸಮಾರಂಭ ದೈವಸ್ಥಾನದಲ್ಲಿ ಜರಗಿತು. ಸಮಿತಿ ಗೌರವಾಧ್ಯಕ್ಷ ಗಂಗಾಧರ್ ಬಲ್ಲಾಳ್ ಕೊಲ್ಲೂರಮೂಲೆ ಚಿಪ್ಪಾರು, ಅಧ್ಯಕ್ಷ ರಘುಚಂದ್ರ ಬಲ್ಲಾಳ್ ಕೊಲ್ಲೂರಮೂಲೆ ಚಿಪ್ಪಾರು, ಕಾರ್ಯದರ್ಶಿ ರಾಜೇಶ್ ಶೆಟ್ಟಿ ಖಂಡಿಗ, ದಿವಾಕರ ಬಲ್ಲಾಳ್ ಚಿಪ್ಪಾರು ಬೀಡು, ಮಧುಸೂದನ್ ಬಲ್ಲಾಳ್ ಕೊಲ್ಲೂರಮೂಲೆ, ಉಪಾಧ್ಯಕ್ಷ ರಾಘವ ಕೆ. ಪೈವಳಿಕೆ, ಪುರಂದರ ಮಳಿವು, ಶೇಖರ ಖಂಡಿಗ, ದಿನಕರ ಆಚಾರ್ಯ, ಶಿವಪ್ರಸಾದ್ ಆಚಾರ್ಯ ಖಂಡಿಗ, ರಾಜೇಶ್ ಮಾರು ಸುನ್ನಡ, ಪ್ರತಿ ಅಮೇರಿ, ನವೀನ ಮಳಿವು, ಸತೀಶ್ ಶೆಟ್ಟಿ ರಾಮಚಂದ್ರ ಬಲ್ಲಾಳ್, ಆನಂದ ಆಚಾರ್ಯ ಖಂಡಿಗ, ಮಹಿಳಾ ಸಮಿತಿ ಅಧ್ಯಕ್ಷೆ ಸುಜಾತ ನಾಗೇಂದ್ರ ಮತ್ತು ಊರವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಕುಂಬಳೆ ರೈಲು ನಿಲ್ದಾಣದ ಕ್ಯಾಂಟೀನ್ ಬಂದ್ | ವಿದ್ಯಾರ್ಥಿಗಳಿಗೆ ಸಮಸ್ಯೆ

ಪರ್ಯಾಯ ವ್ಯವಸ್ಥೆ ಕಲ್ಪಿಸಲು ಪ್ರಯಾಣಿಕರ ಒತ್ತಾಯ

ಕುಂಬಳೆ: ಕುಂಬಳೆ ರೈಲು ನಿಲ್ದಾಣದಲ್ಲಿ ಕಟ್ಟಡದ ನವೀಕರಣದ ಅಂಗವಾಗಿ ಅಸ್ತಿತ್ವದಲ್ಲಿರುವ ಕ್ಯಾಂಟೀನ್‌ನ್ನು ಮುಚ್ಚಿರುವುದು ಪ್ರಯಾಣಿಕರಿಗೆ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಯಾವುದೇ ಪರ್ಯಾಯ ಸೌಲಭ್ಯಗಳಿಲ್ಲದೆ ಹೊಸ ಕಟ್ಟಡ ನಿರ್ಮಿಸಲು ಕ್ಯಾಂಟೀನ್‌ನ್ನು ಸಂಪೂರ್ಣ ಮುಚ್ಚಿದ್ದು ಸರಿಯಲ್ಲ, ಕೂಡಲೇ ಬದಲಿ ವ್ಯವಸ್ಥೆ ಕಲ್ಪಿಸಬೇಕೆಂದು ಪ್ರಯಾಣಿಕರು ಒತ್ತಾಯಿಸಿದ್ದಾರೆ.





ವಿದ್ಯಾರ್ಥಿಗಳು, ರೋಗಿಗಳು ಸಮಸ್ಯೆಯಲ್ಲಿ

ಬೆಳಿಗ್ಗೆ ರೈಲ್ವೆ ನಿಲ್ದಾಣಕ್ಕೆ ಬರುವ ವಿದ್ಯಾರ್ಥಿಗಳು ಮತ್ತು ದೂರದ ಸ್ಥಳಗಳ ಆಸ್ಪತ್ರೆಗಳಿಗೆ ಹೋಗಲು ಬರುವ ರೋಗಿಗಳು ಇದರಿಂದ ಹೆಚ್ಚು ತೊಂದರೆ ಅನುಭವಿಸುವಂತಾಗಿದೆ. ನಿಲ್ದಾಣಕ್ಕೆ ಬರುವವರು ಚಹಾ ತಿಂಡಿ ಸೇವಿಸಲು ಈ ಕ್ಯಾಂಟೀನ್‌ನ್ನು ಅವಲಂಭಿಸಿದ್ದರು. ಅಲ್ಲದೆ ಕುಡಿಯುವ ನೀರನ್ನು ಪಡೆಯಲೂ ಕ್ಯಾಂಟೀನ್ ಮುಚ್ಚಿರುವುದು ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ.

ಭರದಿಂದ ಸಾಗುತ್ತಿದೆ ನವೀಕರಣ ಕಾರ್ಯ

ಕುಂಬಳೆ ರೈಲ್ವೆ ನಿಲ್ದಾಣದಲ್ಲಿ ಮೂಲಭೂತ ಸೌಲಭ್ಯಗಳ ಕೊರತೆಯ ಬಗ್ಗೆ ದೂರುಗಳು ಬಂದ ಹಿನ್ನೆಲೆ ರೈಲ್ವೆ ಇಲಾಖೆ ಹಂತ ಹಂತವಾಗಿ ನವೀಕರಣ ಕಾರ್ಯವನ್ನು ಕೈಗೊಳ್ಳುತ್ತಿದೆ. ಪ್ಲಾಟ್‌ಫಾರ್ಮ್‌ಗಳನ್ನು ಈಗಾಗಲೇ ಟೈಲ್ಸ್ ಮಾಡಲಾಗಿದೆ. ವಿಶ್ರಾಂತಿ ಕೊಠಡಿಗಳು ಮತ್ತು ಶೌಚಾಲಯಗಳನ್ನು ನವೀಕರಿಸಲಾಗಿದೆ. ಪ್ರಸ್ತುತ ಪ್ರಯಾಣಿಕರು ಪ್ಲಾಟ್‌ಫಾರ್ಮ್‌ಗಳನ್ನು ತಲುಪಲು ಸುಲಭವಾಗುವಂತೆ ಲಿಫ್ಟ್‌ಗಳನ್ನು ನಿರ್ಮಿಸಲಾಗುತ್ತಿದೆ.

4ನೇ ಹಂತವಾಗಿ ಕ್ಯಾಂಟೀನ್ ನಿರ್ಮಾಣ

ಕ್ಯಾಂಟೀನ್ ಮುಚ್ಚಿರು ವುದರಿಂದ ವಿದ್ಯಾರ್ಥಿಗಳು ಸಹಿತ ಪ್ರಯಾಣಿಕರು ಹೆಚ್ಚಿನ ತೊಂದರೆ ಅನುಭವಿಸುತ್ತಿರುವ ಬಗ್ಗೆ ದೂರುಗಳು ಬಂದಿದ್ದು, ಇದಕ್ಕೆ ಪರಿಹಾರವಾಗಿ 4ನೇ ಹಂತದಲ್ಲಿ ಕ್ಯಾಂಟೀನ್‌ಗೆ ಹೊಸ ಕಟ್ಟಡ ನಿರ್ಮಿಸಲು ನಿರ್ಧರಿಸಲಾಗಿದೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಚಂದ್ರಗಿರಿ ಅರವತ್ ಕ್ಷೇತ್ರಕ್ಕೆ ಧನಸಹಾಯ ಹಸ್ತಾಂತರ

ಕಾಸರಗೋಡು: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಚಂದ್ರಗಿರಿ ವಲಯದ ಅರವತ್ ಮಟ್ಟೆಅಂಗಾಣ ಕಯಗಂಪೂ ಬಾಣಂಗುಯೀ ಕ್ಷೇತ್ರಕ್ಕೆ ಶ್ರೀ ಕ್ಷೇತ್ರ ಧರ್ಮಸ್ಥಳದಿಂದ ಧರ್ಮಾಧಿಕಾರಿ, ಡಾ.ಡಿ.ವೀರೇಂದ್ರ ಹೆಗ್ಗಡೆಯವರು ಮಂಜೂರುಗೊಳಿಸಿದ 3 ಲ.ರೂ.ಧನ ಸಹಾಯ ಹಸ್ತಾಂತರಿಸಲಾಯಿತು.



ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ನಿರ್ದೇಶಕ ಬಾಬು ನಾಯಕ್, ಜನಜಾಗೃತಿ ವೇದಿಕೆಯ ಯೋಜನಾಧಿಕಾರಿ ಗಣೇಶ ಆಚಾರ್ಯ ಮಾನ್ಯ, ಯೋಜನಾಧಿಕಾರಿ ದಿನೇಶ್ ಅವರು ದೇವಸ್ಥಾನದ ಆಡಳಿತ ಸಮಿತಿ ಪದಾಧಿಕಾರಿಗಳಿಗೆ ಹಸ್ತಾಂತರಿಸಿದರು.

ಶ್ರೀ ಕ್ಷೇತ್ರದಲ್ಲಿ ನಡೆದ ಸಮಾರಂಭದ ಅಧ್ಯಕ್ಷತೆಯನ್ನು ಆಡಳಿತ ಸಮಿತಿಯ ಅಧ್ಯಕ್ಷ ಶಿವರಾಮನ್ ವಹಿಸಿದ್ದರು. ಈ ಸಂದರ್ಭ ಜನ ಜಾಗೃತಿ ವೇದಿಕೆ ವಲಯ ಅಧ್ಯಕ್ಷ ಚಂದ್ರನ್, ಸಮಾಜ ಕಾರ್ಯಕರ್ತ ಮೋಹನ್, ಒಕ್ಕೂಟದ ವಲಯ ಅಧ್ಯಕ್ಷೆ ಸುಪ್ರಿಯಾ ಹಾಗೂ ವಲಯ ಮೇಲ್ವಿಚಾರಕಿ ಚಂದ್ರಕಲಾ, ಸೇವಾ ಪ್ರತಿನಿಧಿಗಳಾದ ಸರೋಜಾ, ಶೋಭಾ, ಒಕ್ಕೂಟದ ಅಧ್ಯಕ್ಷರು, ಪದಾಧಿಕಾರಿಗಳು, ಸದಸ್ಯರು, ಊರಿನ ಗಣ್ಯರು, ಆಡಳಿತ ಸಮಿತಿ ಪದಾಧಿಕಾರಿಗಳು ಹಾಗೂ ಸದಸ್ಯರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ನಿಮ್ಮೂರಿನ ಸುದ್ದಿ

ನಿರಂತರ ಸುದ್ದಿ ಅಪ್‌ಡೇಟ್‌ಗಾಗಿ Google Lens ನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ WhatsApp ಗ್ರೂಪ್ ಇಂದೇ ಸೇರಿ!
website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb
ಗುರುವಾರ 02, ಏಪ್ರಿಲ್ 2026

ಸುತ್ತ ಮುತ್ತ

ಸಮಾಲೋಚಕ ಹುದ್ದೆ: ಅರ್ಜಿ ಆಹ್ವಾನ

ಉಡುಪಿ: ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರದಲ್ಲಿ ಯೋಜನಾ ಸಂಯೋಜಕ–1 (ಯಾವುದೇ ಸ್ನಾತಕೋತ್ತರ ಪದವಿ) ಹಾಗೂ ಆಪ್ತ ಸಮಾಲೋಚಕ–3 (ಎಂ.ಎಸ್.ಡಬ್ಲ್ಯೂ ??) ಹುದ್ದೆಗಳ ನೇಮಕಾತಿಗಾಗಿ ಅರ್ಹ ವಿದ್ಯಾರ್ಹತೆ ಹೊಂದಿದ ಆಸಕ್ತ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಏ.13ರಂದು ದಿನ. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರ, ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ಬನ್ನಂಜೆ ದೂರವಾಣಿ ಸಂಖ್ಯೆ 0820–2526394 ಇಲ್ಲಿ ಖುದ್ದಾಗಿ ಅಥವಾ ಇ-ಮೇಲ್ udupis1090@gmail.com ಅನ್ನು ಸಂಪರ್ಕಿಸಬಹುದು ಎಂದು ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರದ ಪ್ರಕಟಣೆ ತಿಳಿಸಿದೆ.

ಲೇಬರ್ ಕೋಡ್ ಜಾರಿ ವಿರುದ್ಧ ಕಟ್ಟಡ ಕಾರ್ಮಿಕರ ಪ್ರತಿಭಟನೆ

ಕುಂದಾಪುರ: ಕಾರ್ಮಿಕರ ಹಲವು ಕಾಯ್ದೆಗಳನ್ನು ಮೊಟಕುಗೊಳಿಸಿ ಏ.1 ರಿಂದ ನಾಲ್ಕು ಲೇಬರ್ ಕೋಡ್ ಜಾರಿ ಮಾಡಲು ಎಲ್ಲಾ ರಾಜ್ಯಗಳಿಗೆ ನಿರ್ದೇಶನ ನೀಡಿರುವ ಕೇಂದ್ರ ಸರ್ಕಾರದ ಕ್ರಮವನ್ನು ಖಂಡಿಸಿ ದೇಶವ್ಯಾಪಿ ಕಾರ್ಮಿಕ ಸಂಘಟನೆಗಳು ಕರೆ ನೀಡಿರುವ ಕಪ್ಪು ದಿನಾಚರಣೆ ಸಿದ್ಧಾಪುರದ ಪೇಟೆಯಲ್ಲಿ ಬುಧವಾರ ನಡೆಯಿತು. ಈ ಸಂದರ್ಭದಲ್ಲಿ ಮಾತನಾಡಿದ ಕುಂದಾಪುರ ತಾಲೂಕು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ ತಾಲೂಕು ಪ್ರಧಾನ ಕಾರ್ಯದರ್ಶಿ ಸುರೇಶ್ ಕಲ್ಲಾಗರ, ಕಾರ್ಮಿಕರ ವರ್ಗ ಕಷ್ಟಪಟ್ಟು ಹೋರಾಟ ನಡೆಸಿ ಪಡೆದ ಕಾನೂನುಗಳನ್ನು ಕೇಂದ್ರ ಸರ್ಕಾರ ರದ್ದುಪಡಿಸಿ ನೂತನ ಲೇಬರ್ ಕೋಡ್ ತಂದಿರುವುದು ಕಾರ್ಮಿಕರನ್ನು ನವ ಗುಲಾಮಗಿರಿಗೆ ತಳ್ಳುವ ನೀತಿಯಾಗಿದೆ. ಹೊಸ ಲೇಬರ್ ಕೋಡ್ ಬಹುತೇಕ ಮಾಲೀಕ ವರ್ಗಕ್ಕೆ ಸೂಪರ್ ಲಾಭ ಮತ್ತು ರಕ್ಷಣೆ ಒದಗಿಸುವ ಕಾರ್ಮಿಕ ಕಾಯ್ದೆ ಎಂದು ಅವರು ಹೇಳಿದರು.

ಅನಿಲ ಬೆಲೆ ಏರಿಕೆ ಮತ್ತು ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಲಾಯಿತು. ಪ್ರತಿಭಟನೆಯಲ್ಲಿ ಸಂಘದ ತಾಲೂಕು ಉಪಾಧ್ಯಕ್ಷ ಆಲೆಕ್ಸಾಂಡರ್, ಸಿದ್ದಾಪುರ ಘಟಕದ ಅಧ್ಯಕ್ಷ ರಾಘವೇಂದ್ರ ಆಚಾರ್ಯ, ರಾಘವೇಂದ್ರ, ಚಿಕ್ಕರ್ಣ, ಸುಧಾಕರ ಮೇಸ್ತ್ರಿ ರತ್ನಾಕರ ರಾವ್, ಸುಕುಮಾರ್ ಇದ್ದರು. ಅಲೆಕ್ಸಾಂಡರ್ ಸ್ವಾಗತಿಸಿದರು. ರಾಘವೇಂದ್ರ ಆಚಾರ್ಯ ವಂದಿಸಿದರು.

ವಿವೇಕಾನಂದದಲ್ಲಿ ವರ್ಚುವಲ್ ಕಾರ್ಯಾಗಾರ

ಪುತ್ತೂರು: ನಗರದ ವಿವೇಕಾನಂದ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನ(ಸ್ವಾಯತ್ತ) ವ್ಯವಹಾರ ಆಡಳಿತ ವಿಭಾಗ, ಗೂಗಲ್ ಡೆವಲಪರ್ ಗ್ರೂಪ್ ಮತ್ತು ಐಕ್ಯೂಎಸಿ ಸಹಯೋಗದೊಂದಿಗೆ 'ನೆಕ್ಸ್ಟ್ ಜೆನ್ ಸ್ಕಿಲ್ಸ್: ಲಿವರೇಜಿಂಗ್ ಎಐ, ಡಿಜಿಟಲ್ ಮಾರ್ಕೆಟಿಂಗ್ ಆಂಡ್ ಗೂಗಲ್ ಅನಾಲಿಟಿಕ್ಸ್' ಎಂಬ ವಿಷಯದ ಕುರಿತು ಮೂರು ದಿನಗಳ ರಾಜ್ಯ ಮಟ್ಟದ ವರ್ಚುವಲ್ ಕೌಶಲ್ಯ ವರ್ಧನೆ ಕಾರ್ಯಾಗಾರ ಯಶಸ್ವಿಯಾಗಿ ಆಯೋಜಿಸಿತು. 'ದ ವೆಬ್ ಪೀಪಲ್' ಮತ್ತು 'ಸರ್ವಜ್ಞ ಎಜುಟೆಕ್' ಸಂಸ್ಥೆಗಳ ಸಹಭಾಗಿತ್ವದಲ್ಲಿ ನಡೆದ ಈ ಕಾರ್ಯಾಗಾರವನ್ನು ಕಾಲೇಜಿನ ಪ್ರಾಂಶುಪಾಲ ಪ್ರೊ. ಶ್ರೀಕೃಷ್ಣಗಣರಾಜ ಭಟ್ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ವೆಬ್ ಪೀಪಲ್ ಸಂಸ್ಥೆಯ ಬಿಸಿನೆಸ್ ಡೆವಲಪ್‌ಮೆಂಟ್ ಎಕ್ಸಿಕ್ಯೂಟಿವ್ ಆದಿತ್ಯ ಕಶ್ಯಪ್ ಅವರು 'ವಾಟ್ ಈಸ್ ಸೇಲ್ಸ್ ರಿಯಲಿ?' ಎಂಬ ವಿಷಯದ ಕುರಿತು ಮಾತನಾಡಿ, ಆಧುನಿಕ ವ್ಯವಹಾರದಲ್ಲಿ ಮಾರಾಟದ ಮೂಲಭೂತ ಅಂಶಗಳು ಮತ್ತು ಬದಲಾಗುತ್ತಿರುವ ಸ್ವರೂಪದ ಮೇಲೆ ಬೆಳಕು ಚೆಲ್ಲಿದರು. ನಂತರ ಸರ್ವಜ್ಞ ಎಜುಟೆಕ್‌ನ ಸಿಇಒ ಶ್ರೀನಿಧಿ ಆರ್.ಎಸ್. ಅವರು 'ಎಐ ಇನ್ ಡಿಜಿಟಲ್ ಮಾರ್ಕೆಟಿಂಗ್' ಕುರಿತು ಮಾಹಿತಿ ನೀಡಿದರು. ಎಐ(ಕೃತಕ ಬುದ್ಧಿಮತ್ತೆ) ಮಾರ್ಕೆಟಿಂಗ್ ತಂತ್ರಗಳು ಮತ್ತು ಗ್ರಾಹಕರ ಒಡನಾಟವನ್ನು ಹೇಗೆ ಬದಲಾಯಿಸುತ್ತಿದೆ ಎಂಬುದನ್ನು ವಿವರಿಸಿದರು. ಸಮಾರೋಪ ಸಮಾರಂಭದಲ್ಲಿ ವಿವೇಕಾನಂದ ಕಾಲೇಜಿನ ಬಿಬಿಎ ವಿಭಾಗದ ವಿದ್ಯಾರ್ಥಿ ಸಚಿನ್ ಉಪ್ಪರ್ಣ ಅವರು 'ಯೂಸ್ ಆಫ್ ಗೂಗಲ್ ಅನಾಲಿಟಿಕ್ಸ್ ಇನ್ ಬಿಸಿನೆಸ್ ಡಿಸಿಷನ್ಸ್' ವಿಷಯದ ಕುರಿತು ಪ್ರಾತ್ಯಕ್ಷಿಕೆ ನೀಡಿದರು. ಈ ಕಾರ್ಯಾಗಾರದಲ್ಲಿ ವಿವಿಧ ಸಂಸ್ಥೆಗಳ 165 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಕಾಲೇಜಿನ ಆಡಳಿತ ವ್ಯವಹಾರ ವಿಭಾಗದ ಮುಖ್ಯಸ್ಥೆ ರೇಖಾ ಪಿ., ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ವರುಣತೀರ್ಥ ರಾಜಶೇಖರ ದೇಗುಲದ ವರ್ಧಂತ್ಯುತ್ಸವ ಸಂಪನ್ನ

ಕೋಟ: ಇಲ್ಲಿನ ಕೋಟದ ಪೇಟೆದೇವಸ್ಥಾನ ಎಂದೆ ಪ್ರಸಿದ್ಧ ಪಡೆದಿರುವ ಕೋಟ ವರುಣತೀರ್ಥ ರಾಜಶೇಖರ ದೇವಸ್ಥಾನ ಇದರ ವಾರ್ಷಿಕ ವರ್ಧಂತಿ ಉತ್ಸವ ಬುಧವಾರ ಸಂಪನ್ನಗೊಂಡಿತು. ದೇಗುಲದಲ್ಲಿ ಶತರುದ್ರಾಭಿಷೇಕ,ಕಲಶಾಭಿಷೇಕ,ಮಹಾಮಂಗಳಾರತಿ,ಸಂಜೆ ರಂಗಪೂಜೆ,ದೀಪೋತ್ಸವ, ಕೋಟ ಪಂಚವರ್ಣ ಮಹಿಳಾ ಮಂಡಳಿ ಭಜನಾ ತಂಡ ಹಾಗೂ ಶಾರದ ಮಹಿಳಾ ಭಜನಾ ಮಂಡಳಿ ಕದ್ರಿಕಟ್ಟು ಇವರಿಂದ ಭಜನಾ ಕಾರ್ಯಕ್ರಮ ಜರಗಿತು. ಧಾರ್ಮಿಕ ವಿಧಿವಿಧಾನಗಳನ್ನು ದೇಗುಲದ ಅಧ್ಯಕ್ಷ ಜಿ.ಪ್ರಭಾಕರ ಅಡಿಗರ ಸಮ್ಮುಖದಲ್ಲಿ ವೇ. ಮೂ ಸುಬ್ರಹ್ಮಣ್ಯ ಅಡಿಗರ ನೇತೃತ್ವದಲ್ಲಿ ಜರಗಿದವು. ಅಪರಾಹ್ನ ಅನ್ನಸಂತರ್ಪಣೆ ಭಕ್ತಾದಿಗಳು ಭಾಗಿಯಾಗಿ ಅನ್ನಪ್ರಸಾದ ಸ್ವೀಕರಿಸಿದರು. ದೇಗುಲದ ಟ್ರಸ್ಟಿಗಳು,ಅರ್ಚಕರು, ಜೀರ್ಣೋದ್ಧಾರ ಸಮಿತಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ವಾರ್ಷಿಕ ಜಾತ್ರೆ ಪೂರ್ವಭಾವಿ ಸಭೆಯಲ್ಲಿ ಶಾಸಕ ಅಶೋಕ್ ರೈ ಸೂಚನೆ

ಸಮರ್ಪಕ ಕಾರ್ಯನಿರ್ವಹಣೆ ಮೂಲಕ ಜಾತ್ರೆ ಯಶಸ್ವಿಗೊಳಿಸಿ

ಪುತ್ತೂರು: ಪುತ್ತೂರು ಮಹತೋಬಾರ ಪುತ್ತೂರು ಮಹಾಲಿಂಗೇಶ್ವರದ ದೇವಳದ ಜಾತ್ರೋತ್ಸವವು ಏ.10ರಿಂದ 20ರ ತನಕ ನಡೆಯಲಿದ್ದು, ಜಾತ್ರೆಯ ಯಶಸ್ವಿಗಾಗಿ ವಿವಿಧ ಇಲಾಖೆಗಳ ಅಧಿಕಾರಿಗಳ ಪೂರ್ವಬಾವಿ ಸಭೆಯು ಮಂಗಳವಾರ ದೇವಳದ ಸಭಾಂಗಣದಲ್ಲಿ ನಡೆಯಿತು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಶಾಸಕ ಅಶೋಕ್ ರೈ ಮಾತನಾಡಿ, ಜಾತ್ರೋತ್ಸವಕ್ಕೆ ಎರಡು ಲಕ್ಷಕ್ಕೂ ಅಧಿಕ ಮಂದಿ ಸೇರುವ ನಿರೀಕ್ಷೆ ಇದ್ದು, ಯಾವುದೇ ಅಡೆತಡೆ ಇಲ್ಲದೆ ಯಶಸ್ವಿಯಾಗಿ ನಿರ್ವಹಿಸಲು ಇಲಾಖೆಗಳ ಸಹಭಾಗಿತ್ವ ಅಗತ್ಯವಿದೆ. ವಿವಿಧ ಇಲಾಖೆಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುವ ಮೂಲಕ ಜಾತ್ರೆಯನ್ನು ಯಶಸ್ವಿಗೊಳಿಸಲು ಕರೆ ನೀಡಿದರು.



ಮಹಾರಥೋತ್ಸವ ಏ.17ರಂದು ಮಹಾರಥ ಎಳೆಯುವ ಸಂದರ್ಭ ಮತ್ತು ವೀರಮಂಗಳಕ್ಕೆ ದೇವರು ಜಳಕಕ್ಕೆ ಹೋಗುವ ಸಂದರ್ಭದಲ್ಲಿ ಯಾವುದೇ ತೊಂದರೆ ಆಗದಂತೆ ಹೆಚ್ಚಿನ ಎಚ್ಚರವಹಿಸಬೇಕು. ಜಾತ್ರೆಯ ಸಮರ್ಪಕ ನಿರ್ವಹಣೆಗಾಗಿ ಈಗಾಗಲೇ ಜಾತ್ರಾ ಅಂಗಣವನ್ನು ಸಾಕಷ್ಟು ವಿಸ್ತರಣೆ ಮಾಡಲಾಗಿದೆ. ಪ್ರತೀ ದಿನ 25 ಸಾವಿರ ಮಂದಿಗೆ ಅನ್ನಸಂತರ್ಪಣೆ ವ್ಯವಸ್ಥೆ ಮಾಡಲಾಗಿದೆ. ದೇವರ ಅವಭೃತಸ್ನಾನಕ್ಕೆ ವೀರಮಂಗಲದಲ್ಲಿ ಭಕ್ತ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದ್ದು, ಈ ನಿಟ್ಟಿನಲ್ಲಿ ಸೂಕ್ತ ವ್ಯವಸ್ಥೆ ಲ್ಪಿಸಲಾಗುತ್ತಿದೆ. ಅಲ್ಲಿ ತಡೆಗೋಡೆ, ಗ್ಯಾಲರಿ, ತಾತ್ಕಾಲಿಕ ಶೌಚಾಲಯ ವ್ಯವಸ್ಥಿತ ರೀತಿಯಲ್ಲಿ ಮಾಡಲಾಗುವುದು ಎಂದರು.

ಜಾತ್ರಾ ಗದ್ದೆಯಲ್ಲಿ 350 ಸ್ಟಾಲ್‌ಗಳಿಗೆ ಅವಕಾಶ ಕಲ್ಪಿಸಲಾಗಿದೆ. ಈ ಮೂಲಕ ದೇವರ ಹುಂಡಿಗೆ ಸುಮಾರು ರೂ.1 ಕೋಟಿ ಹಣ ಸೇರ್ಪಡೆಯಾಗಲಿದೆ. ಸ್ಟಾಲ್ ಏಲಂ ಪ್ರಕ್ರಿಯೆಯಲ್ಲಿ ಒಳ ಒಪ್ಪಂದಗಳಿಗೆ ಯಾವುದೇ ಅವಕಾಶ ಇಲ್ಲ, ಪ್ರತಿಯೊಬ್ಬರೂ ವೈಯುಕ್ತಿಕ ಏಲಂನಲ್ಲಿ ಪಾಲ್ಗೊಳ್ಳಬೇಕಾಗಿದೆ ಎಂದ ಅವರು, ಇದರೊಂದಿಗೆ ದೇವಳದ ಜೀರ್ಣೋದ್ಧಾರಕ್ಕಾಗಿ ದೇಣಿಗೆ ಸಂಗ್ರಹಕ್ಕೆ ಪ್ರತ್ಯೇಕ ಕಚೇರಿ ತೆರೆಯಲಾಗುತ್ತಿದ್ದು ರೂ.2 ಕೋಟಿ ಸಂಗ್ರಹದ ಗುರಿ ಹೊಂದಲಾಗಿದೆ ಎಂದು ತಿಳಿಸಿದರು.

ದೇವರ ಕಟ್ಟೆಪೂಜೆಗೆ ವಿಚಾರದ ಬಗ್ಗೆ ತಿಳಿಸಿದ ಅವರು ತಾತ್ಕಾಲಿಕ ಕಟ್ಟೆಗಳಲ್ಲಿ ಪೂಜೆಗೆ ಅವಕಾಶ ಇಲ್ಲ, ಹೊಸ ಕಟ್ಟೆಗೆ ಅನುಮತಿ ಇಲ್ಲ, 152 ಶಾಶ್ವತ ಕಟ್ಟೆಗಳಲ್ಲಿ ಮಾತ್ರ ಕಟ್ಟೆಪೂಜೆ ನಡೆಸಲು ಅವಕಾಶ ಇರುತ್ತದೆ ಎಂದರು. ಸಭೆಯಲ್ಲಿ ಜಾತ್ರೋತ್ಸವದ ಸಂದರ್ಭದಲ್ಲಿ ಕಾನೂನು ಸುವ್ಯವಸ್ಥೆ ಮತ್ತು ಬಂದೋಬಸ್ತು, ಸಂಚಾರಿ ವ್ಯವಸ್ಥೆ ಶುಚಿತ್ವ ಮತ್ತು ನೀರು ಸಿಂಪಡಣಾ ವ್ಯವಸ್ಥೆ, ತಾತ್ಕಾಲಿಕ ಕ್ಲಿನಿಕ್, ನಿರಂತರ ವಿದ್ಯುತ್ ಸರಬರಾಜು, ಜಿಲ್ಲೆಯ ವಿವಿಧ ಭಾಗಗಳಿಗೆ ಹೆಚ್ಚುವರಿ ಬಸ್ ಸೌಕರ್ಯ, ಸುರಕ್ಷತೆ ಹಿನ್ನಲೆಯಲ್ಲಿ ಅಗ್ನಿಶಾಮಕದಳ ಮತ್ತು ನೀರಿನ ಟ್ಯಾಂಕರ್ ಕಲ್ಪಿಸುವುದು ಹಾಗೂ ರಥದ ಪರಿಶೀಲನೆ ಮತ್ತು ದೃಢೀಕರಣ ಪತ್ರ ವ್ಯವಸ್ಥೆ ಮಾಡುವ ಬಗ್ಗೆ ಚರ್ಚಿಸಲಾಯಿತು. ಸಭೆಯಲ್ಲಿ ಪುತ್ತೂರು ಉಪವಿಭಾಗದ ಸಹಾಯಕ ಕಮಿಷನರ್ ಸ್ಟೆಲ್ಲಾ ವರ್ಗೀಸ್, ತಹಶೀಲ್ದಾರ್ ಎಸ್.ಬಿ.ಕೂಡಲಗಿ, ನಗರಸಭಾ ಪೌರಾಯುಕ್ತೆ ವಿದ್ಯಾ ಎಸ್. ಕಾಳೆ, ದೇವಳದ ಕಾರ್ಯ ನಿರ್ವಹಣಾಧಿಕಾರಿ ಕೆ.ವಿ. ಶ್ರೀನಿವಾಸ್, ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಸುಭಾಷ್ ರೈ ಬೆಳ್ಳಿಪ್ಪಾಡಿ, ದಿನೇಶ್ ಕುಲಾಲ್ ಪಿ.ವಿ., ಈಶ್ವರ ಬೇಡೇಕರ್, ನಳಿನಿ ಪಿ. ಶೆಟ್ಟಿ ಕೃಷ್ಣವೇಣಿ, ವಿನಯ ಸುವರ್ಣ, ದೇವಳದ ವ್ಯವಸ್ಥಾಪಕ ಹರೀಶ್ ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು. ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಪಂಜಿಗುಡ್ಡೆ ಈಶ್ವರ ಭಟ್ ಸ್ವಾಗತಿಸಿ, ಸದಸ್ಯ ಮಹಾಬಲ ರೈ ಅರಿಯಡ್ಕ ವಂದಿಸಿದರು.

ಭೇರಿ(ಪಟಾಹ) ಪೂಜೆ

ಬಾಳೆ ಗೊನೆಯನ್ನು ಗರ್ಭಗುಡಿಯ ಪ್ರಥಮ ಹಂತದ ಉತ್ತರ ದಿಕ್ಕಿನಲ್ಲಿ ಅಂದರೆ, ಪೂರ್ವಕಾಲದಲ್ಲಿ ರುದ್ರವಾದ್ಯಗಳನ್ನು ನುಡಿಸುತ್ತಿದ್ದ ನಾದ ಮಂಟಪದಲ್ಲಿ ಕಟ್ಟಲಾಗುತ್ತದೆ. ಇದೇ ಸ್ಥಳದಲ್ಲಿ ಶಯನೋತ್ಸವದ ತಡರಾತ್ರಿಯಲ್ಲಿ ಈ ಕ್ಷೇತ್ರದ ವಿಶೇಷವಾದ ಭೇರಿ(ಪಟಾಹ) ಪೂಜೆಯು ತಂತ್ರಿಗಳಿಂದ ನೆರವೇರುತ್ತದೆ. ಪುತ್ತೂರಿನಲ್ಲಿ ಏ.19ರಂದು ಕೊಡಿ ಇಳಿದ ಬಳಿಕ ಮರುದಿನದಂದೇ ಬಲ್ನಾಡಿನ ಶ್ರೀ ದಂಡನಾಯಕ ಉಳ್ಳಾಲ್ತಿ ದೈವಸ್ಥಾನದಲ್ಲಿ ಗೊನೆ ಮುಹೂರ್ತ ಕಾರ್ಯಕ್ರಮ ಜರಗುತ್ತದೆ.

ಗೊನೆ ಮುಹೂರ್ತ

ಶ್ರೀ ಮಹಾಲಿಂಗೇಶ್ವರ ದೇವರ ಜಾತ್ರೆಗೆ ಬುಧವಾರ ಗೊನೆ ಮುಹೂರ್ತ ನಡೆಯಿತು. ಬೆಳಗ್ಗೆ ಸುಮುಹೂರ್ತದಲ್ಲಿ ದೇವಸ್ಥಾನದ ಆಡಳಿತ ವರ್ಗ, ಅರ್ಚಕರು, ಪರಿಚಾರಕರು, ಭಕ್ತಾದಿಗಳು ಸೇರಿ ವಾದ್ಯಘೋಷದೊಂದಿಗೆ ತೆರಳಿ ಸುಮುಹೂರ್ತದಲ್ಲಿ ಬಾಳೆ ಗೊನೆ ಕಡಿದು ದೇಗುಲಕ್ಕೆ ತರಲಾಯಿತು. ಮಹಾಲಿಂಗೇಶ್ವರ ದೇವರ ವಾರ್ಷಿಕ ಜಾತ್ರೆಯಲ್ಲಿ ಪ್ರಥಮವಾಗಿ ಗೊನೆ ಮುಹೂರ್ತ ಪ್ರತಿ ವರ್ಷವೂ ಏ.1ರಂದೇ ನಡೆಯುವುದು. ಏ.10ರಂದು ಕೊಡಿಯೇರಿ ಉತ್ಸವಾದಿಗಳು ಆರಂಭವಾಗುತ್ತದೆ.

ವೈದ್ಯಕೀಯ ಕ್ಷೇತ್ರದಲ್ಲಿ ಮಣಿಪಾಲ ಕಸ್ತೂರ್ಬಾ ಆಸ್ಪತ್ರೆ ಐತಿಹಾಸಿಕ ಸಾಧನೆ

ಉಡುಪಿಯಲ್ಲೇ ಪ್ರಥಮ: 'ಮೃತ ದಾನಿ ಯಕೃತ್ತು ಕಸಿ' ಯಶಸ್ವಿ

ಮಣಿಪಾಲ: ಉಡುಪಿ ಜಿಲ್ಲೆಯ ವೈದ್ಯಕೀಯ ಇತಿಹಾಸದಲ್ಲಿ ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯು ಶನಿವಾರ ಅಭೂತಪೂರ್ವ ಮೈಲಿಗಲ್ಲನ್ನು ಸ್ಥಾಪಿಸಿದೆ. ಜಿಲ್ಲೆಯಲ್ಲಿಯೇ ಮೊದಲ ಬಾರಿಗೆ ಮೃತ ದಾನಿಯ ಯಕೃತ್ತು (ಲಿವರ್) ಕಸಿ ಶಸ್ತ್ರಚಿಕಿತ್ಸೆಯನ್ನು ಅತ್ಯಂತ ಯಶಸ್ವಿಯಾಗಿ ನಡೆಸುವ ಮೂಲಕ ಕರಾವಳಿ ಕರ್ನಾಟಕದ ರೋಗಿಗಳಿಗೆ ಸುಧಾರಿತ ಕಸಿ ಚಿಕಿತ್ಸೆ ಇನ್ನು ಮುಂದೆ ಸ್ಥಳೀಯವಾಗಿಯೇ ಲಭ್ಯವಿದೆ ಎಂಬ ಭರವಸೆ ನೀಡಿದೆ.



ದೀರ್ಘಕಾಲದ ಯಕೃತ್ ಕಾಯಿಲೆ ಮತ್ತು ಪೋರ್ಟಲ್ ಅಧಿಕ ರಕ್ತದೊತ್ತಡದಿಂದ ಬಳಲುತ್ತಿದ್ದ 56 ವರ್ಷದ ವ್ಯಕ್ತಿಗೆ ಈ ಸಂಕೀರ್ಣ ಶಸ್ತ್ರಚಿಕಿತ್ಸೆ ನಡೆಸಲಾಗಿದ್ದು, ಆಳವಾದ ವೈಯಕ್ತಿಕ ನಷ್ಟದ ನಡುವೆಯೂ ಅಂಗಾಂಗ ದಾನ ಮಾಡಲು ಮುಂದೆ ಬಂದ ದುಃಖಿತ ಕುಟುಂಬದ ಔದಾರ್ಯದಿಂದಾಗಿ ರೋಗಿಗೆ ಹೊಸ ಬದುಕು ಲಭಿಸಿದೆ. ಈ ಐತಿಹಾಸಿಕ ಶಸ್ತ್ರಚಿಕಿತ್ಸೆಯನ್ನು ಕಸ್ತೂರ್ಬಾ ಆಸ್ಪತ್ರೆಯ ಗ್ಯಾಸ್ಟ್ರೋಎಂಟರಾಲಜಿ ಮತ್ತು ಹೆಪಟಾಲಜಿ ವಿಭಾಗದ ಪ್ರಾಧ್ಯಾಪಕ ಡಾ. ಶಿರನ್ ಶೆಟ್ಟಿ (ಎಚ್‌ಪಿಬಿ) ಮತ್ತು ಲಿವರ್ ಹಾಗೂ ಪ್ಯಾಂಕ್ರಿಯಾಟಿಕ್ ಟ್ರಾನ್ಸ್‌ಪ್ಲಾಂಟ್ ಸರ್ಜರಿಯ ಪ್ರಮುಖ ಸಲಹೆಗಾರ ಡಾ. ಜಯಂತ್ ರೆಡ್ಡಿ, ಗ್ಯಾಸ್ಟ್ರೋಎಂಟರಾಲಜಿ ಸರ್ಜರಿ ವಿಭಾಗದ ಸಹ ಪ್ರಾಧ್ಯಾಪಕ ಡಾ. ಭರತ್ ಕುಮಾರ್ ಭಟ್ ಹಾಗೂ ಸಲಹೆಗಾರರಾದ ಡಾ. ದೀಪ್ತಿ ರಾಮಚಂದ್ರ ಅವರನ್ನೊಳಗೊಂಡ ಬಹುಶಿಸ್ತೀಯ ತಂಡವು ಯಶಸ್ವಿಯಾಗಿ ನಿರ್ವಹಿಸಿದೆ. ಶಸ್ತ್ರಚಿಕಿತ್ಸೆಯ ನಂತರ ರೋಗಿಯು ಸ್ಥಿರ ಸ್ಥಿತಿಯಲ್ಲಿ ಚೇತರಿಸಿಕೊಂಡು ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ್ದಾರೆ.

ಈ ಕುರಿತು ಮಾಹಿತಿ ನೀಡಿದ ಮಾಹೆ ಮಣಿಪಾಲದ ಬೋಧನಾ ಆಸ್ಪತ್ರೆಗಳ ಸಿಒಒ ಡಾ. ಸುಧಾಕರ್ ಕಂಟಿಪುಡಿ ಅವರು, ನಮ್ಮ ಗಮನವು ಕೇವಲ ಕ್ಲಿನಿಕಲ್ ಶ್ರೇಷ್ಠತೆಯ ಮೇಲೆ ಮಾತ್ರವಲ್ಲದೆ, ಯಕೃತ್ತು ಕಸಿಯನ್ನು ಪ್ರತಿಯೊಬ್ಬ ನಾಗರಿಕನಿಗೂ ತಲುಪುವಂತೆ ಮಾಡುವತ್ತಲೂ ಇದೆ ಎಂದರು.

ಆಸ್ಪತ್ರೆಯು ಪ್ರಮುಖ ಟಿಪಿಎ ಹಾಗೂ ವಿಮಾ ಕಂಪನಿಗಳೊಂದಿಗೆ ಒಪ್ಪಂದ ಮಾಡಿಕೊಂಡಿದ್ದು, ಅರ್ಹ ರೋಗಿಗಳು ಸರ್ಕಾರದ ವಿವಿಧ ಆರೋಗ್ಯ ಯೋಜನೆಗಳ ಅಡಿಯೂ ಈ ಚಿಕಿತ್ಸೆಯ ಪ್ರಯೋಜನ ಪಡೆಯಬಹುದಾಗಿದೆ ಎಂದು ಅವರು ತಿಳಿಸಿದರು.

ವೈದ್ಯಕೀಯ ಅಧೀಕ್ಷಕ ಡಾ. ಅವಿನಾಶ್ ಶೆಟ್ಟಿ ಅವರು ಉಪಸ್ಥಿತರಿದ್ದ ಪತ್ರಿಕಾಗೋಷ್ಠಿಯಲ್ಲಿ, ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗಳ ಸಹಯೋಗದೊಂದಿಗೆ ನಡೆಯುತ್ತಿರುವ ಈ ಕಸಿ ಕಾರ್ಯಕ್ರಮವು ಉಡುಪಿ ಮತ್ತು ನೆರೆಯ ಜಿಲ್ಲೆಗಳ ರೋಗಿಗಳಿಗೆ ಸಂಕೀರ್ಣ ಚಿಕಿತ್ಸೆಗಾಗಿ ದೂರದ ಪ್ರಯಾಣ ಮಾಡುವ ಅಗತ್ಯವನ್ನು ಕಡಿಮೆ ಮಾಡಲಿದೆ ಎಂದು ಸ್ಪಷ್ಟಪಡಿಸಲಾಯಿತು.

ಈ ಸಂದರ್ಭದಲ್ಲಿ ಕಸ್ತೂರ್ಬಾ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಅವಿನಾಶ್ ಶೆಟ್ಟಿ ಅವರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು. ಇವರೊಂದಿಗೆ ಯಶಸ್ವಿ ಯಕೃತ್ತು ಕಸಿ ಶಸ್ತ್ರಚಿಕಿತ್ಸೆಗೆ ಒಳಗಾದ ಫಲಾನುಭವಿ ರೋಗಿಯು ಕೂಡ ಈ ಸಂದರ್ಭದಲ್ಲಿ ಹಾಜರಿದ್ದರು.

ಕೆ.ಎಸ್.ಹೆಗ್ಡೆ ಆಸ್ಪತ್ರೆಯಲ್ಲಿ ಆಶಾ ಕಾರ್ಯಕರ್ತೆಯರ ಸಬಲೀಕರಣ ಕಾರ್ಯಾಗಾರ

ಗರ್ಭಧಾರಣೆ ಆರಂಭದಲ್ಲೇ ನೋಂದಣಿ ಅಗತ್ಯ: ಡಾ.ತಿಮ್ಮಯ್ಯ

ಉಳ್ಳಾಲ: ಗರ್ಭಧಾರಣೆಯ ಆರಂಭಿಕ ಹಂತದಲ್ಲೇ ನೋಂದಣಿ ಅತ್ಯಂತ ಅಗತ್ಯವಾಗಿದ್ದು, ಮೊದಲ 12 ವಾರಗಳೊಳಗೆ ನೋಂದಣಿ ಮಾಡಿಸಬೇಕು ಎಂಬ ನಿಯಮವಿತ್ತು. ಆದರೆ ಈಗ 10 ವಾರಗಳೊಳಗೆ ನೋಂದಣಿ ಪ್ರಕ್ರಿಯೆ ಆಗಬೇಕೆಂಬ ಹೊಸ ನಿಯಮ ಜಾರಿಯಾಗಿದ್ದು ಇದರ ಬಗ್ಗೆ ಅರಿವು ಮೂಡಿಸುವ ಕಾರ್ಯ ಆಶಾ ಕಾರ್ಯಕರ್ತೆಯರಿಂದ ನಡೆಯಬೇಕಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ತಿಮ್ಮಯ್ಯ ಅಭಿಪ್ರಾಯಪಟ್ಟರು.



ದೇರಳಕಟ್ಟೆ ಜಸ್ಟಿಸ್ ಕೆ.ಎಸ್.ಹೆಗ್ಡೆ ಆಸ್ಪತ್ರೆಯ ಚಿಂತನಾ ಸಭಾಂಗಣದಲ್ಲಿ ಬುಧವಾರ ನಡೆದ 'ಆಶಾ ಸಬಲೀಕರಣ:ಸುರಕ್ಷಿತ ತಾಯಂದಿರು, ಆರೋಗ್ಯವಾದ ಶಿಶುಗಳು' ಎಂಬ ಆಶಾ ಕಾರ್ಯಕರ್ತೆಯರ ಸಬಲೀಕರಣ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಗರ್ಭಿಣಿಯರ ಅಸಮರ್ಪಕ ಆರೈಕೆ, ಪೌಷ್ಟಿಕ ಆಹಾರ ಕೊರತೆ ಮತ್ತು ರಕ್ತಹೀನತೆ ಹಾಗೂ ಜನನಾಂಗ ಸೋಂಕುಗಳಿಗೆ ಸಮಯಕ್ಕೆ ಸರಿಯಾಗಿ ಚಿಕಿತ್ಸೆ ನೀಡುವುದರಿಂದ ಶಿಶು ಮರಣ ಪ್ರಮಾಣವನ್ನು ಬಹುಪಾಲು ತಡೆಗಟ್ಟಬಹುದೆಂದರು. ಕ್ಷೇಮ ಡೀನ್ ಡಾ.ಸಂದೀಪ್ ರೈ ಮಾತನಾಡಿದರು.

15 ಶಿಶು ಮರಣ

2025ರ ಏಪ್ರಿಲ್‌ನಿಂದ ಇಲ್ಲಿಯವರೆಗೆ ಜಿಲ್ಲೆಯಲ್ಲಿ ಒಟ್ಟು 15 ಶಿಶು ಮರಣ ಪ್ರಕರಣ ದಾಖಲಾಗಿವೆ. ಆದರಲ್ಲಿ 6 ಪ್ರಕರಣ ನಮ್ಮ ಜಿಲ್ಲೆಗೆ ಸಂಬಂಧಿಸಿದರೆ, ಉಳಿದವು ಬೇರೆ ಜಿಲ್ಲೆಗಳಿಗೆ ಸೇರಿವೆ. ಅವುಗಳಲ್ಲಿ 3 ಪ್ರಕರಣ ಕಾಸರಗೋಡಿನದ್ದು. ಅಪೌಷ್ಟಿಕತೆ, ಗರ್ಭಾವಸ್ಥೆಯಲ್ಲಿನ ರಕ್ತಹೀನತೆ, ಜನನಾಂಗ ಮಾರ್ಗದ ಸೋಂಕು, ಕಡಿಮೆ ತೂಕದ ಮಗು, ಅವಧಿಗೆ ಮುನ್ನ ಹೆರಿಗೆ ಹಾಗೂ ಶಿಶು ಮರಣಕ್ಕೆ ಪ್ರಮುಖ ಕಾರಣಗಳಾಗಿವೆ. ಈ ಮೂರು ಅಂಶಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಿದರೆ ಶಿಶು ಮರಣವನ್ನು ತಡೆಗಟ್ಟಬಹುದು.

● **ಡಾ. ತಿಮ್ಮಯ್ಯ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ**

ಕೆ.ಎಸ್.ಹೆಗ್ಡೆ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕಿ ಡಾ.ಸುಮಲತಾ.ಆರ್. ಶೆಟ್ಟಿ,ಪ್ರಸೂತಿ ಹಾಗೂ ಸ್ತ್ರೀರೋಗ ವಿಭಾಗದ ಮುಖ್ಯಸ್ಥರಾದ ಡಾ.ಪ್ರಸನ್ನ ಕುಮಾರ್ ಶೆಟ್ಟಿ,ಮಕ್ಕಳ ವಿಭಾಗದ ಮುಖ್ಯಸ್ಥೆ ಡಾ.ಸೀಮಾ ಪವಾಮನ್ ಎಸ್., ಮಕ್ಕಳ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಧೃತಿಮಾನ್ ಶೆಟ್ಟಿ ಇದ್ದರು. ಸಮುದಾಯ ವೈದ್ಯಕೀಯ ವಿಭಾಗದ ಮುಖ್ಯಸ್ಥ ಡಾ. ರಾಹುಲ್ ಹೆಗ್ಡೆ ಸ್ವಾಗತಿಸಿದರು. ರಾಜಾರಾಮ ಶೆಟ್ಟಿ ನಿರೂಪಿಸಿದರು. ರವಿ ಕೆ. ವಂದಿಸಿದರು. ತಾಯಿ ಆರೈಕೆ, ಗರ್ಭಿಣಿ ತಾಯಿ ಆರೈಕೆಯ ಬಗ್ಗೆ ಪ್ರಸೂತಿ ಹಾಗೂ ಸ್ತ್ರೀರೋಗ ವಿಭಾಗದ ಮುಖ್ಯಸ್ಥ ಡಾ. ಪ್ರಸನ್ನ ಕುಮಾರ್ ಶೆಟ್ಟಿ ಹಾಗೂ ನವಜಾತ ಶಿಶು ಆರೈಕೆಯ ಬಗ್ಗೆ ಮಕ್ಕಳ ವಿಭಾಗದ ಮುಖ್ಯಸ್ಥೆ ಡಾ.ಸೀಮಾ ಪವಾಮನ್ ಎಸ್. ಮತ್ತು ಮಕ್ಕಳ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಧೃತಿಮಾನ್ ಶೆಟ್ಟಿ ಮಾಹಿತಿಯನ್ನು ನೀಡಿದರು.

ಶ್ರೀ ರಕ್ತೇಶ್ವರೀ ದೇವಿ ಸನ್ನಿಧಿ ಸೇವಾಸಮಿತಿ ಅಧ್ಯಕ್ಷ ಬಿ. ಮೋಹನ್‌ಗೆ ಅಭಿನಂದನೆ



ಬಂಟ್ವಾಳ: ಶ್ರೀ ರಕ್ತೇಶ್ವರೀ ದೇವಿ ಸನ್ನಿಧಿ ಬಿ.ಸಿ ರೋಡ್ ಇದರ ಸೇವಾ ಸಮಿತಿಯ ಮೂರರಯ ವರ್ಷದ ಅವಧಿಗೆ ಅಧ್ಯಕ್ಷರಾಗಿ ಆಯ್ಕೆಯಾದ ಕುಲಾಲರ ಯುವ ವೇದಿಕೆಯ ಸಲಹೆಗಾರರಾದ ಬಿ. ಮೋಹನ್ ಅವರನ್ನು ಅಭಿನಂದಿಸಲಾಯಿತು.

ಅವರ ಅಧ್ಯಕ್ಷ ಹುದ್ದೆಯ ಅವಧಿಯಲ್ಲಿ ಶ್ರೀ ದೇವಿಯ ಸನ್ನಿಧಿಯ ನಡೆಯುವ ಎಲ್ಲಾ ಧರ್ಮ ಕಾರ್ಯಗಳಿಗೆ ಯುವ ವೇದಿಕೆಯ ಸಂಪೂರ್ಣ ಬೆಂಬಲ ನೀಡುವುದಾಗಿ ಭರವಸೆ ನೀಡಲಾಯಿತು. ಈ ಸಂದರ್ಭದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಬಿ.ಮೋಹನ್ ಅವರು ಒಂದು ಕಾಲದಲ್ಲಿ ದೇವರ ಚಾಕಿರಿ ಮಾಡಲು ಮಾತ್ರ ಸೀಮಿತವಾಗಿದ್ದ ಸಮುದಾಯದ ನನಗೆ ಆಡಳಿತ ಮಾಡಲು ಅವಕಾಶ ಒದಗಿರುವುದು ಸುಯೋಗವಾಗಿದೆ ಎಂದರು.

ಯಾವುದೇ ಫಲಾಪೇಕ್ಷೆಯಿಲ್ಲದೆ ಶ್ರೀದೇವಿಯ ಸೇವೆ ಮಾಡುವುದಾಗಿ ಭರವಸೆ ನೀಡಿದ ಅವರು ಶ್ರೀ ದೇವಿಯ ಅನುಗ್ರಹದಿಂದ ಯುವ ವೇದಿಕೆಯು ಮತ್ತಷ್ಟು ಬಲಿಷ್ಠವಾಗಿ ಬೆಳೆಯಲಿ ಎಂದು ಹಾರೈಸಿದರು.

ಯುವ ವೇದಿಕೆಯ ಸುಕುಮಾರ್ ಬಂಟ್ವಾಳ, ಸುಮಿತ್ ಸಾಲ್ಯಾನ್ ಸೊರ್ನಾಡ್, ಗಣೇಶ್ ಕಾಮಾಜೆ, ಸೌಮ್ಯ ಸುಕುಮಾರ್,ಕಿಶೋರ್ ಬಂಗೇರ ವಿರ್ಯ, ಸಂತೋಷ್ ಮಯ್ಯರ ಬೈಲು, ಸಂತೋಷ್ ಮರ್ತಾಜೆ, ಪುನೀತ್ ಕಾಮಾಜೆ,ನಿತೀಶ್ ಕುಲಾಲ್ ಪಲ್ಲಿಕಂಡ ಉಪಸ್ಥಿತರಿದ್ದರು. ಹಿರಿಯರಾದ ಶೇಷಪ್ಪ ಮಾಸ್ತರ್ ಪ್ರಸ್ತಾವಿಸಿ, ಎಚ್.ಕೆ. ನಯನಾಡು ವಂದಿಸಿದರು.

ಕನ್ನಡ ಸಾಹಿತ್ಯ ಪರಿಷತ್ ಬ್ರಹ್ಮಾವರ ಘಟಕದ ಸಾಹಿತ್ಯ ಸಂಚಾರ ಸರಣಿ



ಕೋಟ: ಕನ್ನಡ ಸಾಹಿತ್ಯ ಪರಿಷತ್ ಬ್ರಹ್ಮಾವರ ತಾಲೂಕು ಘಟಕದ ಸಾಹಿತ್ಯ ಸಂಚಾರ ಅವತ್ತೈದು ಮಂಗಳವಾರ ಕಾರ್ಕಡ ನಾಗಭೂಷಣಬ್ರಹ್ಮ ಅವರ ಮನೆ ಅಂಗಳದಲ್ಲಿ ಜರಗಿತು.

ಸಾಹಿತ್ಯ ಪರಿಷತ್‌ನ ಅಚ್ಯುತ ಪೂಜಾರಿ ಗಾಯನದ ಮೂಲಕ ಪ್ರಾರಂಭವಾಗಿ, ಚಂದ್ರಶೇಖರ ಸೋಮಯಾಜಿ ಅವರು ಕಾರ್ಕಡ ಗ್ರಾಮದ ಇತಿಹಾಸವನ್ನು ಸ್ವರಚಿತ ಕವನದ ಮೂಲಕ ವಾಚಿಸಿದರು.

ಶ್ರೀಪತಿ ಹೇರಳೆ ಮಹಿಳಾ ದಿನಾಚರಣೆಯ ಮಹತ್ವ ತಿಳಿಸಿದರು. ರಾಜೇಶ್ ಅಚ್ಲಾಡಿ ಅವರು ರಂಗಭೂಮಿಯ ಬಗ್ಗೆ ಶುಭ ಹಾರೈಸಿದರು.

ನೀಲಾವರ ಸುರೇಂದ್ರ ಅಡಿಗ ಅವರು ಪ್ರಾಸ್ತಾವಿಕ ಮಾತನಾಡಿದರು. ಗುಂಡ್ಮಿ ರಾಮಚಂದ್ರ ಐತಾಳ ಅವರು ಮನೆಯಂಗಳ ಸಾಹಿತ್ಯದ ಔಚಿತ್ಯವನ್ನು ತಿಳಿಸಿದರು. ವನಿತಾ ಉಪಾಧ್ಯ ಮತ್ತು ಬಳಗದವರಿಂದ ವೈವಿಧ್ಯಮಯ ಕಾರ್ಯಕ್ರಮ, ಬ್ರಾಹ್ಮಿ ಮತ್ತು ತಂಡದಿಂದ ಸಂಗೀತ ನೃತ್ಯಗಳು ನಡೆದವು.

ಕಾರ್ಕಡ ಗುರು ಆಂಜನೇಯ ಮಹಿಳಾ ಭಜನ ತಂಡದಿಂದ ಕುಣಿತ ಭಜನೆ ನಡೆಯಿತು. ಹಾಸ್ಯಕಲಾವಿದ ಮಂಜುನಾಥ ಕುಂದೇಶ್ವರ್ ಅವರು ಕುಂದಾಪುರ ಕನ್ನಡ ಮತ್ತು ಮಿಮಿಕ್ರಿ ಪ್ರಸ್ತುತಪಡಿಸಿದ್ದರು. ಇದೇ ವೇಳೆ ನಾಗಭೂಷಣ ಬ್ರಹ್ಮ ಮತ್ತು ಅವರ ಮಡದಿ ಮಮತಾ ದಂಪತಿಗಳನ್ನು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಸನ್ಮಾನಿಸಲಾಯಿತು. ಗುರು ನರಸಿಂಹ ದೇವಳದ ಆಡಳಿತ ಮಂಡಳಿಯ ನೂತನ ಸದಸ್ಯರಾದ ಕೆ. ತಾರನಾಥ ಹೊಳ್ಳ ಮತ್ತು ಮಣಿಪಾಲ ನರಸಿಂಹಮೂರ್ತಿ ಸೀತಾರಾಮ ಸೋಮಯಾ ಜಿ., ವಿಶ್ವೇಶ್ವರ ಹೊಳ್ಳ ಗಣೇಶ ಹೆಬ್ಬಾರ, ನಾರಾಯಣ ಮಾಸ್ಟರ್ ಇದ್ದರು. ಸುಪ್ರೀತಾ ಪುರಾಣಿಕ ನಿರೂಪಿಸಿದರು. ಕನ್ನಡ ಸಾಹಿತ್ಯ ಪರಿಷತ್ ಗೌರವ ಕಾರ್ಯದರ್ಶಿ ಜ್ಯೋತಿ ಪೂಜಾರಿ ವಂದಿಸಿದರು.

ಅಕ್ಷಯ ಕಾಲೇಜ್: ಏವಿಯೇಶನ್ ಫ್ಯೂಚರ್ ಗ್ರೌಂಡ್ ಆ್ಯಂಡ್ ಏರ್ ಕಾರ್ಯಾಗಾರ





ಪುತ್ತೂರು: ಸಂಪ್ಯದ ಅಕ್ಷಯ ಕಾಲೇಜಿನ ಏವಿಯೇಷನ್ ವಿಭಾಗದ ವತಿಯಿಂದ 'ಏವಿಯೇಶನ್ ಫ್ಯೂಚರ್ ಗ್ರೌಂಡ್ ಆ್ಯಂಡ್ ಏರ್' ಎಂಬ ವಿಷಯದ ಕುರಿತು ಒಂದು ದಿನದ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಯಿತು.

ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿದ್ದ ಬೆಂಗಳೂರು ಬೇಸ್‌ನ ಏರ್ ಇಂಡಿಯಾ ಎಕ್ಸ್‌ಪ್ರೆಸ್‌ನ ಸೀನಿಯರ್ ಏರ್–ಹೋಸ್ಟೆಸ್‌ಗಳಾದ ದೀಪ ಹಾಗೂ ಜಸ್ವಿಂದರ್ ಅವರು ವಿದ್ಯಾರ್ಥಿಗಳಿಗೆ ಏವಿಯೇಷನ್ ಕ್ಷೇತ್ರದ ವಿಮಾನ ನಿಲ್ದಾಣ ವ್ಯವಸ್ಥೆ ಹಾಗೂ ದೇಶೀಯ ಮತ್ತು ಅಂತಾರಾಷ್ಟ್ರೀಯ ವಿಮಾನಯಾನದಲ್ಲಿ ಇರುವ ವಿವಿಧ ಉದ್ಯೋಗಾವಕಾಶಗಳ ಕುರಿತು ಮಾಹಿತಿ ನೀಡಿದರು. ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಸಹ ಏವಿಯೇಷನ್ ಕ್ಷೇತ್ರದಲ್ಲಿ ತಮ್ಮ ಭವಿಷ್ಯವನ್ನು ಹೇಗೆ ರೂಪಿಸಿಕೊಳ್ಳಬಹುದು ಎಂಬುದರ ಕುರಿತು ಮಾರ್ಗದರ್ಶನ ನೀಡಲಾಯಿತು. ಪುತ್ತೂರು ಹಾಗೂ ಸುತ್ತಮುತ್ತಲಿನ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ವೃತ್ತಿಪರ ಶಿಕ್ಷಣದ ಮೂಲಕ ಭವಿಷ್ಯ ನಿರ್ಮಾಣದಲ್ಲಿ ಮುಂಚೂಣಿಯಲ್ಲಿರುವ ಅಕ್ಷಯ ಕಾಲೇಜ್ ಪುತ್ತೂರಿನಲ್ಲಿ ಏವಿಯೇಷನ್ ಶಿಕ್ಷಣವನ್ನು ಪರಿಚಯಿಸಿದ ಮೊದಲ ಕಾಲೇಜ್ ಎಂಬ ಹೆಗ್ಗಳಿಕೆಯನ್ನು ಪಡೆದಿದ್ದು, ವಿದ್ಯಾರ್ಥಿಗಳಿಗೆ ಉದ್ಯೋಗಮುಖಿ ತರಬೇತಿ ನೀಡುವಲ್ಲಿ ಈ ಸಂಸ್ಥೆ ಪ್ರಮುಖ ಪಾತ್ರ ವಹಿಸುತ್ತಿದೆ. ಕಾರ್ಯಕ್ರಮದಲ್ಲಿ ಏವಿಯೇಷನ್ ವಿಭಾಗದ ಮುಖ್ಯಸ್ಥೆ ಜಯಶ್ರೀ, ಆಡಳಿತಾಧಿಕಾರಿ ಅರ್ಪಿತ್ ಟಿ.ಎ., ಎಚ್‌ಆರ್ ಭರತ್, ಪಿಆರ್‌ಒ ಯಾಮಿನಿ ಹಾಗೂ ಉಪನ್ಯಾಸಕಿ ಆಶ್ರಿತಾ ಉಪಸ್ಥಿತರಿದ್ದರು.

ಅದಮಾರು ಪೂರ್ಣಪ್ರಜ್ಞ ಶಿಕ್ಷಣ ಸಂಸ್ಥೆಗಳು: ಏ. 4ರಂದು ಅಮೃತ ಮಹೋತ್ಸವ

ಪಡುಬಿದ್ರಿ: ಅದಮಾರು ಪೂರ್ಣಪ್ರಜ್ಞ ಶಿಕ್ಷಣ ಸಂಸ್ಥೆಯು ಕೀರ್ತಿಶೇಷ ಶ್ರೀ ವಿಬುಧೇಶ ತೀರ್ಥ ಶ್ರೀಪಾದರು ಹುಟ್ಟು ಹಾಕಿದ ಚೊಚ್ಚಲ ವಿದ್ಯಾಸಂಸ್ಥೆ. ಶಿಲೆಕಲ್ಲಿನ ಅಪರೂಪದ ಕಲ್ಲಿನ ಕಮಾನು ಇರುವ ವಿಶೇಷ ಶಾಲೆ ಇದು. 1950ರ ಕಾಲದಲ್ಲಿ ಶಿಲೆಕಲ್ಲಿನಿಂದಲೇ ಕಟ್ಟಿದ ಕಟ್ಟಡ ಇರುವ ಈ ಶಾಲೆಯು 75 ವಸಂತಗಳನ್ನು ಕಂಡಿದೆ. ಇಂದಿಗೂ ಸುಸಜ್ಜಿತವಾಗಿ ಉಳಿದಿದೆ ಎಂಬುದು ಪೂಜ್ಯ ವಿಬುಧೇಶ ಶ್ರೀಗಳ ದೂರದೃಷ್ಟಿತ್ವಕ್ಕೆ ಜ್ವಲಂತ ಸಾಕ್ಷಿಯಾಗಿದ್ದು, ಮಧ್ವಾಚಾರ್ಯರ ಪೂರ್ಣಪ್ರಜ್ಞ ಎಂಬ ವಿಶಿಷ್ಟ ಹೆಸರು ಈ ಸಂಸ್ಥೆಯ ಹಿರಿಮೆಯನ್ನು ಹೆಚ್ಚಿಸಿದೆ.





ಇಂದು ಈ ಅದಮಾರು ಪೂರ್ಣಪ್ರಜ್ಞದ ಲಕ್ಷಾಂತರ ಹಳೆ ವಿದ್ಯಾರ್ಥಿಗಳು ದೇಶ ವಿದೇಶಗಳಲ್ಲಿ ಉನ್ನತ ಉದ್ಯೋಗದ ಹೊಂದಿದ್ದಾರೆ. ಪ್ರಜ್ಞಾವಂತ ನಾಗರಿಕರ ನಿರ್ಮಾಣ ಮಾಡುವ, ಸುಜ್ಞಾನಿಗಳನ್ನು ಬೆಳೆಸುವ ಈ ಸಂಸ್ಥೆಗೆ ಹಳೆ ವಿದ್ಯಾರ್ಥಿಗಳು ಬಲುದೊಡ್ಡ ಆಧಾರಸ್ತಂಭ. ಅದಮಾರಿಂದ ಪ್ರಾರಂಭವಾದ ಸ್ವಾಮೀಜಿಯವರ ಶಿಕ್ಷಣ ಕ್ರಾಂತಿ ರಾಜಧಾನಿ ದಿಲ್ಲಿಯ ತನಕ ಮುಂದುವರಿಯಿತು.

ವಿಜ್ಞಾನ ಮತ್ತು ಇಂಗ್ಲಿಷ್‌ಗೆ ವಿಶೇಷ ಒತ್ತು ಕೊಡುತ್ತಿದ್ದ ಪೂಜ್ಯ ವಿಬುಧೇಶ ಶ್ರೀಗಳು ಪೂರ್ಣಪ್ರಜ್ಞದ ಹಳೆವಿದ್ಯಾರ್ಥಿ ಒಬ್ಬನಾದರೂ ನೊಬೆಲ್ ಪ್ರಶಸ್ತಿಗೆ ಭಾಜನರಾಗಬೇಕು ಎಂಬ ಮಹಾನ್ ಕನಸು ಕಂಡವರು. ತದನಂತರದ ಪರಮಪೂಜ್ಯ ಶ್ರೀ ವಿಶ್ವಪ್ರಿಯ ತೀರ್ಥ ಶ್ರೀಪಾದರು ಹಾಗೂ ಪ್ರಸ್ತುತ ಅಧ್ಯಕ್ಷರಾದ ಶ್ರೀ ಈಶಪ್ರಿಯ ತೀರ್ಥ ಶ್ರೀಪಾದರು ಪೂರ್ಣಪ್ರಜ್ಞ ಸಂಸ್ಥೆಗಳನ್ನು ಶಿಕ್ಷಣದ ಹೆಮ್ಮರವಾಗಿ ಬೆಳೆಸಿದ್ದಾರೆ. ಈಗ ಪೂರ್ಣಪ್ರಜ್ಞ ಶಿಕ್ಷಣ ಸಂಸ್ಥೆ ಗಳ ಸಂಖ್ಯೆ ಒಟ್ಟು 50ರ ಗಡಿ ದಾಟಿದೆ. ಅದಮಾರು ಪೂರ್ಣಪ್ರಜ್ಞ ಶಿಕ್ಷಣ ಸಂಸ್ಥೆಗಳು ಕೂಡ ಬಾಲಕರ ಹಾಗೂ ಬಾಲಕಿಯರ ವಸತಿ ನಿಲಯದೊಂದಿಗೆ ಕೆಜಿಯಿಂದ ಪಿಯುಸಿ ತನಕ 1500ಕ್ಕೂ ಮಿಕ್ಕಿ ಮಕ್ಕಳಿಗೆ ಸುಜ್ಞಾನ ಬಿತ್ತುವ ಜ್ಞಾನ ಕಾಶಿಯಾಗಿ ಮಾರ್ಪಟ್ಟಿದೆ.

ಸುಂದರ ಪರಿಸರದ ಈ ವಿಶಿಷ್ಟ ಅದಮಾರು ಪೂರ್ಣಪ್ರಜ್ಞ ಶಿಕ್ಷಣ ಸಂಸ್ಥೆಯು ಏ. 4ರ ಶನಿವಾರ ಅಮೃತ ಮಹೋತ್ಸವವನ್ನು ಆಚರಿಸುತ್ತಿದೆ. ಹಳೆ ವಿದ್ಯಾರ್ಥಿಗಳು, ಪ್ರಸಕ್ತ ವಿದ್ಯಾರ್ಥಿಗಳು ಊರ ಪರವೂರ ಮಹನೀಯರು ಸಂಸ್ಥೆಯ ನಿವೃತ್ತ ಹಾಗೂ ಪ್ರಸಕ್ತ ಶಿಕ್ಷಕರು ಒಟ್ಟಾಗಿ ಈ ವಿಜೃಂಭಣೆಯ ಅಮೃತ ಮಹೋತ್ಸವ ಕಾರ್ಯಕ್ರಮ ವೀಕ್ಷಿಸಲಿದ್ದಾರೆ.

ಇಸ್ರೋದಿಂದ ವಿಶೇಷ ಬಸ್

ಅದಮಾರು ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳ ಪ್ರಜ್ಞಾಮೃತ ಪ್ರದರ್ಶನಿ ವಸ್ತು ಪ್ರದರ್ಶನ ಏ. 4, 5 ಹಾಗೂ 6ರ ತನಕ ಸಾರ್ವಜನಿಕರಿಗೆ ನೋಡಲು ಅವಕಾಶವಿದೆ. ಭಾರತದ ಖ್ಯಾತ ಬಾಹ್ಯಾಕಾಶ ಸಂಸ್ಥೆ ಇಸ್ರೋದಿಂದ ವಿಶೇಷ ಬಸ್ಸು ಅದಮಾರಿಗೆ ಬರಲಿದೆ. ಬೆಂಗಳೂರಿನ ಜವಾಹರ್‌ಲಾಲ್ ನೆಹರು ತಾರಾಲಯದ ಅನೇಕ ಖಗೋಳ ಶಾಸ್ತ್ರಕ್ಕೆ ಸಂಬಂಧಪಟ್ಟ ವಿಜ್ಞಾನ ವಸ್ತು ಪ್ರದರ್ಶನಗಳು ಇಲ್ಲಿ ನೋಡಲು ಸಿಗಲಿದೆ. ಅಲ್ಲದೆ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ರಸಾಭಿವ್ಯಂಜನ, ಕೃಷ್ಣಂ ವಂದೇ ಜಗದ್ಗುರುಂ ನೃತ್ಯ ರೂಪಕ, ರಾಜ್ಯ ಪ್ರಶಸ್ತಿ ವಿಜೇತ ತುಳು ನಾಟಕ ಪರಮಾತ್ಮೆ ಪಂಜುರ್ಲಿ ಪ್ರದರ್ಶನಗೊಳ್ಳಲಿದೆ.

ಅಮೃತ ಮಹೋತ್ಸವದ ಪ್ರಯುಕ್ತ ಸುಜ್ಞಾನ ಮಂದಿರ ಎಂಬ ನೂತನ ಕಟ್ಟಡವನ್ನು ಪರಮಪೂಜ್ಯ ಶ್ರೀ ವಿಶ್ವಪ್ರಿಯ ತೀರ್ಥ ಶ್ರೀಪಾದರು ಲೋಕಾರ್ಪಣೆ ಮಾಡಲಿದ್ದಾರೆ. ಪ್ರಜ್ಞಾಮೃತ ಪ್ರದರ್ಶನಿಯನ್ನು ಪರಮ ಪೂಜ್ಯ ಶ್ರೀ ಈಶಪ್ರಿಯ ತೀರ್ಥ ಶ್ರೀಪಾದರು ಉದ್ಘಾಟಿಸಲಿದ್ದಾರೆ. ಖ್ಯಾತ ಆಕಾಶ ಕ್ಷಿಪಣಿಯ ಪ್ರವರ್ತಕರಾದ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ವಿಜ್ಞಾನಿ ಡಾ. ಪ್ರಹ್ಲಾದ ರಾಮರಾವ್ ದಿಕ್ಸೂಚಿ ಭಾಷಣ ಮಾಡಲಿದ್ದಾರೆ . ಜೆ ಎಮ್ ತಾರಾಲಯದ ಡಾ. ಗುರುಪ್ರಸಾದ್, ಸಂಶೋಧಕರಾದ ವಿನಾಯಕ ಪತ್ತಾರ್, ಸಂಸದ ಕೋಟ ಶ್ರೀನಿವಾಸ ಪೂಜಾರಿ, ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ ಮತ್ತಿತರರು ಭಾಗವಹಿಸಲಿದ್ದಾರೆ. 1950ರಿಂದ ತೊಡಗಿ ಇಲ್ಲಿಯ ತನಕದ ಸಂಸ್ಥೆಯ ಹಳೆವಿದ್ಯಾರ್ಥಿಗಳು ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಸಂಸ್ಥೆಯು ತಿಳಿಸಿದೆ.

ಸುತ್ತ ಮುತ್ತ

ರಾಜ್ಯ ಬಜೆಟ್ ವಿರುದ್ಧ ಇಂದು ಬಿಜೆಪಿ ಪ್ರತಿಭಟನೆ



ಬೈಂದೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿರುವ ರಾಜ್ಯ ಬಜೆಟ್‌ನಲ್ಲಿ ಕರಾವಳಿ ಜಿಲ್ಲೆಗಳ ನಿರ್ಲಕ್ಷ್ಯ ಹಾಗೂ ರಾಜ್ಯ ಸರ್ಕಾರದ ಮಲತಾಯಿ ಧೋರಣೆ ವಿರೋಧಿಸಿ ಬಿಜೆಪಿ ವತಿಯಿಂದ ಏ.2ರಂದು ಕ್ಷೇತ್ರದಾದ್ಯಂತ ಪ್ರತಿಭಟನೆ ನಡೆಸಲು ಬೈಂದೂರು ಬಿಜೆಪಿ ತೀರ್ಮಾನಿಸಿದೆ. ಈ ಹಿನ್ನೆಲೆಯಲ್ಲಿ ಬೈಂದೂರು ವಿಧಾನಸಭಾ ಕ್ಷೇತ್ರದ ಬಿಜೆಪಿ ಮಂಡಲದ ವತಿಯಿಂದ ಎಲ್ಲ ಗ್ರಾಮ ಪಂಚಾಯತ್ ಕಚೇರಿಗಳ ಎದುರುಗಡೆ ಬುಧವಾರ ಪ್ರತಿಭಟನೆ ನಡೆಸಲಿದ್ದೇವೆ. ರಾಜ್ಯ ಬಜೆಟ್‌ನಲ್ಲಿ ಕರಾವಳಿ ಭಾಗಗಳಿಗೆ ಅತ್ಯಲ್ಪವಾದ ಅನುದಾನ ನೀಡದೇ ನಿರ್ಲಕ್ಷ್ಯ ತೋರಲಾಗಿದೆ. ಇದರಿಂದ ಈ ಭಾಗದ ಮೀನುಗಾರರು, ರೈತರು ಹಾಗೂ ಸಾಮಾನ್ಯ ಜನರಿಗೆ ಅನ್ಯಾಯವಾಗುತ್ತಿದೆ. ರಾಜ್ಯ ಸರ್ಕಾರದ ಧೋರಣೆ ಖಂಡಿಸಿ ಗ್ರಾಮ ಪಂಚಾಯತ್ ಮಟ್ಟದಲ್ಲಿ ಪ್ರತಿಭಟನೆ ನಡೆಸಲಾಗುವುದು. ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಮತ್ತು ಸಾರ್ವಜನಿಕರು ಭಾಗವಹಿಸಲಿದ್ದಾರೆ ಎಂದು ಎಂದು ಮಂಡಲ ಬಿಜೆಪಿ ಅಧ್ಯಕ್ಷೆ ಅನಿತಾ ಆರ್. ಕೆ. ತಿಳಿಸಿದ್ದಾರೆ. ತಿಳಿಸಿದ್ದಾರೆ.

ವಿದ್ಯುತ್ ಕಡಿತದಿಂದ ಸಾವಿರಾರು ಜನರಿಗೆ ಅನ್ಯಾಯ

ಬೈಂದೂರು: ಸೌಕೂರು ಹಾಗೂ ಸೌಪರ್ಣಿಕ ಏತ ನೀರಾವರಿ ಯೋಜನೆಯ ವಿದ್ಯುತ್ ಸ್ಥಾವರಗಳ ವಿದ್ಯುತ್ ಬಿಲ್ ಪಾವತಿ ಇಲಾಖೆಯಿಂದ ಪಾವತಿಸಲು ಬಾಕಿ ಇದೆ ಎಂಬ ಕಾರಣಕ್ಕಾಗಿ ಮಾರ್ಚ್ ತಿಂಗಳ ಕೊನೆಯ ವಾರದಲ್ಲಿ ಎಲ್ಲಾ ಸ್ಥಾವರಗಳ ವಿದ್ಯುತ್ ಕಡಿತ ಮಾಡಲಾಗಿದೆ. ಮೆಸ್ಕಾಂ ಇಲಾಖೆಯು ಪ್ರಸ್ತುತ ಮಾಡಿರುವ ವಿದ್ಯುತ್ ಕಡಿತದಿಂದ ಆ ಭಾಗದ ಸಾವಿರಾರು ರೈತರಿಗೆ ಅನ್ಯಾಯವಾಗಿದೆ. ಬಿರು ಬೇಸಿಗೆ ಹಾಗೂ ರೈತರಿಗೆ ನೀರಾವರಿ ಅವಶ್ಯಕತೆ ಇರುವ ಈ ಅವಧಿಯಲ್ಲಿ ರಾಜ್ಯ ಸರ್ಕಾರದ ಇಲಾಖೆಯೊಂದು ಮಾಡಿರುವ ನಿರ್ಧಾರ ಅಕ್ಷಮ್ಯ ಅಪರಾಧವಾಗಿದೆ. ಇಲಾಖೆಗಳ ಈ ನಿರ್ಧಾರದಿಂದ ಅನ್ನದಾತರು ಮತ್ತೊಮ್ಮೆ ಸಂಕಷ್ಟಕ್ಕೆ ಪರಿಸ್ಥಿತಿ ಎದುರಾಗಿದೆ. ಸರ್ಕಾರದ ಅಡಿಯಲ್ಲಿ ಬರುವ ಇಲಾಖೆಗಳ ಈ ನಿರ್ಧಾರವನ್ನು ಬೈಂದೂರು ರೈತಮೋರ್ಚಾ ತೀವ್ರವಾಗಿ ವಿರೋಧಿಸುತ್ತದೆ. ಹಾಗೂ ಕಡಿತಗೊಳಿಸಿರುವ ಸೌಕೂರು ಹಾಗೂ ಸೌಪರ್ಣಿಕ ಏತ ನೀರಾವರಿ ಯೋಜನೆಗಳ ವಿದ್ಯುತ್ ಸಂಪರ್ಕವನ್ನು ಒದಗಿಸಿ ಕೃಷಕ ರೈತರ ಜಮೀನುಗಳಿಗೆ ನೀರು ಹರಿಸಲು ತುರ್ತು ಕ್ರಮ ವಹಿಸಬೇಕು. ಇಲ್ಲವಾದರೆ ಉಗ್ರ ಹೋರಾಟ ಮಾಡುವುದಾಗಿ ಬೈಂದೂರು ರೈತ ಮೋರ್ಚಾ ಅಧ್ಯಕ್ಷ ಪ್ರಕಾಶ್ಚಂದ್ರ ಶೆಟ್ಟಿ ಎಚ್ಚರಿಕೆ ನೀಡಿದ್ದಾರೆ.

ವೆಲ್ಡಿಂಗ್, ಫ್ಯಾಬ್ರಿಕೇಟರ್ಸ್ ಅಸೋಸಿಯೇಶನ್‌ಗೆ ಗಣೇಶ್ ಆಚಾರ್ಯ ಆಯ್ಕೆ



ಕುಂದಾಪುರ: ಕುಂದಾಪುರ ವಲಯ ವೆಲ್ಡಿಂಗ್ ಮತ್ತು ಫ್ಯಾಬ್ರಿಕೇಟರ್ಸ್ ಅಸೋಸಿಯೇಶನ್ ಕುಂದಾಪುರ ಇದರ 2026–2028ನೇ ಸಾಲಿನ ನೂತನ ಅಧ್ಯಕ್ಷರಾಗಿ ಗಣೇಶ್ ಆಚಾರ್ಯ ನಾಯ್ಕನಕಟ್ಟೆ ಆಯ್ಕೆಯಾಗಿದ್ದಾರೆ. ಗೌರವಾಧ್ಯಕ್ಷರಾಗಿ ಅರುಣ್ ಪಿ. ಆಚಾರ್ ಕುಂದಾಪುರ, ಉಪಾಧ್ಯಕ್ಷರಾಗಿ ಭಾಸ್ಕರ ಆಚಾರ್ಯ ಕೋಟೇಶ್ವರ, ಪ್ರಧಾನ ಕಾರ್ಯದರ್ಶಿಯಾಗಿ ಸಂತೋಷ ಆಚಾರ್ಯ ಮಧುವನ, ಜೊತೆ ಕಾರ್ಯದರ್ಶಿಗಳಾಗಿ ವಿಜಯ ನಾಯಕ್ ಕೊಕ್ಕರ್ಣೆ, ದಿವಾಕರ ಆಚಾರ್ಯ ಕುಂದಾಪುರ, ಕೋಶಾಧಿಕಾರಿಯಾಗಿ ರಾಘವೇಂದ್ರ ಆಚಾರ್ಯ ವಕ್ವಾಡಿ, ಲಕ್ಷ್ಮೀನಾರಾಯಣ ಆಚಾರ್ಯ ಹಾಲಾಡಿ, ಸಂಘಟನಾ ಕಾರ್ಯದರ್ಶಿಗಳಾಗಿ ಗಣಪತಿ ಟಿ. ಶ್ರೀಯಾನ್ ತೆಕ್ಕಟ್ಟೆ, ಮಲ್ಲಿಕಾರ್ಜುನ ಆಚಾರ್ಯ ಕಾಳಾವರ, ಕೃಷ್ಣಯ್ಯ ಆಚಾರ್ಯ ಮೊಳಹಳ್ಳಿ, ನಾಗೇಂದ್ರ ಆಚಾರ್ಯ ಗೋಳಿಯಂಗಡಿ, ಮಹೇಶ ಆಚಾರ್ಯ ಹೊಸಕೋಟೆ, ರಾಜೇಶ ಆಚಾರ್ಯ ಶಂಕರನಾರಾಯಣ, ರಮೇಶ ಆಚಾರ್ಯ ತಲ್ಲೂರು, ಪ್ರಸಾದ ಜೋಗಿ ತೆಕ್ಕಟ್ಟೆ, ಆಡಳಿತ ಮಂಡಳಿ ಸದಸ್ಯರಾಗಿ ಸಂತೋಷ ದೇವಾಡಿಗ ಬೀಜಾಡಿ, ರಾಘವೇಂದ್ರ ಕುಂದರ್ ನಾವುಂದ, ಲಕ್ಷ್ಮಣ ಆಚಾರ್ಯ ತ್ರಾಸಿ, ವಿವೇಕ ನಾಯಕ್ ಕಾಲ್ತೋಡು, ಗಣೇಶ ಆಚಾರ್ಯ ಬೆಳ್ವೆ, ಅಣ್ಣಪ್ಪ ಆಚಾರ್ಯ ಅಸೋಡು, ಸ್ವಾನಂದ ಆಚಾರ್ಯ ವಂಡಾರು, ರತ್ನಾಕರ ಶೇರಿಗಾರ್ ಸಾಂತಾವರ, ಚಂದ್ರ ದೇವಾಡಿಗ ಕಲ್ಲಂಕ, ಸುರೇಂದ್ರ ಆಚಾರ್ಯ ಆರಾಟೆ ಕೋಣಿ, ನಿತ್ಯಾನಂದ ಖಾರ್ವಿ ಕುಂದಾಪುರ, ರಾಜೀವ ಆಚಾರ್ಯ ವಕ್ವಾಡಿ (ಹಮ್ಮಾಡಿ) ಆಯ್ಕೆಗೊಂಡಿದ್ದಾರೆ.

ಏ. 4: ಮೆಸ್ಕಾಂ ಜನಸಂಪರ್ಕ ಸಭೆ

ಉಡುಪಿ: ಮೆಸ್ಕಾಂ ಉಡುಪಿ ಉಪವಿಭಾಗ ಕಚೇರಿಯಲ್ಲಿ ಏ. 4ರಂದು ಸಮಯ ಬೆಳಗ್ಗೆ 10.30ರಿಂದ 12.00 ಗಂಟೆಯವರೆಗೆ ಸಂಪರ್ಕ ಸಭೆ ನಡೆಯಲಿದ್ದು ಮೆಸ್ಕಾಂ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಈ ಸಭೆಯಲ್ಲಿ ಸಂಬಂಧಪಟ್ಟ ಪ್ರದೇಶದ ಗ್ರಾಹಕರ ಅಹವಾಲುಗಳನ್ನು ಸ್ವೀಕರಿಸಲಾಗುವುದರಿಂದ, ಈ ಅವಕಾಶವನ್ನು ಗ್ರಾಹಕರು ಸದುಪಯೋಗಿಸಿಕೊಳ್ಳಲು ಕೋರಲಾಗಿದೆ, ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ:- 0820–2521761

ವಾರೀಸುದಾರರಿಗೆ ಸೂಚನೆ

ಉಡುಪಿ: ಉಡುಪಿ ಜಿಲ್ಲಾಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದ 25 ವರ್ಷ ಪ್ರಾಯದ ಅಪರಿಚಿತ ಯುವಕನ ಸ್ಥಿತಿ ಚಿಂತಾಜನಕವಾಗಿದ್ದು, ವಾರಿಸುದಾರರು ಯಾರಾದರೂ ಇದ್ದಲ್ಲಿ ನಾಗರಿಕ ಸಹಾಯವಾಣಿ ಕೇಂದ್ರ ದೂ.ಸಂಖ್ಯೆ: 0820-2520555 / 9449821553 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾಸ್ಪತ್ರೆಯ ಪ್ರಕಟಣೆ ತಿಳಿಸಿದೆ.

ಕೇಂದ್ರ ಸರ್ಕಾರದ ‘ದೀನ್ ದಯಾಳ್ ಉಪಾಧ್ಯಾಯ ಪಂಚಾಯತ್ ಸತತ ವಿಕಾಸ ಪುರಸ್ಕಾರ-2025’

ಆಡಳಿತ ದೂರದೃಷ್ಟಿ, ಸಮುದಾಯ ಸಹಭಾಗಿತ್ವ ಯಶೋಗಾಥೆ

ಉಡುಪಿ: ಜಿಲ್ಲೆಯ ಪಂಚಾಯತ್ ರಾಜ್ ಇತಿಹಾಸದಲ್ಲಿ ಇದೊಂದು ಸುವರ್ಣಾಕ್ಷರಗಳಲ್ಲಿ ಬರೆಯುವಂತಹ ಸಂದರ್ಭ. ಕೇಂದ್ರ ಸರ್ಕಾರದ ಅತ್ಯಂತ ಪ್ರತಿಷ್ಠಿತ 'ದೀನ್ ದಯಾಳ್ ಉಪಾಧ್ಯಾಯ ಪಂಚಾಯತ್ ಸತತ ವಿಕಾಸ ಪುರಸ್ಕಾರ-2025' ಪಟ್ಟಿಯಲ್ಲಿ ಉಡುಪಿ ಜಿಲ್ಲೆಯ ಐದು ಪಂಚಾಯತ್‌ಗಳು ಮಿಂಚುತ್ತಿವೆ. ಈ ಸಾಧನೆಯ ಹಿಂದೆ ಕೇವಲ ಸರ್ಕಾರಿ ಅನುದಾನಗಳಿಲ್ಲ, ಬದಲಾಗಿ ಸ್ಥಳೀಯ ಆಡಳಿತದ ದೂರದೃಷ್ಟಿ ಮತ್ತು ಸಮುದಾಯದ ಸಹಭಾಗಿತ್ವದ ಅದ್ಭುತ ಯಶೋಗಾಥೆಯಿದೆ. ಆ ಐದು ಸಾಧಕ ಪಂಚಾಯತ್‌ಗಳ ಆಳವಾದ ವಿಶ್ಲೇಷಣೆ ಇಲ್ಲಿದೆ:

ಮುದ್ರಾಡಿ ರಾಷ್ಟ್ರಕ್ಕೆ ಪ್ರಥಮ

ಹೆಬ್ರಿ ತಾಲೂಕಿನ ಮುದ್ರಾಡಿ ಪಂಚಾಯತ್ ಬಡತನ ಮುಕ್ತ, ಸುಧಾರಿತ ಜೀವನೋಪಾಯ ವಿಷಯದಲ್ಲಿ ದೇಶಕ್ಕೇ ಮಾದರಿಯಾಗಿದೆ. ಇಲ್ಲಿ ಕೇವಲ ಅಂಕಿ-ಅಂಶಗಳ ಆಟವಿಲ್ಲ; ಬದಲಾಗಿ ಪ್ರತಿಯೊಬ್ಬರಿಗೂ ಗೌರವಯುತ ಬದುಕು ನೀಡುವ ಸಂಕಲ್ಪವಿದೆ.



ಶೇ. 100ರಷ್ಟು ಅರ್ಹ ಕುಟುಂಬಗಳಿಗೆ ಉದ್ಯೋಗ ಕಾರ್ಡ್ ವಿತರಿಸಿ, ನರೇಗಾ ಯೋಜನೆಯನ್ನು ಕೃಷಿ ಮತ್ತು ತೋಟಗಾರಿಕೆಗೆ ಪೂರಕವಾಗಿ ಬಳಸಿಕೊಂಡಿರುವುದು ಈ ಪಂಚಾಯತ್‌ನ ಹೆಗ್ಗಳಿಕೆ. ಮಹಿಳಾ ಸ್ವಸಹಾಯ ಸಂಘಗಳಿಗೆ ಬ್ಯಾಂಕ್ ಲಿಂಕೇಜ್ ನೀಡಿ, ಅವರನ್ನು ಉದ್ಯಮಿಗಳನ್ನಾಗಿ ರೂಪಿಸುವ ಮೂಲಕ ಗ್ರಾಮದ ತಲಾದಾಯ ಹೆಚ್ಚಳಕ್ಕೆ ಮುದ್ರಾಡಿ ಮುನ್ನುಡಿ ಬರೆದಿದೆ.

ವಂಡ್ಸೆ-ಆರೋಗ್ಯ ಕ್ಷೇತ್ರದಲ್ಲಿ ದ್ವಿತೀಯ

ಕುಂದಾಪುರ ತಾಲೂಕಿನ ವಂಡ್ಸೆ ಪಂಚಾಯತ್ ಆರೋಗ್ಯ ಕ್ಷೇತ್ರವನ್ನು ಒಂದು ಆಂದೋಲನದಂತೆ ಸ್ವೀಕರಿಸಿದೆ. ಇಲ್ಲಿ ಶೇ. 100ರಷ್ಟು ಸಾಂಸ್ಥಿಕ ಹೆರಿಗೆಗಳು ನಡೆಯುತ್ತಿದ್ದು, ತಾಯಿ-ಮಗು ಮರಣ ಪ್ರಮಾಣವನ್ನು ಶೂನ್ಯಕ್ಕೆ ಇಳಿಸಲಾಗಿದೆ. ಗ್ರಾಮದ ಪ್ರತಿಯೊಬ್ಬರಿಗೂ ಆರೋಗ್ಯ ವಿಮೆ, ಆಯುಷ್ಮಾನ್ ಕಾರ್ಡ್ ದೊರೆಯುವಂತೆ ಮಾಡುವುದರ ಜೊತೆಗೆ, ಶುದ್ಧ ಕುಡಿಯುವ ನೀರು ಮತ್ತು ನೈರ್ಮಲ್ಯಕ್ಕೆ ನೀಡಿದ ಒತ್ತು ಈ ಪಂಚಾಯತ್ ಅನ್ನು ಆರೋಗ್ಯಕರ ಪಂಚಾಯತ್ ಆಗಿ ರೂಪಿಸಿದೆ. ಸಾಂಕ್ರಾಮಿಕ ರೋಗಗಳ ಮುನ್ನೆಚ್ಚರಿಕೆ ಕ್ರಮಗಳಲ್ಲಿ ವಂಡ್ಸೆ ತೋರಿರುವ ಶಿಸ್ತು ಅನುಕರಣೀಯ.

ಗೌರವ ಹೆಚ್ಚಿಸಿದ ಪ್ರಶಸ್ತಿ

ಈ ಐದೂ ಪಂಚಾಯತ್‌ಗಳು ಒಟ್ಟಾಗಿ ಉಡುಪಿ ಜಿಲ್ಲೆಯನ್ನು ಇಡೀ ರಾಷ್ಟ್ರದ ಗಮನ ಸೆಳೆಯುವಂತೆ ಮಾಡಿವೆ. ಈ ಸಾಧನೆಗೆ ಕಾರಣರಾದ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ಶ್ರಮಕ್ಕೆ ಇದೀಗ ರಾಷ್ಟ್ರಪತಿಗಳ ಕೈಯಿಂದ ಸಿಗಲಿರುವ ಪುರಸ್ಕಾರವು ದೊಡ್ಡ ಗೌರವವಾಗಿದೆ.

ಮಡಾಮಕ್ಕಿ-ಜಲ ಸಂರಕ್ಷಣೆಯಲ್ಲಿ ದ್ವಿತೀಯ

ಪರಿಸರ ಮತ್ತು ಜಲಮೂಲಗಳ ರಕ್ಷಣೆಯಲ್ಲಿ ಮಡಾಮಕ್ಕಿ ಪಂಚಾಯತ್ ತೋರಿರುವ ಬದ್ಧತೆ ಸ್ತುತ್ಯಾರ್ಹ. ಜಲ ಜೀವನ್ ಮಿಷನ್ ಅಡಿಯಲ್ಲಿ ಮನೆ ಮನೆಗೆ ಗಂಗೆಯನ್ನು ತಲುಪಿಸಿರುವುದಲ್ಲದೆ, ಬಿದ್ದ ಮಳೆಹನಿಯನ್ನು ಭೂಮಿಗೆ ಇಳಿಸುವ ಮಳೆನೀರು ಕೊಯ್ಲು ಪದ್ಧತಿಯನ್ನು ಕಡ್ಡಾಯಗೊಳಿಸಿದೆ. ಬದು ನೀರು ನಿರ್ವಹಣೆಮತ್ತು ಕೆರೆಗಳ ಹೂಳೆತ್ತುವ ಮೂಲಕ ಅಂತರ್ಜಲ ಮಟ್ಟವನ್ನು ವೃದ್ಧಿಸಿರುವುದು ಮಡಾಮಕ್ಕಿ ದ್ವಿತೀಯ ಸ್ಥಾನ ಪಡೆಯಲು ಪ್ರಮುಖ ಕಾರಣವಾಗಿದೆ.

ಸಾಣೂರು ಮೂಲಸೌಕರ್ಯದಲ್ಲಿ ತೃತೀಯ

ಕಾರ್ಕಳ ತಾಲೂಕಿನ ಸಾಣೂರು ಪಂಚಾಯತ್ ಗ್ರಾಮದ ಮೂಲಸೌಕರ್ಯಗಳನ್ನು ನಗರ ಪ್ರದೇಶಗಳಿಗೆ ಸರಿಸಾಟಿಯಾಗಿ ಅಭಿವೃದ್ಧಿಪಡಿಸಿದೆ. ಸೌರಶಕ್ತಿ ಚಾಲಿತ ಬೀದಿ ದೀಪಗಳು, ಸುಸಜ್ಜಿತ ರಸ್ತೆಗಳು ಮತ್ತು ಡಿಜಿಟಲ್ ಸೌಲಭ್ಯವಿರುವ ಪಂಚಾಯತ್ ಕಚೇರಿ ಇಲ್ಲಿನ ವಿಶೇಷ. ತನ್ನದೇ ಆದ ಸ್ವಂತ ಆದಾಯದ ಮೂಲಗಳನ್ನು (ಓಎಸ್‌ಆರ್) ಕಂಡುಕೊಳ್ಳುವಲ್ಲಿ ಸಾಣೂರು ಯಶಸ್ವಿಯಾಗಿದ್ದು ಸರ್ಕಾರಿ ಶಾಲೆ ಮತ್ತು ಅಂಗನವಾಡಿಗಳ ಮೂಲಸೌಕರ್ಯ ಅಭಿವೃದ್ಧಿಗೆ ವಿಶೇಷ ಅನುದಾನ ನೀಡಿದೆ.

ಹಕ್ಲಾಡಿ: ಸಾಮಾಜಿಕ ನ್ಯಾಯದಲ್ಲಿ ತೃತೀಯ ಸ್ಥಾನ

ಸಮಾಜದ ಕಟ್ಟಕಡೆಯ ವ್ಯಕ್ತಿಯೂ ಸರ್ಕಾರದ ಸೌಲಭ್ಯಗಳಿಂದ ವಂಚಿತರಾಗಬಾರದು ಎಂಬ ತತ್ವದಡಿ ಹಕ್ಲಾಡಿ ಪಂಚಾಯತ್ ಕಾರ್ಯನಿರ್ವಹಿಸುತ್ತಿದೆ. ದಿವ್ಯಾಂಗರು, ವಿಧವೆಯರು ಮತ್ತು ಹಿರಿಯ ನಾಗರಿಕರಿಗೆ ಶೇ. 100ರಷ್ಟು ಪಿಂಚಣಿ ಮತ್ತು ಸಾಮಾಜಿಕ ಭದ್ರತಾ ಯೋಜನೆಗಳನ್ನು ತಲುಪಿಸಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡದ ಕಾಲೋನಿಗಳಿಗೆ ಆದ್ಯತೆಯ ಮೇಲೆ ಮೂಲಸೌಕರ್ಯ ಒದಗಿಸಿ, ಸಾಮಾಜಿಕ ಸಾಮರಸ್ಯ ಮತ್ತು ಸಮಾನತೆಯನ್ನು ಕಾಪಾಡುವಲ್ಲಿ ಈ ಪಂಚಾಯತ್ ಯಶಸ್ವಿಯಾಗಿದೆ.

ಬಸ್ರೂರಿನ ಶ್ರೀ ತುಳುವೇಶ್ವರ ದೇವಸ್ಥಾನದ ಪುನರ್ನಿರ್ಮಾಣಕ್ಕೆ ಸಿದ್ಧತೆ

ಭೂದಾನ ಸೇವೆಗೆ ಒಡಿಯೂರಲ್ಲಿ ಚಾಲನೆ

ಕುಂದಾಪುರ: ಬಸ್ರೂರಿನ ಪ್ರಾಚೀನ ಹಾಗೂ ಪವಿತ್ರ ಶ್ರೀ ತುಳುವೇಶ್ವರ ದೇವಸ್ಥಾನದ ಪುನರ್ನಿರ್ಮಾಣದ ಅಂಗವಾಗಿ ಭೂದಾನ ಸೇವೆಗೆ ಒಡಿಯೂರು ಮಠದ ಪರಮಪೂಜ್ಯ ಶ್ರೀ ಗುರುದೇವಾನಂದ ಸ್ವಾಮೀಜಿ ಅವರು ಒಡಿಯೂರು ಮಠದಲ್ಲಿ ಸೋಮವಾರ ಅಧಿಕೃತ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಆಶೀರ್ವಚನ ನೀಡಿದ ಸ್ವಾಮೀಜಿಯವರು, ದೈವದ ಕೆಲಸಗಳು ನಮ್ಮ ಇಚ್ಛೆಯಂತೆ ನಡೆಯುವುದಿಲ್ಲ, ಅದು ದೈವೇಚ್ಛೆಯಂತೆಯೇ ನಡೆಯುತ್ತದೆ. ಆದ್ದರಿಂದ ಯಾವುದೇ ಕಳವಳವಿಲ್ಲದೆ ಧೈರ್ಯದಿಂದ ಮುಂದೆ ಸಾಗುವುದು ನಮ್ಮ ಧರ್ಮ. ನಾವು ನಮ್ಮಿಂದ ಸಾಧ್ಯವಾದ ಸೇವೆಯನ್ನು ಮಾಡಿದರೆ, ಅದರ ಫಲವನ್ನು ತುಳುವೇಶ್ವರನೇ ನೀಡುತ್ತಾನೆ ಎಂದು ಹೇಳಿದ ಅವರು, ಈ ಮಹತ್ಕಾರ್ಯವು ಕೇವಲ ಒಂದು ದೇವಸ್ಥಾನದ ಅಭಿವೃದ್ಧಿಯಷ್ಟೇ ಅಲ್ಲ, ತುಳುನಾಡಿನ ಸಂಸ್ಕೃತಿ, ಆಧ್ಯಾತ್ಮಿಕ ಪರಂಪರೆಯ ಪುನರುಜ್ಜೀವನವಾಗಿದೆ. ಆದ್ದರಿಂದ ಪ್ರತಿಯೊಬ್ಬರೂ ಈ ಪುಣ್ಯ ಕಾರ್ಯದಲ್ಲಿ ಕೈಜೋಡಿಸಿ, ತುಳುನಾಡಿನ ಮೇಲೆ ಇರುವ ನಮ್ಮ ಋಣವನ್ನು ಸಂದಾಯ ಮಾಡುವ ಈ ಅಪೂರ್ವ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು. ಬಸ್ರೂರು ಗ್ರಾಮಸ್ಥರು ಈ ಮಹತ್ಕಾರ್ಯವನ್ನು ತಮ್ಮದೇ ಸ್ವಕಾರ್ಯ ಎಂದು ಪರಿಗಣಿಸಿ ಪ್ರತಿಯೊಬ್ಬರೂ ಮುಂದೆ ನಿಂತು ನಡೆಸಿಕೊಡಬೇಕು ಎಂದರು.



ಪ್ರತ್ಯೇಕ ಸಮಿತಿ ರಚನೆ

ಈ ಮಹತ್ಕಾರ್ಯದ ಜವಾಬ್ದಾರಿಯನ್ನು ತುಳುವರ್ಲ್ಡ್ ಫೌಂಡೇಶನ್ ವಹಿಸಿಕೊಂಡಿದ್ದು, ದೇವಸ್ಥಾನದ ಅಭಿವೃದ್ಧಿಗಾಗಿ ಪ್ರತ್ಯೇಕ ಸಮಿತಿ ರಚಿಸಲಾಗಿದೆ. ಸಮಿತಿಯ ಅಧ್ಯಕ್ಷರಾಗಿ ಎಚ್.ಕೆ. ದೇವಾನಂದ ಶೆಟ್ಟಿ ಹಾಗೂ ಸಂಚಾಲಕರಾಗಿ ಬಿ. ದಿನಕರ ಶೆಟ್ಟಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ದೇಣಿಗೆ ಸಂಗ್ರಹ ಮತ್ತು ಭೂದಾನ ಪ್ರಕ್ರಿಯೆಯ ಪಾರದರ್ಶಕತೆಗೆ 'ಶ್ರೀ ತುಳುವೇಶ್ವರ ದೇವಸ್ಥಾನ, ಬಸ್ರೂರು' ಹೆಸರಿನಲ್ಲಿ ಪ್ರತ್ಯೇಕ ಬ್ಯಾಂಕ್ ಖಾತೆ ತೆರೆಯಲಾಗಿದೆ. ದಾನಿಗಳ ಸೌಲಭ್ಯಕ್ಕಾಗಿ, ಭಾರತ ಸರ್ಕಾರದ ಆದಾಯ ತೆರಿಗೆ ಕಾಯ್ದೆಯಡಿ 80ಜಿ ಸೌಲಭ್ಯವನ್ನು ತುಳುವರ್ಲ್ಡ್ ಫೌಂಡೇಶನ್ ಮೂಲಕ ಪಡೆಯುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ ಎಂದು ತುಳುವರ್ಲ್ಡ್ ಫೌಂಡೇಶನ್ ನಿರ್ದೇಶಕ ಡಾ. ರಾಜೇಶ್ ಆಳ್ವ ತಿಳಿಸಿದ್ದಾರೆ.

ಈ ವೇಳೆ ತುಳುವರ್ಲ್ಡ್ ಫೌಂಡೇಶನ್ ಪ್ರಧಾನ ಕಾರ್ಯದರ್ಶಿ ವಸಂತ ರೈ, ಪ್ರಧಾನ ಸಂಚಾಲಕ ಪ್ರಮೋದ್ ಸಪ್ರೆ, ಕಾರ್ಯದರ್ಶಿ ಹರಿಪ್ರಸಾದ್ ರೈ ಕಾರಮೊಗೇರುಗುತ್ತು, ತುಳುವ ಮಹಾಸಭೆಯ ಪ್ರಧಾನ ಸಂಚಾಲಕ ಅರವಿಂದ ಬೆಳ್ಚಾಡ, ಭಾನುಮತಿ ಶೆಟ್ಟಿ ಕಕ್ಕಗುತ್ತು, ಸಂಚಾಲಕರಾದ ಶಾರದಾಮಣಿ ಮಂದಾರ, ಗೀತಾ ಗಣೇಶ್ ಇದ್ದರು.

ಏ. 23ರಿಂದ ಮೇ 4ರವರೆಗೆ ಪಡುಬಿದ್ರಿ ದೇಗುಲದಲ್ಲಿ ಉತ್ಸವ

ಬ್ರಹ್ಮಕಲಶಕ್ಕೆ ಚಪ್ಪರ ಮುಹೂರ್ತ ಇಂದು

ಪಡುಬಿದ್ರಿ: ಇತಿಹಾಸ ಪ್ರಸಿದ್ಧ ಶ್ರೀ ಮಹಾಲಿಂಗೇಶ್ವರ ಮಹಾ ಗಣಪತಿ ದೇವರ ಪುನಃ ಪ್ರತಿಷ್ಠೆ ಹಾಗೂ ಬ್ರಹ್ಮಕಲಶೋತ್ಸವದ ಪೂರ್ವಭಾವೀ ಪ್ರಥಮ ಅಂಗವಾದ ಚಪ್ಪರ ಮಹೂರ್ತವು ಏ. 2ರಂದು ಬೆಳಿಗ್ಗೆ 9:30ಕ್ಕೆ ಶ್ರೀ ಕ್ಷೇತ್ರದ ತಂತ್ರಿ ಕೊಡವೂರು ಕಂಬಳಕಟ್ಟ ವೇದಮೂರ್ತಿ ರಾಧಾಕೃಷ್ಣ ಉಪಾಧ್ಯಾಯ ಅವರ ನೇತೃತ್ವದಲ್ಲಿ ನಡೆಯಲಿದೆ ಎಂದು ಬ್ರಹ್ಮಕಲಶೋತ್ಸವ ಸಮಿತಿಯ ಗೌರವಾಧ್ಯಕ್ಷ ಶಾಸಕ ಸುರೇಶ್ ಶೆಟ್ಟಿ ಗುರ್ಮೆ ತಿಳಿಸಿದರು.

ಶಾಸಕರು ಶ್ರೀ ದೇವಸ್ಥಾನದಲ್ಲಿ ಏ.1ರಂದು ನಡೆಸಿದ ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿ, ಶತಮಾನದ ಅವಿಸ್ಮರಣೀಯವೆನಿಸಿರುವ 1200 ವರ್ಷಗಳಷ್ಟು ಪುರಾತನ ಪ್ರಸಿದ್ಧ ಪಡುಬಿದ್ರಿ ಶ್ರೀ ದೇಗುಲದ ಪುನರುತ್ಥಾನದ ಕಾರ್ಯಕ್ರಮವು, ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷರು, ಬೆಂಗಳೂರಿನ ಉದ್ಯಮಿ ಡಾ. ಕೆ. ಪ್ರಕಾಶ್ ಶೆಟ್ಟಿ ಅವರ ನೇತೃತ್ವದಲ್ಲಿ ನಡೆಯುತ್ತಿದ್ದು, ದೇವರ ಪುನರ್ ಪ್ರತಿಷ್ಠೆ ಬ್ರಹ್ಮಕಲಶೋತ್ಸವವನ್ನು ಎಲ್ಲರೂ ಜತೆಗೂಡಿ ಯಶಸ್ವಿಗೊಳಿಸೋಣ ಎಂದು ಕರೆ ನೀಡಿದರು.

ಬ್ರಹ್ಮಕಲಶೋತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ಮುರಳೀನಾಥ ಶೆಟ್ಟಿ ಅವರು ವ್ಯವಸ್ಥೆಗಳ ಕುರಿತಾಗಿ ವಿವರಿಸುತ್ತಾ ಏ. 23ರಿಂದ ಮೇ 4ರವರೆಗಿನ 12 ದಿನಗಳಲ್ಲಿ ಸುಮಾರು ಒಂದೂವರೆ ಲಕ್ಷ ಭಕ್ತರು ಶ್ರೀ ಕ್ಷೇತ್ರವನ್ನು ಸಂದರ್ಶಿಸುವ ನಿರೀಕ್ಷೆ ಇದೆ. ಶ್ರೀ ಕ್ಷೇತ್ರಕ್ಕೆ ಬರುವ ಭಕ್ತಾದಿಗಳ ವಾಹನದಟ್ಟಣೆಯನ್ನು ನಿರ್ವಹಿಸಲು ಕ್ರಮ ಕೈಕೊಳ್ಳಲಾಗಿದೆ ಎಂದು ತಿಳಿಸಿದರು.



ದೇಗುಲ ಮುಂಭಾಗದ ಬಿಎಂಸಿ ರಸ್ತೆ ವಾಹನ, ಫ್ಲೆಕ್ಸ್‌ನಿಂದ ಮುಕ್ತ

ದೇಗುಲದ ಮುಂಭಾಗದ ಹಳೇ ಬಿಎಂಸಿ ರಸ್ತೆಯನ್ನು ಆದಷ್ಟು ವಾಹನ ಮುಕ್ತವಾಗಿರಿಸಲು ಹಾಗೂ ಫ್ಲೆಕ್ಸ್ ಬ್ಯಾನರ್ ಮುಕ್ತವಾಗಿಯೂ ಇರಿಸಲು ಬಯಸಲಾಗಿದೆ. ಇದಕ್ಕಾಗಿ ಶ್ರೀ ದೇವಸ್ಥಾನದ ಆಡಳಿತ ಮಂಡಳಿಯು ಸಾರ್ವಜನಿಕ ಸಹಕಾರವನ್ನು ಬಯಸಿದೆ ಎಂದು ಸುರೇಶ್ ಶೆಟ್ಟಿ ಗುರ್ಮೆ ಹೇಳಿದರು. ಬ್ರಹ್ಮಕಲಶೋತ್ಸವ ಸಂದರ್ಭದಲ್ಲಿ ಉಡುಪಿ, ಕಾರ್ಕಳ ಮುಂತಾದ ಉತ್ತರ ಕಡೆಯಿಂದ ಬರುವ ಭಕ್ತರಿಗೆ ರಾಷ್ಟ್ರೀಯ ಹೆದ್ದಾರಿಯ ಅಕ್ಕಪಕ್ಕದಲ್ಲಿ ಪಾರ್ಕಿಂಗ್ ವ್ಯವಸ್ಥೆ ಮತ್ತು ಮಂಗಳೂರು, ಕಟೀಲು, ಮೂಡುಬಿದಿರೆ ಭಾಗಗಳಿಂದ ಬರುವ ಭಕ್ತರಿಗೆ ದೇವಸ್ಥಾನದ ಹಿಂಭಾಗ ಬೀಚ್ ರಸ್ತೆಯಲ್ಲಿ ಪಾರ್ಕಿಂಗ್ ವ್ಯವಸ್ಥೆಗಳನ್ನು ಮತ್ತು ಇಕ್ಕೆಲಗಳಿಂದಲೂ ಶ್ರೀ ದೇಗುಲಕ್ಕೆ ಬರಲು ಉಚಿತ ಆಟೋರಿಕ್ಷಾಗಳ ವ್ಯವಸ್ಥೆಯನ್ನೂ ಮಾಡಲಾಗುತ್ತದೆ. ವಿಐಪಿ ವಾಹನ ಪಾರ್ಕಿಂಗ್‌ಗೂ ಪ್ರತ್ಯೇಕ ವ್ಯವಸ್ಥೆಯಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಶ್ರೀ ದೇಗುಲದ ಆನುವಂಶಿಕ ಮೊಕ್ತೇಸರ ರತ್ನಾಕರ ರಾಜ್ ಅರಸ್ ಕಿನ್ನಕ್ಕ ಬಲ್ಲಾಳರು, ಜೀರ್ಣೋದ್ಧಾರ ಸಮಿತಿಯ ಉಪಾಧ್ಯಕ್ಷ ಪಿ. ರವೀಂದ್ರನಾಥ ಜಿ. ಹೆಗ್ಡೆ, ಕಾರ್ಯನಿರ್ವಹಣಾಧಿಕಾರಿ ಕೆ. ರಾಜಗೋಪಾಲ ಉಪಾಧ್ಯಾಯ ಇದ್ದರು. ಆನುವಂಶಿಕ ಮೊಕ್ತೇಸರ ಪಡುಬಿದ್ರಿ ಪೇಟೆಮನೆ ಭವಾನಿಶಂಕರ ಹೆಗ್ಡೆ ಸ್ವಾಗತಿಸಿದರು. ಮುರಳೀನಾಥ ಶೆಟ್ಟಿ ವಂದಿಸಿದರು.

ಮಹಿಳೆಯರೇ ಮಧುಮೇಹ ಭಯ ಬೇಡ, ಜಾಗೃತಿ ಇರಲಿ: ಡಾ. ಶ್ರುತಿ ಬಲ್ಲಾಳ್



ಕೋಟ: ಮಹಿಳಾ ವೇದಿಕೆ ಕೂಟ ಮಹಾ ಜಗತ್ತು ಸಾಲಿಗ್ರಾಮ ಅಂಗ ಸಂಸ್ಥೆ ಇವರು ನಡೆಸಿದ ಆರೋಗ್ಯ ಮಾಹಿತಿ ವಿಶೇಷ ಕಾರ್ಯಕ್ರಮ ಇತ್ತೀಚೆಗೆ ಸಾಲಿಗ್ರಾಮ ಶ್ರೀ ಗುರುನರಸಿಂಹ ದೇಗುಲದ ಸಭಾಂಗಣದಲ್ಲಿ ಜರಗಿತು.

ಕಾರ್ಯಕ್ರಮದಲ್ಲಿ ಖ್ಯಾತ ಮಧುಮೇಹ ತಜ್ಞೆ ,ಯೋಗ ಪಟು, ಸಂಗೀತ ನೃತ್ಯ ಕಲಾವಿದೆ, ಬಿಗ್ ಮೆಡಿಕಲ್ ಸೆಂಟರ್ ಉಡುಪಿ ಇಲ್ಲಿನ ಪ್ರಸಿದ್ಧ ವೈದ್ಯ ಡಾ. ಶ್ರುತಿ ಬಲ್ಲಾಳ್ ಇವರು ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿ ಮಧುಮೇಹದ ಬಗ್ಗೆ ಉತ್ತಮ ಮಾಹಿತಿ ವಿಚಾರ -ಆಹಾರ- ವಿಹಾರ ಮತ್ತು ಸಮಸ್ಯೆಗಳ ಕುರಿತಾದ ವಿಷಯಗಳನ್ನು ಚಿತ್ರ ಮಾಧ್ಯಮದ ಸಹಿತವಾಗಿ ವಿವರಿಸಿದರು.

ಜನರೊಂದಿಗೆ ಸಂವಾದ ಕಾರ್ಯಕ್ರಮವನ್ನು ಸುಮಾರು ಒಂದುವರೆ ಗಂಟೆಗಳ ಕಾಲ ನಡೆಸಿಕೊಟ್ಟರು. ಜನರ ಪ್ರತಿಕ್ರಿಯೆ ಸಂಶಯ ಪ್ರಶ್ನೋತ್ತರಗಳಿಗೆ ಸಮರ್ಪಕವಾಗಿ ಉತ್ತರಿಸಿದರು.

ಮಹಿಳೆಯರು ಮಧುಮೇಹದ ಬಗ್ಗೆ ಭಯ ಪಡೆಯದೆ, ಜಾಗೃತಿಯನ್ನು ಮೂಡಿಸಿಕೊಳ್ಳಬೇಕು ಎಂದು ಹೇಳಿದರು.

ಗೌರವಾರ್ಪಣೆ

ಸಮಾರಂಭದಲ್ಲಿ ಮಹಿಳಾ ವೇದಿಕೆಯ ಪರವಾಗಿ ಶ್ರುತಿ ಬಲ್ಲಾಳರನ್ನು ಗೌರವಿಸಿದರು. ವೇದಿಕೆಯ ಉಪಾಧ್ಯಕ್ಷೆ ವಿಜಯಲಕ್ಷ್ಮಿ ತುಂಗ ಕಾರ್ಯದರ್ಶಿ ಲತಾ ಹೊಳ್ಳ ಮತ್ತು ವೇದಿಕೆಯ ಸದಸ್ಯರು ಉಪಸ್ಥಿತರಿದ್ದರು. ಮಹಿಳಾ ವೇದಿಕೆ ಅಧ್ಯಕ್ಷೆ ಯಶೋದ. ಸಿ. ಹೊಳ್ಳ ಸ್ವಾಗತಿಸಿದರು. ಕಾರ್ಯಕ್ರಮವನ್ನು ಸುಜಾತ ಬಾಯರಿ ವಂದಿಸಿ, ಗೀತಾ ಅ ಕಾರಿ ನಿರೂಪಿಸಿದರು.

ನಯಂಪಳ್ಳಿಯ 50 ಮನೆಗಳಿಗೆ 4 ದಶಕ ಬಳಿಕ ಕುಡಿಯುವ ನೀರು ಪೂರೈಕೆ



ಉಡುಪಿ: ನಗರಸಭೆಯ ಗೋಪಾಲಪುರ ವಾರ್ಡಿನ ನಯಂಪಳ್ಳಿ ಪ್ರದೇಶದಲ್ಲಿ 4 ದಶಕಗಳಿಂದ ಕುಡಿಯುವ ನೀರಿನ ಸಂಪರ್ಕ ಇಲ್ಲದೆ ಸಮಸ್ಯೆ ಎದುರಿಸುತ್ತಿದ್ದ ಕುಟುಂಬಗಳಿಗೆ ಶಾಸಕ ಯಶ್ ಪಾಲ್ ಸುವರ್ಣ ನೇತೃತ್ವದಲ್ಲಿ ಸ್ಥಳೀಯರ ಸಹಕಾರದೊಂದಿಗೆ ನಗರಸಭೆಯ ಕುಡಿಯುವ ನೀರು ಸಂಪರ್ಕ ಕಲ್ಪಿಸುವ ಮೂಲಕ ಹಲವು ದಶಕಗಳ ಕನಸು ಸಾಕಾರಗೊಂಡಿದೆ.

ಸ್ಥಳಕ್ಕೆ ಭೇಟಿ ನೀಡಿ ನೀರಿನ ಸಂಪರ್ಕವನ್ನು ಉದ್ಘಾಟಿಸಿದ ಶಾಸಕ ಯಶ್ ಪಾಲ್ ಸುವರ್ಣ ಮಾತನಾಡಿ, ಈ ಭಾಗದ ಸುಮಾರು 50 ಮನೆಗಳಿಗೆ ಹಲವು ದಶಕಗಳಿಂದ ಕುಡಿಯುವ ನೀರು ಸಂಪರ್ಕ ಇಲ್ಲದೆ ಸಮಸ್ಯೆ ಎದುರಿಸುತ್ತಿರುವ ಬಗ್ಗೆ ಮಾಹಿತಿ ಬಂದ ಕೂಡಲೇ ನನ್ನ ಮನವಿಯ ಮೇರೆಗೆ ಸ್ಥಳೀಯ ಮುಖಂಡರಾದ ಉಮೇಶ್ ಶೆಟ್ಟಿ ಹಾಗೂ ಸುದೀಶ್ ಕುಮಾರ್, ತಮ್ಮ ಖಾಸಗಿ ಜಮೀನಿನಲ್ಲಿ ಪೈಪ್‌ಲೈನ್ ಅಳವಡಿಸಲು ಅವಕಾಶ ನೀಡಿ ಮನೆಗಳಿಗೆ ನೀರಿನ ಸಂಪರ್ಕ ನೀಡಲು ವಿಶೇಷ ಸಹಕಾರ ನೀಡಿದ್ದು, ಉಡುಪಿ ನಗರಸಭೆಯ ಮಾಜಿ ಅಧ್ಯಕ್ಷ ಪ್ರಭಾಕರ ಪೂಜಾರಿ, ನಗರಸಭಾ ಸದಸ್ಯರಾದ ಬಾಲಕೃಷ್ಣ ಶೆಟ್ಟಿ,ಹರೀಶ್ ಶೆಟ್ಟಿ, ಗಿರಿಧರ ಆಚಾರ್ಯ ಮಂಜುಳಾ ನಾಯಕ್‌ರವರ ವಿಶೇಷ ಮುತುವರ್ಜಿಯಿಂದ ಈ ಭಾಗದ ಜನತೆಯ ಸಮಸ್ಯೆಗೆ ಪರಿಹಾರ ಒದಗಿಸಲಾಗಿದೆ ಎಂದರು.


ಈ ಸಂದರ್ಭದಲ್ಲಿ ಮಾಜಿ ನಗರಸಭಾ ಸದಸ್ಯರಾದ ದಿನೇಶ್ ಪೈ, ಚಿನ್ಮಯ ಮೂರ್ತಿ, ಮಂಜಪ್ಪ ಹಾಗೂ ಸ್ಥಳೀಯ ಪ್ರಮುಖರು, ಗ್ರಾಮಸ್ಥರು ಉಪಸ್ಥಿತರಿದ್ದರು.

ಅಪಘಾತಕ್ಕೊಳಗಾದ ಬೈಕ್ ಸವಾರನನ್ನು ಆಸ್ಪತ್ರೆಗೆ ದಾಖಲಿಸಿದ ಕಾಪು ಶಾಸಕರು



ಪಡುಬಿದ್ರಿ: ರಸ್ತೆ ಅಪಘಾತಕ್ಕೆ ಒಳಗಾದ ಬೈಕ್ ಸವಾರನನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸುವ ಮೂಲಕ ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಮಾನವೀಯತೆ ಮೆರೆದಿದ್ದಾರೆ.

ಗುರ್ಮೆ ಸುರೇಶ್ ಶೆಟ್ಟಿ ಅವರು ಬುಧವಾರದಂದು ಖಾಸಗಿ ಕಾರ್ಯಕ್ರಮದ ನಿಮಿತ್ತ ಎರ್ಮಾಳು ವಿಗೆ ತೆರಳುತ್ತಿದ್ದರು. ಈ ಸಂದರ್ಭದಲ್ಲಿ ಅಪಘಾತಕ್ಕೀಡಾದ ಬೈಕ್ ಸವಾರನನ್ನು ಕಂಡ ಸಂದರ್ಭ ದಲ್ಲಿ ಅವರು ತಮ್ಮ ಕಾರ್ಯಕ್ರಮವನ್ನು ಮೊಟಕುಗೊಳಿಸಿ ಆ ವ್ಯಕ್ತಿ ಯನ್ನು ತಕ್ಷಣ ತನ್ನ ಕಾರಿನಲ್ಲಿ ಕರೆದೊಯ್ದು ಉಡುಪಿಯ ಆದರ್ಶ ಆಸ್ಪತ್ರೆಗೆ ದಾಖಲಿಸಿ ಮಾನವೀಯತೆ ಮೆರೆದರು.



ಮೂಡಬಿದಿರೆಯ ಮಂಗಳೂರು ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಎಂಐಟಿಇ) ಆಯೋಜಿಸಿದ ‘ಸೆನ್ನಿಯಾ 2026’ ಸಾಂಸ್ಕೃತಿಕ ಮತ್ತು ತಾಂತ್ರಿಕ ಉತ್ಸವದಲ್ಲಿ ನಿಟ್ಟೆ ಮಹಾಲಿಂಗ ಅಡ್ಯಂತಾಯ ಸ್ಮಾರಕ ತಾಂತ್ರಿಕ ಮಹಾವಿದ್ಯಾಲಯವು ಅತಿ ಹೆಚ್ಚು ಅಂಕಗಳನ್ನು ಪಡೆಯುವುದರ ಮೂಲಕ ಚಾಂಪಿಯನ್ ಶಿಪ್ ಅನ್ನು ತನ್ನದಾಗಿಸಿಕೊಂಡಿದೆ.

ಏ. 3ರಿಂದ 7ರವರೆಗೆ ಶ್ರೀ ಪಂಚದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ಧಾರ್ಮಿಕ, ಸಾಂಸ್ಕೃತಿಕ ಸಂಭ್ರಮ

ಇಂದ್ರಾಣಿ ಶ್ರೀ ಮುಖ್ಯಪ್ರಾಣ, ನಾಗದೇವರ ಪುನಃ ಪ್ರತಿಷ್ಠಾ ಬ್ರಹ್ಮಕಲಶೋತ್ಸವ

ಉಡುಪಿ: ಇತಿಹಾಸ ಪ್ರಸಿದ್ಧ ಇಂದ್ರಾಣಿ ಶ್ರೀ ಪಂಚದುರ್ಗಾಪರಮೇಶ್ವರೀ ದೇವಸ್ಥಾನದ ಪವಿತ್ರ ಪರಿಸರದಲ್ಲಿ ನೂತನವಾಗಿ ಶಿಲಾಮಯವಾಗಿ ನಿರ್ಮಾಣಗೊಂಡ ಶ್ರೀ ಮುಖ್ಯಪ್ರಾಣ ಹಾಗೂ ನಾಗದೇವರ ಪುನಃ ಪ್ರತಿಷ್ಠಾ ಬ್ರಹ್ಮಕಲಶೋತ್ಸವದ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಏ. 3ರಿಂದ 7 ರವರೆಗೆ ಅತ್ಯಂತ ವೈಭವದಿಂದ ಜರುಗಲಿವೆ ಎಂದು ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ಜಯಕರ ಶೆಟ್ಟಿ ಇಂದ್ರಾಳಿ ತಿಳಿಸಿದರು.

ದೇವಸ್ಥಾನದ ಆವರಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಮಾರು 3 ಕೋಟಿ ರೂಪಾಯಿ ವೆಚ್ಚದಲ್ಲಿ ಈ ಶಿಲಾಮಯ ಗುಡಿ ಹಾಗೂ ಸುತ್ತುಪೌಳಿಯನ್ನು ನಿರ್ಮಿಸಲಾಗಿದೆ. ಏ.1ರಂದು ಉಡುಪಿ ಶ್ರೀ ಕೃಷ್ಣ ಮಠದಿಂದ ಹೊರೆಕಾಣಿಕೆ ಮೆರವಣಿಗೆ ಹೊರಡಲಿದ್ದು, ಪರ್ಯಾಯ ಪೀಠಾಧೀಶ ಶ್ರೀ ಶ್ರೀ ವೇದವರ್ಧನ ತೀರ್ಥ ಶ್ರೀಪಾದರು ಇದಕ್ಕೆ ಚಾಲನೆ ನೀಡಲಿದ್ದಾರೆ ಎಂದರು.



ಬ್ರಹ್ಮಕುಂಭಾಭಿಷೇಕ, ನಾಗ ಪ್ರತಿಷ್ಠೆ

ಏ. 3ರಂದು ಸಂಜೆ ವಾಸ್ತು ಪೂಜೆ, ವಾಸ್ತು ಬಲಿ ಹಾಗೂ ಬಿಂಬಾಧಿವಾಸ ಪೂಜೆಗಳು ನಡೆಯಲಿವೆ. ಏ.4ರಂದು ಬೆಳಗ್ಗೆ 6:48ಕ್ಕೆ ಅಷ್ಟಬಂಧ ಸಹಿತ ಶ್ರೀ ಮುಖ್ಯಪ್ರಾಣ ದೇವರ ಪ್ರತಿಷ್ಠೆ ಹಾಗೂ ಮಧ್ಯಾಹ್ನ ಅನ್ನಸಂತರ್ಪಣೆ ನೆರವೇರಲಿದೆ. ಏ.5ರಂದು ದೇವರಿಗೆ ಬ್ರಹ್ಮಕುಂಭಾಭಿಷೇಕ ಮತ್ತು ಸಂಜೆ ಮಹಾರಂಗ ಪೂಜೆ ಜರುಗಲಿದ್ದು, ಏ. 6 ಮತ್ತು 7ರಂದು ನಾಗದೇವರ ಪುನಃ ಪ್ರತಿಷ್ಠೆ ಹಾಗೂ ಆಶ್ಲೇಷ ಬಲಿ ಪೂಜೆಗಳು ಸಂಪನ್ನಗೊಳ್ಳಲಿವೆ ಎಂದರು.

ಇಷ್ಟಾರ್ಥ ಸಿದ್ಧಿಗಾಗಿ ಹನುಮಾನ್ ಚಾಲೀಸಾ ಲೇಖನ ಯಜ್ಞ

ಉತ್ಸವದ ಅಂಗವಾಗಿ ಪ್ರತಿ ದಿನ ಸಂಜೆ ಯಕ್ಷಗಾನ, ಜಾನಪದ ಕಲಾ ವೈಭವ ಮತ್ತು ನಾಟಕಗಳಂತಹ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಜಯಕರ ಶೆಟ್ಟಿ ಹೇಳಿದರು. ಇದೇ ಸಂದರ್ಭದಲ್ಲಿ ಭಕ್ತರ ಇಷ್ಟಾರ್ಥ ಸಿದ್ಧಿಗಾಗಿ ಹನುಮಾನ್ ಚಾಲೀಸಾ ಲೇಖನ ಯಜ್ಞವನ್ನೂ ಹಮ್ಮಿಕೊಳ್ಳಲಾಗಿದೆ. ಈ ಪುಣ್ಯ ಕಾರ್ಯಕ್ರಮದಲ್ಲಿ ಅಷ್ಟಮಠದ ಯತಿವರ್ಯರು ಹಾಗೂ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಭಾಗವಹಿಸಿ ಆಶೀರ್ವದಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಭೂಪತಿ ಶೆಟ್ಟಿ ಇಂದ್ರಾಳಿ, ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಬಿ. ಕುಶಲ್ ಶೆಟ್ಟಿ, ಪ್ರಧಾನ ಕಾರ್ಯದರ್ಶಿ ರತ್ನಾಕರ್ ಇಂದ್ರಾಳಿ, ಕೋಶಾಧಿಕಾರಿ ರತ್ನಾಕರ್ ಶೆಟ್ಟಿ ಬುದ್ದಾರು, ಉಪಾಧ್ಯಕ್ಷ ಸಾಧು ಶೆಟ್ಟಿ, ಮಾಧ್ಯಮ ಮತ್ತು ಜಾಹೀರಾತು ಸಮಿತಿಯ ಸಂಚಾಲಕರಾದ ಹರ್ಷರಾಜ್ ಶೆಟ್ಟಿ, ರವಿ ಶೆಟ್ಟಿಗಾರ್ ಹಾಗೂ ಬ್ರಹ್ಮಕಲಶೋತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ಸೀತಾರಾಮು ನಾಯಕ್, ದೇವಳದ ಪ್ರಧಾನ ಅರ್ಚಕ ಗೋಪಾಲ ಭಟ್ ಸೇರಿ ಹಲವರು ಉಪಸ್ಥಿತರಿದ್ದರು.

ಬ್ರಹ್ಮಶ್ರೀ ಮುಗೇರ ಮಹಾಕಾಳಿ ದೈವಸ್ಥಾನ

ತೂಮಿನಾಡು, ಕುಂಜತ್ತೂರು

ಬ್ರಹ್ಮಶ್ರೀ ಮುಗೇರ, ಮಹಾಕಾಳಿ ಹಾಗೂ ಪರಿವಾರ ದೈವಗಳ


ಪುನರ್ ಪ್ರತಿಷ್ಠೆ ಹಾಗೂ ಬ್ರಹ್ಮಕಲಶೋತ್ಸವ ಮತ್ತು ನೇಮೋತ್ಸವವು



ಎಪ್ರಿಲ್ 2ರಿಂದ ಎಪ್ರಿಲ್ 6ತನಕ



ಬ್ರಹ್ಮಶ್ರೀ ಮುಗೇರ ಮಹಾಕಾಳಿ ಹಾಗೂ ಪರಿವಾರ ದೈವಗಳ ಪುನರ್ ಪ್ರತಿಷ್ಠೆ ಹಾಗೂ ಬ್ರಹ್ಮಕಲಶೋತ್ಸವ ಮತ್ತು ನೇಮೋತ್ಸವವು ಶ್ರೀ ಕ್ಷೇತ್ರದ ತಂತ್ರಿವರ್ಯರಾದ ವೇದಮೂರ್ತಿ ಕೆ.ಮರಿ ಭಟ್ ಅವರ ದಿವ್ಯ ಹಸ್ತದಿಂದ ವೈದಿಕ, ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಜರಗಲಿದೆ. ಆ ಪ್ರಯುಕ್ತ ಭಕ್ತಾದಿಗಳಾದ ತಾವೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಬಂದು ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಬ್ರಹ್ಮಶ್ರೀ ಮುಗೇರ ಮಹಾಕಾಳಿ ಪರಿವಾರ ದೈವಗಳ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುತ್ತೇವೆ.



ಕಾಸರಗೋಡು ಜಿಲ್ಲೆಯ ಮಂಜೇಶ್ವರ ತಾಲೂಕು ತೂಮಿನಾಡು ಪ್ರದೇಶದಲ್ಲಿ ಅನಾದಿ ಕಾಲದಿಂದಲೂ ಬ್ರಹ್ಮಶ್ರೀ ಮುಗೇರ ಮಹಾಕಾಳಿ ಹಾಗೂ ಪರಿವಾರ ದೈವಗಳನ್ನು ಮುಗೇರ ಸಮುದಾಯದವರುಮತ್ತುಸಾರ್ವಜನಿಕರು ಸೇರಿ ಆರಾಧಿಸಿಕೊಂಡು ಬಂದಿರುತ್ತೇವೆ. ಗಡಿನಾಡೆಂದು ಕರೆಯಲ್ಪಡುವ ಈ ಪ್ರದೇಶವು ದೇವರ ನಾಡೆಂದೇ ಪ್ರಸಿದ್ಧಿ ಪಡೆದಿರುವ ಕೇರಳ ರಾಜ್ಯಕ್ಕೆ ಪ್ರವೇಶಿಸುವಾಗ ಮೊದಲು ಸಿಗುವ ದೈವಸ್ಥಾನವೇ ಬ್ರಹ್ಮಶ್ರೀ ಮುಗೇರ ಮಹಾಕಾಳಿ ದೈವಸ್ಥಾನ ತೂಮಿನಾಡು. ಈ ದೈವಸ್ಥಾನದ ಪೂರ್ವ ದಿಕ್ಕಿಗೆ ಗ್ರಾಮ ದೇವರಾದ ಕುಂಜತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನ, ದಕ್ಷಿಣದಲ್ಲಿ ಗ್ರಾಮ ದೈವಗಳಾದ ಉದ್ಯಾವರ ಶ್ರೀ ಅರಸು ಮಂಜಿಷ್ಣಾರ್ ದೈವಗಳು ಹಾಗೂ ಶ್ರೀ ಭಗವತೀ ಕ್ಷೇತ್ರ ಉದ್ಯಾವರ, ಪಶ್ಚಿಮದಲ್ಲಿ ಶ್ರೀ ರಾಮಾಂಜನೇಯ ಮಠ ಕಣ್ವತೀರ್ಥ ಮತ್ತು ಕಣ್ವ ಮಹರ್ಷಿಗಳಿಂದ ಪ್ರತಿಷ್ಠಾಪಿಸಲ್ಪಟ್ಟ ಹಾಗೂ ಮರಿ ಭಟ್ ವಂಶಸ್ಥರಿಂದ ಆರಾಧಿಸಿಕೊಂಡು ಬಂದಿರುವ ಶ್ರೀ ಸುಳಿ ಜನಾರ್ಧನ ದೇವಸ್ಥಾನವಿದ್ದು, ಈ ದೇವಸ್ಥಾನಕ್ಕೂ, ಶ್ರೀ ಕ್ಷೇತ್ರಕ್ಕೂ ಅವಿನಾಭಾವ ಸಂಬಂಧವಿರುತ್ತದೆ. ಉತ್ತರದಲ್ಲಿ ತಲಪಾಡಿ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನವಿದ್ದು, ತೂಮಿನಾಡಿನ ಬ್ರಹ್ಮಶ್ರೀ ಮುಗೇರ ಮಹಾಕಾಳಿ ದೈವಸ್ಥಾನವು ವೈಶಿಷ್ಟ್ಯದಿಂದ ಕೂಡಿದೆ. ಜನರ ಇಷ್ಟಾರ್ಥವನ್ನು ಈಡೇರಿಸುತ್ತಾ ಮತ್ತು ವರ್ಷದಿಂದ ವರ್ಷಕ್ಕೆ ಅಭಿವೃದ್ಧಿಯಲ್ಲಿ ಸಾಗುತ್ತಿರುವುದರಿಂದ ಸುತ್ತುಮುತ್ತಲಿರುವ ಜನರ ಮನೆ ಮನಗಳಲ್ಲಿ ನಮ್ಮೂರ ದೈವ ಮಹಾಕಾಳಿಯಮ್ಮ ಎಂಬ ಮಾತು ಜನಜನಿತವಾಗಿದೆ. ನಂಬಿದವರ ಕಷ್ಟಕಾರ್ಪಣ್ಯ ಪರಿಹಾರವಾಗುವುದಲ್ಲದೆ, ವಿವಾಹ ಸಂಬಂಧ, ಸಂತಾನ ಭಾಗ್ಯವನ್ನು ಒದಗಿಸಿಕೊಟ್ಟ ಮಹಾತಾಯಿ ಎಂಬ ಪ್ರತೀತಿ ಈ ಕ್ಷೇತ್ರಕ್ಕೆ ಇವೆ.

2022ರಲ್ಲಿ ಮೂಲ ಭಂಡಾರಸ್ಥಾನವನ್ನು ಜೀರ್ಣೋದ್ಧಾರಗೊಳಿಸಿ ಜೊತೆಗೆ ಸಾರ್ವಜವಕ ಶ್ರೀ ಮಹಾಕಾಳಿ ಭಜನಾ ಮಂದಿರದ ಸಮೀಪದಲ್ಲಿ ನಾಗರಾಜ, ನಾಗಕನ್ನಿಕಾ ಸಾನಿಧ್ಯವನ್ನು ನೂತನವಾಗಿ ನಿರ್ಮಿಸಿ ಬ್ರಹ್ಮಕಲಶ ನಡೆಸಲಾಯಿತು.



ಶ್ರೀ ಮರಿ ಭಟ್
ಕ್ಷೇತ್ರ ತಂತ್ರಿಗಳು

ಇದೀಗ ಮೂಲ ಭಂಡಾರ ಸ್ಥಾನದಿಂದ ಭಂಡಾರ ಇಳಿದು ದೈವದ ನರ್ತನ ಸೇವೆ ಆಗುವ ಸ್ಥಳದಲ್ಲಿದ್ದ ಬ್ರಹ್ಮಶ್ರೀ ಮುಗೇರ ಮಹಾಕಾಳಿ ದೈವಸ್ಥಾನವು ಶಿಥಿಲಾವಸ್ಥೆಯಲ್ಲಿದ್ದು ಪ್ರಶ್ನೆ ಚಿಂತನೆಯಲ್ಲಿ ಜೀರ್ಣೋದ್ಧಾರಗೊಳಿಸಲು ಕಂಡು ಬಂದಿರುತ್ತದೆ. ಹಾಗೂ ಇದರೊಂದಿಗೆ ಬ್ರಹ್ಮರ ಗುಡಿ, ಆನೆ ಚಪ್ಪರ, ಗುಳಿಗನ ಕಟ್ಟೆ, ಭೈರವನ ಕಟ್ಟೆ , ಸುತ್ತು ಪಾಗಾರ ನಿರ್ಮಾಣಗೊಂಡಿದೆ. ಈ ಎಲ್ಲಾ ಜೀರ್ಣೋದ್ಧಾರ ಕಾರ್ಯಗಳು ಸುಮಾರು 80 ಲಕ್ಷ ರೂಪಾಯಿ ನಿರ್ಮಾಣಗೊಂಡಿದೆ. ಭಕ್ತಾಧಿಗಳು ಏ. 2ರಿಂದ ಏ. 6ರ ತನಕ ಕ್ಷೇತ್ರದಲ್ಲಿ ನಡೆಯಲಿರುವ ಪುನರ್ ಪ್ರತಿಷ್ಠೆ, ಬ್ರಹ್ಮಕಲಶೋತ್ಸವ ಹಾಗೂ ದೈವಗಳ ನೇಮೋತ್ಸವದಲ್ಲಿ ಕುಟುಂಬ ಸಮೇತವಾಗಿ ಭಾಗವಹಿಸಿ ಶ್ರೀ ಬ್ರಹ್ಮಶ್ರೀ ಮುಗೇರ ಮಹಾಕಾಳಿ ದೇವಗಳ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುತ್ತೇವೆ.

ಕಾರ್ಯಕ್ರಮಗಳು

ತಾರೀಕು 02-04-2026 ಗುರುವಾರ 3 ಗಂಟೆಗೆ ಹಸಿರುವಾಣಿ ಹೊರೆಕಾಣಿಗೆ ಮೆರವಣಿಗೆ, ಸಂಜೆ 4 ಗಂಟೆಗೆ ಧಾರ್ಮಿಕ ಸಭೆ, ಕೊಂಡೆವೂರು ಶ್ರೀ ನಿತ್ಯಾನಂದ ಯೋಗಾಶ್ರಮ ಮಠದ ಶ್ರೀ ಯೋಗಾನಂದ ಸರಸ್ವತಿ ಸ್ವಾಮಿಜಿಯವರಿಂದ ಆಶೀರ್ವಚನ, 6 ಗಂಟೆಗೆ ತಂತ್ರಿವರ್ಯರಿಗೆ **ಪೂರ್ಣಕುಂಭ ಸ್ವಾಗತ**

ತಾರೀಕು 03-04-2026ನೇ ಶುಕ್ರವಾರ ಬೆಳಗ್ಗೆ 9.20ರ ವೃಷಭ ಲಗ್ನ ಶುಭಮುಹೂರ್ತದಲ್ಲಿ ಶ್ರೀ ಮುಗೇರ ತನ್ನಿಮಾನಿಗ ಮಹಾಕಾಳಿ, ಕೊಡಮಣಿತ್ತಾಯ, ಪಂಜುರ್ಲಿ, ಗುಳಿಗ ಬೈರವಾದಿ ದೈವಗಳ ಪುನರ್ ಪ್ರತಿಷ್ಠೆ ಹಾಗೂ ಬ್ರಹ್ಮಕಲಶಾಭಿಷೇಕ, ಮಧ್ಯಾಹ್ನ **ಮಹಾಅನ್ನಸಂತರ್ಪಣೆ**, ರಾತ್ರಿ 7ಕ್ಕೆ ಧಾರ್ಮಿಕ ಸಭೆ, ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನಮ್‌ನ ಶ್ರೀ ಗುರುದೇವಾನಂದ ಸ್ವಾಮೀಜಿಯವರಿಂದ ಆಶೀರ್ವಚನ, ರಾತ್ರಿ 9ರಿಂದ ಶಾರದಾ ಆರ್ಟ್ಸ್ ಕಲಾವಿದರು ಮಂಜೇಶ್ವರ ಇವರಿಂದ **ಒಂತೆ ಲೇಟಾಂಡ್** ಎಂಬ ತುಳು ನಾಟಕ

ತಾರೀಕು 04-04-2026ನೇ ಶನಿವಾರ
ರಾತ್ರಿ 9ರಿಂದ ಕೊಡಮಣಿತ್ತಾಯ ದೈವದ ನೇಮ, ರಾತ್ರಿ 12 ಗಂಟೆಗೆ
ಮಹಾಕಾಳಿ ದೈವದ ನೇಮೋತ್ಸವ

ತಾರೀಕು 05-04-2026ನೇ ಭಾನುವಾರ
ಸಂಜೆ 6ರಿಂದ ಧರ್ಮದೈವ ಗುಳಿಗ ನೇಮ, 9 ಗಂಟೆಗೆ ಧರ್ಮದೈವ ಪಂಜುರ್ಲಿ ನೇಮ, 12 ಗಂಟೆಗೆ
ಬ್ರಹ್ಮ ಮುಗೇರ ಹಾಗೂ ತನ್ನಿಮಾನಿಗ ದೈವಗಳ ನೇಮ

ತಾರೀಕು 06-04-2026ನೇ ಸೋಮವಾರ ಬೆಳಗ್ಗೆ ಸೂರ್ಯೋದಯಕ್ಕೆ
ಬ್ರಹ್ಮಶ್ರೀ ಮುಗೇರ ಹಾಗೂ ತನ್ನಿಮಾನಿಗ ದೈವಗಳ ಗಂಧಪ್ರಸಾದ ಸ್ವೀಕಾರ

ಬ್ರಹ್ಮಶ್ರೀ ಮುಗೇರ ಮಹಾಕಾಳಿ ಹಾಗೂ ಪರಿವಾರ ದೈವಗಳ ಪುನರ್‌ಪ್ರತಿಷ್ಠೆ, ಬ್ರಹ್ಮಕಲಶೋತ್ಸವ ಮತ್ತು ನೇಮೋತ್ಸವಕ್ಕೆ ಶುಭ ಕೋರುವ



ಶ್ರೀಕೃಷ್ಣ ಶಿವಕೃಪಾ ಕುಂಜತ್ತೂರು
ಅಧ್ಯಕ್ಷರು, ಜೀರ್ಣೋದ್ಧಾರ ಹಾಗೂ ಬ್ರಹ್ಮ ಕಲಶೋತ್ಸವ ಸಮಿತಿ ತೂಮಿನಾಡು
ಧಾರ್ಮಿಕ, ಸಾಮಾಜಿಕ ಮುಂದಾಳು



ಶ್ರೀಮತಿ ನಿರುಪಮಾ ಶ್ರೀ ಸೋಮಶೇಖರ
ಮತ್ತು ಮನೆಯವರು
ಗೌರವ ಸಲಹೆಗಾರರು ಜೀರ್ಣೋದ್ಧಾರ ಹಾಗೂ ಬ್ರಹ್ಮ ಕಲಶೋತ್ಸವ ಸಮಿತಿ ತೂಮಿನಾಡು



ಶ್ರೀಮತಿ ಜ್ಯೋತಿ
ಶ್ರೀ ರಾಧಾಕೃಷ್ಣ ಆಚಾರ್ಯ
ಮತ್ತು ಮನೆಯವರು
ಕ್ಷೇತ್ರದ ವಾಸ್ತು ಶಿಲ್ಪಿ



ಶ್ರೀಮತಿ ಪೂರ್ಣಿಮಾ
ಶ್ರೀ ಮೋಹನ್ ಶೆಟ್ಟಿ
ಮತ್ತು ಮನೆಯವರು
ಕಾರ್ಯಾಧ್ಯಕ್ಷರು, ಜೀರ್ಣೋದ್ಧಾರ ಹಾಗೂ ಬ್ರಹ್ಮಕಲಶೋತ್ಸವ ಸಮಿತಿ ತೂಮಿನಾಡು



ಶ್ರೀಮತಿ ದಿವ್ಯ
ಶ್ರೀ ಮನೋಹರ
ಮತ್ತು ಮಕ್ಕಳು
ಯಥಾರ್ಥ್, ದಿಶಾನಿ ಮಜಲು

ಶ್ರೀ ಬಾಲಕೃಷ್ಣ ಬಿ.
ಪ್ರಧಾನ ಉಪಾಧ್ಯಕ್ಷರು, ಜೀರ್ಣೋದ್ಧಾರ ಹಾಗೂ ಬ್ರಹ್ಮಕಲಶೋತ್ಸವ ಸಮಿತಿ ತೂಮಿನಾಡು

DEEKSHA Wood Industries
Branches
DEEKSHA WOOD INDUSTRIES, Morathane Pavoor, 9567 288 714
DEEKSHA MODULARY WORK, Kunjathur Padavu, Manjeshwar, 9746 787 167
DEEKSHA WOOD SAW MILL, Kunjathur Padavu, Manjeshwar, 9496 030 764
DEEKSHA STEEL FURNITURE, Kunjathur Padavu, Manjeshwar, 9995 133 462
DEEKSHA WOOD WORKS, Kunjathur Padavu, Manjeshwar, 7994 058 345
D A FURNITURE WORKS, Kaliyoor, Manjeshwar, 9567 288 714
deekshawood | deekshawoodind714@gmail.com
Balakrishna.B 9495 723 714
Manufactures of all types of Furnitures sellers of Wood Timers Size
Office 04998 293714, 9567 288 714



ಶ್ರೀ ಪುರುಷೋತ್ತಮ
ಕೊಂಚಾಡಿ
ಪ್ರಧಾನ ಕಾರ್ಯದರ್ಶಿ, ಜೀರ್ಣೋದ್ಧಾರ ಹಾಗೂ ಬ್ರಹ್ಮಕಲಶೋತ್ಸವ ಸಮಿತಿ ತೂಮಿನಾಡು



ಶ್ರೀ ಕಮಾಲಾಕ್ಷ
ಜೊತೆ ಕಾರ್ಯದರ್ಶಿ
ಬ್ರಹ್ಮ ಕಲಶೋತ್ಸವ ಸಮಿತಿ ತೂಮಿನಾಡು
ಅಧ್ಯಕ್ಷರು, ಸಾರ್ವಜನಿಕ ಶ್ರೀ ಮಹಾಕಾಳಿ ಭಜನಾ ಮಂದಿರ



ಶ್ರೀಮತಿ ರೇಣುಕಾ
ಶ್ರೀ ಸೀತಾರಾಮ್
ತನುವು
ತನಿಷ್ ಕಲ್ಲಾಪು
ಅಧ್ಯಕ್ಷೆ ಮಹಿಳಾ ಸಮಿತಿ, ಜೀರ್ಣೋದ್ಧಾರ ಹಾಗೂ ಬ್ರಹ್ಮಕಲಶೋತ್ಸವ ಸಮಿತಿ, ತೂಮಿನಾಡು



ಶ್ರೀಮತಿ ವೀಣಾ ಟೀಚರ್
ಶ್ರೀ ಶಶಿ ಕುಮಾರ್ ಮತ್ತು
ಮನೆಯವರು
ತೂಮಿನಾಡು



ಶ್ರೀಮತಿ ರಂಜಿತಾ
ಶ್ರೀ ಮಧುಕುಮಾರ್
ಪುನರ್ವಿ ಎಂ.ಆರ್. ವಿಭಾ ಹಿರಣ್ಮಯಿ
ಜೊತೆ ಕಾರ್ಯದರ್ಶಿ
ಬ್ರಹ್ಮ ಕಲಶೋತ್ಸವ ಸಮಿತಿ ತೂಮಿನಾಡು



ಶ್ರೀಮತಿ ಸೌಜನ್ಯ
ಶ್ರೀ ರಾಜೇಶ್ ಮತ್ತು ಮಕ್ಕಳು
ತಶ್ವಿಕ, ತನ್ವಿಕ
ರಾಜ್ ಸ್ಟುಡಿಯೋ ತೂಮಿನಾಡು



ಸುಮಾ
ವಾಸುದೇವ ಆಚಾರ್ಯ
ಮತ್ತು ಮನೆಯವರು
ಗುರುದೇವ ನಿಲಯ ತೂಮಿನಾಡು



ಸಾರ್ವಜನಿಕ ಶ್ರೀ ಮಹಾಕಾಳಿ ಭಜನಾ ಮಂದಿರ ತುಮಿನಾಡು



ಶ್ರೀ ಹರೀಶ್ ಶೆಟ್ಟಿ
ಮಾಡ
ಪ್ರಧಾನ ಸಂಚಾಲಕರು, ಜೀರ್ಣೋದ್ಧಾರ ಹಾಗೂ ಬ್ರಹ್ಮಕಲಶೋತ್ಸವ ಸಮಿತಿ
ಸೇವಾ ಭಾರ್ಗವ ಸೇವಾ ಚಕ್ರವರ್ತಿ



ಚಂದ್ರಶೇಖರ ಚೌಟ
ದಾಕ್ಷಾಯಣಿ ಚೌಟ
ಕಲಾಲಾಯಿ
ಕುಂಜಣ್ಣ ಚೌಟ ನಿಲಯ
ಕುಂಜತ್ತೂರು

sds SOUNDS & LIGHTS
ಉದ್ಯಾವರ ಮಾಡ
ಪ್ರೊ. ಪ್ರವೀಣ್‌ಕುಮಾರ್

ವಿಘ್ನೇಶ್ ವಿಜೇಶ್
ಪಟ್ಲ ಬದಿಮನೆ ಮತ್ತು
ಮನೆಯವರು
ತೂಮಿನಾಡು



ಶ್ರೀ ಬ್ರಹ್ಮಮುಗೇರ
ಮಹಾಕಾಳಿ
ದೈವಸ್ಥಾನ
ಮೊಂಟೆಪದವು

ಜಯ & ಫ್ಯಾಮಿಲಿ
ಮೊಂಟುಗೋಳಿ



ಶ್ರೀಮತಿ ಶೋಭಾ
ಶ್ರೀ ನಾರಾಯಣ
ಬಂಗೇರ
ಗಂಗೋತ್ರಿ ಹೌಸ್
ತೂಮಿನಾಡು



ಶ್ರೀಮತಿ ಆಶಾ
ಶಿವಪ್ರಸಾದ್
ಕಣ್ವತೀರ್ಥ

ಶ್ರೀ ಸದಾಶಿವ
ಮಹಾಕಾಳಿ ಪಾತ್ರಿ
ಶ್ರೀ ಬ್ರಹ್ಮಮುಗೇರ ಮಹಾಕಾಳಿ ದೈವಸ್ಥಾನ, ತೂಮಿನಾಡು



ಜಯಂತ ಎಂ.
ಮೊಂಟೆಪದವು



ಸಂದೇಶ್
ತೂಮಿನಾಡು
ವೆಜಿಟೇಬಲ್ಸ್ ಶೋಪ್

SRI MAHAKALI KREEDA BALAGA THUMINADU
ಶ್ರೀ ಮಹಾಕಾಳಿ ಕ್ರೀಡಾ ಬಳಗ
ತೂಮಿನಾಡು

ಶ್ರೀಮತಿ ಸರಸ್ವತಿ ಟೀಚರ್
ಶ್ರೀ ನಾರಾಯಣ ಬಿ.
ಮತ್ತು ಮನೆಯವರು
ದೀಪ್ತಿ ಮಹಲ್ ತೂಮಿನಾಡು

INDIAN MEN'S WEAR & TEXTILES
Power Tower, Kunjathur
Mob.: 9633234092
Purushothama Acharya Kunjathur

||Sri Mahalingeshwara Prasanna||
Chinmai Aluminium
Alluminium & Interior
G.H.S. Road Thuminadu, Kunjathur, Manjeshwar- 671323
Prop.: Yatheesh Mob.: 9567228360

Prop: Nithesh Thuminad Mob : 8848992421
Shiva Shree Automobile
Shiva Shree Tours & Travels,
Shiva Shree Power Controllers
Thuminad, Mangalore

ಶ್ರೀ ಕೃಷ್ಣಪ್ಪ ಪೂಜಾರಿ
ನಿರೀಕ್ಷಿತ್ ನಿಲಯ, ತೂಮಿನಾಡು

ಶ್ರೀಮತಿ ಸುಜಾತ
ಶ್ರೀ ಚಂದ್ರಹಾಸ ಮತ್ತು ಮಕ್ಕಳು
ಪೂಜಾ, ತೇಜಸ್
ತೂಮಿನಾಡು

MANJUSHREE PHOTO FRAME WORKS AND ELECTRICAL AND ELECTRONICS
Mada Udayawra,
Prof. Ashok Pai, Mob. 8129258256

SHARATH 8904476006 7907352303
LOOK'Z 4 men
MEN'S CLOTH GARAGE
JEANS, TEE'S, SHIRT'S, ALL TYPE MEN'S GEAR
ANU COMPLEX THUMINAD

NAVA NEETH
GENTS TAILOR
THUMINAD 9995279901